**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

# ಕರ್ನಾಟಕ ವಿಧಾನ ಪರಿಷತ್ತು

17ನೇ ಮಾರ್ಚ್ 2020
ಮಂಗಳವಾರ

## ವಿಷಯಾನುಕ್ರಮಣಿಕೆ

**1. ಸಂತಾಪ ಸೂಚನೆ**

**ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ ಹಾಗೂ ಪತ್ರಕರ್ತ ಶ್ರೀ ಪಾಟೀಲ್ ಪುಟ್ಟಪ್ಪನವರ** ನಿಧನದ ಬಗ್ಗೆ.

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)
– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)

**2. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ.**

– ಶ್ರೀ ಅ. ದೇವೇಗೌಡ

3. **ಪ್ರಕಟಣೆ**

4. **ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ**

– ಶ್ರೀ ಪಿ.ಆರ್.ರಮೇಶ್
– ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು).
– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

**5. ವರದಿಯನ್ನೊಪ್ಪಿಸುವುದು**

**6. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ.**

– ಶ್ರೀ ಎಂ.ಸಿ.ವೇಣುಗೋಪಾಲ್
– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಪ್ರಕಾಶ್ ಕೆ.ರಾಥೋಡ್
– ಶ್ರೀ ಎನ್.ರವಿಕುಮಾರ್
– ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು)
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಆಯನೂರು ಮಂಜುನಾಥ್
– ಶ್ರೀ ಎಸ್.ಎಲ್.ಭೋಜೆಗೌಡ
– ಶ್ರೀ ಹೆಚ್.ಎಂ.ರೇವಣ್ಣ

**7. ಪ್ರಕಟಣೆ**

**8. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1257 – ರಾಯಚೂರು ಜಿಲ್ಲೆಯಲ್ಲಿರುವ ಬಿಪಿಎಲ್ ಕಾರ್ಡುದಾರರ ಕುರಿತು**

–ಶ್ರೀ ಎನ್.ಎಸ್.ಭೋಸರಾಜು
– ಶ್ರೀ ಕೆ.ಗೋಪಾಲಯ್ಯ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು)

**1235 – ಸಾಲ ಮನ್ನಾ ಬಗ್ಗೆ.**

– ಶ್ರೀ ಮರಿತಿಬ್ಬೇಗೌಡ
– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**1288+1292– ರಾಜ್ಯದಲ್ಲಿನ ಗಣಿಗಾರಿಕೆಗಳ ಕುರಿತು**

– ಶ್ರೀ ಪಿ.ಆರ್.ರಮೇಶ್
– ಶ್ರೀ ಜಿ.ರಘು ಆಚಾರ್
– ಶ್ರೀ ಸಿ.ಸಿ.ಪಟೀಲ್ (ಗಣಿ ಮತ್ತು ಭೂ–ವಿಜ್ಞಾನ ಸಚಿವರು)

**1247– ರಾಜ್ಯದಲ್ಲಿ ಸ್ಥಳೀಯ ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ಮೀಸಲಾತಿ ಬಗ್ಗೆ.**

– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಕೆ.ಸಿ.ನಾರಾಯಣಗೌಡ(ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**1155– ಚನ್ನರಾಯಪಟ್ಟಣ ಪುರಸಭೆ ಅಭಿವೃದ್ಧಿ ಬಗ್ಗೆ.**

– ಶ್ರೀ ಎಂ.ಎ.ಗೋಪಾಲಸ್ವಾಮಿ
– ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**1254– ಯರಗೋಳ ಯೋಜನೆಯನ್ನು ಪೂರ್ಣಗೊಳಿಸುವ ಕುರಿತು**

– ಡಾ॥ ವೈ.ಎ.ನಾರಾಯಣಸ್ವಾಮಿ
– ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**1260– ಅಮೃತ್ ಯೋಜನೆಯಡಿ ನಡೆದ ಕಾಮಗಾರಿಗಳ ಕುರಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಆಯನೂರು ಮಂಜುನಾಥ್
– ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**1143– ಮಡಿಕೇರಿ ನಗರದ ರಾಜಾಸೀಟ್‌ನಲ್ಲಿರುವ ಪುಟಾಣಿ ರೈಲು ಸ್ಥಗಿತಗೊಂಡಿರುವ ಬಗ್ಗೆ**
– ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.
– ಶ್ರೀ ಕೆ.ಸಿ.ನಾರಾಯಣ ಗೌಡ( ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**1261– ನಗರೋತ್ಥಾನ ಯೋಜನೆಯ ಕಾಮಗಾರಿಗಳ ಬಗ್ಗೆ.**
– ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ
– ಶ್ರೀ ಕೆ.ಸಿ.ನಾರಾಯಣಗೌಡ(ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**1262– ಗದಗ ಜಿಲ್ಲೆಯ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಹಾಗೂ ಸಿಬ್ಬಂದಿಗಳ ಮಾಹಿತಿ ಕುರಿತು.**
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ಕೆ.ಸಿ.ನಾರಾಯಣಗೌಡ(ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**1232– ಭಾರತ ದರ್ಶನ ಅಧ್ಯಯನ ಪ್ರವಾಸ ಕಾರ್ಯಕ್ರಮ ಕುರಿತು ಮಾಹಿತಿ**
– ಶ್ರೀ ಕೆ.ಹರೀಶ್‌ಕುಮಾರ್
– ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು)

**1124– ಘೋಷಣಾ ಅಭಿಯಾನ ಕುರಿತು**
– ಡಾ॥ ಜಯಮಾಲ
– ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು)

**147– ಜಮೀನಿನ ಮಾಲೀಕರು/ರೈತರಿಗೆ ಪರಿಹಾರಕ್ಕೆ ಅನುಸರಿಸಲಾಗಿರುವ ಮಾನದಂಡಗಳ ಬಗ್ಗೆ.**
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಬಿ.ಎ.ಬಸವರಾಜು(ನಗರಾಭಿವೃದ್ಧಿ ಸಚಿವರು)

**1220– ಶಿಕ್ಷಕರನ್ನು ಅನ್ಯ ಇಲಾಖೆಗೆ ನಿಯೋಜನೆ ಮಾಡಿರುವ ಬಗ್ಗೆ.**
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1202– ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ನೇಮಕಾತಿಯ ಬಗ್ಗೆ.**

– ಶ್ರೀ ಕೆ.ಹರೀಶ್ ಕುಮಾರ್

– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**1049– ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವ ಕುರಿತು.**

– ಶ್ರೀ ರಘುನಾಥರಾವ್ ಮಲ್ಕಾಪೂರೆ

– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**9. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿಯ ಮಲ್ಲಸಂದ್ರ ಕಾವಲಿನ ಬಳಿ ತೋಟಗಾರಿಕೆ ಇಲಾಖೆಯ ಸಿಬ್ಬಂದಿಗಳು ನಿಯಮ ಮೀರಿ ಬೆಳೆ ನಾಶ ಮಾಡಿರುವ ಬಗ್ಗೆ.**

– ಶ್ರೀ ಎನ್.ಅಪ್ಪಾಜಿಗೌಡ

– ಶ್ರೀ ಕೆ.ಸಿ.ನಾರಾಯಣಗೌಡ (ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**ಆ) ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಮಸ್ಯೆಗಳ ಬಗ್ಗೆ.**

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

– ಶ್ರೀ ಕೆ.ಸಿ.ನಾರಾಯಣಗೌಡ (ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**ಇ) ರಾಜ್ಯದಲ್ಲಿ ಹಕ್ಕಿ ಜ್ವರ ಹರಡುತ್ತಿರುವ ಬಗ್ಗೆ.**

– ಡಾ॥ವೈ.ಎ.ನಾರಾಯಣಸ್ವಾಮಿ

– ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)

**ಈ) ಗದಗ ಜಿಲ್ಲೆಯ ಕಪ್ಪದಗುಡ್ಡ ಅರಣ್ಯ ಪ್ರದೇಶಕ್ಕೆ ಬೆಂಕಿ ತಗುಲಿ 50 ಹೆಕ್ಟೇರ್ ಅರಣ್ಯ ಪ್ರದೇಶ ಹಾಳಾಗಿರುವ ಬಗ್ಗೆ.**

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)
(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ರಾಜ್ಯದ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಡ್ರೈವಿಂಗ್ ಸ್ಕೂಲ್ ಮಾಫಿಯಾ ಹಾಗೂ ಸಿಬ್ಬಂದಿಯ ಕೊರತೆಯಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ.**

- ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು)

**10. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಲಿಖಿತ ಹೇಳಿಕೆಗಳ ಮಂಡನೆ**

**ಅ) ಕೆ.ಎಲ್.ಇ. ಇಂಜಿನೀಯರಿಂಗ್ ವಿದ್ಯಾರ್ಥಿಗಳು ಪಾಕ್ ಪರ ಘೋಷಣೆ ಕೂಗಿರುವ ಬಗ್ಗೆ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಗೃಹ ಸಚಿವರ ಪರವಾಗಿ)

**ಆ) ಶ್ರೀನಿವಾಸಪುರ ಗ್ರಾಮದಲ್ಲಿರುವ ಹೇಮಾವತಿ ಸಕ್ಕರೆ ಕಾರ್ಖಾನೆ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಕಾರ್ಮಿಕ ಮತ್ತು ಸಕ್ಕರೆ ಸಚಿವರ ಪರವಾಗಿ)

**ಇ) ದೈನಂದಿನ ಆಹಾರ ತಯಾರಿಕೆಗೆ ಬೇಕಾಗುವ ಪದಾರ್ಥಗಳಲ್ಲಿ ಎಣ್ಣೆ ಒಂದು ಅವಿಭಾಜ್ಯ ಅಂಗವಾಗಿದ್ದು ಇಂದು ಆ ಎಣ್ಣೆಯಲ್ಲಿ ಆಗುತ್ತಿರುವ ಕಲಬೆರಕೆ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)

**ಈ) ಕೊರೊನಾ ವೈರಸ್ ಬಗ್ಗೆ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯ ಮಂತ್ರಿಗಳ ಪರವಾಗಿ)

**11. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ**

**ಅ) 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್‌ನ 362 ಹುದ್ದೆಗಳ ನೇಮಕಾತಿಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ.**

- ಶ್ರೀ ಪಿ.ಆರ್.ರಮೇಶ್
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)
- ಶ್ರೀ ಕೆ.ಟಿ.ಶ್ರೀಕಂಠೇಗೌಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಆ) ಬೆಂಗಳೂರು ಹಾಗು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನಧಿಕೃತವಾಗಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ.**

- **ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)**
- **ಶ್ರೀ ಮರಿತಿಬ್ಬೇಗೌಡ**
- **ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)**

**12. ಪ್ರಕಟಣೆ**

------

(464)/17.03.2020/11.20/ಎಸ್‌ಕೆ-ಎಂಡಿ

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 17ನೇ ಮಾರ್ಚ್ 2020**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ: 11 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1. <u>ಸಂತಾಪ ಸೂಚನೆ</u>**

ವಿಷಯ: ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ, ಪತ್ರಕರ್ತ
ಹಾಗೂ ರಾಜ್ಯ ಸಭೆಯ ಮಾಜಿ ಸದಸ್ಯರಾಗಿದ್ದ ಶತಾಯುಷಿ
ಶ್ರೀಯುತ ಪಾಟೀಲ್ ಪುಟ್ಟಪ್ಪ ಅವರ ನಿಧನದ ಬಗ್ಗೆ.

----

**ಸಭಾಪತಿಯವರು:–** ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ, ಪತ್ರಕರ್ತ ಹಾಗೂ ರಾಜ್ಯ ಸಭೆಯ ಮಾಜಿ ಸದಸ್ಯರಾಗಿದ್ದ ಶತಾಯುಷಿ ಶ್ರೀಯುತ ಪಾಟೀಲ್ ಪುಟ್ಟಪ್ಪ ಅವರು ದಿನಾಂಕ: 16.03.2020ರಂದು ನಿಧನ ಹೊಂದಿರುತ್ತಾರೆಂದು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

1921ರ ಜನವರಿ 14ರಂದು ಹಾವೇರಿ ಜಿಲ್ಲೆಯ ಕುರುಬಗೊಂಡ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಕಾನೂನು ಪದವೀಧರರಾಗಿದ್ದು, ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರು.

ಶ್ರೀಯುತರು ಕನ್ನಡ ನಾಡುನುಡಿ ಹೋರಾಟದಲ್ಲಿ ಸದಾ ಮುಂಚೂಣಿಯಲ್ಲಿದ್ದರು. ಪತ್ರಿಕೋದ್ಯಮದ ಭೀಷ್ಮ ಎಂದೇ ಖ್ಯಾತರಾಗಿದ್ದ ಇವರು ವಿಶಾಲ ಕರ್ನಾಟಕ ಪತ್ರಿಕೆ, ನವಯುಗ ಪತ್ರಿಕೆ, ಪ್ರಪಂಚ ಸಾಪ್ತಾಹಿಕ ಪತ್ರಿಕೆಯ ಸಂಪಾದಕರಾಗಿ ಕಾರ್ಯವನ್ನು ನಿರ್ವಹಿಸಿದ್ದರು. ಕರ್ನಾಟಕದ ಗಡಿ ಭಾಗದ ಜಿಲ್ಲೆಗಳಲ್ಲಿ ಕನ್ನಡದ ಅಸ್ಮಿತೆಯ ಪರ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು ಹಲವಾರು ಕನ್ನಡಪರ ಹೋರಾಟಗಳ ನೇತೃತ್ವವನ್ನು ವಹಿಸಿದ್ದ ಶ್ರೀಯುತರು, ಎರಡು ಬಾರಿ ರಾಜ್ಯಸಭೆಯ ಸದಸ್ಯರಾಗಿ ಕಾರ್ಯನಿರ್ವಹಿಸಿ ಕೇಂದ್ರದಲ್ಲಿಯೂ ಸಹ ಕನ್ನಡ ಪರ ಧ್ವನಿಯಾಗಿದ್ದರು.

ಚಲೇಜಾವ್ ಚಳವಳಿಯಲ್ಲಿ ಸಕ್ರಿಯವಾಗಿ ಭೂಗತ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸಿದ್ದರು. ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಅಖಂಡ ಕರ್ನಾಟಕದ ನಿರ್ಮಾಣಕ್ಕಾಗಿ ನಿರಂತರ ಹೋರಾಟ ನಡೆಸಿದ್ದರು. ಗೋವಾ ವಿಮೋಚನಾ ಹೋರಾಟ, ಗೋಕಾಕ್ ಚಳುವಳಿಯ ನೇತೃತ್ವವನ್ನು ವಹಿಸಿದ್ದರಲ್ಲದೆ, ಅನೇಕ ಚಳುವಳಿಗಳಲ್ಲಿ ಭಾಗವಹಿಸಿದ್ದರು. ಧಾರವಾಡ ಹಾಗೂ ಕಲಬುರಗಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಲ್ಲಿ ಶ್ರೀಯುತರ ಪಾತ್ರ ಮಹತ್ತರವಾದುದು.

ನಮ್ಮದೇಶ–ನಮ್ಮಜನ, ನನ್ನದು ಈ ಕನ್ನಡ ನಾಡು, ಕರ್ನಾಟಕ ಕಥೆ, ಪಾಪು ಪ್ರಪಂಚ, ಶಿಲಾಬಾಲಿಕೆ ನುಡಿದಳು, ಗವಾಕ್ಷಿ ತೆರೆಯಿತು, ಸಾವಿನ ಮೇಜವಾನಿ ಮುಂತಾದ 45ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದ, ಇವರು ಸಾಹಿತ್ಯ ಕ್ಷೇತ್ರದಲ್ಲಿ ಪಾಪು ಎಂದೇ ಖ್ಯಾತರಾಗಿದ್ದರು ಹಾಗೂ ಕನ್ನಡ ಕಾವಲು ಸಮಿತಿಯ ಪ್ರಥಮ ಅಧ್ಯಕ್ಷರಾಗಿ, 70ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆದಾಡುವ ವಿಶ್ವಕೋಶವೆಂದೇ ಖ್ಯಾತರಾಗಿದ್ದ ಶ್ರೀಯುತರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜಾ ಪ್ರಶಸ್ತಿ, ಗೌರವ ಡಾಕ್ಟರೇಟ್ ಪ್ರಶಸ್ತಿ, ಪತ್ರಿಕಾ ಅಕಾಡೆಮಿ ಪ್ರಶಸ್ತಿಗಳಲ್ಲದೆ ಇನ್ನಿತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದ ಕನ್ನಡ ಸಾರಸತ್ವ ಲೋಕವು ಹಿರಿಯ ದಿಗ್ಗಜರೊಬ್ಬರನ್ನು ಕಳೆದುಕೊಂಡಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪಾಟೀಲ್ ಪುಟ್ಟಪ್ಪರವರನ್ನು ಪಾಪು ಎಂದು ಇಡೀ ರಾಜ್ಯ ಮತ್ತು ದೇಶ ಕರೆಯುತ್ತಿತ್ತು. ಆರು ದಶಕಗಳ ಹಿಂದೆಯೇ ಕನ್ನಡಿಗರ ಮನ, ಮನೆ ತಲುಪಿದ ಕೀರ್ತಿ ಪಾಪುರವರಿಗೆ ಸಲ್ಲುತ್ತದೆ. ಎಲ್ಲಾ ವಿಮರ್ಶಕರು ಹೇಳುತ್ತಿದ್ದರು. ಕನ್ನಡಕ್ಕೆ ಕಂಕಣ ಕಟ್ಟಿಕೊಂಡು ಜೀವನದುದ್ದಕ್ಕೂ ಕನ್ನಡಕ್ಕೆ ಹೋರಾಟ ಮಾಡಿದಂತಹ ಹಿರಿಯರು ಎನ್ನುವಂತಹ ಭಾವನೆಗಳು ಪಾಪುರವರ ಬಗ್ಗೆ ಇತ್ತು. ಗಾಂಧೀಜಿ ಅವರಿಂದ ಪ್ರಭಾವಿತರಾಗಿ, ವಿದ್ಯಾರ್ಥಿ ದೆಸೆಯಿಂದಲೇ, ಖಾದಿಧಾರಿಗಳಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಕರ್ನಾಟಕ ಏಕೀಕರಣ ಹೋರಾಟದಲ್ಲಿ ಪಾಲ್ಗೊಂಡು ಕನ್ನಡದ ನುಡಿ, ನೆಲ, ಜಲಕ್ಕೆ ಪ್ರಶ್ನೆ ಬಂದಾಗ ಮುಂಚೂಣಿಯಲ್ಲಿ ನಿಂತುಕೊಂಡು ಹೋರಾಟ ಮಾಡುತ್ತಾ, ಇಡೀ ಕರ್ನಾಟಕಕ್ಕೆ ಮಾರ್ಗದರ್ಶನ ಮಾಡಿದಂತಹ ಪಾಪುರವರನ್ನು ಕನ್ನಡದ ಸಾಕ್ಷಿ ಪ್ರಜ್ಞೆಯ ಸಂಕೇತ ಎಂದು ಹೇಳಿ ಅನೇಕ ಹಿರಿಯರು ಮಾಧ್ಯಮದವರು ಕರೆಯುತ್ತಿದ್ದರು. ನಾನು ಎರಡು ತಿಂಗಳ ಹಿಂದೆ ಜಿಲ್ಲಾಧಿಕಾರಿಗಳ ಕಛೇರಿಗೆ ಹೋದಾಗ, ಮಾನ್ಯ ಪಾಟೀಲ್ ಪುಟ್ಟಪ್ಪರವರನ್ನು ಭೇಟಿಯಾಗಿ, ಅವರಿಗೆ ನಮಸ್ಕಾರಗಳನ್ನು ತಿಳಿಸಿದ್ದೆನು. ಅವೊತ್ತು ಕೂಡ ಅವರ ಆರೋಗ್ಯ ಚೆನ್ನಾಗಿತ್ತು ಮತ್ತು ಚೆನ್ನಾಗಿ ಮಾತನಾಡುತ್ತಿದ್ದರು. ಅವರಿಗೆ ವಯಸ್ಸು 99 ವರ್ಷಗಳಾಯಿತು ಎಂದು ಅಂದಾಜು ಇದೆ. ಆದರೆ ಅವರು ಏನು ಹೇಳುತ್ತಿದ್ದರೆಂದರೆ, ನಾನು ಶಾಲೆಗೆ ಸೇರುವಾಗ ದಿನಾಂಕವನ್ನು ಕೊಡುವಾಗ ನನಗೆ ಒಂದು ವರ್ಷವಾಗಿತ್ತು. ಹಾಗಾಗಿ ನಾನು ಶತಾಯುಷಿ ಎಂದು ಅವರು ಹೇಳುತ್ತಿರುವುದನ್ನು ನಾವು ನೋಡಿದ್ದೇವೆ. ಬಹುತೇಕವಾಗಿ ನಡೆದಾಡುವ ಶಿವ ಪುರುಷ ಎಂದು ಏಕೆ ಕರೆಯುತ್ತಿದ್ದರು ಎಂದು ಹೇಳಿದರೆ, ಅವರಿಗೆ ಅರಿವಿಲ್ಲದಿರುವಂತಹ ಕ್ಷೇತ್ರಗಳು ಇಲ್ಲ ಎಂಬ ಭಾವನೆಗಳು. ಅವರಿಗೆ ತಿಳಿಯದಿರುವಂತಹ ವಿಚಾರಗಳಿಲ್ಲ. ಹಾಗಾಗಿ ಜೀವಂತವಾಗಿ ನಡೆದಾಡುವ ವಿಶ್ವಕೋಶ ಎಂದು ಪಾಪುರವರನ್ನು ಕರೆಯುತ್ತಿದ್ದರು. ಒಬ್ಬ ಸರ್ವ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರು, ಕರ್ನಾಟಕ ಏಕೀಕರಣದಲ್ಲಿ ಭಾಗಿ. ಅಂದಿನ ಕಾಲದಲ್ಲಿ ಅಮೇರಿಕಾದಲ್ಲಿ ಪತ್ರಿಕೋದ್ಯಮ ಅಧ್ಯಯನ ಮಾಡಿದಂತಹ ಮೊದಲ ಕನ್ನಡಿಗ ಎಂಬ ಕೀರ್ತಿಗೆ ಅವರು ಪಾತ್ರರಾಗಿದ್ದರು. ಐದು ಪತ್ರಿಕೆಗಳಿಗೆ ಸಂಪಾದಕರು. ಎರಡು ಬಾರಿ ರಾಜ್ಯ ಸಭಾ ಸದಸ್ಯ. ಸುಮಾರು 45 ಕೃತಿಗಳನ್ನು ರಚನೆ ಮಾಡಿದ ಮೇದಾವಿ. 1982ರಲ್ಲಿ ಗೋಕಾಕ್ ಚಳುವಳಿಯ ರುವಾರಿ. ಕನ್ನಡ ಕಾವಲುಗಾರ ಎಂಬ ದೂರುಗಳು ಏಕೆ ಬರುತ್ತೇವೆಂದು ಹೇಳಿದರೆ, 1985ರಲ್ಲಿ ಕನ್ನಡ ಕಾವಲು ಹಾಗು ಗಡಿ ಕಾವಲು ಸಮಿತಿಗಳಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದರು. ಕನ್ನಡಗರಿಗೆ ಉದ್ಯೋಗ ಕೊಡಬೇಕು. ಕನ್ನಡಗರಿಗೆ ಉದ್ಯೋಗ ಮೀಸಲಾತಿ ಕೊಡಬೇಕೆಂಬ ಪ್ರತಿಪಾದನೆ ಮತ್ತು ಅದಕ್ಕೋಸ್ಕರ ಚಳುವಳಿ ಮಾಡಿದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೌರವಕ್ಕೆ ಅವರು ಪಾತ್ರರಾಗಿದ್ದರು. ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ತಮ್ಮದೇ ಆದ ಹೋರಾಟದ ನೇತೃತ್ವವನ್ನು ಅವರು ಇಟ್ಟುಕೊಂಡಿದ್ದರು. ಬೆಳಗಾವಿಯನ್ನು ಕರ್ನಾಟಕದ ಅವಿಭಾಜ್ಯ ಅಂಗ ಎಂದು ಹೇಳುವಂತಹ ಗಟ್ಟಿ ಧ್ವನಿಯನ್ನು ಸೇರಿಸಿದಂತಹ ಮೊದಲ ಕನ್ನಡಿಗ ಎನ್ನುವಂತಹ ಮೊದಲ ಕೀರ್ತಿಗೆ ಪಾಪುರವರು ಪಾತ್ರರಾಗಿದ್ದರು. ಆಗ ಮರಾಠ ಪರವಾಗಿ ಸಂಘಟನೆ ಮಾಡುತ್ತಿದ್ದರು. ಬೆಳಗಾವಿ ಕರ್ನಾಟಕಕ್ಕೆ ಬೇಕು ಎಂದು ಹೇಳಿದಾಗ, ಇಲ್ಲ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಹೇಳಿ ಮರಾಠ ಪರವಾದಂತಹ ಸಂಘಟನೆಯ ರುವಾರಿಗಳು ಹೇಳುತ್ತಿದ್ದರಂತೆ. ನಮ್ಮ ಹೋರಾಟ ಏಕೆ ಕ್ಷೀಣಿಸಿತು. ಬೆಳಗಾವಿ ಕನ್ನಡದ ಪರವಾಗಿ ಹೋರಾಟ ಏಕೆ ಮೇಲೈಸಿತು ಎಂದರೆ, ಪಾಪುರವರಂಥ ಹೋರಾಟಗಾರರ ನೇತೃತ್ವ ನಮಗೆ ಸಿಕ್ಕಿಲ್ಲ. ಆ ಕಾರಣಕ್ಕಾಗಿ ನಾವು ಕ್ಷೀಣವಾಗಿದ್ದೇವೆಂದು ಹೇಳಿ. ಅಂದರೆ ಹೋರಾಟವನ್ನು ಕೈಗೆತ್ತಿಕೊಂಡಾಗ, ಅದರ ತುದಿ ಮುಟ್ಟಿಸುವುದು ಹೇಗೆ ಮತ್ತು ಕನ್ನಡದ ಪರವಾಗಿ ಗಟ್ಟಿಯಾಗಿ ಧ್ವನಿಯಾಗಿ ಕೆಲಸ ಮಾಡಿದಂತಹ ಶಕ್ತಿ ಏನೆಂಬುದನ್ನು ಅವರು ಅವೋತ್ತೆ ತೋರಿಸಿ, ತಮ್ಮ ಎದುರಾಳಿಗೆ ಕೊಡುವ ಗೌರವವನ್ನು ಪಡೆಯುವಂತಹ ಗೌರವಕ್ಕೆ ಪಾತ್ರರಾಗಿದ್ದರು. ಅಂತಹ ಒಬ್ಬ ಸರ್ವಶ್ರೇಷ್ಠರಾದಂತಹ ಒಬ್ಬ ಸ್ವಾತಂತ್ರ್ಯ ಹೋರಾಟಗಾರರನ್ನು ಕಳೆದುಕೊಂಡಿದ್ದೇವೆಂಬ ನೋವು ನಮ್ಮೆಗೆಲ್ಲರಿಗೂ ಇದೆ. ಇವತ್ತು ಅವರ ಅಂತ್ಯಕ್ರಿಯೆ ನಡೆಯಲಿದ್ದು, ಅಲ್ಲಿಯ ಉಸ್ತುವಾರಿ ಮಂತ್ರಿಗಳಾಗಿರುವಂತಹ ಮಾನ್ಯ ಜಗದೀಶ್ ಶೆಟ್ಟರ್‌ರವರು ಸರ್ಕಾರದ ಪರವಾಗಿ ಭಾಗವಹಿಸಲಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ, ಅತ್ಯಂತ ಸರ್ವ ಶ್ರೇಷ್ಠ ವ್ಯಕ್ತಿಯನ್ನು ಕನ್ನಡದ ಸಾರಸ್ವತ ಲೋಕದ ದಿಗ್ಗಜರೊಬ್ಬರನ್ನು ಕಳೆದುಕೊಂಡಿದೆ ಎನ್ನುವಂತಹ ನೋವಿನೊಂದಿಗೆ ಈ ಸಂತಾಪ ಸೂಚನೆಯನ್ನು ತಾವು ಏನು ಮಂಡಿಸಿದ್ದೀರಿ. ಅದಕ್ಕೆ ಸಹಮತವನ್ನು ವ್ಯಕ್ತಪಡಿಸಿ, ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎಂದು ಹೇಳಿ ಸರ್ಕಾರದ ಪರವಾಗಿ ತಮ್ಮ ಮಂಡನೆಗೆ ಸಹಮತವನ್ನು ಕೋರುತ್ತಿದ್ದೇನೆ.

(ಮುಂದು)

(465) 17.03.2020 11.30 ಟಿಸಿಹೆಚ್–ಎಂಡಿ

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿದಂತಹ ಸಂತಾಪ ಸೂಚನೆ ಗೊತ್ತುವಳಿಯನ್ನು ನಾನು ಬೆಂಬಲಿಸಿದ್ದೇನೆ. ನಿನ್ನೆ ದಿವಸ ಹಠಾತ್ ನಿಧನರಾದಂತಹ ಶ್ರೀಯುತ ಪಾಟೀಲ್ ಪುಟ್ಟಪ್ಪನವರು ಕನ್ನಡದ ಕಟ್ಟಾಳು ಹಾಗೂ ಕರ್ನಾಟಕದ ಏಕೀಕರಣಕ್ಕೆ ಬಹು ದೊಡ್ಡ ಹೋರಾಟ ಮಾಡಿದಂತಹ ನಾಡೋಜ ಪಾಟೀಲ್ ಪುಟ್ಟಪ್ಪನವರ ನಿಧನದಿಂದ ಕನ್ನಡದ ಸಾಂಸ್ಕೃತಿಕ ಲೋಕ, ಕನ್ನಡದ ಸಾರ್ವತ್ರಿಕ ಲೋಕಕ್ಕೆ ಬಹಳ ಹಾನಿ ಉಂಟಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಚಲೇಜಾವ್ ಚಳುವಳಿ ಸಂದರ್ಭದಲ್ಲಿ, ಅವರು ಭೂಗತರಾಗಿ ಸ್ವಾತಂತ್ರ್ಯ ಚಳವಳಿಗೆ ಸಹಾಯ ಮಾಡಿದ್ದನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಅವರು ದಿನಾಂಕ 14.01.1921ರಲ್ಲಿ ಹಾವೇರಿ ಜಿಲ್ಲೆಯ ಕುರುಬಗೊಂಡ ಗ್ರಾಮದಲ್ಲಿ ಜನಿಸಿದಂತಹ ಶ್ರೀಯುತ ಪಾಟೀಲ್ ಪುಟ್ಟಪ್ಪನವರು ನಾಡು, ನುಡಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತ್ರವಲ್ಲದೆ, ನಾಡಿನ ನೆಲ, ಜಲ, ಮತ್ತು ಭಾಷೆ ವಿಚಾರ ಬಂದಾಗ ಮುಂಚೂಣಿಯಲ್ಲಿ ಇರುತ್ತಿದ್ದರು. ಅವರು ಕರ್ನಾಟಕ ಏಕೀಕರಣಕ್ಕೆ ದುಡಿದಿದ್ದರ ಜೊತೆಗೆ ಈ ನಾಡಿನ ಅಭಿವೃದ್ಧಿಯ ಸಲುವಾಗಿ ಬಹಳಷ್ಟು ಶ್ರಮ ವಹಿಸಿರುತ್ತಾರೆ. ಬಹುತರವಾಗಿ ಕರ್ನಾಟಕ ರಾಜ್ಯದ ಯಾವುದೇ ಮುಖ್ಯಮಂತ್ರಿಗಳು ಹುಬ್ಬಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ಅವರನ್ನು ಭೇಟಿಯಾಗಿ ಅವರ ವಿಚಾರಗಳನ್ನು ತಿಳಿದುಕೊಂಡು, ಅವರ ಜೊತೆ ಈ ನಾಡಿನ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುತ್ತಿದ್ದರು. ನಾನು ಕೂಡ ರಾಜ್ಯದ ಎಲ್ಲಾ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಅವರು ಯಾವುದೇ ಮರ್ಜಿಗೆ, ಮುಲಾಜಿಗೆ ಒಳಗಾಗದೇ ನೇರವಾಗಿ ಹಿಡಿದ ಮಾತನ್ನು, ಹಿಡಿದಂತೆ ಹೇಳುವಂತಹ ಮನೋಭಾವನ್ನು ಹೊಂದಿದ್ದರು. ಏನಪ್ಪಾ, ಇವರಿಗೆ ಇಂತಹ ಮಾತು ಹೇಳಬೇಕು, ಅವರೇನಾದರೂ ತಿಳಿದುಕೊಂಡರೆ ಏನು ಮಾಡುವುದು ಅಂದುಕೊಳ್ಳದೆ, ಇದ್ದದ್ದನ್ನು ಇದ್ದಂತೆ ಖಡಾಖಂಡಿತವಾಗಿ ಹೇಳುವಂತಹ ಜಾಯಮಾನ ಶ್ರೀಯುತ ಪಾಟೀಲ್ ಪುಟ್ಟಪ್ಪನವರಿಗೆ ಇತ್ತು ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀಯುತ ಪಾಟೀಲ್ ಪುಟ್ಟಪ್ಪನವರ ಮೂಲ ಹೆಸರು ಶಿವಕುಮಾರ್ ಗೌಡ ಎಂದು ಇತ್ತು. ನಂತರ 'ಪಾಟೀಲ್ ಪುಟ್ಟಪ್ಪ' ಎಂಬ ಹೆಸರಿನಿಂದ ಖ್ಯಾತರಾಗಿದ್ದರು. ಇವರು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಶ್ರೀಯುತ ಪಾಟೀಲ್ ಪುಟ್ಟಪ್ಪನವರು ಕಾನೂನು ಪದವಿಯನ್ನು ಕಲಿತಿದ್ದರೂ ಕೂಡ ಪತ್ರಿಕೋದ್ಯಮದಲ್ಲಿ ಹೆಸರು ಮಾಡಿದ್ದರು. ಅವರು ಅಮೇರಿಕಾದ ಕ್ಯಾಲಿಪೋರ್ನಿಯ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮವನ್ನು ಅಭ್ಯಾಸ ಮಾಡುವುದಕ್ಕೆ ಹೋದಂತಹ ಮೊದಲನೆಯ ಕನ್ನಡಿಗರಾಗಿದ್ದರು. ಶ್ರೀಯುತ ಪಾಟೀಲ್ ಪುಟ್ಟಪ್ಪನವರ ಸಮಕಾಲೀನರು ಮತ್ತು ಅವರ ಸ್ನೇಹಿತರು ಅವರನ್ನು ಪ್ರೀತಿಯಿಂದ 'ಪಾಪು' ಎಂದು ಕರೆಯುತ್ತಿದ್ದರು. ಶ್ರೀಯುತ ಪಾಟೀಲ್ ಪುಟ್ಟಪ್ಪನವರಿಗೆ 'ಪಾಪು' ಎನ್ನುವುದೇ ಖ್ಯಾತ ನಾಮವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಅವರು ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿದ್ದರು. ಅತ್ಯುತ್ತಮವಾದಂತಹ ಒಳ್ಳೆಯ ಸಂಸದೀಯ ಪಟುವಾಗಿ ಅತ್ಯತ್ತಮವಾದಂತಹ ಸೇವೆಯನ್ನು ಸಲ್ಲಿಸಿದ್ದರು. ಅವರು ರಾಜ್ಯಸಭಾ ಸದಸ್ಯರಾಗಿ ಈ ನಾಡಿನ ಅಭಿವೃದ್ಧಿಗೆ ಸದಾ ಚಿಂತನೆ ಮಾಡಿದಂತಹ ಒಬ್ಬ ಹಿರಿಯ ಮಹಾನ್ ವ್ಯಕ್ತಿಯಾಗಿದ್ದರು. ಶ್ರೀಯುತ ರಾಮಕೃಷ್ಣ ಹೆಗಡೆಯವರು ಅವರನ್ನು 'ಕನ್ನಡ ಕಾವಲು ಸಮಿತಿ'ಯ ಅಧ್ಯಕ್ಷರನ್ನಾಗಿ ನೇಮಿಸಿದ್ದಾಗ, ಅವರು ಕರುನಾಡ ರಕ್ಷಣೆ ನೊಗ ಹೊತ್ತಿದ್ದರು. 1976ನೇ ಇಸವಿಯಲ್ಲಿ ರಾಜ್ಯ ಸರ್ಕಾರ ಅವರ ಸೇವೆಯನ್ನು ಗುರ್ತಿಸಿ 'ರಾಜ್ಯೋತ್ಸವ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದ್ದು ಸ್ಮರಣೀಯವಾಗಿದೆ. ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ ಹೋರಾಟ ರೂಪಿಸಿದಂತಹವರು ಪಾಪು ರವರು. ಕರ್ನಾಟಕ ಏಕೀಕರಣ, ಮೀಸಲಾತಿ, ಗಡಿ ಹೋರಾಟದಿಂದ ಬಹಳಷ್ಟು ಹೆಸರುಗಳಿಸಿದ್ದು, ಮುಂಚೂಣಿಯಲ್ಲಿದ್ದರು. 1966ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯವು 'ನಾಡೋಜ ಪ್ರಶಸ್ತಿ'ಯನ್ನು ನೀಡಿ ಗೌರವ ಸಲ್ಲಿಸಿದ್ದನ್ನು ನಾನು ನೆನಪಿಸಿಕೊಳ್ಳುತ್ತಿದ್ದೇನೆ. ಶ್ರೀಯುತ ಪಾಟೀಲ ಪುಟ್ಟಪ್ಪನವರು ಹಲವಾರು ಪುಸ್ತಕಗಳನ್ನು ಬರೆದಿದ್ದರು. ಮೌಲಿಕ ಗ್ರಂಥಗಳನ್ನು ಬರೆದಿದ್ದರು. ಅವರು 45 ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಪ್ರಮುಖವಾದಂತಹ ಕೃತಿ ಎಂದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1972ರಲ್ಲಿ 'ನನ್ನದು ಈ ಕನ್ನಡ ನಾಡು' ಎಂದು ರಚಿಸಿದ್ದಾರೆ. 1972 ರಲ್ಲಿ ನಮ್ಮದು ಭಾರತ ಭೂಮಿ, 1971ರಲ್ಲಿ ಸೂರ್ಯ ದೇಶ ಕಂಡೆ, 1949ರಲ್ಲಿ ನಮ್ಮ ದೇಶ ನಮ್ಮ ಜನ, 1973ರಲ್ಲಿ ಪಾಪು ಪ್ರಪಂಚ ಇವುಗಳು ಬಹಳ ಪ್ರಮುಖವಾದಂತಹ ಮೌಲಿಕ ಗ್ರಂಥಗಳಾಗಿವೆ. ಅವರೇ ಸ್ವತಃ ಮುಂಚೂಣಿಯಲ್ಲಿದ್ದು, ಧಾರವಾಡ ಮತ್ತು ಕಲಬುರ್ಗಿಯಲ್ಲಿ ಎರಡು ಹೈಕೋರ್ಟ್ ಸರ್ಕ್ಯೂಟ್ ಬೆಂಚ್ ಸ್ಥಾಪನೆ ಆಗುವುದಕ್ಕೆ ಅವರ ಶ್ರಮ ಬಹಳ ದೊಡ್ಡದು ಎಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅವರು ವಿಎಸ್ಆರ್ ಪತ್ರಿಕೋದ್ಯಮಕ್ಕೆ ಪಾತ್ರರಾಗಿದ್ದರು. ಅಷ್ಟೇ ಅಲ್ಲದೇ ಕರ್ನಾಟಕ ವಿಶ್ವವಿದ್ಯಾಲದಿಂದ 'ಡಿಲಿಟ್ ಗೌರವ ಪ್ರಶಸ್ತಿ' ಯನ್ನು ಪಡೆದಿದ್ದರು. ಹಂಪಿ ವಿಶ್ವವಿದ್ಯಾಲಯವು 'ನಾಡೋಜ ಪ್ರಶಸ್ತಿ' ಯನ್ನು ನೀಡಿ ಗೌರವಿಸಿದೆ. ಇನ್ನೂ ಅನೇಕ ಪ್ರಶಸ್ತಿಗಳನ್ನು ಗಳಿಸಿದ್ದರು. ಅಂತಹ ಧೀಮಂತ್ರ ಕನ್ನಡ ಕಟ್ಟಾಳು, ಶ್ರೇಷ್ಠ ಸಾಹಿತಿ, ವಿಮರ್ಶಕ ಹಾಗೂ ಸ್ವಾತಂತ್ರ್ಯ ಹೋರಾಟಗಾರರನ್ನು ಕಳೆದುಕೊಂಡು ನಮ್ಮ ಕರುನಾಡು ನಿಜವಾಗಲೂ ಬರಡಾಗಿದೆ ಎಂದು ಹೇಳಬಹುದು. ಇವರ ಸೇವೆ ಅವಿಸ್ಮರಣೀಯವಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಇವರ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ.

ಮಾನ್ಯ ಸಭಾಪತಿಯವರೇ, 'ಕನ್ನಡಾಂಬೆಯ ಕಿರೀಟದಿಂದ ಒಂದು ಅನರ್ಘ್ಯ ರತ್ನ ಕಳಚಿದೆ' ಎಂಬ ನೋವು ನನಗೆ ಆಗಿದೆ. ಏಕೆಂದರೆ, ವೈಯಕ್ತಿಕವಾಗಿ ನಾನು ಪಾಟೀಲ್ ಪುಟ್ಟಪ್ಪನವರ ಜೊತೆ ಗುರ್ತಿಸಿಕೊಂಡಿದ್ದವನು. ಸಾರ್ವಜನಿಕ ಬದುಕಿನಲ್ಲಿ ನಾನು ನೇರವಾಗಿ ಅವರ ಬಳಿಗೆ ಹೋಗಿ, ಅವರ ಆಶೀರ್ವಾದ ಪಡೆದುಕೊಂಡು, ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆ. ಅವರು ನಮ್ಮ ಕುಟುಂಬದ ಜೊತೆ ಬಹಳಷ್ಟು ಒಡನಾಟದಲ್ಲಿದ್ದರು. ಅವರು ವಿಜಯಪುರಕ್ಕೆ ಹೋಗುವಂತಹ ಸಂದರ್ಭದಲ್ಲಿ ನನಗೆ ದೂರವಾಣಿ ಮೂಲಕ ನಾನು ವಿಜಯಪುರಕ್ಕೆ ಹೋಗುತ್ತಿದ್ದೇನೆ, ಬರುವಾಗ ನಿಮ್ಮ ಮನೆಗೆ ಬಂದು ಹೋಗುತ್ತೇನೆಂದು ಹೇಳುತ್ತಿದ್ದರು. ನನ್ನ ಮನೆ ತೋಳಗಿ ಗ್ರಾಮದಲ್ಲಿ ರಸ್ತೆ ಪಕ್ಕದಲ್ಲೇ ಇದೆ. ಅವರು ನಮ್ಮ ಮನೆಗೆ ಬಂದಾಗ, ನಮ್ಮ ಕುಟುಂಬದ ಉಭಯ ಕುಶಲೋಪರಿ ವಿಚಾರಿಸಿ, ಆತಿಥ್ಯ ಸ್ವೀಕಾರ ಮಾಡಿಕೊಂಡು ಹೋಗುತ್ತಿದ್ದರು. ಸುಮಾರು 15-20 ದಿವಸಗಳ ಹಿಂದೆ ಶ್ರೀಯುತ ಪಾಟೀಲ್ ಪುಟ್ಟಪ್ಪನವರು ಅಸ್ವಸ್ಥರಾಗಿದ್ದಾರೆಂದು ನನಗೆ ತಿಳಿದ ಕೂಡಲೇ, ನಾನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಹೋಗಿ ಅವರ ಆರೋಗ್ಯ ಕುಶಲೋಪರಿ ವಿಚಾರಿಸಿದೆ. ಅಲ್ಲಿನ ವೈದ್ಯರು ಶ್ರೀಯುತ ಪಾಟೀಲ್ ಪುಟ್ಟಪ್ಪನವರು ಪೂರ್ಣ ಗುಣಮುಖರಾಗುತ್ತಾರೆ, ಇನ್ನು ಎರಡು-ಮೂರು ದಿನಗಳಲ್ಲಿ ಅವರನ್ನು ಡಿಸ್ಚಾರ್ಜ್ ಮಾಡಿ ಮನೆಗೆ ಕಳುಹಿಸುತ್ತೇವೆಂದು ಹೇಳಿದ್ದರು. ಅಷ್ಟೇ ಅಲ್ಲದೇ, ನನ್ನ 60ನೇ ವರ್ಷದ ಸಮಾರಂಭದಲ್ಲಿ ನಡೆದಾಡುವ ದೇವರು ಎಂದು ಖ್ಯಾತರಾದಂತಹ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಸಾನಿಧ್ಯದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ನನಗೆ ಆಶೀರ್ವಾದ ಮಾಡಿದ್ದು ಇನ್ನೂ ಅಚ್ಚ ಹಸಿರಾಗಿದೆ. ಇವತ್ತಿನ ದಿವಸ ಇಡೀ ಕನ್ನಡ ನಾಡು ಅವರನ್ನು ಕಳೆದುಕೊಂಡು ಅನಾಥ ಪ್ರಜ್ಞೆಯನ್ನು ಅನುಭವಿಸುತ್ತಿದೆ. ವೈಯಕ್ತಿಕವಾಗಿ ಅವರ ಜೊತೆ ನನಗೆ ಎಷ್ಟು ಒಡನಾಟ ಮತ್ತು ಸಂಬಂಧ ಮತ್ತು ಗೌರವ ಇತ್ತು ಎಂದರೆ, ಶ್ರೀಯುತ ಪಾಟೀಲ್ ಪುಟ್ಟಪ್ಪನವರ ನಿಧನ ಸ್ವತಃ ನನ್ನ ತಂದೆಯನ್ನು ಕಳೆದುಕೊಂಡಂತಹ ನೋವು ನನಗೆ

ಆಗಿದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಶ್ರೀಯುತರ ಅಗಲಿಕೆಯಿಂದ ಆಗಿರುವ ದುಃಖವನ್ನು ಸಹಿಸುವಂತಹ ಶಕ್ತಿ ಅವರ ಕುಟುಂಬ ವರ್ಗದವರಿಗೆ ಹಾಗೂ ಅವರ ಅಭಿಮಾನಿಗಳಿಗೆ ನೀಡಲಿ ಎನ್ನುವಂತಹ ಮಾತನ್ನು ಹೇಳಿ, ಅವರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ಕಲ್ಪಿಸಲಿ ಎಂದು ಪ್ರಾರ್ಥಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಸಭಾಪತಿಯವರೇ, ನಾನು ತಮಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಸದನದ ಸತ್ಸಂಪ್ರದಾಯದ ಪ್ರಕಾರ condolence ಮಾಡಿ, ಶ್ರದ್ಧಾಂಜಲಿ ಮುಗಿಸಿದ ನಂತರ ಈ ಸಭೆಯನ್ನು ಪ್ರಾರಂಭ ಮಾಡಲಾಗುತ್ತಿತ್ತು. ಆದರೆ ನನ್ನ ಮನವಿ ಇರುವುದು ಇಷ್ಟೆ. ಇಂತಹ ಒಬ್ಬರು ಶ್ರೇಷ್ಠ ಕನ್ನಡ ಪತ್ರಿಕೋದ್ಯಮದ ಪಿತಾಮಹ, ಈ ನಾಡಿನ ಅಭಿವೃದ್ಧಿಗಾಗಿ ಬಹು ದೊಡ್ಡ ಸೇವೆ ಮಾಡಿದಂತಹ ಶ್ರೀಯುತ ಪಾಟೀಲ್ ಪುಟ್ಟಪ್ಪನವರ ನಿಧನದ ಈ ಸಂದರ್ಭದಲ್ಲಿ ಕೊನೆಪಕ್ಷ ಅರ್ಧ ಗಂಟೆ ಕಾಲ ಈ ಸದನವನ್ನು ಮುಂದಕ್ಕೆ ಹಾಕಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥವಾಗಿ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನಾಚರಣೆ ಮಾಡಬೇಕೆಂದು ಕೋರುತ್ತೇನೆ.

**(ಮೃತರ ಗೌರವಾರ್ಥವಾಗಿ ಸದನವು ಒಂದು ನಿಮಿಷ ಮೌನವನ್ನಾಚರಿಸಿತು)**

**ಸಭಾಪತಿಯವರು:-** ಈಗ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಬೆಳಗ್ಗೆ 11 ಗಂಟೆ 39 ನಿಮಿಷದಿಂದ ಅರ್ಧ ಗಂಟೆಗಳ ಕಾಲ ಮುಂದೂಡಲಾಯಿತು)**

(466)17.3.2020/12.10/ಎಂ.ಎಂ-ಎ.ಕೆ

**(ಅರ್ಧ ಗಂಟೆ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 12 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು)**

**2. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ**

**ಶ್ರೀ ಅ. ದೇವೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಸಂವಿಧಾನವನ್ನು ಸಮರ್ಥಿಸಿಕೊಂಡು 70 ವರ್ಷಗಳನ್ನು ಪೂರೈಸಿದ ಶುಭ ಸಂದರ್ಭದಲ್ಲಿ "ಸಂವಿಧಾನ"ದ ಕುರಿತು ವಿಶೇಷ ಚರ್ಚೆಯನ್ನು ಮಾಡಲು ನನಗೆ ಅವಕಾಶ ನೀಡಿದ ತಮಗೆ ಧನ್ಯವಾದಗಳು. ಮೊದಲನೆಯದಾಗಿ ಮಹಾತ್ಮ ಗಾಂಧೀಜಿಯವರು ಹೇಳಿದ ಮಾತು "ಜಗತ್ತು ಬದಲಾವಣೆಯಾಗಬೇಕು ಎನ್ನುವವರು ಮೊದಲು ನಮ್ಮಿಂದಲೇ ಬದಲಾವಣೆಯಾಗಬೇಕು ಎನ್ನುವುದನ್ನು ಅರಿತುಕೊಳ್ಳಬೇಕು".

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ದೇವೇಗೌಡರೇ, ತಾವು 10 ನಿಮಿಷಗಳ ಕಾಲ ಮಾತನಾಡಿ, ಎಲ್ಲರಿಗೂ ಅವಕಾಶ ಕೊಡಬೇಕಾಗಿದೆ.

**ಶ್ರೀ ಅ. ದೇವೇಗೌಡ:–** ಮಾನ್ಯ ಸಭಾಪತಿಯವರೇ, ಸಂವಿಧಾನ ಎನ್ನುವುದು ಅಂಕಿ–ಸಂಖ್ಯೆಗಳ ಮಗ್ಗಿ ಪುಸ್ತಕವಾಗಲಿ ಅಥವಾ ತರ್ಕದ ವಾದ ವಿವಾದಗಳ ಕೃತಿಯಲ್ಲ, ಅದಕ್ಕೊಂದು ಮೆದುಳು ಇರುತ್ತದೆ, ಹೃದಯ ಕೈಕಾಲು ಇರುತ್ತದೆ.  ಎಲ್ಲಕ್ಕೂ ಮಿಗಿಲಾಗಿ ಆತ್ಮ ಇರುತ್ತದೆ ಎಂದು ಹೇಳಿದ ನ್ಯಾಯಮೂರ್ತಿ ಶ್ರೀ ಎಸ್.ಎಂ. ದೌಡ್ ಅವರ ಮಾತನ್ನು ಎಲ್ಲರೂ ಅರಿತು ಆತ್ಮಸಾಕ್ಷಿಯಾಗಿ ಸಂವಿಧಾನದ ಪರವಾಗಿ ನಡೆದುಕೊಳ್ಳಬೇಕು.  ದಿನಾಂಕ 09–12–1946ರಲ್ಲಿ ಸಂವಿಧಾನ ರಚನಾ ಸಭೆಯು ಸ್ಥಾಪನೆಯಾಯಿತು.  ಈ ರಚನಾ ಸಭೆಗೆ ಡಾ: ರಾಜೇಂದ್ರ ಪ್ರಸಾದ್‌ರವರು ಅಧ್ಯಕ್ಷರಾಗಿ ನೇಮಕಗೊಂಡಾಗ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿರುತ್ತಾರೆ.  "ಸಂವಿಧಾನವು ಒಂದು ಯಂತ್ರವಿದ್ದಂತೆ, ನಿರ್ಜೀವ ವಸ್ತು, ಅದನ್ನು ನಿಯಂತ್ರಿಸುವ ಹಾಗೂ ನಡೆಸುವ ವ್ಯಕ್ತಿಗಳಿಂದ ಅದು ಜೀವ ಪಡೆದುಕೊಳ್ಳುತ್ತದೆ.  ಇಂದು ಭಾರತಕ್ಕೆ ಅವಶ್ಯಕವಾಗಿ ದೇಶದ ಹಿತಾಸಕ್ತಿಯನ್ನು ಕಾಪಾಡಲು ಸಿದ್ಧರಿರುವ ಕೆಲವು ನಿಷ್ಠಾವಂತ ವ್ಯಕ್ತಿಗಳು ಬೇಕಾಗುತ್ತದೆ ಎಂದು ಡಾ: ರಾಜೇಂದ್ರ ಪ್ರಸಾದ್‌ರವರು ಹೇಳಿದರು.  ಡಾ: ಎಸ್. ರಾಧಾಕೃಷ್ಣನ್‌ರವರು ಈ ಕೆಳಕಂಡ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರನ್ನು ಅಭಿನಂದಿಸುತ್ತಾ, ತಮ್ಮ ಭಾವನೆಯನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ:'ಯಾವುದೇ ಸಂವಿಧಾನವನ್ನು ರಚಿಸುವಾಗ ಎಲ್ಲಾ ನಾಗರೀಕರಿಗೂ ಸಹ  ಮೂಲಭೂತ ಹಕ್ಕುಗಳನ್ನು ತಮಗೆ ನೀಡಲಾಗಿದೆ ಎನ್ನುವುದನ್ನು ಮನದಟ್ಟು ಮಾಡಿಕೊಡುವುದು ಅತ್ಯಗತ್ಯವಾಗಿದೆ.  ಸಾಂಸ್ಕೃತಿಕ ಸ್ವಯಮಾಧಿಕಾರವಿರುತ್ತದೆ; ಯಾರನ್ನೂ ದಯನಿಸಲಾಗುವುದಿಲ್ಲ; ಅದು ಅಕ್ಷರಶಃ ಪ್ರಜಾಪ್ರಭುತ್ವವಾದ ಸಂವಿಧಾನವಾಗಿರುತ್ತದೆ. ಅಲ್ಲಿ ನಾವು ರಾಜಕೀಯ ಸ್ವಾತಂತ್ರ್ಯದಿಂದ ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾನತೆಯ ಕಡೆಗೆ ಸಾಗುತ್ತೇವೆ. ಪ್ರತಿಯೊಬ್ಬ ವ್ಯಕ್ತಿಯೂ ಈ ಮಹಾನ್ ದೇಶಕ್ಕೆ ಸೇರಿರುವುದಕ್ಕೆ ಹೆಮ್ಮೆ ಪಡಬೇಕು' ಎಂದು ಹೇಳಿದ್ದಾರೆ.  ಡಾ: ಬಿ.ಆರ್. ಅಂಬೇಡ್ಕರ್‌ರವರು ಇಂದು ನಾವು ರಾಜಕೀಯ ಸ್ವತಂತ್ರವನ್ನು ಸಾಧಿಸಿರಬಹುದು ಆದರೆ ಸಾಮಾಜಿಕ ಸ್ವಾತಂತ್ರ್ಯ ಅಥವಾ ಸಾಮಾಜಿಕ ಪ್ರಜಾಪ್ರಭುತ್ವವನ್ನು ಸಾಧಿಸದಿದ್ದರೆ ನಮ್ಮ ರಾಜಕೀಯ ಸ್ವಾತಂತ್ರ್ಯ ಅರ್ಥಹೀನ.  ಒಬ್ಬ ವ್ಯಕ್ತಿಗೆ ಒಂದು ಓಟು, ಒಂದು ಓಟಿಗೆ ಒಂದು ಮೌಲ್ಯವನ್ನು ನಾವು ಸಾಧಿಸಿರಬಹುದು.  ಆದರೆ ಪ್ರತಿಯೊಬ್ಬ ವ್ಯಕ್ತಿಗೂ ಒಂದೇ ಮೌಲ್ಯವೆಂಬ ಆದರ್ಶವನ್ನು ನಾವು ಸಾಧಿಸಬೇಕಿದೆ ಎಂದು ಹೇಳಿದ್ದಾರೆ.  ಡಾ: ಬಿ.ಆರ್. ಅಂಬೇಡ್ಕರ್‌ರವರು ದೇಶವೊಂದಕ್ಕೆ ಸಂವಿಧಾನವನ್ನು ರಚಿಸುವಾಗ ಸಂವಿಧಾನ ರಚನಾಕಾರರಿಗೆ ಆ ದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಬಗ್ಗೆ ಸರಿಯಾಗಿ ತಿಳಿದಿರಬೇಕು ಎಂದರು.  ವಿಭಿನ್ನ ಜಾತಿ, ಧರ್ಮ, ಜನಾಂಗ, ಭಾಷೆ, ಸಂಸ್ಕೃತಿಯನ್ನು ಹೊಂದಿರುವ ಭಾರತದಲ್ಲಿ ಎಲ್ಲರನ್ನು ಒಟ್ಟಿಗೆ ಬಾಳುವಂತೆ ಮಾಡಲು ಬೇಕಾದ ಅಂಶಗಳನ್ನು ಅಳವಡಿಸುವ ಪ್ರಯತ್ನ ಮಾಡುವ ಸಂದರ್ಭದಲ್ಲಿ ಅವರ ಮೇಲೆ ಭಾರತದ ಸನಾತನ ಧರ್ಮದಲ್ಲಿರುವ "ಸರ್ವೇಜನೋ ಸುಖಿನೋ ಭವಂತು", "ಸಮಪಾಲು ಸಮಬಾಳು", "ವಸುದೈವ ಕುಟುಂಬಕಂ" ಎನ್ನುವ ಘೋಷ ವಾಕ್ಯಗಳನ್ನು ಬುದ್ಧನ ಶಾಂತಿ ಮತ್ತು ತತ್ವ, ಬಸವಣ್ಣನವರ ಸಮಾನತಾ ತತ್ವ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕನಕದಾಸರವರ ಜಾತಿ ರಹಿತ ವ್ಯವಸ್ಥೆ, ಮಹಾತ್ಮ ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆ ಹಾಗೂ ಸ್ವರಾಜ್ಯದ ತತ್ವಗಳು ಪ್ರಭಾವ ಬೀರಿದ್ದವು. ಇವುಗಳನ್ನು ಭಾರತ ಸಂವಿಧಾನದ ಪ್ರಸ್ತಾವನೆಯನ್ನೊಳಗೊಂಡು ಸಂವಿಧಾನದ 3ನೇ ಭಾಗ ಮೂಲಭೂತ ಹಕ್ಕುಗಳು, ನಾಲ್ಕನೇ ಭಾಗ ರಾಜ್ಯ ನೀತಿ ನಿರ್ದೇಶಕ ತತ್ವಗಳು ಮತ್ತು 4ಎ ಭಾಗದ ಮೂಲಭೂತ ಕರ್ತವ್ಯಗಳನ್ನು ಗುರುತಿಸಲಾಗಿದೆ. ಸ್ವಾತಂತ್ರ್ಯ ಎಂದರೆ ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ, ಸ್ವತಂತ್ರ ಸ್ಥಾನಮಾನ ಮತ್ತು ಅವಕಾಶವನ್ನು ಸಮಾನತೆ ಎಂದು ಹೇಳಿದ್ದರು. ಭಾಗ 3ರಲ್ಲಿ 14ನೇ ಅನುಚ್ಛೇದವು ಮೊದಲು ಹಕ್ಕುಗಳು; ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ವ್ಯಕ್ತಿ ಸ್ವಾತಂತ್ರ್ಯ, ಜೀವ ಸಂರಕ್ಷಣೆ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಮತ್ತು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸ್ವತಂತ್ರದ ಹಕ್ಕು ಮತ್ತು ಕೊನೆಯದಾಗಿ ಯಾವುದೇ ಹಕ್ಕಿನ ಉಲ್ಲಂಘನೆಯಾದಲ್ಲಿ ಸಂವಿಧಾನದ ವಿರುದ್ಧ ಪರಿಹಾರೋಪಾಯಗಳನ್ನು ಪಡೆಯಲು ನ್ಯಾಯಾಲಯದ ಮೊರೆ ಹೋಗುವ ಹಕ್ಕನ್ನು ನೀಡಲಾಗಿದೆ. ಬೇರೆ ಬೇರೆ ತರಹದ ಸ್ವಾತಂತ್ರ್ಯ ಸಮಾನತೆಯ ಹಕ್ಕಿಗೆ ಪ್ರಪ್ರಥಮ ಸ್ಥಾನವನ್ನು ನೀಡಲಾಗಿದೆ. ಸಂವಿಧಾನದ ಶಿಲ್ಪಿಗಳಿಗೆ ವಿವಿಧ ವರ್ಗಗಳ ಜನತೆಯ ಮೇಲೆ ಹೇರಿದ ಅನ್ಯಾಯದ ಅರಿವು ಚೆನ್ನಾಗಿತ್ತು. ಈ ತಪ್ಪುಗಳನ್ನು ತಿದ್ದಬೇಕೆಂಬ ಆಗ್ರಹ, ಆಕಾಂಕ್ಷೆ 'ರಾಜಾರಾಮ್ ಮೋಹನ್‌ರಾಯ್' ಅವರಂತಹ ಸಮಾಜ ಸುಧಾರಕರಿಂದ ಆರಂಭಗೊಂಡು ರಾಷ್ಟ್ರಪಿತ ಗಾಂಧೀಜಿಯವರವರೆಗೆ ಮುಂದುವರಿದಿತ್ತು. ಸಂವಿಧಾನಶಿಲ್ಪಿಯಾದ ಅಂಬೇಡ್ಕರ್‌ರವರು ಮಹಾನ್ ವಿಚಾರವಾದಿ, ನ್ಯಾಯ ನೀತಿಜ್ಞ ಮತ್ತು ಅನುಭವಿ ಆಡಳಿತಗಾರರಾಗಿದ್ದರು. ಕಾನೂನು ಮತ್ತು ವಾಸ್ತವ ಪರಿಸ್ಥಿತಿಯ ನಡುವೆ ಸದಾ ಅಂತರ ಇದ್ದೇ ಇರುತ್ತಿತ್ತು ಎಂಬುದನ್ನು ಅವರು ಅರಿತಿದ್ದರು. ದೇಶದ ಶೋಷಿತ ವರ್ಗಗಳಿಗೆ ಸೌಲಭ್ಯಗಳಲ್ಲಿ ಪರಿಹಾರ ಸಿಗುವಂತೆ ನೋಡಿಕೊಳ್ಳುವುದಷ್ಟೇ ಸಾಲದು, ಅಸ್ಪೃಶ್ಯತೆಯಂತಹ ಹೇಯ ಪದ್ಧತಿ ಸಂಪೂರ್ಣವಾಗಿ ನಿಲ್ಲುವಂತಾಗಬೇಕೆಂದು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಶೋಷಿತ ಜನರ, ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗಾಗಿ ಕ್ರಮಗಳನ್ನು ಇದರಲ್ಲಿ ಸೇರಿಸಲಾಗಿದೆ. ಸಮಾನತೆಯನ್ನು ಹೇಳುವ ಅನುಚ್ಛೇದ ಗಾಂಧೀಜಿ ಮತ್ತು ಅಂಬೇಡ್ಕರ್‌ರವರು 1789ರಲ್ಲಿ ಫ್ರೆಂಚ್ ಮಹಾಕ್ರಾಂತಿ ಆರಂಭಿಸಿದ ಕ್ರಾಂತಿಕಾರರ ಸ್ವಾತಂತ್ರ, ಸಮಾನತೆ ಮತ್ತು ಸೋದರತ್ವದ ವಿಚಾರಧಾರೆಗಳನ್ನು ಒಳಗೊಂಡಿವೆ. ಸಬಲೀಕರಣವೆಂದರೆ, ಸ್ವಗೌರವ ಮತ್ತು ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದು, ಆರ್ಥಿಕವಾಗಿ ಸ್ವಾವಲಂಬನೆಯಾಗುವುದು ಮತ್ತು ಸ್ವಂತಿಕೆಯನ್ನು ಹೊಂದುವುದು ಎಂದರ್ಥ. ಐತಿಹಾಸಿಕವಾಗಿ ಸಮಾಜ ಸುಧಾರಕರು ಆಳಿದ ರಾಜರುಗಳು ಸೇರಿದಂತೆ 12ನೇ ಶತಮಾನದ ಬಸವಣ್ಣನವರಿಂದ ನಾಲ್ವಡಿ ಕೃಷ್ಣರಾಜ ಒಡೆಯರ್‌ವರೆಗೆ ಶೋಷಿತ ವರ್ಗಗಳ ಸಬಲೀಕರಣಕ್ಕಾಗಿ ಬಹಳಷ್ಟು ಶ್ರಮಿಸಿದ್ದಾರೆ. ಇವರ ಜೊತೆಗೆ ಬ್ರಿಟಿಷ್ ಸರ್ಕಾರವು ಕೂಡ ಮಹಿಳೆಯರ ಸಶಕ್ತೀಕರಣಕ್ಕೆ ಕೆಲವೊಂದು ಮಹತ್ತರ ಕಾನೂನುಗಳನ್ನು ಜಾರಿಗೆ ತಂದಿದ್ದರು. ತದನಂತರದ ದಿನಗಳಲ್ಲಿ ಅಂದರೆ, 19ನೇ ಶತಮಾನದ ಅಂತ್ಯಭಾಗ ಹಾಗೂ 20ನೇ ಶತಮಾನದ ಆದಿಭಾಗದಿಂದಲೂ ಶೋಷಿತ ವರ್ಗಗಳ ಸಬಲೀಕರಣಕ್ಕೆ ಸಂವಿಧಾನದಲ್ಲಿ ಅನೇಕ ರೀತಿಯ ಸವಲತ್ತುಗಳನ್ನು ಕಲ್ಪಿಸಿಕೊಟ್ಟಿದ್ದರೂ ಸಹ ಸಬಲೀಕರಣದಲ್ಲಿ ನಾವು ವಿಫಲರಾಗಿದ್ದೇವೆ. 'ಸಂವಿಧಾನವೆಂದರೆ, ರಾಜ್ಯವನ್ನಾಳುವ ಕಾನೂನು' ಎಂದು 'ಮೆಕೈವರ್'ನ ಹೇಳಿಕೆಯಾದರೆ,'ಸರ್ಕಾರದ ಅಧಿಕಾರಿಗಳನ್ನು ಪ್ರಜೆಗಳ ಹಕ್ಕುಗಳನ್ನು ಸಮನ್ವಯ ಮಾಡುವ ತತ್ವಗಳೇ ಸಂವಿಧಾನ'

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬುದು ಲಾರ್ಡ್ ಬ್ರೈಸ್‌ನ ಅಭಿಪ್ರಾಯ. ನಮ್ಮ ಸಂವಿಧಾನ ಒಳಗೊಂಡಿರುವ ಕೆಲವು ಮುಖ್ಯ ಅಂಶಗಳೆಂದರೆ, ಸ್ವತಂತ್ರ ಮಾಧ್ಯಮ, ಪತ್ರಿಕಾವೃಂದ ಸರ್ಕಾರದ ನಾಲ್ಕನೇ ಅಂಗವೆಂದು ಪ್ರಖ್ಯಾತವಾಗಿದೆ.

(ಮುಂದು)

(467) 17-03-2020/ 12-20/ ಕೆಹೆಚ್-ಎಕೆ

**ಶ್ರೀ ಅ.ದೇವೇಗೌಡ (ಮುಂದು):-**

ಜಾತ್ಯಾತೀತ ರಾಷ್ಟ್ರ ಮತ್ತು ಸಂಯುಕ್ತ ವ್ಯವಸ್ಥೆ, ಸಾರ್ವತ್ರಿಕ ಮತದಾನ, ಏಕ ಸಂವಿಧಾನ ಮತ್ತು ಏಕ ಪೌರತ್ವ, ಮೂಲಭೂತ ಹಕ್ಕುಗಳು, ರಾಜ ನಿರ್ದೇಶನ ತತ್ವಗಳು, ಮೂಲಭೂತ ಕರ್ತವ್ಯಗಳು, ಸಂಸದೀಯ ಪ್ರಜಾಪ್ರಭುತ್ವ, ಸ್ವಾತಂತ್ರ್ಯ ನ್ಯಾಯಾಂಗ; ಭಾರತ ಸಂವಿಧಾನದ ರಕ್ಷಕರಾಗಿ ರಾಷ್ಟ್ರಪತಿಗಳಿದ್ದರೆ ಸಂವಿಧಾನದ ಮೂಲಭೂತ ಹಕ್ಕುಗಳ ರಕ್ಷಕ ಸರ್ವೋಚ್ಚ ನ್ಯಾಯಾಲಯವಾಗಿರುವುದು ಗೌರವದ ವಿಷಯ. "ನಮ್ಮ ಸಂವಿಧಾನ ನಮ್ಮ ಹೆಮ್ಮೆ" "ವಿಶೇಷವಾಗಿ ಸರ್.ಬಿ.ಎನ್.ರಾವ್ ಇವರ ಕೊಡುಗೆ ಅಪಾರವಾದದು. ಮೂಲತಃ ಮಂಗಳೂರಿನವರಾದ ಇವರು ಭಾರತ ಸಂವಿಧಾನದ ರಚನಾ ಸಭೆಯ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದು, ಕರ್ನಾಟಕದ ಹೆಮ್ಮೆ. ಡಾ॥ ಬಿ.ಆರ್.ಅಂಬೇಡ್ಕರ್‌ರವರ ನೇತೃತ್ವದ ರಚನಾ ಸಮಿತಿಯ ಭಾರತೀಯ ಸರ್ವತೋಮುಖ ಅಭಿವೃದ್ಧಿಗಾಗಿ ಸಮಗ್ರವಾದ ಹಾಗೂ ಸಮರ್ಥವಾದ ಸಂವಿಧಾನವನ್ನು ರಚಿಸಿತು". ಇದುವರೆಗೆ ಭಾರತ ಸಂವಿಧಾನವನ್ನು 104 ಬಾರಿ ತಿದ್ದುಪಡಿ ಮಾಡಲಾಗಿದೆ. ಅದರಲ್ಲಿ ಪ್ರಮುಖ ತಿದ್ದಪಡಿಗಳಾಗಿ ಮೊದಲ ತಿದ್ದುಪಡಿಯಾಗಿದ್ದು, ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಮಾಡಲಾಗಿದೆ ಎಂಬುದು ಗಮನಾರ್ಹ. ಆದರೆ, ಎಷ್ಟು ಅಭಿವೃದ್ಧಿ ಆಗಿದೆ ಎನ್ನುವುದನ್ನು ಅವಲೋಕನ ಮತ್ತು ಆತ್ಮಾವಲೋಕನ ಮಾಡಬೇಕಿದೆ. ನಂತರ 1956 ರಲ್ಲಿ ಮಾಡಿದ 7ನೇ ತಿದ್ದುಪಡಿ ಮೂಲಕ ಭಾಷಾವಾರು ಪ್ರಾಂತ್ಯಗಳ ಆಧಾರದ ಮೇಲೆ ರಾಜ್ಯಗಳ ಏಕೀಕರಣ ಮಾಡಿದ್ದು, ಸಂವಿಧಾನದ ತಿದ್ದುಪಡಿಯ ಹೆಗ್ಗಳಿಕೆ. ಆದರೆ ಇನ್ನೂ ಗಡಿಭಾಗಗಳು ಅಭಿವೃದ್ಧಿ ಆಗಬೇಕಿದೆ. 1976 ರಲ್ಲಿ ಮಾಡಲಾದ 42ನೇ ತಿದ್ದುಪಡಿಯ ಮೂಲಕ ಸಂವಿಧಾನದಲ್ಲಿ ಸಮಾನ ನ್ಯಾಯ ಮತ್ತು ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು. ಹಿರಿಯರಾದ ಮಾನ್ಯ ಶ್ರೀ ಸಿ.ಎಂ. ಲಿಂಗಪ್ಪರವರು ಹೇಳಿದಂತೆ ಇನ್ನೂ ಅನುಷ್ಠಾನವಾಗುತ್ತಿಲ್ಲ. 1985 ರಲ್ಲಿ ಪಕ್ಷಾಂತರ ನಿಷೇಧ ಕಾಯ್ದೆ ಅಳವಡಿಕೆಗಾಗಿ 52ನೇ ತಿದ್ದುಪಡಿ ಮಾಡಿ 10ನೇ ಅನುಸೂಚಿ ಸೇರಿಸಲಾಯಿತು. ಈಗಲೂ ಪಕ್ಷಾಂತರ ಮಾಡುತ್ತಲೇ ಇದ್ದಾರೆ. ಇದರಿಂದ ವಿಕೇಂದ್ರಿಕರಣ ಜೊತೆ ಅವ್ಯವಹಾರ, ಹಣದ ವಿಕೇಂದ್ರಿಕರಣ ಆಗುತ್ತಿದೆ. 73 ಮತ್ತು 74ನೇ ತಿದ್ದುಪಡಿಯ ಮೂಲಕ ಅಧಿಕಾರ ವಿಕೇಂದ್ರಿಕರಣ ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಅಳವಡಿಕೆಗಾಗಿ ತಿದ್ದುಪಡಿ ಮಾಡಲಾಯಿತು. 86ನೇ ತಿದ್ದುಪಡಿಯ ಮೂಲಕ ಭಾರತೀಯರ ಶಿಕ್ಷಣಕ್ಕಾಗಿ ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕುಗಳಲ್ಲಿ ಸೇರ್ಪಡೆ ಮಾಡಲಾಯಿತು. ನಾವು ಕಳೆದ ದಿನ ಚರ್ಚೆ ಮಾಡಿದಾಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಶ್ರೀ ಪಟೇಲ್ ಶಾನ್‌ಭಾಗ್‌ರವರು ಒಳ್ಳೆಯ ರೀತಿಯ ಆಡಳಿತವನ್ನು ಕೊಡುತ್ತಿದ್ದರು. ಇವತ್ತಿನ ದಿವಸ ಪಂಚಾಯಿತಿಯ ರಾಜ್ ವ್ಯವಸ್ಥೆಯಲ್ಲಿ ಪಂಚಾಯಿತಿಯ ಸದಸ್ಯರುಗಳು, ಕಾರ್ಯದರ್ಶಿಗಳು, ಪಿ.ಡಿ.ಓ.ಗಳು, ಇ.ಓ.ಗಳು ಇನ್ನೂ ಎಷ್ಟೋ ಜನರು ಇರುತ್ತಾರೆ. ಆದರೆ, ಇದರಿಂದ ಜನರಿಗೆ ತೊಂದರೆ ಕೊಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸಂವಿಧಾನವನ್ನು ನಾವು ಎಷ್ಟೇ ತಿದ್ದುಪಡಿ ಮಾಡಿದರೂ ಸಹ ನಾವು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಡೆಯುವಂತಹ ಅವ್ಯವಹಾರಗಳು ಮತ್ತು ಅನೇಕ ವಿಚಾರಗಳು ಜನರಿಗೆ ತಲುಪುವಂತಹ ವ್ಯವಸ್ಥೆ ಆಗುತ್ತಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. 86ನೇ ತಿದ್ದುಪಡಿಯ ಮೂಲಕ ಭಾರತದ ಶಿಕ್ಷಣವು ಕಡ್ಡಾಯ ಶಿಕ್ಷಣದ ಮೂಲಕ ಸಂವಿಧಾನಕ್ಕೆ ಸೇರ್ಪಡೆ ಮಾಡಲಾಯಿತು. ಈ ಶಿಕ್ಷಣವು ಎಲ್ಲಿ ಕಡ್ಡಾಯವಾಗುತ್ತಿದೆ ಎಂಬುದನ್ನು ನಾವು ನೋಡಬೇಕು. ನಮ್ಮ ಮಕ್ಕಳೆಲ್ಲಾ ಇಂಗ್ಲೀಷ್ ಮಾಧ್ಯಮದಲ್ಲಿ ಅಂದರೆ ಐ.ಸಿ.ಎಸ್.ಇ. ಶಾಲೆಗಳಲ್ಲಿ ಓದುತ್ತಿದ್ದಾರೆ. ಆದರೆ ಬಡವರ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಆದರೆ, ಇಂಗ್ಲೀಷ್ ಕಡ್ಡಾಯ ಶಿಕ್ಷಣವೆಂದರೆ, ಅದು ಐ.ಸಿ.ಎಸ್.ಇ. ಕೇಂದ್ರ ಸರ್ಕಾರ ನಡೆಸುವಂತಹ ಶಾಲೆಗಳಲ್ಲಿ ಯಾವುದೇ ಕಡ್ಡಾಯ ಶಿಕ್ಷಣ ನಡೆಯುತ್ತಿಲ್ಲ. ಇದರ ಕಡೆ ಸರ್ಕಾರ ಗಮನವನ್ನು ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅಂತೆಯೇ ಸಹಕಾರ ಸಂಘ ಸಂಸ್ಥೆಗಳಿಗಾಗಿ 2011ರಲ್ಲಿ 97ನೇ ತಿದ್ದುಪಡಿ ಮಾಡಲಾಯಿತು. 101ನೇ ತಿದ್ದುಪಡಿಯಲ್ಲಿ ಜಿ.ಎಸ್.ಟಿ. ಅಳವಡಿಸಿ ಭಾರತದಲ್ಲಿ ಏಕ ರೂಪ ತೆರಿಗೆ ಪದ್ಧತಿ ಜಾರಿಗೊಳಿಸಲಾಯಿತು. 2013ರಲ್ಲಿ 98ನೇ ತಿದ್ದುಪಡಿಮಾಡಿ ಹೈದರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ 371(ಜೆ) ಅನುಚ್ಛೇದವನ್ನು ಕರ್ನಾಟಕಕ್ಕಾಗಿ ಜಾರಿ ಮಾಡಿದ್ದು ವಿಶೇಷವಾಗಿದೆ. ಆದರೆ, ಇನ್ನೂ ಈ ಪ್ರದೇಶಗಳು ಅಭಿವೃದ್ಧಿ ಆಗಿರುವುದಿಲ್ಲ. ಇಲ್ಲಿಯವರೆಗೂ ಹೈದರಾಬಾದ್-ಕರ್ನಾಟಕದ ಪರಿಸ್ಥಿತಿಯ ಬಗ್ಗೆ ಯಾವ ರೀತಿ ಎಲ್ಲಾ ಶಾಸನ ಸಭೆಗಳಲ್ಲಿ ಚರ್ಚೆ ಮಾಡುತ್ತಿದ್ದೇವೆ. ಅದರ ಕಡೆ ಗಮನ ಕೊಡುವಂತಹ ಕೆಲಸ ಇಲ್ಲಿಯವರೆಗೂ ಆಗಿಲ್ಲ. ಭಾರತ ದೇಶದಲ್ಲಿ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವವನ್ನು ಮತ್ತು ಅತಿ ದೊಡ್ಡ ಲಿಖಿತ ಸಂವಿಧಾನವನ್ನು ಹೊಂದಿರುವ ಹೆಗ್ಗಳಿಕೆ ಇದೆ. ಸಂವಿಧಾನದ ಪ್ರಸ್ತಾವನೆಯಲ್ಲಿ ಹೇಳಿರುವಂತೆ ನಡೆದುಕೊಳ್ಳುವ ರಾಜಕಾರಣ ನಮ್ಮದಾಗಿರಬೇಕು. ಆಗ ಮಾತ್ರ ರಾಜಕಾರಣಕ್ಕೆ ಅರ್ಥ ಬರುತ್ತದೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸಮಾನತೆಯನ್ನು ಸ್ವಲ್ಪ ಪ್ರಮಾಣದಲ್ಲಿ ಕಡಿಮೆ ಮಾಡಿರುವುದನ್ನು ನಾವು ಸಾಧನೆ ಎಂದು ಒಪ್ಪಿಕೊಳ್ಳಲಾಗುವುದಿಲ್ಲ. 70 ವರ್ಷಗಳ ಸಾಧನೆಯನ್ನು ಅಭಿವೃದ್ಧಿಗೆ ಪೂರಕವಾದ ಬೆಳವಣಿಗೆ ಎಂದು ಹೇಳಬಹುದಾಗಿದೆ. ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಆದರೆ, ಸಾಧಿಸುವ ಛಲ ಇರಬೇಕು, ಅಂತಹ ಛಲವನ್ನು ನಾವು ಹೊಂದಿರಬೇಕಾದ ಅಗತ್ಯತೆ ಹಿಂದಿನಿಂದಲೂ ಮತ್ತು ಈಗಲೂ ಇದೆ. ಇವತ್ತಿನ ದಿವಸ ನಗರೀಕರಣ ಹೆಚ್ಚುತ್ತಿದ್ದು, ಗ್ರಾಮೀಣ ಮತ್ತು ನಗರದ ಅಂತರಗಳು ನಿವಾರಣೆಯಾಗಬೇಕಾಗಿದೆ. ನಮ್ಮ ದೇಶದ ರಾಜ್ಯಾಂಗ ಮತ್ತು ಕಾರ್ಯಾಂಗದ ಮುಂದೆ ಇರುವ ಬೆಟ್ಟದಂತಹ ಸವಾಲು ಎಂದರೆ ಬಡತನ ನಿರ್ಮೂಲನೆ ಮಾಡುವುದು. ತಮಗೆ ಗೊತ್ತಿರುವ ಹಾಗೆ ಬಡತನ ಯಾವ ರೀತಿ ಇದೆ ಎಂಬುದರ ಬಗ್ಗೆ ನಮ್ಮ ಹಿರಿಯ ಮಾನ್ಯ ಸದಸ್ಯರು ಬಹಳ ಜನರು ಚರ್ಚೆ ಮಾಡುವಾಗ ಹೇಳಿದರು. ಅವರು ನಿಜವಾದ ವಾಸ್ತವಾಂಶವನ್ನು ಹೇಳಿಕೊಂಡಿದ್ದಾರೆ. ನಮ್ಮ ರಾಜಕಾರಣಿಗಳು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳು ಯಾವ ರೀತಿ ನಡೆಯುತ್ತದೆ ಎಂಬುದರ ಬಗ್ಗೆ ಹೇಳಿದರು. ಭ್ರಷ್ಟಾಚಾರ ಮತ್ತು ಅಸಮಾನತೆಯ ವಾತಾವರಣವನ್ನು ನಿರ್ಮೂಲನೆ ಮಾಡುವ ಜವಾಬ್ದಾರಿ ಹಾಗೂ ರಾಜಕೀಯ ಇಚ್ಛಾಶಕ್ತಿ ಕುಸಿತಗೊಂಡಿದೆ ಎನ್ನುವ ಮನೋಭಾವ ಸಾರ್ವಜನಿಕರಲ್ಲಿ ಬೇರೂರಿದೆ. ಹಾಗಾಗಿ ಜನರ ನಂಬಿಕೆ ಹಾಗೂ ಆಶೋತ್ತರಗಳಿಗೆ ಸಮರ್ಪಕವಾಗಿ ಸ್ಪಂದಿಸಲು ಜನಪ್ರತಿನಿಧಿಗಳಾದ ನಾವು ಸಮಾಜದ ಅಭಿವೃದ್ಧಿಗಾಗಿ ದೃಢ ಸಂಕಲ್ಪದೊಂದಿಗೆ, ಸಂವಿಧಾನ ರಚನಾಕಾರರ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಸಂವಿಧಾನದ ಧ್ಯೇಯೋದ್ದೇಶಗಳನ್ನು ಅಳವಡಿಸಿಕೊಂಡಲ್ಲಿ ನಮ್ಮ ದೇಶವು ಅಭಿವೃದ್ಧಿ ಹೊಂದಿದ ದೇಶವೆಂದು ಸಾಬೀತಾಗುವುದರಲ್ಲಿ ಸಂಶಯವಿಲ್ಲ. ಜನಪ್ರತಿನಿಧಿಗಳಾದ ನಾವು ಬದ್ಧತೆ, ಶಿಸ್ತು, ಪ್ರಾಮಾಣಿಕತೆ, ಪಾರದರ್ಶಕ ಗುಣಗಳಿಂದ ಕಾರ್ಯನಿರ್ವಹಿಸಿ ನಮ್ಮ ರಾಜ್ಯವೂ ಸೇರಿದಂತೆ, ಭಾರತ ಒಂದು ಅಭಿವೃದ್ಧಿ ಹೊಂದಿದ ದೇಶವೆಂದು ಜಾಗತಿಕ ಮಟ್ಟದಲ್ಲಿ ಹೊರಹೊಮ್ಮಲು ಈ ಪ್ರಜಾಸತ್ತಾತ್ಮಕ ಹಾಗೂ ಒಕ್ಕೂಟದ ವ್ಯವಸ್ಥೆಯನ್ನು ಬಲಪಡಿಸೋಣ. ನಾವೆಲ್ಲರೂ ಇವತ್ತಿನ ದಿವಸ ಎಲ್ಲಾ ಡಾಕ್ಟರ್‌ಗಳು ಮತ್ತು ಇಂಜಿನಿಯರ್‌ಗಳು ಹಾಗೂ ಬೇರೆ ಬೇರೆ ಕೋರ್ಸ್‌ಗಳನ್ನು ತೆಗೆದುಕೊಂಡು ವ್ಯಾಸಂಗ ಮಾಡುತ್ತಿರುವ ಭಾರತ ಸಂವಿಧಾನದ ಬಗ್ಗೆ ಯುವ ಪೀಳಿಗೆಯಲ್ಲಿ ಅರಿವು ಹಾಗೂ ಬದ್ಧತೆಯನ್ನು ಮೂಡಿಸಲು ಪ್ರಯತ್ನಿಸೋಣ. ಈ ನಿಟ್ಟಿನಲ್ಲಿ ತಾವುಗಳೆಲ್ಲರೂ ಸಕರಾತ್ಮಕವಾಗಿ ಸ್ಪಂದಿಸಬೇಕು. ಚರ್ಚೆಯಲ್ಲಿ ಭಾಗವಹಿಸಬೇಕೆಂದು ತಮ್ಮೆಲ್ಲರಿಗೂ ವಿನಂತಿಸುತ್ತೇನೆ ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಎಲ್ಲಾ ಕೋರ್ಸುಗಳಲ್ಲಿ ವಿದ್ಯಾರ್ಥಿಗಳಿಗೆ ಸಂವಿಧಾನದ ಅರಿವನ್ನು ಮೂಡಿಸುವಂತಹದ್ದು, ಸಂವಿಧಾನದ ಪ್ರಸ್ತಾವನೆಯ ಆಶಯಗಳ ಈಡೇರಿಕೆಗೆ ಶ್ರಮಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ನೆನ್ನೆಯ ದಿವಸ ಮಾನ್ಯ ಹಿರಿಯ ಸದಸ್ಯರು ಇದರ ಬಗ್ಗೆ ಮಾತನಾಡಿದಾಗ ಈ T.N. Seshan ಅವರು Chief Election Commissioner ಆಗಿದ್ದಾಗ Election Code of Conduct enforce ಮಾಡಿದರು. ನನ್ನ ಅನುಭವದಲ್ಲಿ ಹೇಳುವುದೇನೆಂದರೆ, ನಾನು ಮೂರು ಚುನಾವಣೆಯಲ್ಲಿ ಸೋತಿದ್ದೆ. ಇದಕ್ಕೆ ಕಾರಣ ಏನೆಂದರೆ, ಆ ಚುನಾವಣೆಯನ್ನು ಚುನಾವಣಾ ಆಯೋಗದಲ್ಲಿ ಮಾಡುವಂತಹ ಅವ್ಯವಹಾರದಿಂದ ನಾನು ಒಂದು ಬಾರಿ 194 ವೋಟ್‌ಗಳಲ್ಲಿ ಸೋತಿದ್ದೆ. ಏಕೆಂದರೆ, ಮತದಾರರ ಪಟ್ಟಿಯಲ್ಲಿ ಹೆಸರುಗಳು ಬರದ ಹಾಗೆ ಮಾಡುವುದು. ಶಿಕ್ಷಕರ ಕ್ಷೇತ್ರದಲ್ಲಿ 10 ಸಾವಿರ ವೋಟ್‌ಗಳಿಗೆ 3 ಸಾವಿರ bogus vote ಗಳನ್ನು ಸೇರಿಸಿ ಬಿಡುತ್ತಾರೆ. ನಾನು 194 ವೋಟ್‌ಗಳಿಂದ ಸೋತಿದ್ದೇನೆ. ಇದರ ಬಗ್ಗೆ ಈ ಚುನಾವಣಾ ಆಯೋಗಕ್ಕೆ ಅರಿವನ್ನು ಮುಟ್ಟಿಸದೇ ಇದ್ದರೆ ಮುಂದೆ ಬಹಳ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಇನ್ನೊಂದು ಬಾರಿ ಚುನಾವಣೆಗೆ ನಿಂತುಕೊಂಡಾಗ ಸುಮ್ಮನೆ 'ಅಮಾನ್ಯ' ಎಂದು ಬರುತ್ತದೆ. ಈ ಬಾರಿ ಚುನಾವಣೆಗೆ ನಿಂತುಕೊಂಡಾಗ ಇದನ್ನೇ 'ಮಾನ್ಯ' ಎಂದು ಹೇಳುತ್ತಾರೆ. ಯಾವ ಸರ್ಕಾರ ಇರುತ್ತದೆಯೋ, ಇದು ಆ ಕಡೆ ಸೇರುತ್ತದೆ. ಇದರ ಬಗ್ಗೆ ಜನರು ಮಾತನಾಡುತ್ತಿದ್ದರು. ನಮ್ಮ ನಾಯಕರು ಜಾತಿ ಇದ್ದರೆ ಗೆದ್ದು ಬಿಡುತ್ತೇವೆ ಆಗಲೇ ಮಾತನಾಡುತ್ತಿದ್ದಾಗ ಹೇಳುತ್ತಿದ್ದರು. ಜಾತಿ ಇದ್ದರೆ ಆಗುವುದಿಲ್ಲ. ಇದರ ಜೊತೆ ಹಣ ಕೂಡ ಇರಬೇಕೆನ್ನುವುದು ನನ್ನ ಅನುಭವಕ್ಕೆ ಬಂದಿದೆ. Election Reforms ಆಗದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದ್ದರೆ ನಮ್ಮ ದೇಶದಲ್ಲಿ ಕಷ್ಟವಾಗುತ್ತದೆ. ಇವರ quasi-judiciary ಅಧಿಕಾರದ ಬಗ್ಗೆ ಮಾತನಾಡಿದ್ದಾರೆ. Tahsildar, ಎ.ಸಿ., ಡಿ.ಸಿ., ಗಳ ಜಡ್ಜ್‌ಮೆಂಟ್‌ಗಳನ್ನು ಅವರಿಗೆ ಬೇಕಾದವರಿಗೆ ಜಡ್ಜ್‌ಮೆಂಟ್‌ಗಳನ್ನು ಕೊಡುವಂತಹ ಪರಿಸ್ಥಿತಿ ಇದೆ. ಅವರು time limit ಹಾಕಿಕೊಳ್ಳುವಂತಹ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ನಾನು ತಮ್ಮಲ್ಲಿ ಕಳಕಳಿ ಮಾಡುವುದೇನೆಂದರೆ, ಈ ವಿಚಾರದಲ್ಲಿ ನಾನು ಸಚಿವಾಲಯದಲ್ಲಿ ಸಹಾಯಕ ಸೀನಿಯರ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದೆ. ಅಲ್ಲಿಗೆ Section Officer ಆದಾಗ ನಾನು Voluntary Retirement ತೆಗೆದುಕೊಂಡಿದ್ದೆ. ನಮ್ಮ ಕಾಲದಲ್ಲಿ ಒಂದು ಪತ್ರ ಏನಾದರೂ ಹೋದರೆ ನಾವು ಅ ಪತ್ರವನ್ನು ಸಬ್ಮಿಟ್ ಮಾಡುವುದಕ್ಕೆ time limit ಇತ್ತು. ಈಗ ಸಚಿವಾಲಯದಲ್ಲಿ ಏನಾಗಿದೆ ಎಂದರೆ, ಮಾನ್ಯ ಮುಖ್ಯಮಂತ್ರಿಯವರೇ ಆರ್ಡರ್ ಮಾಡಲಿ, ಮಾನ್ಯ ಸಚಿವರೇ ಆರ್ಡರ್ ಮಾಡಲಿ, ಯಾರಾದರೊಬ್ಬರು ಆ ಕಛೇರಿಗೆ ಹೋಗಿ ನೋಡಿದರೆ ಹೋದರೆ ಆ ಕೆಲಸವೇ ಆಗುವುದಿಲ್ಲ. ಇದಕ್ಕೆ ಕಾರಣ ಯಾರು ಎಂಬುದರ ಬಗ್ಗೆ ದಯವಿಟ್ಟು ಸರ್ಕಾರ ಇದರ ಕಡೆ ಗಮನ ಕೊಡಬೇಕು. ನಮ್ಮ ಮಹಿಳಾ ಸದಸ್ಯರು N.E.E.T (National Eligibility cum Entrance Test) ವ್ಯವಸ್ಥೆಯನ್ನು ಮಾಡಿದ್ದಾರೆ ಎಂದು ಹೇಳಿದರು. N.E.E.T ವ್ಯವಸ್ಥೆಯನ್ನು ಮಾಡಿರುವುದು ಒಳ್ಳೆಯದು. ಬಡವರಿಗೆ, ಅರ್ಹತೆ ಇರುವವರಿಗೆ, ಪ್ರತಿಭಾವಂತರಿಗೆ ಮೆಡಿಕಲ್ ಸೀಟ್ ಸಿಗುವಂತಹ ಕೆಲಸ ಆಗಿದೆ. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ ಎನ್ನುವುದು ನನ್ನ ಭಾವನೆ. ಈಗಾಗಲೇ ನಾನು ಕಳೆದ ಬಾರಿ ನಿರುದ್ಯೋಗದ ಬಗ್ಗೆ ಮಾತನಾಡಿದ್ದೇನೆ. ಈ ನಿರುದ್ಯೋಗ ಎನ್ನುವುದು ಬಹಳ ಕಷ್ಟವಾಗಿದೆ. ಈ ಬೆಂಗಳೂರು ನಗರದಲ್ಲಿ ಇರುವಂತಹ ಇಂಜಿನಿಯರ್ ಪದವೀಧರರು, ಡಿಪ್ಲೋಮಾ ಪದವೀಧರರು ಇರಬಹುದು, ಇವರೆಲ್ಲರೂ ಹಳ್ಳಿಯಿಂದ ಬೆಂಗಳೂರಿಗೆ ಗುಳೆ ಬರುತ್ತಿದ್ದರು. ಈಗ ಬೆಂಗಳೂರು ನಗರದಿಂದ ಹಳ್ಳಿಗೆ ಗುಳೆ ಹೋಗುವಂತಹ ಪರಿಸ್ಥಿತಿ ಬಂದಿದೆ. ನಾವು ಅನೇಕ ಫ್ಯಾಕ್ಟರಿಗಳಿಗೆ ಈಗಾಗಲೇ ಅನುಮತಿಯನ್ನು ಕೊಟ್ಟಿದ್ದೇವೆ. ಅಲ್ಲಿ ಕನ್ನಡವನ್ನು ಕಡ್ಡಾಯವಾಗಿ ಮಾಡಬೇಕು ಮತ್ತು ಕನ್ನಡಿಗರಿಗೆ ಉದ್ಯೋಗ ಕೊಡಬೇಕೆಂದು ಒತ್ತಾಯ ಮಾಡಬೇಕು.

ಸ್ವಾಯತ್ತ ಸಂಸ್ಥೆಯಾದ ಕೆ.ಪಿ.ಎಸ್.ಸಿ. ನಲ್ಲಿ ಪ್ರತಿ ವರ್ಷ ಪರೀಕ್ಷೆಯನ್ನು ನಡೆಸಬೇಕೆಂದು ನಿಯಮ ಇದೆ. ಆದರೆ, ಕೆ.ಎ.ಎಸ್. ಪರೀಕ್ಷೆಗಳನ್ನು ಐದು ವರ್ಷಗಳಾದರೂ ಮಾಡುವುದಿಲ್ಲ. ಅಲ್ಲಿನ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ಇದನ್ನು ಯಾರೂ ಕೇಳುವ ಹಾಗಿಲ್ಲವೆಂದು ತಿಳಿದುಕೊಂಡಿದ್ದಾರೆ. ಆರ್.ಟಿ.ಓ. ಗೆ ಆಯ್ಕೆಯಾಗಿ ಆರು ವರ್ಷಗಳಾಯಿತು. ಅವರಿಗೆ ನೇಮಕಾತಿ ಆದೇಶವನ್ನೇ ಕೊಡುವುದಿಲ್ಲ. ಕೆಲಸಕ್ಕೆ ಸೇರುವ ಮೊದಲೇ ಅವರಿಗೆ ಅನುಭವ ಇರಬೇಕೆಂದು ಕೇಳಿದ್ದಾರೆ. ಇದಕ್ಕೆ ಅನುಭವದ ಅವಶ್ಯಕತೆ ಇಲ್ಲ. ಇದರಲ್ಲಿ ಅವರಿಗೆ ಬೇಕಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಂತಹದ್ದು. ಈಗ ವಿಶ್ವವಿದ್ಯಾನಿಲಯಗಳು ಸಹ ಅದೇ ರೀತಿಯಾಗಿದೆ. ನೇಮಕಾತಿಯನ್ನು ಕಾನೂನಿನ ಪ್ರಕಾರ ಮಾಡಿಕೊಂಡರೆ ಏನೂ ಆಗುವುದಿಲ್ಲ. ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಂಡು; ಅವರ ವಯಸ್ಸು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೀರುತ್ತಿದೆ. ಕೆಲವರು ಮದುವೆಗಳಾಗಿ ಬಿಟ್ಟಿದ್ದಾರೆ. ಅವರು ಪರಿಸ್ಥಿತಿ ಬಹಳ ಕಷ್ಟವಾಗಿದೆ. ಇದರ ಬಗ್ಗೆ ನಮ್ಮ ಸರ್ಕಾರ ಬಹಳ ಗಮನಹರಿಸಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ಜೊತೆಗೆ 'ಸಮಾನ ವೇತನ, ಸಮಾನ ಕೆಲಸ' ವನ್ನು ಪ್ರತಿಯೊಬ್ಬರಿಗೆ ವಹಿಸುವಂತಹದ್ದು, ಕೆ.ಪಿ.ಎಸ್.ಸಿ.ಯಲ್ಲಿರುವ ಸದಸ್ಯರುಗಳೇ ಅವರನ್ನು ನೇಮಕ ಮಾಡಿಕೊಂಡು ಬಿಟ್ಟಿದ್ದಾರೆ. ಮದುವೆ ಮಾಡಿಸಿಯೂ ಬಿಟ್ಟಿದ್ದಾರೆ. ಈಗಾಗಲೇ ಅವರನ್ನು ಮದುವೆಯಾದವರು ತಾಳಿಕೊಟ್ಟು ಬೇರ್ಪಟ್ಟು ವಾಪಸ್ಸು ಹೊರಟು ಹೋಗಿದ್ದಾರೆ. ಐದು ವರ್ಷವಾದರೂ ಇದರ ಬಗ್ಗೆ ಯಾರು ಯೋಚನೆ ಮಾಡಲಿಲ್ಲ. ದುಡ್ಡು ತೆಗೆದುಕೊಂಡು ನೇಮಕಾತಿಯನ್ನು ಮಾಡಿ, ಅವರಿಗೆ ಯಾವುದೇ ಆರ್ಡರ್‌ನ್ನು ಕೊಡದೇ ಹೋದರು. ಇದರಲ್ಲಿ ಯಾರು ನೇಮಕಾತಿಯಾಗಿಲ್ಲವೋ, ನಾನು ಆಯ್ಕೆಯಾಗಿಲ್ಲ ಎಂದು ಅವರು ನ್ಯಾಯಾಲಯಕ್ಕೆ ಹೋಗುತ್ತಾರೆ. "ಕುಣಿಯಲಾರದವಳು ನೆಲ ಡೊಂಕು" ಎನ್ನುವ ಹಾಗೆ ಸಂದರ್ಶನ, ಎಲ್ಲಾ ಆಗಿರುತ್ತದೆ. ಅವರು ಆ ರೀತಿ ಮಾಡುವುದು ಸರಿಯಿಲ್ಲ ಎಂದು ಹೇಳಿ; ಆದುದರಿಂದ, ತಾವೆಲ್ಲರೂ ನಿರುದ್ಯೋಗ ಸಮಸ್ಯೆ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ. ಸರ್ಕಾರದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗದ ವೈಫಲ್ಯತೆ ಆಗಿದೆ. ಈ ಸಂವಿಧಾನದಲ್ಲಿ ಏನಾಗಿದೆ ಎಂದರೆ, ನಾನು ಒಂದು ನ್ಯಾಯಲಯಕ್ಕೆ ಹೋಗಿದ್ದೆ. ನಾನು ಚುನಾವಣೆಯಲ್ಲಿ ನ್ಯಾಯಾಲಯಕ್ಕೆ ಹೋದಾಗಲೇ ಅದರ ರಿಸಲ್ಟ್ ಬರುವುದಕ್ಕೆ "Court Case ಗೆದ್ದವನು ಸೋತ ಸೋತವನು ಸತ್ತ" ಎಂಬಂತಾಗುತ್ತದೆ. ಬಿ.ಬಿ.ಎಂ.ಪಿ., ಶಾಲೆಗಳಲ್ಲಿ ಬಡ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಿಗೆಲ್ಲಾ ಏಜೆನ್ಸಿಯ ಮುಖಾಂತರ ನೇಮಕಾತಿ ಮಾಡಿಕೊಂಡಿದ್ದಾರೆ. ಸರ್ಕಾರ ಅದರ ಕಡೆ ಗಮನ ಕೊಡಬೇಕು. ಎಂ.ಎಲ್.ಎ., ಮತ್ತು ಎಂ.ಎಲ್.ಸಿ.ಗಳು ಸರ್ಕಾರಿ ಆಸ್ಪತ್ರೆಗಳಿಗೆ ಹೋಗಿ ನೋಡಿದರೆ, ಅಲ್ಲಿ ಶೌಚಾಲಯಗಳು ಹೇಗಿದೆ ಎಂಬುದು ಗೊತ್ತಾಗುತ್ತದೆ.

**ಸಭಾಪತಿಯವರು:–** ಮಾನ್ಯ ಅ.ದೇವೇಗೌಡರವರೇ, ಸಂವಿಧಾನದ ಬಗ್ಗೆ ಮಾತ್ರ ಚರ್ಚೆ ಮಾಡಿ.

**ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಸರ್ಕಾರಿ ಆಸ್ಪತ್ರೆಗಳ ಕಡೆ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ ಎಲ್ಲಾ ವಿಚಾರಗಳ ಬಗ್ಗೆ ಮಾನ್ಯ ಸದಸ್ಯರುಗಳಾದ ಆಯನೂರು ಮಂಜುನಾಥ್‌ರವರು ಮತ್ತು ಸಿ.ಎಂ.ಲಿಂಗಪ್ಪನವರು, ಇನ್ನು ಅನೇಕ ಹಿರಿಯರು ಇದರ ಬಗ್ಗೆ ಮಾತನಾಡಿದರು.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(468) 17/03/2020/12:30/ಎಸ್‌ಪಿಆರ್/ಆರ್‌ಎನ್**

**ಶ್ರೀ ಅ.ದೇವೇಗೌಡ(ಮುಂದು):–**

ರಾಜಕೀಯ ವ್ಯವಸ್ಥೆ ಹೇಗೆ ನಡೆಯುತ್ತಿದೆ ಎನ್ನುವ ವಾಸ್ತವಾಂಶಗಳನ್ನು ಅವರುಗಳು ಹೇಳಿದ್ದಾರೆ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಚುನಾವಣಾ ಆಯೋಗದ ತಿದ್ದುಪಡಿ ಮಾಡಬೇಕು. ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲೋಕಸೇವಾ ಆಯೋಗವು ನೇಮಕಾತಿಯನ್ನು ಮಾಡುತ್ತದೆ. ನೇಮಕಾತಿ ಪ್ರಕ್ರಿಯೆಯನ್ನು ಇದರಿಂದ ಕಿತ್ತುಕೊಂಡು ಸರ್ಕಾರವೇ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ವರದಿಯೊಂದನ್ನು ಸಲ್ಲಿಸಿದ್ದಾರೆ. ಅದೇ ರೀತಿಯಾಗಿ ಸರೋಜಿನಿ ಮಹಿಷಿ ವರದಿ, ಕನ್ನಡ ಸಬಲೀಕರಣಗಳ ವರದಿ ಇತ್ಯಾದಿ ಕೆಲವೊಂದು ಆಯೋಗಗಳು ತಮ್ಮ ವರದಿಗಳನ್ನು ಸಲ್ಲಿಸಿವೆ. ಇವುಗಳನ್ನು ಕಾರ್ಯಗತಗೊಳಿಸಬೇಕು ಅಥವಾ ತಿರಸ್ಕರಿಸಬೇಕೆಂದು ಮನವಿ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**3. ಪ್ರಕಟಣೆ**

**ಸಭಾಪತಿಯವರು:–** ಮಾನ್ಯ ವಿಧಾನ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

> **ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ 104 ನೇ ನಿಯಮದ ಮೇರೆಗೆ, ವಿಧಾನ ಸಭೆಯು ದಿನಾಂಕ 16/03/2020 ರಂದು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020 ನ್ನು ಅಂಗೀಕರಿಸಿದೆ ಎಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.**

**ಸಭಾಪತಿಯವರು:–** ಈಗ ಭಾರತ ಸಂವಿಧಾನದ ಮೇಲಿನ ವಿಶೇಷ ಚರ್ಚೆ ಮುಂದುವರೆಯುತ್ತದೆ. ಶ್ರೀ ಪಿ.ಆರ್.ರಮೇಶ್ ರವರು ಮಾತನಾಡಲಿ.

**4. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ**

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಇವತ್ತಿನ ದಿವಸ ಸಂವಿಧಾನದ ಬಗ್ಗೆ ನಾವು ಸುದೀರ್ಘವಾದ ಚರ್ಚೆಯನ್ನು ಮಾಡಿದ್ದೇವೆ ಮತ್ತು ಅದರ ಸಾಧಕ–ಬಾಧಕಗಳನ್ನು ನಾವಿಲ್ಲಿ ಮೆಲುಕು ಹಾಕುತ್ತಿದ್ದೇವೆ. ಇದರ ಬಗ್ಗೆ ನಿರ್ಧಾರ ಹಾಗೂ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಈ ಸದನಕ್ಕೆ ಯಾವುದೇ ರೀತಿಯಾದ ಅಧಿಕಾರವಿರುವುದಿಲ್ಲ. ಆದರೂ ಸಹ ಇವತ್ತಿನ ದಿನದಲ್ಲಿ ನಮ್ಮ ಸಂವಿಧಾನದ ಬಗ್ಗೆ ನಾವು ಚಿಂತಿಸುವುದು ಅವಶ್ಯಕತೆ ಇದೆ ಎಂದು ನಾವು ಭಾವಿಸುತ್ತೇವೆ. ಸಂವಿಧಾನ ಬರುವುದಕ್ಕೆ ಮುಂಚೆ ನಮ್ಮ ದೇಶ ಯಾವ ರೀತಿ ಇತ್ತು ಎನ್ನುವುದರ ಬಗ್ಗೆ ನಾವು ಸ್ವಲ್ಪ ಬೆಳಕನ್ನು ಚೆಲ್ಲಬೇಕಾಗುತ್ತದೆ. ಈ ಹಿಂದೆ, ಸುಮಾರು 75 ಕ್ಕೂ ಹೆಚ್ಚಿನ ರಾಜ ವಂಶಸ್ಥರು ಈ ದೇಶವನ್ನು ಆಳುತ್ತಿದ್ದರು. ಕುರು ರಾಜ ವಂಶವು ಸುಮಾರು 1200 ಬಿ.ಸಿ. ಅಂದರೆ ಇವತ್ತಿನ ದಿವಸ ಸುಮಾರು 1300 ವರ್ಷಗಳ ಹಿಂದೆ ಅಸ್ತಿತ್ವದಲ್ಲಿತ್ತು. ಈ ದೇಶವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೌರ್ಯ, ಮಗಧ, ಚಂದ್ರಗುಪ್ತ, ಸತ್ತಬಾನ, ಅಶೋಕ, Indo-Scythian, Indo-Parthian and Western-Kshatrapas ಇಂತಹ ಎಲ್ಲಾ ವಂಶಸ್ಥರು ಬೇರೆ ಬೇರೆ ಕಡೆಗಳಿಂದ ನಮ್ಮ ದೇಶಕ್ಕೆ ವಲಸೆ ಬಂದು ಇಲ್ಲಿಯೇ ಸೇರಿಕೊಂಡು ರಾಜ ವಂಶಸ್ಥರಾದರು. ಇಂತಹ ರಾಜ ವಂಶಸ್ಥರು ಈ ದೇಶವನ್ನು ಭಾಗ ಭಾಗವಾಗಿ ಆಳುತ್ತಿದ್ದರು. ಅಂತಹ ನಮ್ಮ ದೇಶಕ್ಕೆ ಮೊದಲಬಾರಿಗೆ ಪೋರ್ಚುಗೀಸರು ಅಂದರೆ 1497 ರಲ್ಲಿ ವಾಸ್ಕೋ–ಡ–ಗಾಮ ಎಂಬ ವಿದೇಶೀಯನು ಪೋರ್ಚುಗಲ್‌ನಿಂದ ಭಾರತಕ್ಕೆ ವ್ಯಾಪಾರಕ್ಕಾಗಿ ಬಂದು, ನಂತರದಲ್ಲಿ ಅವರು ನಮ್ಮ ದೇಶದಲ್ಲಿಯೇ ನೆಲೆಸುತ್ತಾರೆ. ಇದಾದ ನಂತರ 1612 ರಿಂದ 1757 ರ ವರೆಗೆ ಈಸ್ಟ್ ಇಂಡಿಯಾ ಕಂಪೆನಿಯು ನಮ್ಮ ದೇಶವನ್ನು ಆಳುತ್ತದೆ. ನಂತರದಲ್ಲಿ ನಮ್ಮ ದೇಶವನ್ನು ಕಂಪೆನಿ ರೂಲ್ 1757 ರಿಂದ 1858 ರ ವರೆಗೆ ಆಳ್ವಿಕೆಯನ್ನು ನಡೆಸುತ್ತದೆ. ನಂತರದಲ್ಲಿ 1858 ರಿಂದ 1947 ರ ವರೆಗೆ ಬ್ರಿಟೀಷರು ಭಾರತ ದೇಶವನ್ನು ಆಳುತ್ತಾರೆ. ಆ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಸುಮಾರು 450 ಕ್ಕೂ ಹೆಚ್ಚು ಸಾಮ್ರಾಜ್ಯಗಳು, ಪಾಳೆಗಾರಿಕೆಗಳು ಇತ್ತು. ಇಂತಹ ದೇಶಕ್ಕೆ ಸ್ವಾತಂತ್ರ್ಯವನ್ನು ಪಡೆದ ನಂತರ ಗಣರಾಜ್ಯದ ಅವಶ್ಯಕತೆ ಇತ್ತು. ಆ ಗಣರಾಜ್ಯ ಮಾಡುವ ಸಂದರ್ಭದಲ್ಲಿ ದೇಶಕ್ಕೆ ಸಂವಿಧಾನವನ್ನು ತರುವ ಭಾಗ್ಯ ಒದಗಿಬಂತು. ಅಂದಿನ ನಮ್ಮ ನಾಯಕರು ಸಂವಿಧಾನವನ್ನು ರಚನೆ ಮಾಡುವ ಸಂದರ್ಭದಲ್ಲಿ ಈ ದೇಶವನ್ನು ಸುಮಾರು ರಾಜರು, ಪಾಳೆಗಾರರು ಆಳುತ್ತಿದ್ದರು. ಮೊದಲನೆಯದಾಗಿ ನಾವು ಬ್ರಿಟೀಷರಿಗೆ ಕೃತಜ್ಞತೆಗಳನ್ನು ಸಲ್ಲಿಸಬೇಕಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಬ್ರಿಟೀಷರು ಬಂದು ಹೋದ ಮೇಲೆ ನಾವು ಈ ದೇಶವನ್ನು ಒಂದು ಗೂಡಿಸುವುದಕ್ಕೆ ಸಾಧ್ಯವಾಯಿತು. ಹೀಗೆ ಒಂದು ಗೂಡಿಸಲು ಎಲ್ಲಾ ರಾಜರು... ಇವತ್ತಿನ ದಿವಸ ನಮ್ಮಲ್ಲಿ ಭಾಷೆ, ಪ್ರಾಂತ್ಯ, ನದಿ, ಹಾಗೂ ಜಾತಿಯ ಸಮಸ್ಯೆಗಳಿವೆ. ಅದೇ ರೀತಿಯಾಗಿ ದೇಶದ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹಾಗೂ ಗುಜರಾತಿನಿಂದ ಅಸ್ಸಾಂವರೆಗೆ ಹಲವಾರು ಸಮಸ್ಯೆಗಳಿವೆ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಂದಿನ ವ್ಯವಸ್ಥೆಯಲ್ಲಿ ಬ್ರಿಟೀಷರಿಗೆ ಧನ್ಯವಾದವನ್ನು ಹೇಳುತ್ತಿದ್ದಾರೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಬ್ರಿಟೀಷರಿಗೆ ಧನ್ಯವಾದಗಳನ್ನು ಏಕೆ ಹೇಳಬೇಕೆಂದರೆ, ಈ ದೇಶವನ್ನು ಒಂದುಗೂಡಿಸುವ . . . ಅವರು ಬಂದು ಹೋದ ಮೇಲೆ ...

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಬ್ರಿಟೀಷರು ನಮ್ಮ ದೇಶವನ್ನು ವಿಂಗಡನೆ ಮಾಡಿ 'Divide and Rule Policy' ಅನ್ನು ತಂದರು. ಅಂತಹವರಿಗೆ ಮಾನ್ಯ ಸದಸ್ಯರು ಧನ್ಯವಾದವನ್ನು ಹೇಳುತ್ತಾರೆ. ಇದು ನಿಜವಾಗಿಯೂ ಸಹ ನಾಚಿಕೆಗೇಡಿನ ಸಂಗತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇದು ಮಾನ್ಯ ಸದಸ್ಯರ ಅಭಿಪ್ರಾಯವಾಗಿರಬಹುದು ಇವತ್ತಿನ ದಿವಸ ದೇಶವನ್ನು . . .

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಬ್ರಿಟೀಷರ ಆಡಳಿತದಲ್ಲಿ ಕೆಲವೊಂದು ಒಳ್ಳೆಯ ಕೆಲಸಗಳಾಗಿವೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, 1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದು ನಂತರ ಸಂವಿಧಾನ ಜಾರಿಗೆ ಬಂದಿತು. ಇಂತಹ ಸಂವಿಧಾನದ ಮೇಲೆ ಚರ್ಚೆಯನ್ನು ಮಾಡುವ ಸಂದರ್ಭದಲ್ಲಿ ಅದಕ್ಕಿಂತಲೂ ಹಿಂದೆ ಇದ್ದ ಬ್ರಿಟೀಷರನ್ನು ಮಾನ್ಯ ಸದಸ್ಯರು . . . **(ಗೊಂದಲ)** ಅವರ ಆಳ್ವಿಕೆಯೇ ಚೆನ್ನಾಗಿರಬೇಕಾದರೆ, ಹಾಗಿದ್ದಲ್ಲಿ ನೀವು ಏಕೆ ಭಾರತ ದೇಶದ ಸ್ವತಂತ್ರಕ್ಕಾಗಿ ಹೋರಾಟ ಮಾಡಿದ್ದೀರಿ?

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಬ್ರಿಟೀಷರ ಆಳ್ವಿಕೆ . . . **(ಗೊಂದಲ)** ಮಾನ್ಯ ಸದಸ್ಯರು ಹೇಳುವುದು ಆ ರೀತಿಯದ್ದಾಗಿತ್ತು.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಬ್ರಿಟೀಷರ ಆಡಳಿತವನ್ನೇ ಹಾಗೂ ಅವರ ಆಳ್ವಿಕೆಯನ್ನೇ ಮುಂದುವರೆಸಬೇಕಾಗಿತ್ತು.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ನಮ್ಮ ದೇಶದ ಪರಿಸ್ಥಿತಿ. .

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಮ್ಮ ದೇಶಕ್ಕೆ ಸ್ವತಂತ್ರ ಕೊಡಿಸಲು ಅನೇಕ ಮಹನೀಯರು ಹೋರಾಟವನ್ನು ಮಾಡಿದರು. ಅವರಿಗೆ ಮಾನ್ಯ ಸದಸ್ಯರು ಅಭಿನಂದನೆಯನ್ನು ಸಲ್ಲಿಸಬೇಕಾಗಿತ್ತು.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಬ್ರಿಟೀಷರ ಆಳ್ವಿಕೆಯಲ್ಲಿ ನಮ್ಮ ದೇಶ . . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಇಲ್ಲಿದ್ದವರಿಗೆಲ್ಲ ಮಾನ್ಯ ಸದಸ್ಯರು ಅಪಮಾನ ಮಾಡಿದಂತಾಗಿದೆ. ಏಕೆಂದರೆ ಇವರುಗಳೆಲ್ಲರೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಬ್ರಿಟೀಷರಿಂದ ದೇಶವನ್ನು ಮುಕ್ತ ಮಾಡಿ ನಮಗೆ ಸ್ವತಂತ್ರವನ್ನು ಕೊಡಿಸುವ ಸಂದರ್ಭದಲ್ಲಿ ಸದನದಲ್ಲಿ ಅವರ ಫೋಟೋಗಳನ್ನಿಟ್ಟುಕೊಂಡು ಮಾನ್ಯ ಸದಸ್ಯರು ಬ್ರಿಟೀಷರಿಗೆ ಅಭಿನಂದನೆ ಹಾಗೂ ಧನ್ಯವಾದಗಳನ್ನು ಸಲ್ಲಿಸುತ್ತಾರೆ. ಇದು ದುರದೃಷ್ಟಕರವಾದ ಸಂಗತಿಯಾಗಿದೆ ಹಾಗೂ ಇಂತಹ ದುರದೃಷ್ಟಕರವಾದ ವಿಚಾರವನ್ನು ಮಾನ್ಯ ಸದಸ್ಯರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮಾತುಗಳಿಂದ ನಮ್ಮ ಮನಸ್ಸಿಗೆ ನೋವುಂಟಾಗಿವೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕಾಗಿ ನಾವುಗಳು ಇಷ್ಟೆಲ್ಲಾ ಹೋರಾಟವನ್ನು ಮಾಡಬೇಕಾಗಿತ್ತು? **(ಗೊಂದಲ)** ಮಹಾತ್ಮ ಗಾಂಧೀಯವರು ಬ್ರಿಟೀಷರ ವಿರುದ್ಧ ಏಕೆ ಹೋರಾಟವನ್ನು ಮಾಡಬೇಕಾಗಿತ್ತು? ಅವರು ಸತ್ಯಾಗ್ರಹವನ್ನು ಏಕೆ ಮಾಡಬೇಕಾಗಿತ್ತು?

**ಸಭಾಪತಿಯವರು:-** ಆಯಿತು ಬಿಡಿ. ಮಾನ್ಯ ಪಿ.ಆರ್.ರಮೇಶ್‌ರವರೇ ತಾವು ಮುಂದುವರೆಸಿ. ಆಡಳಿತ ಪಕ್ಷದ ಸದಸ್ಯರು ಒಂದು ಬಾರಿ ಹೇಳಿದರೆ ಸಾಕು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ದೇಶವು ಬ್ರಿಟೀಷ್ ಆಳ್ವಿಕೆಗಿಂತ ಕಡೆಯಾಗಿರುವ ರೀತಿಯಲ್ಲಿ ನಾವು ಬಾಳುತ್ತಿದ್ದೇವೆ. **(ಗೊಂದಲ)** ನಾನು ಹೇಳಿದ್ದನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುವ ಶಕ್ತಿ ಆಡಳಿತ ಪಕ್ಷದ ಸದಸ್ಯರಲ್ಲಿ ಇಲ್ಲವೆಂದಾದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಬ್ರಿಟೀಷರ ಆಳ್ವಿಕೆಯಲ್ಲಿ ಗುಲಾಮಗಿರಿಯಲ್ಲಿ ಬದುಕುವುದೇ ಮಾನ್ಯ ಸದಸ್ಯರಿಗೆ ಚೆನ್ನಾಗಿತ್ತು. ಸ್ವತಂತ್ರ ಭಾರತದಲ್ಲಿದ್ದುಕೊಂಡು ಮಾನ್ಯ ಸದಸ್ಯರು ಗುಲಾಮಗಿರಿಯನ್ನು ಬಯಸುತ್ತಿದ್ದಾರೆ. **(ಗೊಂದಲ)**ನಾವು ಗುಲಾಮರಾಗಿ ಬದುಕುವುದನ್ನು ಮಾನ್ಯ ಸದಸ್ಯರು ಇಷ್ಟಪಡುತ್ತಿದ್ದಾರೆ. **(ಗೊಂದಲ)**ಇದು ಮಹಾತ್ಮ ಗಾಂಧೀಯವರಿಗೆ ಮಾಡಿದ ಅಪಮಾನವಾಗಿದೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಹೇಳುವ ಅಧಿಕಾರ ಆಡಳಿತ ಪಕ್ಷದವರಿಗೆ ಇಲ್ಲ. ಮಾನ್ಯ ಸದಸ್ಯರು ಯಾವ ರೀತಿಯಾಗಿ ಮಾತನಾಡಬೇಕೆನ್ನುವುದನ್ನು ಆಡಳಿತ ಪಕ್ಷದವರು ಬರೆದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಲಿ. ಹಾಗೇಯೇ ಮಾನ್ಯ ಸದಸ್ಯರು ಮಾತನಾಡುತ್ತಾರೆ. ಮಾನ್ಯ ಸದಸ್ಯರು ಅವರಿಗೆ ಏನು ಬೇಕೋ ಅದನ್ನು ಮಾತನಾಡುತ್ತಾರೆ. ಆಡಳಿತ ಪಕ್ಷದವರು ಏನು ಬೇಕಾದರೂ ಹೇಳಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ಸೌರ್ವಭೌಮ ದೇಶವಾಗಿ ಯಾರು ನಮ್ಮ ಮೇಲೆ ಆಕ್ರಮಣ ಮಾಡಿ ನಮ್ಮ ಸಂಪತ್ತನ್ನು ಲೂಟಿ ಮಾಡಿದ್ದಾರೋ, ನಮ್ಮ ವ್ಯವಸ್ಥೆಯನ್ನು ನಾಶ ಪಡಿಸಿದ್ದರೋ ಅವರನ್ನು ಹೊಗಳುವಂತಹ ವೇದಿಕೆಯಾಗಿ ಪರಿವರ್ತನೆ ಮಾಡುವುದು ನಮಗೆ ಮಾಡುವ ಅಪಮಾನ ಹೌದೋ ಅಥವಾ ಇಲ್ಲವೋ? ನಮ್ಮ ದೇಶದ ಸಂವಿಧಾನದ ಬಗ್ಗೆ ಚರ್ಚೆಯನ್ನು ಮಾಡುವಾಗ ಈ ರೀತಿಯ ಅಪಮಾನದ ಮಾತುಗಳನ್ನಾಡಬೇಕೇ? ಹಾಗಿದ್ದರೆ ಈ ಸದನದಲ್ಲಿರುವ ಮಹಾತ್ಮಾ ಗಾಂಧೀಯವರ ಫೋಟೋವನ್ನು ತೆಗೆದು ರಾಬರ್ಟ್ ಕ್ಲೈವ್‌ರವರ ಫೋಟೋವನ್ನು ಇಡೋಣವೇ? ಇಂತಹ ಸಂದರ್ಭದಲ್ಲಿ ದೇಶಕ್ಕೆ ಅಪಮಾನವಾಗಿವ ರೀತಿಯಲ್ಲಿ ಮಾತನಾಡಿದ್ದಕ್ಕೆ ನಮಗೆ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಬ್ರಿಟೀಷರ ಜೊತೆಗೆ . . .

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದು ತಪ್ಪಾಗಿರಬಹುದು ಆದರೆ ನೀವು . . .

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ವ್ಯಕ್ತಿಗತವಾಗಿ ಮಾತನಾಡುವುದು ಬೇಡ. **(ಗೊಂದಲ)** ಬ್ರಿಟೀಷ್-ಇಂಡಿಯನ್ ಗ್ರಂಥಾಲಯದಲ್ಲಿ ಅವರು ನಮ್ಮ ದೇಶದಿಂದ ಎಷ್ಟು ಸಂಪತ್ತನ್ನು ಲೂಟಿ ಮಾಡಿದ್ದಾರೆ ಎನ್ನುವುದನ್ನು ಪಟ್ಟಿ ಮಾಡಿದ್ದಾರೆ. ನಮ್ಮ ದೇಶದಲ್ಲಿ ಆ ಪಟ್ಟಿ ಸಿಗದೇ ಇರಬಹುದು. ನಮ್ಮ ದೇಶದ ಒಂದೊಂದು ಸಿಂಹಾಸನದಿಂದ ಹಿಡಿದು ಗುಲಗಂಜಿ ತೂಕದವರೆಗೆ ಲೂಟಿ ಮಾಡಿರುವ ಸಂಪತ್ತಿನ ಪಟ್ಟಿ ಆ ದೇಶದಲ್ಲಿದೆ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಾನು ಬ್ರಿಟೀಷರನ್ನು . ..

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಬ್ರಿಟೀಷರು ನಮ್ಮ ದೇಶದಲ್ಲಿ ರೈಲ್ವೆ ಹಳಿಗಳನ್ನು ಹಾಕಿದ್ದು ನಮ್ಮ ದೇಶದಲ್ಲಿ ಕೈಗಾರಿಕೆಗಳು ಬೆಳೆಯಲಿ ಎನ್ನುವ ಕಾರಣಕ್ಕಾಗಿ ಅಲ್ಲ. ಬದಲಾಗಿ ನಮ್ಮಲ್ಲಿನ ಸ್ವತ್ತನ್ನು ಲೂಟಿ ಮಾಡಿಕೊಂಡು ಹೋಗುವುದಕ್ಕಾಗಿ ರೈಲ್ವೆ ಹಳಿಗಳನ್ನು ಹಾಕಿದರು. ಅಂತಹ ಬ್ರಿಟೀಷರನ್ನು ಮಾನ್ಯ ಸದಸ್ಯರು ಹೊಗಳುವುದಾದರೆ, ಮೆಕಾಲೆಯು ಈ ಮೊದಲು ನಮ್ಮ ದೇಶದಲ್ಲಿ ಯಾವ ರೀತಿಯಾದ ಶಿಕ್ಷಣ ವ್ಯವಸ್ಥೆ ಇತ್ತು ಎಂಬುದರ ಬಗ್ಗೆ ಹೇಳಿದ್ದಾರೆ. It is not centralized. It is a decentralized education system, ಇಲ್ಲಿ ಸಮಾಜ ಕೇಂದ್ರಿಕೃತ ಶಿಕ್ಷಣ ವ್ಯವಸ್ಥೆ ಇರುವುದಾಗಿ ತಿಳಿಸಿದ್ದನು.

**ಸಭಾಪತಿಯವರು:–** ಮಾನ್ಯ ಮಂತ್ರಿಗಳೇ, ಮಾನ್ಯ ಸದಸ್ಯರು ಹೇಳದೇ ಇರುವ ವಿಚಾರವನ್ನು ಅವರ ಬಾಯಿಗೆ ತುರುಕಬೇಡಿ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಬ್ರಿಟಿಷ್ ಆಡಳಿತದ ಬಗ್ಗೆ ಚರ್ಚೆಯಾಗಲೀ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ನಾನು ನನ್ನ ಅಭಿಪ್ರಾಯಗಳನ್ನು . . .

**(ಗೊಂದಲ)**

**(ಮುಂದು)**

(469)/17–3–2020/12–40/ಎಲ್ಎಂ/ಆರ್ಎನ್

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ. ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೆನೆ. ನನ್ನ ಮಾತನ್ನು ಅವರು ಪೂರ್ತಿಯಾಗಿ ಕೇಳಿ ಅರ್ಥ ಮಾಡಿಕೊಳ್ಳದೆ ಅಡಚಣೆ ಉಂಟು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ(ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):–** ಮಾನ್ಯ ಸಭಾಪತಿಗಳೆ, ಅದರ ಅವಶ್ಯಕತೆ ಇಲ್ಲ. ಬ್ರಿಟೀಷ್‌ರನ್ನು ಹೊಗುವುದಾದರೆ ಈ ಸ್ವಾತಂತ್ರ್ಯಕ್ಕಾಗಿ ಇಷ್ಟೊಂದು ಹೋರಾಟ ಮಾಡುವ ಅವಶ್ಯಕತೆ ಇರಲಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ.ತಿಮ್ಮಾಪುರ:–** ಬ್ರಿಟೀಷರಿಗೆ ಯಾರ್ಯಾರು ಸಹಾಯ ಮಾಡಿದರು ಎನ್ನುವುದನ್ನು ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಎಸ್.ರವಿಕುಮಾರ್:–** ಇಷ್ಟೊಂದು ಹೋರಾಟ ಮಾಡುವ ಅವಶ್ಯಕತೆಯೇ ಇರಲಿಲ್ಲ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಗಳೆ, ಬ್ರಿಟೀಷರ ಬಗ್ಗೆ ಮಾತನಾಡಿರುವುದನ್ನು ಕಡತದಿಂದ ತೆಗೆದು ಹಾಕಿಸಿ. ಇಲ್ಲದಿದ್ದರೆ ನಮಗೆ ಅವಮಾನವಾಗುತ್ತದೆ.

**(ಗೊಂದಲ)**

**ಸಭಾಪತಿಯವರು:–** ಅವರಿಗ ಮಾತನಾಡಲು ಬಿಡಿ. ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ಕಾಮಾಲೆ ಕಣ್ಣಿನವರಿಗೆ ಎಲ್ಲವೂ ಹಳದಿಯಾಗಿದೆಯೇ ಕಾಣುತ್ತದೆ. ಅದಕ್ಕೆ ನಾವು ಏನು ಮಾಡಲು ಆಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರಮೇಶ್‌ರವರು ಮಾತನಾಡಲಿ. ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, ಬ್ರಿಟೀಷರ ಆಳ್ವಿಕೆಯಲ್ಲಿ ಒಳ್ಳೆಯ ಕೆಲಸಗಳು ಆಗಿವೆ ಎಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಅವರು ಹೇಳಿರುವ ಹೇಳಿಕೆ ಸರಿ ಇದೆ ಎಂದು ಹೇಳುವುದಿಲ್ಲ. ಆದರೆ ಬ್ರಿಟೀಷ್‌ರ ಕಾಲದಲ್ಲಿ ಯಾರ್ಯಾರು ಅವರ ಜೊತೆಯಲ್ಲಿ ಕೈಜೋಡಿಸಿದರು ಎನ್ನುವುದು ಇಲ್ಲಿ ಚರ್ಚೆಯಾಗಲಿ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗಬೇಕಾದರೆ ಹಲವಾರು ಜನರು ಹೋರಾಟ ಮಾಡಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಎಷ್ಟೊ ಜನ ಹೋರಾಟಗಾರರು ತಮ್ಮ ಸಂಸಾರವನ್ನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಳೆದುಕೊಂಡರು. ಇವತ್ತು ಇಲ್ಲಿ ಕುಳಿತ್ತಿರುವ ಎಷ್ಟೊ ಜನ ಶಾಸಕರು ಸ್ವಾತಂತ್ರ್ಯ ಹೋರಾಟಗಾರರ ವಂಶದವರು ಇರಬಹುದು, ಆದರೆ ಕೆಲವರು ಬ್ರಿಟೀಷರ ಜೊತೆಗೆ ಸೇರಿ ಈ ದೇಶದ ವಿರುದ್ಧ ಹುನ್ನಾರ ಮಾಡಿರುವ ಉದಾಹರಣೆಗಳು ಇವೆ.

**ಸಭಾಪತಿಯವರು:–** ಸಂವಿಧಾನದ ಬಗ್ಗೆ ಮಾತನಾಡಿ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ನಾನು ಏನೊ ಮಾತನಾಡಬೇಕು ಅಂದುಕೊಂಡಿರುತ್ತೇನೆ. ಅದನ್ನು ಕೇಳುವ ತಾಳ್ಮೆಯು ಈ ಆಡಳಿತ ಪಕ್ಷದವರಿಗೆ ಇಲ್ಲ. ನನ್ನ ಅಭಿಪ್ರಾಯವನ್ನು ಹೇಳಲು ಸಭಾಪತಿಗಳು ಅವಕಾಶವನ್ನು ಕೊಟ್ಟಿದ್ದಾರೆ. ನನ್ನ ಅಭಿಪ್ರಾಯಗಳನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಅದನ್ನು ಕೇಳಿದರೆ ನಿಮ್ಮ ಇಷ್ಟ ಇಲ್ಲದಿದ್ದರೆ ನನಗೇನು ಅಭ್ಯಂತರವಿಲ್ಲ. ನಾನು ಸಭೆಗೆ ಹೇಳುತ್ತಿದ್ದೇನೆ. ದಯಮಾಡಿ ನನಗೆ ಯಾರು ಅಡಚಣೆ ಮಾಡದೆ ಇದ್ದರೆ ನನ್ನ ಮಾತುಗಳನ್ನು ಹೇಳಿ ಮುಗಿಸುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, ಇವರು ಹೇಳುವುದನ್ನು ಕೇಳಿದರೆ, ಅಂದು "ಚಲೇ ಜಾವ್" ಚಳುವಳಿ ಮಾಡಿದ್ದು ತಪ್ಪು ಎಂದು ಹೇಳುವಂತಿದೆ.

**ಶ್ರೀ ಪಿ.ಆರ್.ರಮೇಶ್:–** ಅದನ್ನು ಪತ್ರಗಳೇ ಹೇಳುತ್ತವೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ರಮೇಶ್‌ರವರೆ ವಿಷಯ ಮಾತನಾಡಿ.

(ಗೊಂದಲ)

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ನಮ್ಮ ದೇಶದಲ್ಲಿ ಇರುವಂತಹ ಜನರಲ್ಲಿ ಯಾವುದೆ ಜಾತಿ, ಮತ..

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಗಳೆ, ಅವರು ಮಾತನಾಡಿರುವುದರ ಬಗ್ಗೆ ಕ್ಲ್ಯಾರಿಫಿಕೇಶನ್ ಕೊಡಬೇಕಾಗುತ್ತದೆ. ಬ್ರಿಟೀಷರನ್ನು ಸಮರ್ಥನೆ ಮಾಡಿಕೊಂಡಿರುವುದು ಸರಿಯೇ ತಪ್ಪೊ ಎನ್ನುವುದನ್ನು ಈಗ ಅವರು ಕ್ಲ್ಯಾರಿಫೈ ಮಾಡಬೇಕು. ಈ ರೀತಿ ಬ್ರಿಟೀಷರನ್ನು ಹೊಗಳಿ ಮಾತನಾಡುವುದನ್ನು ಕೇಳಲು ಸಾಧ್ಯವಿಲ್ಲ. ಮಾನ್ಯ ಸಭಾಪತಿಗಳೆ ನೀವು ನಮ್ಮ ರಕ್ಷಣೆಗೆ ಬರಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಗೊಂದಲ)

**ಸಭಾಪತಿಯವರು:–** ಅದನ್ನು ಪರಿಶೀಲನೆ ಮಾಡುತ್ತೇನೆ. ಈಗ ಎಲ್ಲರೂ ಕುಳಿತುಕೊಳ್ಳಿ. ಸದನವನ್ನು ನಡೆಸಿ ಎಂದರೆ ನಡೆಸುತ್ತೇನೆ, ಇಲ್ಲಾ ಇದೆ ರೀತಿ ಗಲಾಟೆ ಮಾಡುತ್ತೇವೆ ಎನ್ನುವುದಾದರೆ ಸದನ ನಡೆಸುವುದು ಬೇಡ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಸದನವನ್ನು ಮುಂದುವರೆಸಿ, ಆದರೆ ಅವರು ಕ್ಲ್ಯಾರಿಫೈ ಮಾಡಬೇಕು.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು ನಡೆಸಬೇಕೆ ಬೇಡವೆ, ಅವರು ಹೇಳಿದ್ದಕ್ಕೆ ಆಡಳಿತ ಪಕ್ಷದವರು ವಿರೋಧವನ್ನು ವ್ಯಕ್ತಪಡಿಸಿದ್ದೀರಿ. ಅದರ ಬಗ್ಗೆ ಸಚಿವರು ಮಾತನಾಡಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಗಳೆ, ಸದಸ್ಯರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುತ್ತಿಲ್ಲ. ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ ಎಂದೇ ಹೇಳುತ್ತಿದ್ದಾರೆ. ಇದು ಭಾರತ ಸಂವಿಧಾನ... ಅವರು ಕ್ಲ್ಯಾರಿಫಿಕೇಶನ್ ಕೊಡಬೇಕು. ಇಲ್ಲದಿದ್ದರೆ ವಿಷಾದವನ್ನು ವ್ಯಕ್ತಪಡಿಸಬೇಕು.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಇವರಿಗೆ ಇದೊಂದು ಪರಿಪಾಠವಾಗಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಸದಸ್ಯರು ಮಾತನಾಡುವಾಗ..

**ಸಭಾಪತಿಯವರು:–** ಅವರು ಅವರ ಅನ್ನಿಸಿಕೆಯನ್ನು ಹೇಳಿದ್ದಾರೆ. ನಿಮ್ಮ ಕಡೆಯಿಂದ ಬೇಕಾದಷ್ಟು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಮತ್ತೆ ಅದನ್ನೆ ಮಾತನಾಡುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ತಾವು ಕೊಟ್ಟಿರುವ ಸಮಯದಲ್ಲಿ ಅವರು ಮಾತನಾಡುತ್ತಿದ್ದಾರೆ. ಅವರು ಮಾತಿನ ಭರದಲ್ಲಿ ‘ನಾವು ಬ್ರಿಟೀಷರನ್ನು ಅಭಿನಂದಿಸಬೇಕು’ ಎನ್ನುವುದನ್ನು ಉಚ್ಚಾರಣೆ ಮಾಡಿದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಪಿ.ಆರ್.ರಮೇಶ್:-** ಏಕೆ ಹೇಳಿದ್ದೇನೆ ಎನ್ನುವುದನ್ನು ಕೇಳಬೇಕಾಗಿತ್ತು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಅವರು ಏನು ಮಾತನಾಡುತ್ತಾರೆ ಎನ್ನುವುದನ್ನು ತಾಳ್ಮೆಯಿಂದ ಕೇಳಿ. ಅವರು ಬ್ರಿಟೀಷರನ್ನು ಏಕೆ ಅಭಿನಂದಿಸಬೇಕು ಎಂದು ಹೇಳಿದರು ಎನ್ನುವುದನ್ನು ಕೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಅವರು ಹೇಳಿರುವ ಮಾತನ್ನು ಸಮರ್ಥಿಸಬೇಕು, ಇಲ್ಲದಿದ್ದರೆ ಅದನ್ನು ಕಡತದಿಂದ ತೆಗೆದು ಹಾಕಬೇಕು.

**(ಗೊಂದಲ)**

**ಸಭಾಪತಿಯವರು:-** ನಾಲ್ಕೈದು ದಿವಸಗಳಿಂದ ಸಂವಿಧಾನದ ಬಗ್ಗೆ ಚರ್ಚೆ ನಡೆಯುತ್ತಿದೆ. ಸರಿಯೋ, ತಪ್ಪೋ ಅವರು ತಮ್ಮ ಅನ್ನಿಸಿಕೆಯನ್ನು ಹೇಳಿದ್ದಾರೆ. ಸದನವನ್ನು ನಡೆಸಿಕೊಂಡು ಹೋಗೋಣ ಎನ್ನುವುದಾದರೆ ನಡೆಸೋಣ, ಬೇಗ ಮುಗಿಸಿಬಿಡಿ ಎಂದರೆ ಮುಗಿಸಿಬಿಡೋಣ. ಆದರೆ ಈ ರೀತಿಯಾಗುವುದು ಒಳ್ಳೆಯ ವ್ಯವಸ್ಥೆಯಲ್ಲ. ಸಂವಿಧಾನ ಚರ್ಚೆಯನ್ನು ಯಾವ ಉದ್ದೇಶಕ್ಕಾಗಿ ಮಾಡಲಾಗುತ್ತಿದೆ ಅದು ಈಡೇರಬೇಕು. ಅವರು ಮಾತನಾಡಿದ್ದಾರೆ ಅದಕ್ಕೆ ತಾವು ವಿರೋಧವನ್ನು ವ್ಯಕ್ತಪಡಿಸಿದ್ದೀರಿ, ಅದು ನಿಮ್ಮ ಹಕ್ಕು. ಆದರೆ ಹೀಗೆ ಮಾತನಾಡಬೇಕು ಎಂದು insist ಮಾಡುವುದು ಸರಿಯಲ್ಲ. ಸದನವನ್ನು smooth ಆಗ ನಡೆಸಿಕೊಂಡು ಹೋಗಬೇಕು ಎನ್ನುವುದು ನಮ್ಮ ಉದ್ದೇಶ. ಇವತ್ತು ಸಂಜೆ ಅಥವಾ ನಾಳೆ ಬೆಳಿಗ್ಗೆ ಸಂವಿಧಾನದ ಚರ್ಚೆಯು ಮುಕ್ತಾಯವಾಗುತ್ತದೆ. ಅಲ್ಲಿಯವರೆಗೆ ಮಾತನಾಡಿ. ಮಾನ್ಯ ರಮೇಶ್‌ರವರೆ ನೀವು controversy ಗೆ ಹೋಗುವುದು ಬೇಡ. ವಿಷಯ ಏನು ಅಷ್ಟು ಹೇಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ನನ್ನ ಅಭಿಪ್ರಾಯದ ಬಗ್ಗೆ ನಾನು ಕ್ಲ್ಯಾರಿಫೈ ಮಾಡಲೇಬೇಕು. ನಮ್ಮ ದೇಶದಲ್ಲಿ ಬಹಳಷ್ಟು ರಾಜವಂಶಸ್ಥರು, ಪಾಳೇಗಾರರು ರಾಜ್ಯಭಾರ ಮಾಡಿದ್ದಾರೆ. ಇಂತಹ ರಾಜ್ಯರುಗಳ ಮಧ್ಯ ಸಾಕಷ್ಟು ವೈಮನಸನ್ನು ತಂದು ಯುದ್ಧಗಳು ನಡೆಯುವಂತೆ ಮಾಡಿದವರು ಬ್ರಿಟೀಷರು. ಬ್ರಿಟೀಷರು ದೇಶವನ್ನು ಲೂಟಿ ಮಾಡಿದ್ದಾರೆ. ಮಾನ್ಯ ಸಿ.ಟಿ.ರವಿಯವರು ಹೇಳುತ್ತಿರುವುದು ಸರಿ ಇದೆ. ಆದರೆ ಸ್ವಾತಂತ್ರ್ಯ ಹೋರಾಟವನ್ನು ಮಾಡಲು ಈ ದೇಶದ ಎಲ್ಲ ರಾಜ್ಯರುಗಳನ್ನು ಒಂದು ಕೂಡಿಸಿ ಯುದ್ಧ ಮಾಡುವುದು ಬಹಳ ಕಷ್ಟದ ಕೆಲಸವಾಗಿತ್ತು. ಈ ರೀತಿಯ ಪರಿಸ್ಥಿತಿ ಆಗ ದೇಶದಲ್ಲಿತ್ತು. ಇಂತಹ ಪರಿಸ್ಥಿತಿ ನಿರ್ಮಾಣವಾಗಲು ದೇಶದಲ್ಲಿ ಬ್ರಿಟೀಷರು ಬಿತ್ತಿರುವ ಬೀಜ ಅಮೃತವಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿವರ್ತನೆಯಾಯಿತು ಎಂದು ಹೇಳುತ್ತಿದ್ದೆನೆ. ಅದಕ್ಕಾಗಿ ಬ್ರಿಟೀಷರಿಗೆ ಅಭಿನಂದನೆ ಸಲ್ಲಿಸಬೇಕು ಎಂದು ಹೇಳಿತ್ತಿದ್ದೇನೆ. ನಮ್ಮ ದೇಶದಲ್ಲಿ 75 ರಾಜ್ಯರುಗಳಿದ್ದರು ಮತ್ತು 600 ರಿಂದ 700 ಜನ ಆಡಳಿತಗಾರರು ಇದ್ದರು. ಇಂತಹ ಒಂದು ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಅವರಲ್ಲಿ ಸಾಕಷ್ಟು ಸಮಸ್ಯೆಗಳನ್ನು ಬ್ರಿಟೀಷರು ಹುಟ್ಟು ಹಾಕಿದರು. ಸ್ವಾತಂತ್ರ್ಯ ಬಂದಮೇಲೆ ನಮ್ಮ ದೇಶ ಹೀಗೆ ಒಂದಾಗಿರುತ್ತೆವೆಂದು ನಾವು ಯಾರು ಅಂದುಕೊಂಡಿರಲಿಲ್ಲ. ಉತ್ತರ ಭಾರತ ಮತ್ತು ದಕ್ಷಿಣ ಭಾರತ ಒಂದಾಗುವುದೆಂದು ನಾವು ಎಂದು ಅಂದುಕೊಂಡಿರಲಿಲ್ಲ. ಆದರೆ ಇವತ್ತು ಇಡೀ ಭಾರತ ದೇಶ ಒಂದಾಗಿದೆ. ಹೀಗೆ ಬ್ರಿಟೀಷನವರು ಬಿತ್ತಿರುವ ವಿಷ ಬೀಜ ನಮಗೆ ಅಮೃತವಾಯಿತು ಎಂದು ನಾನು ಹೇಳುತ್ತಿದ್ದೇನೆ. ಅದನ್ನು ಆಡಳಿತ ಪಕ್ಷದವರು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲಿಲ್ಲ. ನಮ್ಮ Constituent Assembly ಮೊದಲನೆಯ ಅಧ್ಯಕ್ಷರು ಶ್ರೀ ಪ್ರೇಮ್ ನಾರಾಯಣ ರಾಯಿಜ಼ದಾ ಎನ್ನುವವರು ಆಗಿದ್ದರು. Constituent Assembly ಯ ಮೊದಲನೆಯ ಸಭೆಯು 1946ನೇ ಡಿಸೆಂಬರ್ 9ರಂದು ನಡೆಯಿತು. ಅಲ್ಲಿ ಸಂವಿಧಾನವನ್ನು present ಮಾಡಲಾಯಿತು. ಆಗ ಅದರ ಬಗ್ಗೆ ಸಾಕಷ್ಟು ಚರ್ಚೆಗಳಾಗದವು. ಸಂವಿಧಾನವನ್ನು ಫೈನಲ್ ಮಾಡಲು 2000 ತಿದ್ದುಪಡಿಗಳನ್ನು ತಂದರು.

(ಮುಂದು)

470/17-03-2020/12-50/ಬಿಎಸ್‌ಡಿ–ವಿಕೆ

**ಶ್ರೀ ಪಿ.ಆರ್. ರಮೇಶ್ (ಮುಂದು)**

2000 amendments ಗಳನ್ನು ತಂದು ಎರಡು ವರ್ಷ, ಹನ್ನೊಂದು ತಿಂಗಳು ಮತ್ತು 18 ದಿನಗಳ Assembly ಯಲ್ಲಿ final draft ಅನ್ನು approve ಮಾಡುವುದಕ್ಕೆ ಕಾಲ ತೆಗೆದುಕೊಂಡ ಇತಿಹಾಸ ಇದೆ. ಹಾಗಾಗಿ ಇಂತಹ ಶ್ರೇಷ್ಠ ಸಂವಿಧಾನವನ್ನು ಕೊಟ್ಟ ಪುಣ್ಯಾತ್ಮರನ್ನು ಸ್ಮರಿಸುವ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಮ್ಮ ಸಂವಿಧಾನವು ಬಹಳ ಬಲಿಷ್ಠವಾದ ಸಂವಿಧಾನವಾಗಿದ್ದು, ಇದು ದೀರ್ಘವಾದ, ದ್ವಂದ್ವಗಳಿಲ್ಲದ, ಸಂದಿಗ್ಧತೆಗಳಿಲ್ಲದ ಜಗತ್ತಿನ ಅತ್ಯಂತ ದೊಡ್ಡ ಸಂವಿಧಾನವಾಗಿದೆ. ನಮ್ಮ ಸಂವಿಧಾನವನ್ನು ಕೈಯಲ್ಲಿ ಬರವಣಿಗೆಯ ಮೂಲಕ ಬರೆದಿದ್ದು, ನಮ್ಮ ಸಂವಿಧಾನವನ್ನು Sri*Prem Behari Narain Raizada*ರವರು ಅವರ ಬರವಣಿಗೆಯಲ್ಲಿ ಬರೆದಿದ್ದಾರೆ. ಇದರ ಅಧ್ಯಕ್ಷತೆಯನ್ನು Dr. Sachchidananda *Sinha* ರವರು ವಹಿಸಿದ್ದರು. ತದನಂತರ ಸಂವಿಧಾನವನ್ನು Italic ಶೈಲಿಯಲ್ಲಿ ಬರೆದಿದ್ದು, ಉತ್ತಮವಾದ calligraphy ಯನ್ನು ಅಳವಡಿಸಿಕೊಳ್ಳಲಾಗಿದೆ. ನಮ್ಮ ಸಂವಿಧಾನವನ್ನು ಮೊಟ್ಟಮೊದಲನೆಯದಾಗಿ Dehradun ನಲ್ಲಿ publish ಮಾಡಿ, Survey of India ರವರು preserve ಮಾಡಿದ್ದಾರೆ. ನಮ್ಮ ಸಂವಿಧಾನವು ಬಹಳ ಶ್ರೇಷ್ಠವಾದುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ English version ನಲ್ಲಿ 1,17,369 ಪದಗಳು Constitution ನಲ್ಲಿ ಒಳಗೊಂಡಿದೆ. ಸಂವಿಧಾನವನ್ನು constructive politics ಮಾಡುವ ಉದ್ದೇಶದಿಂದ ಮಾಡಲಾಗಿದೆ. Constructive Nation ಅನ್ನು construct ಮಾಡುವುದಕ್ಕೆ ಮಾಡಲಾಗಿದೆ. ಆದರೆ ಇವತ್ತು ನಮ್ಮ ದೇಶವು destructive ಹಾದಿಯಲ್ಲಿ ನಡೆಯುತ್ತಿದೆ. ಆವತ್ತಿನ ಜನರು ಸಂವಿಧಾನವನ್ನು ಮಾಡಿದ ಉದ್ದೇಶವನ್ನು ನಾವು ಫಲಪ್ರದ ಮಾಡುತ್ತಿಲ್ಲ. ಹಾಗಾಗಿ ಇದರ ಬಗ್ಗೆ ಸಾಕಷ್ಟು ಮಾತನಾಡುವ ಅವಶ್ಯಕತೆ ಇದೆ.

ನಮ್ಮ ಸಂವಿಧಾನವು ಹೆಚ್ಚು misuse ಆಗುತ್ತಿದೆ. ಇದಕ್ಕೆ Anti-Defection Law in 10th Schedule to the Indian Constitution ಅನ್ನು ತಂದಿದ್ದು, ಜನಪ್ರತಿನಿಧಿಗಳು ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋಗಬಾರದು 1985 ರಲ್ಲಿ amendments ಮೂಲಕ ತಂದರು. ಆದರೆ ಅದನ್ನು ನಾವು ಎಷ್ಟು misuse ಮಾಡಿಕೊಳ್ಳುತ್ತಿದ್ದೇವೆಂದರೆ ಅಂದು ಜಾರಿಗೆ ತಂದ ಉದ್ದೇಶ ಸರಿಯಿತ್ತು. ಆದರೆ ಅದರಲ್ಲಿ ಲೋಪಗಳನ್ನು ಹುಡುಕಿಕೊಂಡು, ಯಾವ ರೀತಿ ಲಾಭ ಆಗುತ್ತದೆ ಎನ್ನುವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ. ಇದೇ ರೀತಿ 73 ಮತ್ತು 74 ನೇ ತಿದ್ದುಪಡಿಗಳನ್ನು 1992 ರಲ್ಲಿ ತಂದರು. ನಮ್ಮ local bodies ಗಳಲ್ಲಿ ಸಂವಿಧಾನದ ಭದ್ರತೆ ಇರುತ್ತಿರಲಿಲ್ಲ. 1992ರಲ್ಲಿ ಮಾನ್ಯ ರಾಜೀವ್ ಗಾಂಧಿಯವರು ತಿದ್ದುಪಡಿಗಳನ್ನು ತಂದು, ಸಂವಿಧಾನದ ಬಲವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟರು. ಅದರಲ್ಲಿ MP, MLA and MLC ಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಅವರವರ ಮತ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವಿಕೆಗೆ ಅವಕಾಶ ಮಾಡಿಕೊಟ್ಟರು. ಆದರೆ ಎಲ್ಲಾ ಪಕ್ಷಗಳು ಯಾವ ರೀತಿ ಅದನ್ನು misuse ಮಾಡಿಕೊಂಡು ಪ್ರಯೋಜನ ಪಡೆಯುತ್ತಿವೆ ಎಂದರೆ, ಇಲ್ಲಿ Mayor Election ಗೆ ಮತ ಚಲಾಯಿಸಿ, immediate ಆಗಿ ದಾವಣಗೆರೆಗೆ ಹೋಗಿ ಮತ ಹಾಕಲು ಇಲ್ಲಿಂದ ಅಲ್ಲಿಗೆ change ಮಾಡಿ, voters list ನಲ್ಲಿ ಸೇರಿಸಿ, ಮನೆ ವಿಳಾಸ ಕೊಟ್ಟು ಅಲ್ಲಿ ಮತ ಚಲಾಯಿಸುತ್ತಾರೆ. ಇದನ್ನು ಒಂದು ಪಕ್ಷದವರು ಮಾಡುತ್ತಾರೆ ಎಂದು ಹೇಳುವುದಿಲ್ಲ. ಸಂವಿಧಾನವು ಎಲ್ಲಾ ಜನರಿಗೂ ಉತ್ತಮವಾದ ಸ್ಥಿತಿಯನ್ನು, equality ಅಂದರೆ ಸಮಾನತೆಯನ್ನು ಕೊಡುವುದು, ಸರಿಯಾದ ಹಾಗೂ ನ್ಯಾಯಬದ್ಧವಾದ ರೀತಿಯಲ್ಲಿ ನಡೆದುಕೊಳ್ಳುವುದು. ಜವಾಬ್ದಾರಿಗಳನ್ನು ಕೊಡುವುದೆಲ್ಲಾ ಆಗುತ್ತದೆ. ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸುವುದನ್ನು ಬಿಟ್ಟು, ಇರುವ ಕಾನೂನು, ಸಂವಿಧಾನಗಳನ್ನು ಯಾವರೀತಿ ತಿರುಚಿ ಮಾಡಬಹುದೆಂದು ಹುಡುಕಿ ಆ ಕೆಲಸವನ್ನು ಮಾಡುವ ಕೆಲಸ ಆಗುತ್ತಿದೆ. ಇದರಿಂದ ಯಾವ ರೀತಿ ಪ್ರಯೋಜನವನ್ನು ಪಡೆಯದಂತಹ ರೀತಿಯಲ್ಲಿ ಆಗುತ್ತಿದೆ ಎನ್ನುವುದು ಬಹಳ ಮುಖ್ಯವಾದ ವಿಷಯ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂವಿಧಾನವು rigid and flexible ಆಗಿದೆ. ಏಕೆಂದರೆ ಅಮೇರಿಕಾ ಸಂವಿಧಾನ rigid ಮತ್ತು ಇಂಗ್ಲೇಂಡ್ ಸಂವಿಧಾನ flexible ಆಗಿದೆ. ಆದರೆ ನಮ್ಮ ಸಂವಿಧಾನವು ಈ ಕಡೆ rigid ಇಲ್ಲ, ಈ ಕಡೆ flexible ಆಗಿಲ್ಲ. It is mixture of both. ಹಾಗಾಗಿ ನಮ್ಮ ಸಂವಿಧಾನದಿಂದ ದೇಶದ ಸಮಸ್ಯೆಗಳನ್ನು ಬಗೆಹರಿಸಲು ಸಾಕಷ್ಟು ಅವಕಾಶವಿತ್ತು. ಸ್ವಾತಂತ್ರ್ಯ ಬಂದಾಗ ನಮಗೆ ಒಂದು ಸೂಜಿಯನ್ನು manufacture ಮಾಡುವ ಶಕ್ತಿ ಇರಲಿಲ್ಲ. ಒಂದು ಸೂಜಿ ಬೇಕಾದರೆ ಇಂಗ್ಲೇಂಡ್‌ನಿಂದ ತರಿಸಬೇಕಾಗಿತ್ತು. ಒಂದು bicycle ಬೇಕಾದರೆ ಇಂಗ್ಲೇಂಡ್‌ನಿಂದ ತರಿಸಬೇಕಾಗಿತ್ತು. ಇವತ್ತು ನಮ್ಮ ದೇಶದಲ್ಲಿರುವ ಹಳ್ಳಿಗಳ ಮನೆಗಳಲ್ಲಿ ಒಂದು cycle ಅಥವಾ bicycle ತಂದರೆ ಅದನ್ನು ನೋಡುವುದಕ್ಕೆ ಇಡೀ ಊರಿನ ಜನರು ಆ ಮನೆ ಹತ್ತಿರ ನಿಂತುಕೊಳ್ಳುತ್ತಿದ್ದರು. ಇಲ್ಲಿ ಎಲ್ಲರಿಗೂ ಅನುಭವ ಇದೆ. ಇದು ತಮಗೂ ಅನುಭವ ಆಗಿರಬಹುದು. ಒಂದು scooter ತಂದರೆ ಅದನ್ನು ನೋಡುತ್ತಿದ್ದರು. ಆವತ್ತು ನಮ್ಮಲ್ಲಿ ಧಾನ್ಯಗಳು ಇರಲಿಲ್ಲ. 1947 ರಲ್ಲಿ ನಮ್ಮ ಜನರಿಗೆ ಉಳಿಸುವ food security ಇರಲಿಲ್ಲ. ಬಹಳಷ್ಟು ಕಷ್ಟಕರವಾದ ಪರಿಸ್ಥಿತಿ ಇತ್ತು. ಇರುವ ಕೆಲವು dam ಗಳನ್ನು ಬಿಟ್ಟರೆ ಹೆಚ್ಚು dam ಗಳು ಇರಲಿಲ್ಲ. ಆವತ್ತು ಒಂದು Aeroplane ಇರಬಹುದು, ಒಂದು tank ಇರಬಹುದು, ನಮಗೆ defence ಗೆ ಬೇಕಾದ ಯಾವ ಉಪಕರಣಗಳು ಇರಲಿಲ್ಲ. ಅಂತಹ ಸ್ಥಿತಿಯಲ್ಲಿ ಇದ್ದ ನಾವು ಇವತ್ತು ಮನೆಯಲ್ಲಿ ಕುಳಿತು ಎಲ್ಲವನ್ನು ತರಿಸಿಕೊಳ್ಳಬಹುದಾಗಿದೆ. ಇವತ್ತು ಕಾರು ಇಲ್ಲದಿರುವ ಒಂದು ಹಳ್ಳಿಯನ್ನು ತೋರಿಸುವುದಕ್ಕೆ ಆಗುತ್ತದೆಯೇ ಅಥವಾ motorcycle ಅಥವಾ scooter ಇಲ್ಲದೇ ಇರುವ ಹಳ್ಳಿಯನ್ನು ತೋರಿಸಲಿ. ಇದೆಲ್ಲವನ್ನು ಯಾರು ಕೊಟ್ಟರು? ನಮ್ಮ ಸಂವಿಧಾನ ಕೊಟ್ಟಂತಹ ಒಂದು ಸಮಾನತೆ, ನಮ್ಮಲ್ಲಿರುವ ಬೆಳವಣಿಗೆ ಹಾಗೂ ಅಭಿವೃದ್ಧಿ ಮಾಡಿಕೊಳ್ಳಲು ಅವಕಾಶ ಕೊಟ್ಟಿದೆ.

ಹಿಂದೆ 21 ವರ್ಷಗಳಿಗೆ voting power ಇದ್ದು, 1985 ರಲ್ಲಿ amend ಮಾಡಿ 18 ವರ್ಷಗಳಿಗೆ ಇಳಿಸುವ ಕೆಲಸ ಆಯಿತು. ಇವತ್ತು 18 ವರ್ಷದ ಮಕ್ಕಳು ಚುನಾವಣೆಯಲ್ಲಿ ಭಾಗಿಯಾಗಬಹುದು. ಇದನ್ನು ಕೊಟ್ಟವರು ಯಾರು? ಸಂವಿಧಾನದಲ್ಲಿ ತಿದ್ದುಪಡಿ ತಂದಿದ್ದರಿಂದ ಆಗಿದೆ. ನಮ್ಮಲ್ಲಿ 395 ಅನುಚ್ಛೇದಗಳಿದ್ದು, 22 parts ಎಂದು ಮಾಡಿದ್ದರು. ಮೊದಲು constitution ಬಂದಾಗ 8 schedule ಗಳಿದ್ದವು. ಇವತ್ತು 12schedule ಗಳಿದ್ದು, 400ಕ್ಕೂ ಹೆಚ್ಚು articles ಆಗಿದೆ. ಇವತ್ತಿನವರೆಗೂ 104 amendments ಗಳನ್ನು ಮಾಡಿದ್ದಾರೆ. ಇದು ದೇಶದ ಪ್ರಗತಿಯನ್ನು ತೋರಿಸುತ್ತಿದೆ. ಈ ಸಂವಿಧಾನವು ನಮ್ಮ ದೇಶವನ್ನು 70 ವರ್ಷಗಳ ಕಾಲ ಒಂದುಗೂಡಿಸುವುದಕ್ಕೆ ಏನೆಲ್ಲಾ ಮಾಡಬೇಕೋ, ಅದನ್ನು ಮಾಡಿದೆ. ಹಾಗಾಗಿ ಸಂವಿಧಾನವು Constituent Assembly ಕೊಟ್ಟಿದೆ, ಹಾಗಾಗಿ ಪೂಜಿಸುವ ಮನೋಭಾವನೆಯಿಂದ ಪ್ರತಿಯೊಬ್ಬ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾಗರಿಕನೂ ಬರುವ ಅವಶ್ಯಕತೆ ಹೊಂದಿರುತ್ತಾನೆ. ನಮ್ಮ ಸಂವಿಧಾನವು vibrant ಸಂವಿಧಾನ ಆಗಬೇಕು, vibrant democracy ಆಗಬೇಕು. ಇವತ್ತು ನಮ್ಮ ದೇಶ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂದರೆ, violent democracy ಗೆ ಹೋಗುತ್ತಿದೆ. Violent democracy ಗೆ ಹೋಗುವ ಸ್ಥಿತಿ ಇವತ್ತು ನಮಗೆ ಕಾಣುತ್ತಿದೆ. ಡಾ॥ ಬಿ.ಆರ್. ಅಂಬೇಡ್ಕರ್ ರವರು 2ನೇ ಸೆಪ್ಟಂಬರ್, 1955ರಂದು ಈ ಕಂಟ್ರಿಗೆ Governor ಬೇಕೇ, ಬೇಡವೇ ಎಂಬ ಬಗ್ಗೆ debate ಮಾಡುವಾಗ ಒಂದು ಭಾಷಣ ಮಾಡುತ್ತಾರೆ. ಅವರಿಗೆ ಕೊಡುವ powers ಯಾವರೀತಿ ಇರಬೇಕು ಎಂಬ ಬಗ್ಗೆ ಚರ್ಚೆಯಾಗುತ್ತದೆ.

(ಮುಂದು)

(471)/17.03.2020/1.00/ಹೆಚ್‌ವಿ–ವಿಕೆ

**ಶ್ರೀ ಪಿ.ಆರ್.ರಮೇಶ್(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ಅಲ್ಲಿ ಅವರು ಹೇಳುತ್ತಾರೆ,

> *"My friends tell me that I have made the Constitution. But I am quite prepared to say that I shall be the first person to burn it out. I do not want it. It does not suit anybody. But whatever that may be if our people want to carry on they must not forget that there are majorities......"*

ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಬಹುಸಂಖ್ಯಾತ ಜನರು ಕಿರುಕುಳ ಕೊಡುತ್ತಿದ್ದಾರೆ,

> *".....and there are minorities and they simply cannot ignore the minorities by saying, "Oh, no. To recognise you is to harm democracy." I should say that the greatest harm will come by injuring the minorities."*

ಅಲ್ಪಸಂಖ್ಯಾತರಾದ ಸಿಖ್‌ಗಳಿರಬಹುದು, ಹಿಂದುಗಳಿರಬಹುದು, ಎಲ್ಲ ಜಾತಿ ಜನಾಂಗದವರು ಒಟ್ಟಾಗಿ ಹೋರಾಡಿ ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದಾರೆ. ಅವರುಗಳು ತಂದು ಕೊಟ್ಟಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು ನಮ್ಮ ಮಕ್ಕಳು ಮರಿಮಕ್ಕಳು ಅನುಭವಿಸಬೇಕೆನ್ನುವ ಉದ್ದೇಶವಿದೆ. ಆದರೆ, ಇವತ್ತು ಈ ದೇಶವನ್ನು ಹಾಳು ಮಾಡುವುದಕ್ಕೆ ಬೇಕಾಗಿರುವಂತಹ ಅಂಶಗಳಿಗೆ ನಾವು ಬುನಾದಿ ಹಾಕುತ್ತಿದ್ದೇವೆ. ಇದನ್ನು ನಾವು ಖಂಡಿಸಬೇಕಾಗುತ್ತದೆ. ಮುಂದುವರೆದಿರುವ ನಮ್ಮ ದೇಶವನ್ನು ಇನ್ನೂ ಮುಂದುವರಿಸಿಕೊಂಡು ಹೋಗುವುದಕ್ಕೆ ಹಿರಿಯರು ಕೊಟ್ಟಿರುವಂತಹ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂವಿಧಾನದ ಅವಶ್ಯಕತೆ ಇದೆ.ಈ ನಿಟ್ಟಿನಲ್ಲಿ ನಾವೆಲ್ಲರೂ ನಮ್ಮ ಸಂವಿಧಾನವನ್ನು ಉಳಿಸಿಕೊಂಡು ಹೋಗುವಂತಹ ಕೆಲಸವನ್ನು ಮಾಡುವುದರ ಜೊತೆಗೆ, ಸಂವಿಧಾನ ರಚನಾ ಸಮಿತಿಯಲ್ಲಿದ್ದ ಸದಸ್ಯರುಗಳಿಗೆ ಮತ್ತು ಅದರ ಅಧ್ಯಕ್ಷರಾದ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಕಿಂಚಿತ್ತೂ ಅಪಚಾರವಾಗದ ರೀತಿಯಲ್ಲಿ ಗೌರವ ಕೊಡುವುದು ನಮ್ಮೆಲ್ಲರ ಕರ್ತವ್ಯವೆಂದು ಹೇಳಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಭಾರತದ ಸಂವಿಧಾನವನ್ನು ಕುರಿತು ಮಾತನಾಡುವುದಕ್ಕೆ ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸಿ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಭಾರತದ ಸಂವಿಧಾನ ಅಸ್ತಿತ್ವಕ್ಕೆ ಬಂದು 70 ವರ್ಷಗಳು ಕಳೆದಿರುವ ಈ ಸಂದರ್ಭದಲ್ಲಿ ಸಂವಿಧಾನದ ಮೇಲೆ ಇಷ್ಟು ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಎಲ್ಲಿಯೂ ಅವಕಾಶ ದೊರೆತಿರಲಿಲ್ಲ. ಈ ಬಾರಿ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರ 125ನೇ ಜನ್ಮ ದಿನಾಚರಣೆಯ ಅಂಗವಾಗಿ ಈ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಲೋಕಸಭೆ, ರಾಜ್ಯಸಭೆ ಮತ್ತು ರಾಜ್ಯದ ವಿಧಾನ ಮಂಡಲಗಳಲ್ಲಿ ಭಾರತದ ಸಂವಿಧಾನ ಕುರಿತು ಚರ್ಚೆಯಾಗಬೇಕೆನ್ನುವ ಆಶಯವನ್ನು ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಎರಡು ಸದನಗಳಲ್ಲಿ ಸಂವಿಧಾನದ ಮೇಲೆ ಚರ್ಚೆ ನಡೆಯುತ್ತಿರುವುದು ಸ್ವಾಗತಾರ್ಹವಾಗಿದೆ. ಭಾರತದ ಸಂವಿಧಾನ ಬಹಳ ಸರ್ವೋಚ್ಚವಾಗಿರುವ ಸಂವಿಧಾನವಾಗಿದೆ. ಪ್ರತಿಯೊಂದು ದೇಶವೂ ತನ್ನದೇ ಆಗಿರುವ ಸಂವಿಧಾನವನ್ನು ಪಡೆದುಕೊಂಡಿರಬೇಕೆನ್ನುವ ಅಂಶವನ್ನು ಗಮನದಲ್ಲಿಟ್ಟುಕೊಂಡು ನಮ್ಮ ದೇಶದ ಸಂವಿಧಾನವನ್ನು ರಚನೆ ಮಾಡಲಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಈ ದೇಶದ ಅನೇಕ ಭಾಷೆ, ಸಂಸ್ಕೃತಿ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ವಿವಿಧತೆಯಲ್ಲಿ ಏಕತೆಯನ್ನು ಸ್ಥಾಪಿಸಿ ಈ ದೇಶಕ್ಕೊಂದು ಸಂವಿಧಾನವನ್ನು ಕೊಡುವಂತಹ ಜವಾಬ್ದಾರಿ ಈ ದೇಶದ ನಾಯಕರ ಮೇಲಿದ್ದ ಸಂದರ್ಭದಲ್ಲಿ ಡಾ॥ಬಿ.ಆರ್.ಅಂಬೇಡ್ಕರ್‌ರವರ ನೇತೃತ್ವದಲ್ಲಿ ಸಂವಿಧಾನ ರಚನಾ ಸಮಿತಿಯನ್ನು ಮಾಡಿ, ಈ ದೇಶಕ್ಕೆ ಸಂವಿಧಾನವನ್ನು ಕೊಡುಗೆಯನ್ನಾಗಿ ನೀಡಲಾಯಿತು. ಪ್ರಾರಂಭದಲ್ಲಿ ಸಂವಿಧಾನ ರಚನಾ ಸಮಿತಿಯಲ್ಲಿ 379 ಜನ ಸದಸ್ಯರಿದ್ದರು. ನಂತರ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ನೇತೃತ್ವದಲ್ಲಿ 248 ಸದಸ್ಯರಅಂತಿಮ ಪಟ್ಟಿಯನ್ನು ಪ್ರಕಟಿಸಲಾಯಿತು. ಸಂವಿಧಾನ ರಚನಾ ಸಮಿತಿಯಲ್ಲಿ ಪ್ರಮುಖವಾಗಿ ಶ್ರೀ ಜವಹರಲಾಲ್ ನೆಹರುರವರು, ಡಾ॥ಬಾಬು ರಾಜೇಂದ್ರ ಪ್ರಸಾದ್‌ರವರು ಮತ್ತು ಮಾನ್ಯ ಸರ್ದಾರ್ ವಲ್ಲಭಭಾಯಿ ಪಟೇಲ್‌ರವರು ಇದ್ದರು. ವಿಶೇಷವೆಂದರೆ, ಕನ್ನಡಿಗರಾದ ಉಡುಪಿಯ ನ್ಯಾಯವಾದಿ ಶ್ರೀ ಬೆನಗಲ್ ನರಸಿಂಹರಾಯರು ಸಹ ಈ ಸಮಿತಿಯ ಸದಸ್ಯರಾಗಿದ್ದರು ಎನ್ನುವುದು ಹೆಮ್ಮೆಯ ವಿಚಾರವಾಗಿದೆ. ಮೊದಲಿಗೆ ಕೈಬರಹದಿಂದ ಬರೆಯಲಾದ ಹಿಂದಿ ಭಾಷೆಯ ಒಂದು ಪ್ರತಿ ಮತ್ತು ಆಂಗ್ಲ ಭಾಷೆಯ ಒಂದು ಪ್ರತಿ ಹೀಗೆ ಎರಡು ಭಾಷೆಗಳಲ್ಲಿ ಸಂವಿಧಾನದ ಗ್ರಂಥಗಳನ್ನು ರಚಿಸಲಾಗಿತ್ತು. ಪ್ರತಿಯೊಂದು ಪುಟದಲ್ಲಿಯೂ ಶಾಂತಿನಿಕೇತನದ ಕಲಾವಿದರಾದ ಶ್ರೀ ರಾಮ್ ಮನೋಹರ್ ಸಿನ್ಹಾ ಎನ್ನುವವರು ಭಾರತದ ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸುವಂತಹ ಚಿತ್ರಗಳನ್ನು ಬಿಡಿಸಿದ್ದಾರೆ. ಸಂವಿಧಾನದ ಮುಖಪುಟದಲ್ಲಿ ಸಂವಿಧಾನದ ಆಶಯವನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಸಂವಿಧಾನದ

ಮುಖಪುಟದ ಮೇಲ್ಭಾಗದಲ್ಲಿ ವೃಷಭ ಎಂದರೆ ಎತ್ತಿನ ಚಿತ್ರ ಮತ್ತು ಎಡಭಾಗದಲ್ಲಿ ಆನೆ ಚಿತ್ರವನ್ನು ಸಂವಿಧಾನದ ಮೂಲ ಗ್ರಂಥದಲ್ಲಿ ಬಿಡಿಸಲಾಗಿದೆ. ಪವಿತ್ರವಾಗಿರುವ ಈ ಗ್ರಂಥದಲ್ಲಿ ಸುಮಾರು 365 Article ಗಳನ್ನು ಮತ್ತು 12 Schedule ಗಳನ್ನು ರಚಿಸಿರುವ ಬಗ್ಗೆ ಮತ್ತು ಭಾರತದ ಸಂವಿಧಾನದ ಮೂಲ ಆಶಯದ ಬಗ್ಗೆಯೂ ಈಗಾಗಲೇ ಅನೇಕ ಜನ ಸದಸ್ಯರು ಉಲ್ಲೇಖ ಮಾಡಿದ್ದಾರೆ. ಸಂವಿಧಾನದ ಮೂಲ ಆಶಯದಲ್ಲಿ ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ನಮ್ಮ ದೇಶವನ್ನು ಘೋಷಣೆ ಮಾಡಲಾಗಿದೆ. 1949 ನವೆಂಬರ್ 26ರಂದು ಸರ್ಕಾರ ಈ ವರದಿಯನ್ನು ಅಂಗೀಕರಿಸಿತು. ನಂತರ ಜನವರಿ 26ರಿಂದ ನಮ್ಮ ದೇಶವನ್ನು ಪ್ರಜಾಸತ್ತಾತ್ಮಕ ಗಣರಾಜ್ಯವೆಂದು ಘೋಷಣೆ ಮಾಡಿ, ಸಂವಿಧಾನವನ್ನು ಜಾರಿಗೊಳಿಸಲಾಯಿತು. ಈ ಬೃಹತ್ ರಾಷ್ಟ್ರಕ್ಕೆ ಸಂವಿಧಾನವನ್ನು ನೀಡಲು ಸಂವಿಧಾನ ರಚನಾ ಸಮಿತಿಯು ಸುಮಾರು 2 ವರ್ಷ 11 ತಿಂಗಳು ಹಾಗೂ 18 ದಿವಸಗಳ ಕಾಲ ಸತತವಾಗಿ ಶ್ರಮಿಸಿದ ಫಲವಾಗಿ ನಮಗೆ ಈ ಸಂವಿಧಾನ ದೊರೆತಿದೆ. ಸಂವಿಧಾನದಲ್ಲಿ ಉಲ್ಲೇಖ ಮಾಡಿರುವ ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು ಮತ್ತು ರಾಜನೀತಿ ತತ್ವಗಳ ಜೊತೆಗೆ ಆಡಳಿತದ ದೃಷ್ಟಿಯಿಂದ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗವೆಂದು ಮೂರು ಭಾಗಗಳನ್ನಾಗಿ ವಿಂಗಡಿಸಿರುವುದನ್ನು ನಾವೆಲ್ಲರೂ ಗಮನಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಸಂವಿಧಾನ ಲಿಖಿತರೂಪದ ಸಂವಿಧಾನವಾಗಿದ್ದರೂ ಸಹ ಕಾಲಕಾಲಕ್ಕೆ, ಪರಿಸ್ಥಿತಿಗೆ ಅನುಗುಣವಾಗಿ, ಆಯಾಯ ಸಂದರ್ಭಕ್ಕೆ ತಕ್ಕಂತೆ ತಿದ್ದುಪಡಿಗೆ ಅವಕಾಶವನ್ನು ನಮ್ಮ ಸಂವಿಧಾನ ಒದಗಿಸಿಕೊಟ್ಟಿದೆ. ಈ ಅವಕಾಶವನ್ನು ಬಳಸಿಕೊಂಡು ದಿನಾಂಕ:18.06.1951ರಂದು ಸಂವಿಧನ ರಚನೆಯಾದ 6 ತಿಂಗಳಿನಲ್ಲಿಯೇ ಪ್ರಪ್ರಥಮವಾಗಿ ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವ ಮೂಲಕ ಅನುಚ್ಛೇದ 31(ಎ) ಮತು 31 (ಬಿ)ಅನ್ನು ತಿದ್ದುಪಡಿಗೆ ಒಳಪಡಿಸಲಾಯಿತು. ಇಲ್ಲಿಯವರೆಗೆ ನಮ್ಮ ಸಂವಿಧಾನಕ್ಕೆ 124 ತಿದ್ದುಪಡಿಗಳನ್ನು ತರಲು ಬಿಲ್‌ಗಳನ್ನು ಮಂಡನೆ ಮಾಡಿದ್ದರೂ ಸಹ 104 ತಿದ್ದುಪಡಿಗಳು ಮಾತ್ರ ಅಂಗೀಕಾರವಾಗಿದೆ. ಸಂವಿಧಾನಕ್ಕೆ ಯಾವುದೇ ತಿದ್ದುಪಡಿಯನ್ನು ತರಬೇಕಾದರೆ, ಸಂಸತ್ 2/3ರ ಬಹುಮತದಿಂದ ಅದನ್ನು ಅಂಗೀಕರಿಸಬೇಕಾಗುತ್ತದೆ. ಸಂವಿಧಾನದ ಮೂಲ ಆಶಯಗಳಿಗೆ ಮತ್ತು ತತ್ವಗಳಿಗೆ ಧಕ್ಕೆಯುಂಟು ಮಾಡುವ ಯಾವುದೇ ಕಾನೂನನ್ನು ರಚನೆ ಮಾಡುವಂತಿಲ್ಲ. ಆ ರೀತಿ ಕಾನೂನು ರಚನೆ ಮಾಡಿದರೆ ಅದು ಅಸಿಂಧುವಾಗುತ್ತದೆಂದು ಸಂವಿಧಾನದ ಆಶಯಗಳಲ್ಲಿ ವ್ಯಕ್ತಪಡಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'ಸಂವಿಧಾನ ಎನ್ನುವುದು ಆತ್ಮವೇ ಇಲ್ಲದ ಮಗ್ಗಿ ಪುಸ್ತಕವಲ್ಲ, ಅಥವಾ ತರ್ಕದ ಕಸರತ್ತೂ ಅಲ್ಲ, ಅದಕ್ಕೊಂದು ಮೆದುಳು ಇರುತ್ತದೆ. ಅದಕ್ಕೆ ಹೃದಯ ಕೈ-ಕಾಲು ಇರುತ್ತದೆ. ಎಲ್ಲಕ್ಕೂ ಮಿಗಿಲಾಗಿ ಆತ್ಮವಿರುತ್ತದೆ. ಈ ಭಾಗಗಳಲ್ಲಿಯೂ ಸಹ ಅರೆ ಜೈವಿಕವಾದ ಪರಂಪರೆಯನ್ನು ಹೊಂದಿರುತ್ತದೆ ಮತ್ತು ತಮ್ಮ ಸುತ್ತಲಿನ ಪರಿಸರದಿಂದ ಬಲಗೊಳ್ಳುತ್ತದೆ' ಎನ್ನುವ ಮಾತನ್ನು ನ್ಯಾ॥ಎಸ್.ಎಂ.ದಾವೂದ್ ಅವರು ಹೇಳಿರುವುದನ್ನು ನಾವೆಲ್ಲರೂ ಅರಿತುಕೊಳ್ಳಬೇಕೆಂದು ಈ

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ರಾಜನೀತಿ ನಿರ್ದೇಶಕ ತತ್ವಗಳನ್ನು ಗಮನಿಸಿದರೆ, ಅಲ್ಲಿಯೂ ಕೂಡ ಇದೇ ಮಾತುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಭಾರತದ ಸಂವಿಧಾನವನ್ನು ಗಮನಿಸಿದರೆ, 12ನೇ ಶತಮಾನದ ಅಣ್ಣ ಬಸವಣ್ಣನವರನ್ನು ಈ ಸಂದರ್ಭದಲ್ಲಿ ನೆನೆಯದೇ ಹೋದರೆ ತಪ್ಪಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

(ಮುಂದುವರಿದಿದೆ)

(472) 17.3.2020 1.10 ಪಿಕೆ:ಬಿಎನ್‌ಎಸ್

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಮುಂದುವರೆದಿದೆ):**

ಬಸವಣ್ಣನ ಕಾಲದ ವಿಚಾರಗಳನ್ನು ನಾವು ಗಮನದಲ್ಲಿಟ್ಟುಕೊಂಡರೆ, ಕೇವಲ ಭಾರತದ ಸಂವಿಧಾನಕ್ಕೆ ಮಾತ್ರ ಅವರ ವಚನಗಳು ಆಧಾರವಲ್ಲ, ಈ ವಚನಗಳು ಅಂತಾರಾಷ್ಟ್ರೀಯ ಮಟ್ಟದಲ್ಲೂ, ಜಾಗತಿಕ ಮಟ್ಟದಲ್ಲೂ ಗಮನಿಸಿರುವುದನ್ನು ಕಾಣುತ್ತೇವೆ. ಬಸವಣ್ಣನವರು 12 ನೇ ಶತಮಾನದ, ಸಾಮಾಜಿಕ, ಆರ್ಥಿಕ ಮತ್ತು ದಾರ್ಶನಿಕ ಚರ್ಚೆಗಾಗಿ "ಅನುಭವ ಮಂಟಪ" ಎನ್ನುವ ಜಗತ್ತಿನ ಮೊದಲ ಸಂಸತ್ತನ್ನು ಸ್ಥಾಪಿಸಿದ್ದರು. ಶ್ರೀ ಅಲ್ಲಮಪ್ರಭು ದೇವರನ್ನು ಅನುಭವ ಮಂಟಪದ ಶೂನ್ಯ ಸಿಂಹಾಸನಾಧೀಶ್ವರರಾಗಿ ಮಾಡಿದ್ದರು. ಕರ್ನಾಟಕದಲ್ಲಿ ಸ್ಥಾಪಿತವಾಗಿದ್ದ ಈ ಅನುಭವ ಮಂಟಪದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಸುಮಾರು 770 ಪುರುಷ–ಮಹಿಳೆಯರು ಭಾಗವಹಿಸಿದ್ದರು ಎನ್ನುವುದನ್ನು ಕಾಣುತ್ತೇವೆ. ಅನುಭವ ಮಂಟಪದಲ್ಲಿ ವಿಶೇಷವಾಗಿ ಮಹಿಳೆಯರಿಗೆ ಅವಕಾಶ ಕೊಟ್ಟಿರುವುದನ್ನು ನೋಡಿದರೆ ಎಲ್ಲರಿಗೂ ಸಮಾನತೆ ಇತ್ತು ಎಂಬುದನ್ನು ಮನಗಾಣಬಹುದು. ಶ್ರೀ ಅಲ್ಲಮಪ್ರಭುದೇವರ ನೇತೃತ್ವದಲ್ಲಿದ್ದ ಅನುಭವ ಮಂಟಪದಲ್ಲಿ, ಅಕ್ಕ ನಾಗಮ್ಮ, ಅಕ್ಕ ಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಿದೇವರೂ ಕೂಡ ಇಲ್ಲಿ ಪ್ರಮುಖರಾಗಿದ್ದರು ಎನ್ನುವುದನ್ನು ನೋಡಬಹುದು. ಶರಣರ ವಚನಗಳ ಬಗ್ಗೆ ಚರ್ಚೆ ಮಾಡಿದಾಗ ಅಲ್ಲಿ ಸಮಾನತೆ ಇತ್ತು ಎನ್ನುವುದನ್ನು ನಾವು ಕಾಣಬಹುದು. ಬಸವಣ್ಣನವರ ಕಾಲದಅನುಭವ ಮಂಟಪದಲ್ಲಿ ಸಮಾನತೆ ಇತ್ತು, ಸ್ತ್ರೀ–ಪುರುಷರ ಮಧ್ಯೆ ಭೇದವಿರಲಿಲ್ಲ ಎನ್ನುವುದನ್ನು ಕಾಣಬಹುದು. 1948ರ ಡಿಸೆಂಬರ್ 10ರಂದು ಮಾನವ ಹಕ್ಕುಗಳಿಗೆ ಸಂಬಂಧಪಟ್ಟಂತೆ ವಿಶ್ವಸಂಸ್ಥೆಯು 30 ಅಂಶಗಳನ್ನು ಘೋಷಣೆ ಮಾಡಿತ್ತು. ಆ ಎಲ್ಲಾ ಅಂಶಗಳು ಬಸವಣ್ಣನವರ ವಚನಗಳಲ್ಲಿ ಇತ್ತು ಎನ್ನುವುದನ್ನು ಕಾಣುತ್ತೇವೆ. ಎರಡನೆ ಮಹಾಯುದ್ಧದಲ್ಲಿ ಸುಮಾರು 5 ಕೋಟಿ ಜನ ಸಾವಿಗೀಡಾದರು. ಆಗ ವಿಶ್ವಸಂಸ್ಥೆ ಮಾನವ ಹಕ್ಕುಗಳ ಸಂಬಂಧ ಕೆಲವು ಅಂಶಗಳನ್ನು ಘೋಷಣೆ ಮಾಡಿತ್ತು. ಅಲ್ಲಿಯ ತನಕ ವಿಶ್ವಸಂಸ್ಥೆಯಲ್ಲಿ ಯಾವುದೇ ರೀತಿಯ ಮಾನವ ಹಕ್ಕುಗಳ ಬಗ್ಗೆ ಚರ್ಚೆಯೇ ಇರಲಿಲ್ಲ. ಆದರೆ, ಮಾನವ ಹಕ್ಕುಗಳ ಪ್ರತಿಪಾದನೆಯಲ್ಲಿ, ನೈತಿಕ ಮತ್ತು ಅನೇಕ ವಿಚಾರಗಳನ್ನು ಅಳವಡಿಸಿರತಕ್ಕ ಅಂಶಗಳನ್ನು ಅನುಭವ ಮಂಟಪದಲ್ಲಿ ಕಾಣಬಹುದಾಗಿತ್ತು. ಈ ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ವಿಶ್ವಸಂಸ್ಥೆಯು ಮಾನವ ಹಕ್ಕುಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಾಪನೆ ಮಾಡಿತು. ವಿಶ್ವಸಂಸ್ಥೆಯಲ್ಲಿರುವ ಮಾನವ ಹಕ್ಕುಗಳನ್ನು ನಮ್ಮ ಭಾರತ ಸಂವಿಧಾನದಲ್ಲಿಯೂ ಅಳವಡಿಸಿಕೊಂಡಿದ್ದೇವೆ. ವಿಶ್ವಸಂಸ್ಥೆಯು ಅಣ್ಣ ಬಸವಣ್ಣನವರ ವಚನಗಳಲ್ಲಿ ಮೂಲಭೂತ ಹಕ್ಕುಗಳ ಸಂಬಂಧ ಇದ್ದ ಅಂಶಗಳನ್ನು ಅಳವಡಿಸಿಕೊಂಡು ಮಾನವ ಹಕ್ಕುಗಳ ರಚನೆ ಮಾಡಿತು ಎನ್ನುವುದನ್ನು ನಾವು ಗಮನಿಸಬೇಕು. ಬಸವಣ್ಣನವರ ವಚನದಲ್ಲೇ ಸಂವಿಧಾನ ರಚನೆಗೆ ಬೇಕಾದ ಅಂಶಗಳ ಆಧಾರವಿತ್ತು. ಈ ನಿಟ್ಟಿನಲ್ಲಿ ನಾವು ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು. ಅನುಭವ ಮಂಟಪದ ಮೂಲಕ ಸಂಸದೀಯ ಪ್ರಜಾಪ್ರಭುತ್ವದ ಬೀಜಗಳು ಮೊಳಕೆ ಒಡೆದು, ಅದರಿಂದ ಮಾನವ ಹಕ್ಕುಗಳು ಎನ್ನುವ ಹೂವುಗಳು ಅರಳಿದವು ಎಂದು ಅನೇಕ ಕವಿಗಳು ಬರೆದಿರುವುದನ್ನು ನಾನು ಇಲ್ಲಿ ಉಲ್ಲೇಖ ಮಾಡಬಯಸುತ್ತೇನೆ. ಇವತ್ತು ನಮ್ಮ ಸಂವಿಧಾನ ಏನು "ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು" ಎನ್ನುವ ನೀತಿಯನ್ನು ಬೋಧಿಸುತ್ತಿದೆಯೋ, ಪ್ರಪಂಚಕ್ಕೆ ಪ್ರಜಾಪ್ರಭುತ್ವದ ಅಡಿಪಾಯವನ್ನು ಹಾಕಿಕೊಟ್ಟಿತೋ, ಇವೆಲ್ಲವನ್ನೂ ಅನುಭವ ಮಂಟಪದ ಸಂಸತ್ತು ಸ್ಥಾಪಿಸಿತ್ತು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 12ನೇ ಶತಮಾನದಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಯ ಕುರಿತು ಇದ್ದ ಎಲ್ಲಾ ವಿಚಾರಗಳನ್ನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಸಮಾನತೆಯ ಹಕ್ಕನ್ನು ಕೊಟ್ಟಿರುವುದು ಜಾಗತಿಕ ಮಟ್ಟದಲ್ಲೂ ಚರ್ಚೆಯಾಗುತ್ತಿರುವ ವಿಷಯವಾಗಿದೆ. ಬಸವಣ್ಣನವರ ಕಾಲದಲ್ಲಿ ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ದುರುಪಯೋಗವನ್ನು ವಿರೋಧಿಸುವ ಹಕ್ಕು, ಧರ್ಮ ಪಾಲಿಸುವ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು, ಸಂವಿಧಾನದ ಅಡಿಯಲ್ಲಿ ಪರಿಹಾರವನ್ನು ಪಡೆದುಕೊಳ್ಳುವ ಹಕ್ಕುಗಳ ಬಗ್ಗೆ ಶರಣರು ಪ್ರತಿಪಾದಿಸಿದ್ದರು ಎನ್ನುವುದನ್ನು, ವಿಶ್ವಮಾನವ ಹಕ್ಕುಗಳ ಪಿತಾಮಹ ಶ್ರೀ ಬಸವಣ್ಣನವರು ಎನ್ನುವುದನ್ನು ನಾವು ಇವತ್ತು ಒಪ್ಪಬೇಕು. ಬಸವಣ್ಣನವರ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಡಾ: ಬಿ.ಆರ್.ಅಂಬೇಡ್ಕರ್‌ರವರು ಸಂವಿಧಾನವನ್ನು ರಚಿಸಿದ್ದರು ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಅನೇಕ ಕಡೆ ಸಮಾನತೆಯ ಹಕ್ಕಿನ ಕುರಿತು ಮಾತನಾಡುವ ಸಂದರ್ಭದಲ್ಲಿ ಮಾನ್ಯ ಕಾರಜೋಳರವರು ಒಂದು ಉದಾಹರಣೆ ಹೇಳಿದರು. "ಚೆನ್ನಯ್ಯನ ಮನೆಯ ದಾಸಿಯ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರೂ ಹೊಲದಲ್ಲಿ ಬೆರಣಿಗೆ ಹೋಗಿ ಸಂಗವನ್ನು ಮಾಡಿದರು, ಇವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲ ಸಂಗಮದೇವ" ಎನ್ನುವ ಮಾತನ್ನು ಬಸವಣ್ಣನವರು ಹೇಳಿದಾಗ, ಅವರು ಸಮಾನತೆಗೆ ಎಷ್ಟರಮಟ್ಟಿಗೆ ಅವಕಾಶ ಕೊಟ್ಟಿದ್ದರು ಎನ್ನುವುದನ್ನು ನಾವಿಲ್ಲಿ ಗಮನಿಸಬೇಕು. "ಇವನಾರವ, ಇವನಾರವ ಇವನಾರವನೆಂದೆನಿಸದಿರಯ್ಯಾ ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ" ಎನ್ನುವ ಮಾತನ್ನು ಬಸವಣ್ಣನವರು ಹೇಳುತ್ತಾರೆ. ಇನ್ನೊಂದು ಕಡೆ, ಕುಲ ಕುಲ ಕುಲವೆಂದು ಬಡಿದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ" ಎನ್ನುವ ಮಾತನ್ನು ಕನಕದಾಸರು ಹೇಳಿದ್ದರು. ಅವರು ಸಮಾನತೆಗೆ ಎಷ್ಟು ಅವಕಾಶ ಕೊಟ್ಟಿದ್ದರು ಎನ್ನುವುದನ್ನು ನಾವೆಲ್ಲರೂ ಇಲ್ಲಿ ಗಮನಿಸಬಹುದು. ಸ್ವತಂತ್ರದ ಹಕ್ಕಿನ ಬಗ್ಗೆ ಕೂಡ ಬಸವಣ್ಣನವರು ಹೇಳಿದ್ದಾರೆ. ಶ್ರೀಮಂತರು, ಬಡವರು ಎಲ್ಲರೂ ಒಂದೇ ಎನ್ನುವ ಮಾತನ್ನು ಹೇಳಿ, " ಸತ್ತ ಬಳಿಕ ಮುಕ್ತಿಯ ಹಡೆದೆಹೆನೆಂದು ಪೂಜಿಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋದಡೆ ಆ ದೇವರೇನ ಕೊಡುವರೋ? ಸಾಯದೆ ನೋಯದೆ ಸ್ವತಂತ್ರನಾಗಿ ಸಂದುಭೇದವಿಲ್ಲದಿಪ್ಪ ಗುಹೇಶ್ವರಾ ನಿಮ್ಮ ಶರಣ" ಎಂದು ಹೇಳುವ ಮೂಲಕ ದೇವರ ಹಂಗನ್ನೂ ಕೂಡ ತೊರೆದು ಸ್ವತಂತ್ರವಾಗಿ ಬದುಕಬೇಕು ಎನ್ನುವ ಮಾತನ್ನು ಬಸವಣ್ಣನವರು ಹೇಳಿರುವುದನ್ನು ನಾವು ಗಮನಿಸಬಹುದು. ಅನುಭವ ಮಂಟಪದಲ್ಲಿ ದುರುಪಯೋಗ ವಿರೋಧಿಸುವುದು ಒಂದು ಹಕ್ಕು ಎನ್ನುವುದನ್ನು ಹೇಳುತ್ತಾರೆ. ವಚನಗಳ ಮುಖಾಂತರ ಭ್ರಷ್ಟಾಚಾರದ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಒಂದು ಕಡೆ, ಧರ್ಮದಿಂದ ಹಣ ಸಂಪಾದನೆ ಮಾಡಬೇಕು, ಸಂಪಾದನೆ ಮಾಡಿರುವಂಥದ್ದರಲ್ಲಿ ದಾಸೋಹಕ್ಕೆ ಸ್ವಲ್ಪ ಭಾಗವನ್ನು ಕೊಡಬೇಕು ಎಂದು ಹೇಳುತ್ತಾರೆ. ಇವತ್ತು ನಮ್ಮ ಸಂವಿಧಾನ ಕೂಡ ಅದನ್ನೇ ಹೇಳುತ್ತದೆ. ಆವತ್ತು ದಾಸೋಹ ಎಂದು ಹೇಳುತಿದ್ದರು, ಇವತ್ತು ನಮ್ಮ ಸರ್ಕಾರಗಳು ಬಡವರಿಗೆ ಅನೇಕ ಯೋಜನೆಗಳನ್ನು ಕೊಡುವುದರ ಮೂಲಕ ಸಮಾನತೆಯನ್ನು ಸಾಧಿಸಲು ಹೊರಟಿರುವುದನ್ನು ಕಾಣುತ್ತೇವೆ. ಭ್ರಷ್ಟಾಚಾರದ ಬಗ್ಗೆ " ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೇ ಸತ್ಪಾತ್ರಕ್ಕೆ ಸಲ್ಲದಯ್ಯ, ನಾಯ ಹಾಲು ನಾಯಿಂಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ, ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯ" ಎನ್ನುವ ಮಾತನ್ನು ಹೇಳುತ್ತಾರೆ. ಇದೂ ಕೂಡ ನಮ್ಮ ಸಂವಿಧಾನದ ಮೂಲದಲ್ಲಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. "ಆಸೆಯೆಂಬುದು ಅರಸಿಂಗಲ್ಲದೆ, ಶಿವಭಕ್ತರಿಗುಂಟೆ ಅಯ್ಯಾ? ರೋಷವೆಂಬುದು ಯಮದೂತರಿಗಲ್ಲದೆ, ಅಜಾತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಬ್ಬ, ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ" ಎನ್ನುವಂಥದ್ದು ಇದೆ. ಆಯ್ದಕ್ಕಿ ಮಾರಮ್ಮ ಎನ್ನುವ ಒಬ್ಬ ಶರಣೆಯ ಗಂಡ ಒಂದು ಸಲ ರಾಜನ ಮನೆಯಿಂದ ಅಕ್ಕಿಯ ಮೂಟೆಗಳನ್ನು ತೆಗೆದುಕೊಂಡು ಬರುತ್ತಾನೆ. ಆಗ ಆಯ್ದಕ್ಕಿ ಮಾರಮ್ಮ, ಇಷ್ಟೊಂದು ಅಕ್ಕಿಯನ್ನು ಏತಕ್ಕೆ ತಂದಿರುವೇ? ನಮ್ಮ ಕುಟುಂಬಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತರಬೇಕೇ ಹೊರತು ಹೆಚ್ಚಿಗೆ ತರುವುದು ಸೂಕ್ತವಲ್ಲ ಎನ್ನುವ ಮಾತನ್ನು ಹೇಳುತ್ತಾಳೆ. ಧರ್ಮ ಪಾಲಿಸುವ ಹಕ್ಕಿನಲ್ಲೂ ಅನೇಕ ವಿಚಾರಗಳನ್ನು ಅವತ್ತಿನ ದಿನಗಳಲ್ಲಿ ಹೇಳುತ್ತಾರೆ. ನಡೆ-ನುಡಿಗಳು ಒಂದೇ ಆಗಿರಬೇಕು ಎನ್ನುವುದೂ ಕೂಡ ಧರ್ಮ ಪಾಲನೆ ಆಗುತ್ತದೆ ಎಂದು ಹೇಳುತ್ತಾರೆ. ಆವತ್ತಿನ ದಿವಸ ಸಂಸ್ಕೃತಿಗೆ ಮತ್ತು ಶಿಕ್ಷಣದ ಬಗ್ಗೆ ಮಹತ್ವ ಕೊಡುತ್ತಿದ್ದುದನ್ನು ಕಾಣುತ್ತೇವೆ. 12ನೇ ಶತಮಾನದಲ್ಲೇ ಅನುಭವ ಮಂಟಪದ ಮೂಲಕ ಸಂಗೀತಕ್ಕೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ಸಿಕ್ಕಿದೆ ಎನ್ನುವುದನ್ನು ಕಾಣುತ್ತೇವೆ. ಅಂದಿನ ಶರಣರ ಸಾಹಿತ್ಯವೆಲ್ಲವೂ ಹಳಗನ್ನಡದಲ್ಲಿದೆ. ಈ ಗ್ರಂಥಗಳಲ್ಲಿ ಹಕ್ಕುಗಳ ಬಗ್ಗೆ ಪ್ರತಿಪಾದಿಸಿರುವ ಅಂಶಗಳನ್ನು ವಿಶ್ವಸಂಸ್ಥೆ ಅಳವಡಿಸಿಕೊಂಡಿರುವುದನ್ನು ನಾವು ನೋಡುತ್ತೇವೆ. ಅಣ್ಣ ಬಸವಣ್ಣನವರ ವಚನಗಳು ಸ್ಥಾಪಿತವಾಗಿರುವುದು ಅಷ್ಟೇ ಅಲ್ಲ, ಇಂಗ್ಲೆಂಡಿನ ಸಂಸತ್ತಿನ ಮುಂದೆ ಬಸವಣ್ಣನವರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಬಸವಣ್ಣನವರ ಗ್ರಂಥಗಳಲ್ಲಿರುವ ವಿಚಾರಗಳು ವಿವಿಧ ಭಾಷೆಗಳಲ್ಲಿ ಅನುವಾದಗೊಂಡು ಅದು ವಿಶ್ವಕ್ಕೆ ಮಾದರಿಯಾಗಿರುವುದು ಕೂಡ ಕರ್ನಾಟಕದ ಹೆಮ್ಮೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ. ಬಸವಣ್ಣನವರ ತತ್ವಾದರ್ಶಗಳು, ನಿಯಮಗಳು ನಮ್ಮ ಸಂವಿಧಾನಕ್ಕೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರಕವಾಗಿತ್ತು, 12 ನೇ ಶತಮಾನದಲ್ಲಿ ಹೇಳಿದ್ದನ್ನು ವಿಶ್ವಸಂಸ್ಥೆ ಅಳವಡಿಸಿಕೊಂಡಿದೆ ಎಂದರೆ ಅದು ಕರ್ನಾಟಕದ ಹಿರಿಮೆಯನ್ನು ಹೆಚ್ಚಿಸುತ್ತದೆ ಎಂದು ಹೇಳಬಯಸುತ್ತೇನೆ.

(ಮುಂದು . . .)

(473) 17-03-2020 1.20 ಡಿಎಸ್-ಬಿಎನ್ಎಸ್

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಮುಂದು):-**

ಭಾರತ ಸಂವಿಧಾನ ಬಹಳ ಉತ್ತಮವಾಗಿರುವಂತಹ ಸಂವಿಧಾನವನ್ನು ನಮ್ಮ ದೇಶಕ್ಕೆ ಡಾ॥ಬಿ.ಆರ್.ಅಂಬೇಡ್ಕರ್‌ರವರು ಕೊಟ್ಟಿದ್ದಾರೆ. ಅವರು ಅನೇಕ ಸಮಾಜಗಳನ್ನು, ಧರ್ಮಗಳನ್ನು, ಜಾತಿಗಳನ್ನು, ಭಾಷೆಗಳನ್ನು, ಸಂಸ್ಕೃತಿಗಳನ್ನು ಗರ್ಭಿಸಿ ಕರಗಿಸಿಕೊಂಡಿರುವಂತಹ ಭಾರತದ ಪ್ರಗತಿ ಪಥದ ಏಕರೂಪದ ಆಡಳಿತ ಬೇಕಾಗಿತ್ತು. ಆ ಆಡಳಿತಕ್ಕೊಂದು ಸಂವಿಧಾನ ಬೇಕಾಗಿತ್ತು. ಬ್ರಿಟಿಷರು ಆಳ್ವಿಕೆಯನ್ನು ಬಿಟ್ಟು ಹೋಗಿರುವ ಹೆಜ್ಜೆ ಗುರುತುಗಳು ಹಾಗೂ ಭಾರತೀಯ ಅರಸರುಗಳು ಹಾಕಿಕೊಟ್ಟ ಮಾರ್ಗದರ್ಶನಗಳು ತಮ್ಮ ಮುಂದೆ ಇದ್ದವು. ಅರಸರ ಆಳ್ವಿಕೆಯ ಆಡಳಿತ ಸ್ವತಂತ್ರ ಭಾರತಕ್ಕೆ ಹೊಂದಾಣಿಕೆಯಾಗದೆಂದು ಬ್ರಿಟಿಷರು ಅನುಸರಿಸಿದ್ದ ಪದ್ಧತಿಯನ್ನು ಯಥಾವತ್ತಾಗಿ ಪಾಲಿಸುವುದು ಕಷ್ಟಕರವೆಂದು ಯೋಚಿಸಿ ಇವತ್ತು ಲಿಖಿತ ಸಂವಿಧಾನವನ್ನು ನಮಗೆಲ್ಲರಿಗೂ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ದೇಶದಲ್ಲಿರುವಂತಹ ಸುಮಾರು 560 ಸಂಸ್ಥಾನಗಳನ್ನು ಒಂದುಗೂಡಿಸಿ ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅನುವು ಮಾಡಿಕೊಟ್ಟ ಮಾನ್ಯ ವಲ್ಲಭಬಾಯಿ ಪಟೇಲ್‌ರನ್ನು ನಾವು ಇವತ್ತು ನೆನಪಿಸಿಕೊಳ್ಳಬೇಕಾಗುತ್ತದೆ. ಭಾರತ ದೇಶಕ್ಕೆ ಸ್ವತಂತ್ರ ಸಿಕ್ಕಿದ ಮೇಲೆ ಇಲ್ಲಿರತಕ್ಕಂಥ ಎಲ್ಲಾ ರಾಜ್ಯಗಳನ್ನು ಒಂದುಗೂಡಿಸಿ ಭಾರತದಲ್ಲಿ ತಂದಾಗ ಆಗಸ್ಟ್ 15 ರಂದು ಹೈದರಾಬಾದ್ ಕರ್ನಾಟಕವನ್ನು ಹೊರತುಪಡಿಸಿ, ಕಾಶ್ಮೀರದಲ್ಲಿರುವಂತಹ ಒಂದು ರಾಜ್ಯವನ್ನು ಹೊರತುಪಡಿಸಿ ಇಡೀ ಎಲ್ಲಾ ರಾಜ್ಯವನ್ನು ಒಂದುಗೂಡಿಸುವಂತಹ ಕೆಲಸವನ್ನು ಮಾನ್ಯ ವಲ್ಲಭಬಾಯಿ ಪಟೇಲ್‌ರವರು ಕೂಡ ಮಾಡಿದರು. ಕೆಲವು ದಿವಸಗಳಲ್ಲಿ ಹೈದರಾಬಾದ್ ಕರ್ನಾಟಕವೂ ಕೂಡ ಭಾರತ ದೇಶದೊಳಗೆ ಸೇರ್ಪಡೆಯಾಯಿತು. ಇತ್ತೀಚೆಗೆ ಜಮ್ಮು-ಕಾಶ್ಮೀರ ವಿಷಯವೂ ಕೂಡ ನಮ್ಮೆಲ್ಲರ ಗಮನದಲ್ಲಿದೆ. ನಾನು ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಬಯಸುವುದಿಲ್ಲ. ಒಟ್ಟಿನಲ್ಲಿ ಸರ್ವ ಶ್ರೇಷ್ಠವಾಗಿರುವಂತಹ ಗ್ರಂಥ ಸಂವಿಧಾನ. ಇದಕ್ಕೆ ನಾವೆಲ್ಲರೂ ಗೌರವವನ್ನು ಕೊಡಬೇಕು, ಪೂಜ್ಯನೀಯವಾಗಿ ನಾವು ನೋಡಬೇಕೆಂದಾಗ ಮಾತ್ರ ಡಾ॥ಬಿ.ಆರ್.ಅಂಬೇಡ್ಕರ್‌ರವರು ಬರೆದುಕೊಟ್ಟಿರುವ ಸಂವಿಧಾನ ನಮಗೆ ಉಪಯುಕ್ತವಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತಿದ್ದೇನೆ. ಸಂವಿಧಾನ ರಚನೆಯಾಗಿ ಇಷ್ಟು ವರ್ಷವಾದರೂ ಕೂಡ ಭ್ರಷ್ಟಾಚಾರ, ಭಯೋತ್ಪಾದನೆ, ಅನಕ್ಷರತೆ, ಬಡತನ, ಇವೆಲ್ಲವೂ ನಮ್ಮ ದೇಶವನ್ನು ಕಾಡತಕ್ಕಂಥ ಪೆಡಂಭೂತಗಳಾಗಿವೆ. ಇದರ ವಿರುದ್ಧ ನಾವೆಲ್ಲರೂ ಹೋರಾಟ ಮಾಡಬೇಕಾಗಿದೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಟ್ಟಿನಲ್ಲಿ ಇವೆಲ್ಲವನ್ನು ಸರಿದೂಗಿಸುವಂತಹ ಚಿಂತನೆ ಈ ಸದನದ ಮೂಲಕ ಆಗಬೇಕೆನ್ನುವ ಮಾತನ್ನು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**5. ವರದಿಯನ್ನೊಪ್ಪಿಸುವುದು**

**ಶ್ರೀ ಆಯನೂರು ಮಂಜುನಾಥ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 215ರ ರೀತ್ಯಾ ಹಕ್ಕುಬಾಧ್ಯತಾ ಸಮಿತಿಯ 96ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**6. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ**

**ಶ್ರೀ ಎಂ.ಸಿ.ವೇಣುಗೋಪಾಲ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಬಂದು 73 ವರ್ಷಗಳು ಮತ್ತು ಸಂವಿಧಾನ ಬಂದು 70 ವರ್ಷಗಳ ನಂತರ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾರತ ಸ್ವತಂತ್ರವಾದ ನಂತರ ಮೊಟ್ಟಮೊದಲನೇ ಬಾರಿಗೆ ಕರ್ನಾಟಕ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನಲ್ಲಿ ಭಾರತದ ಸಂವಿಧಾನದ ಬಗ್ಗೆ ಯೋಚಿಸಲು, ಮಾತನಾಡಲು ಮತ್ತು ಚರ್ಚಿಸಲು ಆರಂಭಿಸಿದ್ದೇವೆ. ಇದು ಅತ್ಯಂತ ಅದ್ಭುತವಾದ ಕೆಲಸ. ಆದ್ದರಿಂದ ವಿಧಾನ ಪರಿಷತ್ತಿನ ಸಭಾಪತಿಯವರಿಗೂ ಮತ್ತು ವಿಧಾನಸಭೆಯ ಸಭಾಧ್ಯಕ್ಷರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ.

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಸದನದಲ್ಲಿ ಹಿರಿಯರಾದಂತಹ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಆಡಳಿತ ಪಕ್ಷದಲ್ಲಿ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಇದ್ದಾರೆ, ವಿರೋಧ ಪಕ್ಷದಲ್ಲಿ ಮಾನ್ಯ ಎಸ್.ಆರ್.ಪಾಟೀಲ್‌ರವರು ಇದ್ದಾರೆ. ಇವೆಲ್ಲ ನಮಗೆ ಒಂದು ಅನುಭವ ಮತ್ತು ಇದೊಂದು ಅನುಭವ ಮಂಟಪದ ರೀತಿಯಲ್ಲಿದೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಈ ಸದನದಲ್ಲಿರುವಂತಹ ಹಿರಿಯರಿಗೆ ನಾನು ಮನವಿ ಮಾಡುವುದೇನೆಂದರೆ, 70 ವರ್ಷಗಳ ನಂತರ ಸಂವಿಧಾನದ ಬಗ್ಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡುತ್ತಿದ್ದೇವೆ. ನಾನು ಮೊಟ್ಟಮೊದಲ ಬಾರಿಗೆ ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಏನಾದರೂ ತಪ್ಪುಗಳಾದರೆ ಗೌರವಾನ್ವಿತ ಸದಸ್ಯರುಗಳು ಏನು ಅಡಚಣೆ ಮಾಡಬಾರದೆಂದು ನಾನು ವಿನಂತಿ ಮಾಡುತ್ತೇನೆ. ನಾನು ಸಂವಿಧಾನದ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನನ್ನ 35 ವರ್ಷಗಳ ರಾಜಕೀಯ ಜೀವನದಲ್ಲಿ ಒಡನಾಟವಿಟ್ಟುಕೊಂಡಿದ್ದಂತಹ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೀರೇಂದ್ರ ಪಾಟೀಲ್, ಮಾಜಿ ಮಂತ್ರಿಗಳಾದ ದಿವಂಗತ ರಾಜಶೇಖರ್ ಮೂರ್ತಿ, ಶ್ರೀ ಕೆ.ಎಚ್.ಪಾಟೀಲ್, ಶ್ರೀ ಬಿ.ಬಸವಲಿಂಗಪ್ಪ, ಶ್ರೀ ಜಿ.ಮಾದೇಗೌಡ, ಶ್ರೀ ಟಿ.ಎನ್.ನರಸಿಂಹಮೂರ್ತಿ ರವರನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತನಾದ ನನಗೆ ಕಾಂಗ್ರೆಸ್ ಪಕ್ಷದ ರಾಷ್ಟ್ರ ಮತ್ತು ರಾಜ್ಯದ ನಾಯಕರುಗಳು, ಬಹುಮುಖ್ಯವಾಗಿ ಡಾ||ಜಿ.ಪರಮೇಶ್ವರ್ ಅವರು ಉಪಮುಖ್ಯಮಂತ್ರಿಗಳಾಗಿದ್ದರು. ರಾಷ್ಟ್ರ ಮಟ್ಟದ ನಾಯಕರುಗಳಾದ ಶ್ರೀಮತಿ ಸೋನಿಯಾ ಗಾಂಧಿ, ಶ್ರೀ ರಾಹುಲ್ ಗಾಂಧಿಯವರು, ರಾಜ್ಯ ಮಟ್ಟದ ನಾಯಕರುಗಳಾದ ಶ್ರೀ ಸಿದ್ದರಾಮಯ್ಯನವರು, ಶ್ರೀ ದಿನೇಶ್ ಗುಂಡುರಾವ್‌ರವರು, ಶ್ರೀ ಡಿ.ಕೆ.ಶಿವಕುಮಾರ್‌ರವರು ನನಗೆ ಈ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ನಿಮ್ಮ ಮುಂದೆ ನಿಂತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವವರನ್ನು ಸವಿತಾ ಸಮಾಜಕ್ಕೆ ಸೇರಿದ ನಾನು ಕಾಂಗ್ರೆಸ್ ಪಕ್ಷದ ಒಬ್ಬ ಪ್ರತಿನಿಧಿಯಾಗಿ ಅವರೆಲ್ಲರನ್ನು ಸ್ಮರಿಸಬೇಕಾಗಿರುವುದು ನನ್ನ ಕರ್ತವ್ಯ. ಈಗ ನನ್ನ ಸ್ನೇಹಿತರಾದ ಆಡಳಿತ ಪಕ್ಷದ ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪ ರವರು ಮಾತನಾಡುತ್ತಾ 12ನೇ ಶತಮಾನದ ಬಸವಣ್ಣನವರ ಬಗ್ಗೆ ಮಾತನಾಡುತ್ತಿದ್ದರು. ನನಗೆ ತುಂಬಾ ಸಂತೋಷವಾಯಿತು. ಬಸವಣ್ಣನವರು ಅವತ್ತು ಅಂದಿನ ಸಂವಿಧಾನದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅದು political democracy ಆಗಿರಲಿಲ್ಲ. ಆದರೆ ಸಾಮಾಜಿಕ ಕಳಕಳಿಯಲ್ಲಿ ಅವತ್ತು 12ನೇ ಶತಮಾನದಲ್ಲಿ ಬಸವಣ್ಣನವರು ಇದ್ದರು. ಅವರ ಆಸ್ಥಾನದಲ್ಲಿ ಸವಿತಾ ಸಮಾಜದಿಂದ ಅಡಪದ ಅಪ್ಪಣ್ಣ, ಅಂಬಿಗರ ಚೌಡಯ್ಯ (ಬೆಸ್ತ), ಮಾದಾರ ಚೆನ್ನಯ್ಯ (ಎಸ್‌ಸಿ), ಮಡಿವಾಳ ಮಾಚಯ್ಯ (ದೋಬಿ), ಅಲ್ಲಮ ಪ್ರಭು (ಎಸ್‌ಟಿ), ಅಕ್ಕಮಹಾದೇವಿ (ಮಹಿಳೆ) ಪ್ರಾತಿನಿಧ್ಯ ಇತ್ತು. ಕುಲಕಸಬು ಆಧಾರಿತ ಸಮಾಜದವರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದರು. ಆದರೆ ಇವತ್ತಿನ ಸರ್ಕಾರಗಳಲ್ಲಿ ಇದು ಮರೀಚಿಕೆಯಾಗಿದೆ. ಇದನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಇವತ್ತಿನ ಸರ್ಕಾರಗಳಲ್ಲಿ ಇಂತಹ ಸಮಾಜಗಳು ವಿಧಾನ ಪರಿಷತ್ತಿಗೆ, ವಿಧಾನಸಭೆಗೆ ಬರುವುದು ಮರೀಚಿಕೆಯಾಗಿದೆ. ನಾವು ಸಂವಿಧಾನದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇದಕ್ಕೆ ಹೆಚ್ಚಿನ ಒತ್ತು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನಾವು ಸಾಮಾನ್ಯವಾಗಿ ತಿಳಿದುಕೊಂಡಿದ್ದು ಸಂವಿಧಾನವೆಂದರೆ ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವವೆಂದರೆ 5 ವರ್ಷಕ್ಕೆ ಒಮ್ಮೆ ಮತ ಹಾಕುವುದು, ಹೊಸ ಸರ್ಕಾರ ತರುವುದಕ್ಕಷ್ಟೇ ಸೀಮಿತ. ಇದು ಸಾಮಾನ್ಯ ಜನರ ಕಲ್ಪನೆಯಾಗಿದೆ. ಆದರೆ Directive Principles, Fundamental Rights ಬಗ್ಗೆ ಆರ್ಥಿಕ, ಸಾಮಾಜಿಕ ನ್ಯಾಯದ ಬಗ್ಗೆ, ಸಮಾನತೆಯ ಬಗ್ಗೆ ಅದ್ಭುತವಾದ ವಿಚಾರ ಸಂವಿಧಾನದಲ್ಲಿ ಅಡಗಿರುವುದನ್ನು ಇಂದಿನ ಯುವ ಪೀಳಿಗೆಗೆ, ವಿದ್ಯಾರ್ಥಿಗಳಿಗೆ ನಾವು ತಿಳಿಸಬೇಕಾಗುತ್ತದೆ. ಈ ಸಂವಿಧಾನದ ಬಗ್ಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡುವುದಕ್ಕೆ 70 ವರ್ಷಗಳಾಯಿತು. ಆದರೆ ಇವತ್ತು ಕಾಲೇಜು ಮಟ್ಟದಲ್ಲಿ ಕೇವಲ ಇತಿಹಾಸ ಮತ್ತು ರಾಜಕೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಮಾತ್ರ ಸಂವಿಧಾನದ ಬಗ್ಗೆ ಇದೆ. ನನ್ನ ಮನವಿ ಏನೆಂದರೆ, ಇವತ್ತು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆಯಾದ ನಂತರ ಇದರ ಕುರಿತಾಗಿತಾವು ನಿರ್ದೇಶನ ಕೊಡಬೇಕು ಮತ್ತು ಸರ್ಕಾರ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೀರ್ಮಾನ ತೆಗೆದುಕೊಳ್ಳಬೇಕು. ಎಲ್ಲಾ ಮಟ್ಟದ ಶಾಲಾ–ಕಾಲೇಜುಗಳಲ್ಲಿ ಶಿಕ್ಷರುಗಳು ಪ್ರಜಾಪ್ರಭುತ್ವದ ಸಂವಿಧಾನವನ್ನು ಮಕ್ಕಳಿಗೆ ತಿಳಿಸುವಂತಾಗಬೇಕು. ಅದು ಯಾವುದೇ ಕೋರ್ಸ್ ಆಗಿರಲಿ, ಮೆಡಿಕಲ್, ಇಂಜಿನಿಯರಿಂಗ್ ಕೋರ್ಸ್ ಆಗಿರಲಿ, ವಿಜ್ಞಾನ ಪದವಿ ಆಗಿರಲಿ, ಈ ಸಂವಿಧಾನವನ್ನು ಅರಿಯಬೇಕಾಗಿದೆ. ಇದಕ್ಕೆ ಕಾರಣವೇನೆಂದರೆ, ಪ್ರಜಾಪ್ರಭುತ್ವವೆಂದರೆ, 'By the people, For the people, To the people' ಎಂದು ಆಗಿದೆ. ಇವತ್ತಿನ ಪಸ್ತುತ ಪರಿಸ್ಥಿತಿಯಲ್ಲಿ ಏನಾಗಿದೆ ಎಂದರೆ, 'By the money, For the power, To the self'. ಪ್ರಜಾಪ್ರಭುತ್ವ ಎನ್ನುವುದು ಇವತ್ತು ಈ ಪರಿಸ್ಥಿತಿಯಾಗಿದೆ. ಸ್ವಾತಂತ್ರ್ಯದ ನಂತರ, ಗಣರಾಜ್ಯದ ನಂತರ, ಈ ದೇಶಕ್ಕೆ ಸಂವಿಧಾನ, ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರ ಚಿಹ್ನೆ, ಗಡಿ ಗುರುತನ್ನು ಈ ಸಂವಿಧಾನದ ಅಡಿಯಲ್ಲಿ ನೀಡಲಾಯಿತು. ಇದನ್ನು ಸ್ಮರಿಸಬೇಕಾಗುತ್ತದೆ. ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು 1950 ಜನವರಿ 26 ರಂದು ಭಾರತದ ಪ್ರಜಾಪ್ರಭುತ್ವಕ್ಕೆ ಒಂದು ಜಾತ್ಯಾತೀತತೆ, ಸಾಮಾಜಿಕ ನ್ಯಾಯ, ಸಿದ್ಧಾಂತಗಳ ಮೇಲೆ ಸಂವಿಧಾನದ ರೂಪ ಕೊಟ್ಟರು. ಸಂವಿಧಾನ ಎಷ್ಟೇ ಉತ್ತಮವಾಗಿರಲಿ, ಅದನ್ನು ನಿರ್ವಹಿಸುವವರು ಕೆಟ್ಟವರಾಗಿದ್ದರೆ ಅದು ಕೆಟ್ಟದಾಗಿ ಬಿಡುತ್ತದೆ ಎಂದು ಡಾ||ಬಿ.ಆರ್.ಅಂಬೇಡ್ಕರ್ ಅವರ ಮಾತುಗಳನ್ನು ಖಂಡಿತವಾಗಿಯೂ ನಾವಿಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ನಾನು ಎಲ್ಲಾ ಸದಸ್ಯರುಗಳಿಗೆ ಮನವಿ ಮಾಡುವುದೇನೆಂದರೆ, ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನದ ಪರಿಸ್ಥಿತಿ ಮುಂದೆ ಯಾವ ರೀತಿ ದುರುಪಯೋಗಪಡಿಸಿಕೊಳ್ಳುತ್ತಾರೆ ಎಂದು ಅವತ್ತೇ ಹೇಳಿದ್ದರು. ಈ ಸಂವಿಧಾನ ಎಷ್ಟೇ ಉತ್ತಮವಾಗಿರಲಿ, ಅದನ್ನು ನಿರ್ವಹಿಸುವವರು ಕೆಟ್ಟವರಾಗಿದ್ದರೆ ಅದು ಕೆಟ್ಟದಾಗಿ ಬಿಡುವುದು ಎಂದು ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಳಿದ್ದರು. ಆದ್ದರಿಂದ "ಕ್ಷೀಣಿಸುತ್ತಿರುವ ಪ್ರಜಾಪ್ರಭುತ್ವ, ಹಕ್ಕುಗಳ ದಮನ, ಗಂಡಾಂತರದಲ್ಲಿ ರೂಲ್ ಆಫ್ ಲಾ, ಪ್ರಜಾಪ್ರಭುತ್ವ ಸಂಸ್ಥೆಗಳ ಸ್ವಾಯತ್ತತೆಗೆ ಧಕ್ಕೆ, ಆಪತ್ತಿನಲ್ಲಿ ಜಾತ್ಯಾತೀತತೆ, ಧರ್ಮ ನಿರಪೇಕ್ಷತೆ, ಮಾಯವಾಗುತ್ತಿರುವ ಕಲ್ಯಾಣ ರಾಜ್ಯದ ಕಲ್ಪನೆ, ಅಪ್ರಸ್ತುತತೆ ಆಗುತ್ತಿರುವ ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳ ಉಲ್ಲಂಘನೆ" ಇದನ್ನು ನಾವು ಇವತ್ತು ಗಮನಹರಿಸಬೇಕಾಗುತ್ತದೆ. ಸಂವಿಧಾನದ ಬಗ್ಗೆ ಚರ್ಚೆ ಮಾಡಿ ಇಷ್ಟಕ್ಕೆ ಸೀಮಿತವಾಗಬಾರದು. ಈ ಸಂವಿಧಾನವನ್ನು ಉಪಯೋಗಿಸುವಂಥವರು, ಅನುಷ್ಠಾನ ಮಾಡುವಂಥವರು, ಯಾರು ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಅವರು ಒಳ್ಳೆಯ ಜನರಾಗಿರಬೇಕು, ವಿಶಾಲ ಹೃದಯ ಮತ್ತು ವಿಶಾಲ ಮನೋಭಾವ ಇರಬೇಕು. ಆಗ ಮಾತ್ರ ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬರೆದಿರುವಂತಹ ಸಂವಿಧಾನ ಈ ಸಮಾಜಕ್ಕೆ ಒಳ್ಳೆಯ ಸಂವಿಧಾನವಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇವು ನಮ್ಮ ಮುಂದಿರುವ ದೊಡ್ಡ ಸವಾಲುಗಳು. ಆದ್ದರಿಂದ ಜನರ ಕಲ್ಯಾಣಕ್ಕಾಗಿ 104 ಬಾರಿ ನಮ್ಮ ಸಂವಿಧಾನ ತಿದ್ದುಪಡಿ ಆಗಿದೆ. ಇದನ್ನು ನಾವು ಅರಿಯಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಹೇಳಬಯಸುತ್ತಿದ್ದೇನೆ. "ಜಗತ್ತಿನ ನ್ಯಾಯಶಾಸ್ತ್ರ ತಜ್ಞರ ಪ್ರಕಾರ ಭಾರತದ ಸಂವಿಧಾನ ಜಗತ್ತಿನ ಅತಿ ದೊಡ್ಡ ಸಂವಿಧಾನ ಮಾತ್ರವಲ್ಲದೆ, ಅದು ಅತ್ಯಂತ ಉತ್ತಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂವಿಧಾನ ಹಾಗೂ ಅತ್ಯಂತ ಪ್ರಸ್ತುತ ಸಂವಿಧಾನವಾಗಿದೆ." (ಮುಂದು)

(474) 7-3-2020/1-30/bkp-gr

**ಶ್ರೀ ಎಂ.ಸಿ.ವೇಣುಗೋಪಾಲ್(ಮುಂದು. .)**

ಭಾರತದ ಸಂವಿಧಾನ ಜಗತ್ತಿನ ಅತಿ ದೊಡ್ಡ ಸಂವಿಧಾನ ಮಾತ್ರವಲ್ಲದೆ, ಅದು ಅತ್ಯಂತ ಉತ್ತಮ ಸಂವಿಧಾನ ಹಾಗೂ ಅತ್ಯಂತ ಪ್ರಸ್ತುತ ಸಂವಿಧಾನವಾಗಿದೆ. According to the jurist of the Indian Constitution, this is not only the best Constitution, it is the most relevant Constitution in the world. ಇಂತಹ ಸಂವಿಧಾನ ಯಾವ ದೇಶದಲ್ಲಿಯೂ ಇಲ್ಲ. ಇಂತಹ ಸಂವಿಧಾನವನ್ನು ನಾವು ಸದುಪಯೋಗ ಪಡಿಸಿಕೊಳ್ಳಬೇಕು. ಇದರ ಅಡಿಯಲ್ಲಿ ಕೆಲಸ ಮಾಡುವ ನಾವುಗಳು ಜಾಗೃತರಾಗಿರಬೇಕು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವ ತತ್ವವನ್ನು ಅನುಸರಿಸಿ, ಈ ಸಂವಿಧಾನವನ್ನು ನೀವು ಮಾಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಭಾರತ ದೇಶದಲ್ಲಿ ವಿವಿಧ ಸಮಾಜ, ವಿವಿಧ ಸಮುದಾಯ, ವಿವಿಧ ವರ್ಗಗಳಿವೆ. ಹಿಂದುಗಳಿಗೆ ಭಗವದ್ಗೀತೆ ಇದ್ದಂತೆ, ಮುಸ್ಲಿಂರಿಗೆ ಖುರಾನ್ ಇದ್ದಂತೆ, ಕ್ರೈಸ್ತರಿಗೆ ಬೈಬಲ್ ಇದ್ದಂತೆ, ಬೌದ್ಧರಿಗೆ ಬುದ್ಧನ ಬೋಧನೆ ಇದ್ದಂತೆ, ಸಿಖ್ಖರಿಗೆ ಗುರುಗ್ರಂಥ ಇದೆ. ಇವರೆನ್ನೆಲ್ಲಾ ಒಳಗೊಂಡ ಭಾರತ ದೇಶದ ಎಲ್ಲಾ ಪ್ರಜೆಗಳಿಗೆ ಸಂವಿಧಾನವೇ ಪವಿತ್ರ ಗ್ರಂಥ, ಮಹಾನ್ ಗ್ರಂಥ. ಆದ್ದರಿಂದ, ನಾವೆಲ್ಲರು ಈ ಸಂವಿಧಾನವನ್ನು ಅರಿತು, ಜನಸಾಮಾನ್ಯರಲ್ಲಿ ಅರಿವು ಮೂಡಿಸಬೇಕು. ಆದರೆ, ಅಧಿಕಾರಕ್ಕೆ ಬಂದರೆ ಸಂವಿಧಾನವನ್ನು ಬದಲಾಯಿಸುತ್ತೇನೆ ಎಂದು ಹೇಳಿಕೆ ನೀಡುತ್ತಿರುವುದು ದುರದೃಷ್ಟಕರ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರು 5 ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, 70 ವರ್ಷಗಳು ಕಳೆದ ಮೇಲೆ ಈ ಸಂವಿಧಾನದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಆದರೆ, ಕೆಲವು ಮಹಾನ್ ವ್ಯಕ್ತಿಗಳನ್ನು ಮಹಾನ್ ವ್ಯಕ್ತಿಗಳೆಂದು ಹೇಳಬೇಕೋ ಅಥವಾ ಏನೆಂದು ಹೇಳಬೇಕೋ ಗೊತ್ತಾಗುತ್ತಿಲ್ಲ. ಅಧಿಕಾರಕ್ಕೆ ಬಂದರೆ ನಾವು ಸಂವಿಧಾನವನ್ನೇ ಬದಲಾವಣೆ ಮಾಡುತ್ತೇವೆಂದು ಹೇಳುತ್ತಾರೆ. ಇದು ಎಂತಹ ದುರದೃಷ್ಟಕರ. ಇದರ ಬಗ್ಗೆ ನಾವು ಎಚ್ಚೆತ್ತುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಹೀಗಾಗಿ, ಇದರ ಬಗ್ಗೆ ಈ ಪೀಠಕ್ಕೆ ಈ ಒಂದು ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

ಬದಲಾಯಿಸಿದರೆ ಪರ್ಯಾಯ ಏನು? ಉದ್ಯೋಗ, ಶಿಕ್ಷಣ, ಮಹಿಳೆಯರಿಗೆ ಸಮಪಲು ಕೊಡುತ್ತಿದ್ದೇವೆಯೋ? ಇಲ್ಲದೇ ಹೋದರೆ ಅರಾಜಕತೆ ಉಂಟಾಗುತ್ತದೆ. ಸಾಮಾಜಿಕ ನ್ಯಾಯ, ಸಂವಿಧಾನವನ್ನು ಕಳೆದುಕೊಳ್ಳುತ್ತೇವೆ. ಮತ್ತೆ ಗುಲಾಮರಂತೆ ಬದುಕುವ ಪರಿಸ್ಥಿತಿ ಬರುತ್ತದೆ.

ಸಂವಿಧಾನದ 70ನೇ ವರ್ಷದ ವರ್ಷಾಚರಣೆಯ ಸಂಭ್ರಮವನ್ನು ಈ ಸದನ ವಿಶೇಷ ಚರ್ಚೆಯ ಮೂಲಕ ಸಂವಿಧಾನದ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಮುಂದಾಗಿದೆ. ಈ ಒಂದು ಅದ್ಭುತ ಕಾರ್ಯಕ್ರಮ ಸದನದ ನಡವಳಿಯ ಇತಿಹಾಸ ಪುಟದಲ್ಲಿ ದಾಖಲಾಗುತ್ತಿದೆ.

ಜಗತ್ತಿನ ಅತೀ ಶ್ರೇಷ್ಠ ಸಂವಿಧಾನ ನಮ್ಮದು. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕೊಡುಗೆಯನ್ನು ಸ್ಮರಿಸಿದಷ್ಟು ನಮಗೆ ಆಶ್ಚರ್ಯ ಕೂಡಾ ಆಗ್ತಾ ಇದೆ. ಕಾರಣ, ಈ ಸಂವಿಧಾನ ರಚನೆಯಲ್ಲಿ ಇಷ್ಟೊಂದು ಆಳವಾಗಿ, ದೀರ್ಘವಾಗಿ ಆಲೋಚಿಸಿ ಯಾವ ಅಂಶಗಳೂ ಬಿಟ್ಟು ಹೋಗದ ರೀತಿಯಲ್ಲಿ ರಚಿಸಿದ್ದು ಇದು ಪವಾಡ ರೂಪದಲ್ಲಿ ನನಗೆ ಗೋಚರಿಸುತ್ತಿದೆ.

ನಾನು ಯಾವ ಪಕ್ಷದ ಯಾವ ಸಮಾಜದ ಪ್ರತಿನಿಧಿಯಾಗಿ ಇಲ್ಲಿ ಇದ್ದೇನೆ ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ಬಂದು 73 ವರ್ಷಗಳಾದರೂ ನಮ್ಮ ಸಮಾಜವು, ನಾನು ಯಾವ ಸಮಾಜದಿಂದ ಬಂದಿದ್ದೇನೆ, ಅದು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ. ಅಸ್ಪೃಶ್ಯತೆ ಎನ್ನುವುದು ನಮ್ಮಲ್ಲಿ ಸಮಾಜಕ್ಕೂ ಇದೆ. ನಾವು ದೃಷ್ಟಿಯಲ್ಲಿ ಅಸ್ಪೃಶ್ಯರಾಗಿದ್ದೇವೆ. ಆದ್ದರಿಂದ, ಪ್ರಸ್ತುತ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರಗಳು ಗಮನಹರಿಸಬೇಕಾದದ್ದು ಅತ್ಯಗತ್ಯ.

ಇವತ್ತು ನಾನು ಈ ಸದನದಲ್ಲಿ ಮಾತನಾಡುತ್ತಾ, ಏನು ಹೇಳುತ್ತೇನೆಂದರೆ ಅಸ್ಪೃಶ್ಯತೆ ಎನ್ನುವುದು ನಾನು ಯಾವ ಜನಾಂಗದಿಂದ ಬಂದಿದ್ದೇನೆ, ನಮ್ಮನ್ನು ದೃಷ್ಟಿಯಲ್ಲಿ ಅಸ್ಪೃಶ್ಯರೆಂದು ನೋಡುವ ಪರಿಸ್ಥಿತಿ ಇದೆ. ಈ ಬಗ್ಗೆ ನಮ್ಮ ಸರ್ಕಾರಗಳು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ, ನಾನು ವಿಧಾನ ಪರಿಷತ್ತಿನ ಸದಸ್ಯನಾದ ಮೇಲೆ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿವಾಗಿ ನಾನು ಏನು ಮಾಡಿದೆ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕಾಗುತ್ತದೆ. ನಾನು ಈ ಹಿಂದಿನ ಸಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರನ್ನು ಮತ್ತು ಡಾ॥ ಜಿ.ಪರಮೇಶ್ವರ್‌ರವರನ್ನು ಭೇಟಿ ಮಾಡಿರುತ್ತೇನೆ. ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ಪಕ್ಷಗಳ ಸಮಿಶ್ರ ಸರ್ಕಾರದ ಸಹಕಾರದಿಂದ ಮೊಟ್ಟ ಮೊದಲನೇ ಬಾರಿಗೆ ನಮ್ಮ ಸಮಾಜದ ಸವಿತಾ ಮಹರ್ಷಿ ಜಯಂತಿಯನ್ನು ಮಾಡಿದೆ. ಸ್ವಾತಂತ್ರ್ಯ ಬಂದು 73 ವರ್ಷಗಳು ಕಳೆದರೂ ನಮ್ಮ ಸಮಾಜಕ್ಕೆ ಸವಿತಾ ಅಭಿವೃದ್ಧಿ ನಿಗಮ ಇರಲಿಲ್ಲ. ತದನಂತರ ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರನ್ನು ನಮ್ಮ ಸಮಾಜದ ಬಗ್ಗೆ ಭೇಟಿ ಮಾಡಿದೆ. ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರನ್ನು ಭೇಟಿ ಮಾಡಿ ಅಸ್ತಿತ್ವಕ್ಕೆ ಬಂದಿದ್ದಂತಹ ಸವಿತಾ ಸಮಾಜದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿವೃದ್ಧಿ ನಿಗಮಕ್ಕೆ 2 ಕೋಟಿ ರೂಪಾಯಿಗಳ ಅನುದಾನವನ್ನು ಪಡೆದೆವು. ಇದೇ ವಿಚಾರವಾಗಿ ನಿನ್ನೆ ಸಹಿತ ಮಾನ್ಯ ಸಚಿವರಾದ ಶ್ರೀ ಬಿ.ಶ್ರೀರಾಮಲುರವರಿಗೆ ಭೇಟಿ ಮಾಡಿ ನಮ್ಮ ಈ ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನವನ್ನು ಕೊಟ್ಟು, ಈ ಸಮಾಜ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದೆ ಬರಲು ಅವಕಾಶ ಮಾಡಿಕೊಡಿ ಎಂದವರನ್ನು ನಾನು ಕೇಳಿದೆ. ಅದೇ ರೀತಿಯಲ್ಲಿ ಇಲ್ಲಿ ಮಾನ್ಯ ಸದಸ್ಯರಾದ ಡಾ॥ ಜಯಮಾಲರವರು ಮತ್ತು ಮಾನ್ಯ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪುರ್‌ರವರು ಸಚಿವರು ಇದ್ದಂತಹ ಸಂದರ್ಭದಲ್ಲಿ ಅವರ ಹತ್ತಿರ ಹೋಗಿ ನಮ್ಮ ಸಮಾಜದ ಅಭಿವೃದ್ಧಿ ಬಗ್ಗೆ ಮನವಿ ಮಾಡಿದೆ. ನಮ್ಮ ಸಮಾಜಕ್ಕೆ ಆಶೀರ್ವಾದ ಮಾಡಿದವರಿಗೆ, ಸಹಾಯ ಮಾಡಿದವರನ್ನು ನಾವು ಇಂದು ನೆನಪು ಮಾಡಿಕೊಳ್ಳದಿದ್ದರೆ ತಪ್ಪಾಗುತ್ತದೆ. ಡಾ॥ ಜಯಮಾಲರವರು ಮತ್ತು ಮಾನ್ಯ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪುರ್‌ರವರನ್ನು ನಾನು ಭೇಟಿಯಾದಂತಹ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದರು. ಅವರ ಮೂಲಕ ನಮ್ಮ ಸಮಾಜದ ಸವಿತಾ ಮಹರ್ಷಿ ಜಯಂತಿಯನ್ನು ಆಚರಣೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟರು. ಆದ್ದರಿಂದ, ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದೇ ರೀತಿ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಈ ಸಮಾಜದಿಂದ ಒಬ್ಬರನ್ನು ಕೆ.ಪಿ.ಎಸ್.ಸಿ., ಸದಸ್ಯರನ್ನಾಗಿ ಮಾಡಿದರು. ಮತ್ತೆ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಸಣ್ಣ ಸಮಾಜವಾದ ಮಡಿವಾಳ ಸಮಾಜವನ್ನು ಹುಡುಕಿ ಆ ಸಮಾಜದಿಂದ ಒಬ್ಬರನ್ನು ಕೆ.ಪಿ.ಎಸ್.ಸಿ., ಸದಸ್ಯರನ್ನಾಗಿ ಮಾಡಿದರು. ಇತಿಹಾಸದಲ್ಲಿ ಸ್ವಾತಂತ್ರ್ಯ ಮತ್ತು ಸಂವಿಧಾನ ಬಂದು 70-73 ವರ್ಷಗಳಾದರೂ ಸಹ ಇದು ಸಾಧ್ಯವಾಗಿರಲಿಲ್ಲ. ಇವತ್ತು ಸಂವಿಧಾನವನ್ನು ಚಾಲ್ತಿ ಮಾಡುವಂತಹವರು, ಜಾರಿಗೆ ತಂದು ಅನುಷ್ಠಾನ ಮಾಡುವಂತಹವರಿಗೆ ವಿಶಾಲವಾದ ಹೃದಯ ಇರಬೇಕು. ವಿಶಾಲವಾದ ಮನೋಭಾವ ಇರಬೇಕು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವ ತತ್ವದಲ್ಲಿ ಹೋದರೆ ಮಾತ್ರ ಈ ಸರ್ಕಾರಗಳಾಗಲಿ, ಮತ್ತೊಂದು ಆಗಲಿ, ಎಲ್ಲರಿಗೂ ಸಹ ಸಮಾನತೆಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಆದರೆ, ಈ ಸಂದರ್ಭದಲ್ಲಿ ಇಂತಹ ಮಹನೀಯರುಗಳನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ.

**ಉಪ ಸಭಾಪತಿಯವರು:-** ತಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ಬೇರೆಯವರಿಗೆ 10 ನಿಮಿಷಗಳು ಹೆಚ್ಚುವರಿಯಾಗಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಂತೆ ನನಗೂ ಕೊಡಿ. ನ್ಯಾಯ ಸಮ್ಮತವಾಗುತ್ತದೆ. ಈ ಸಮಾಜದವರು ಮೊಟ್ಟಮೊದಲನೆ ಬಾರಿಗೆ ರಾಜ್ಯದ ಈ ವಿಧಾನ ಪರಿಷತ್ತಿನಲ್ಲಿ ಮಾತನಾಡಲಿಕ್ಕೆ ಅವಕಾಶ ಸಿಕ್ಕಿರುವಂತಹದ್ದಾಗಿದೆ. ಆದರೆ, ಬೇರೆ ಬೇರೆಯವರಿಗೆ ಮಾತನಾಡಲಿಕ್ಕೆ ಅವಕಾಶ ಇದೆ. ಆದರೆ, ಈ ಸಮುದಾಯದ ವತಿಯಿಂದ ಮಾತನಾಡಲಿಕ್ಕೆ ಅವಕಾಶ ಸಿಕ್ಕಿರುವುದರಿಂದ ವಿಶೇಷ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಭಾಪತಿಯವರಲ್ಲಿ ಮನವಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೇ ಸಂದರ್ಭದಲ್ಲಿ ನಾನು ಮಾನ್ಯ ಶ್ರೀ ವೀರಪ್ಪ ಮೊಯಿಲಿರವರನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅವರು ಕಾರ್ಕಾಳ ಕ್ಷೇತ್ರದಿಂದ ನಮ್ಮ ಸಮುದಾಯದ ಶ್ರೀ ಗೋಪಾಲ್ ಬಂಡಾರಿರವರನ್ನು ಶಾಸಕರನ್ನಾಗಿ ಮಾಡಿದರು. ಅದೇ ರೀತಿಯಲ್ಲಿ ಬಾಗೇಪಲ್ಲಿ ವಿಚಾರವಾಗಿಯೂ ಸಹ ಹೇಳಲಿಕ್ಕೆ ಬಯಸುತ್ತೇನೆ. ಇಲ್ಲಿ ಒಂದು ವಿಚಿತ್ರ ಇದೆ, ಅದನ್ನು ಹೇಳುತ್ತೇನೆ. ಬಾಗೇಪಲ್ಲಿಯಿಂದ ಶ್ರೀ ನಾರಾಯಣಸ್ವಾಮಿಯವರಿಗೆ ಸೀಟ್ ಕೊಟ್ಟು, ಶಾಸಕರನ್ನಾಗಿ ಮಾಡಿದರು.

**(ಗೊಂದಲ)**

**ಉಪ ಸಭಾಪತಿಯವರು:-** ನೀವು ಅಲ್ಲಿನ ಜನರಿಗೆ ಕೃತಜ್ಞತೆಯನ್ನು ಹೇಳಬೇಕು.

**ಶ್ರೀ ಎಂ.ಸಿ.ವೇಣುಗೋಪಾಲ್:-** ಅವರು ಅವಕಾಶ ಮಾಡಿಕೊಟ್ಟಿದ್ದಕ್ಕೆ ಜನರು ಓಟು ಹಾಕಿದರು. ಅವಕಾಶ ಮಾಡಿಕೊಡದಿದ್ದರೆ ಎಲ್ಲಿ ಓಟು ಹಾಕುತ್ತಿದ್ದರು?

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರು ಸಂವಿಧಾನದ ವಿಷಯವನ್ನು ಬಿಟ್ಟು ಬೇರೆ ಕಡೆ ಹೋಗುತಿದ್ದಾರೆ.

**ಶ್ರೀ ಎಂ.ಸಿ.ವೇಣುಗೋಪಾಲ್:-** ಅವರು ಅವಕಾಶ ಮಾಡಿಕೊಡದಿದ್ದರೆ, ಜನರು ಹೇಗೆ ಓಟು ಹಾಕುತ್ತಿದ್ದರು? ಜನರು ಮುಗ್ದರು. ಆ ಸಂದರ್ಭದಲ್ಲಿ ಇವರಿಗೆ ಅವಕಾಶ ಮಾಡಿಕೊಟ್ಟರು. ಆ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಯಾವರೀತಿಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಗುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳಲಿಕ್ಕೆ ಬಯಸುತ್ತೇನೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಸೇರಿ ಒಂದೇ ಜಿಲ್ಲೆ ಇತ್ತು.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರು ಸಂವಿಧಾನದ ಬಗ್ಗೆ ಮಾತನಾಡಬೇಕು.

**ಶ್ರೀ ಎಂ.ಸಿ.ವೇಣುಗೋಪಾಲ್:-** ನಾನು ಸಂವಿಧಾನದ ವಿಚಾರವಾಗಿಯೇ ಮಾತನಾಡುತ್ತೇನೆ. ಇದು ಸಂವಿಧಾನಕ್ಕೆ ಹತ್ತಿರವಾದಂತಹ ವಿಚಾರ. ಈ ಅವಕಾಶ ವಂಚಿತರು ಹೇಗೆ ಆಗುತ್ತಾರೆನ್ನುವುದಕ್ಕೆ ನಾನು ಹೇಳುತ್ತೇನೆ. ಮಾನ್ಯ ಶ್ರೀ ವೈ.ಎ.ನಾರಾಯಣಸ್ವಾಮಿಯವರು ಇಲ್ಲಿಯೇ ಇದ್ದಾರೆ. ಇವರು ಸಹ ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಕೋಲಾರ-ಚಿಕ್ಕಬಳ್ಳಾಪುರ ಸೇರಿ ಒಂದೇ ಜಿಲ್ಲೆ ಇದ್ದು, ಅಲ್ಲಿ 11 ವಿಧಾನಸಭಾ ಕ್ಷೇತ್ರಗಳಿದ್ದವು. 1985 ರಲ್ಲಿ ಸವಿತ ಸಮಾಜದವರಾದ ಶ್ರೀ ನಾರಾಯಣಸ್ವಾಮಿ ಅವರಿಗೆ 11 ಸೀಟ್‌ಗಳಲ್ಲಿ ಒಂದು ಸೀಟ್ ಅನ್ನು ಕೊಟ್ಟಾಗ ಅವರಿಗೆ ಠೇವಣಿ ಬರುವುದಿಲ್ಲವೆಂದು ಕೆಲವರು ಹೇಳಿದರು. ಆದರೆ, 11 ಕ್ಷೇತ್ರಗಳಲ್ಲಿ ಪಕ್ಷದ ವತಿಯಿಂದ ಗೆದ್ದವರು ಶ್ರೀ ನಾರಾಯಣಸ್ವಾಮಿ ಅವರು ಒಬ್ಬರೇ. 10 ಜನರು ಸೋತರು. ಇದಕ್ಕೆ ಇತಿಹಾಸ ಇದೆ. ಇತಿಹಾಸವನ್ನು ಹೇಳುವವರು ಯಾರು? ನಮ್ಮ ಇತಿಹಾಸವನ್ನು ನಾವೇ ಹೇಳಬೇಕು.

**ಉಪ ಸಭಾಪತಿಯವರು:-** ಬಹಳ ಜನ ಮಾತನಾಡುವವರಿದ್ದಾರೆ, ಬೇಗ ಮುಗಿಸಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ನಾವು ಸಂವಿಧಾನದ ಬಗ್ಗೆ ಮಾತನಾಡುವಾಗ ಸಂವಿಧಾನಕ್ಕೆ ಗೌರವ ಕೊಡುವಂತಹದ್ದು, ಶಕ್ತಿ ಕೊಡುವಂತಹದ್ದು ಕಾಂಗ್ರೆಸ್ ಪಕ್ಷ ಒಂದೇ ಆಗಿದೆ. ಕಾರಣ ಏನೆಂದರೆ, ದಿವಂಗತ ಧರ್ಮಸಿಂಗ್‌ರವರು ಆಗಬಹುದು, ಅವರು ಅತ್ಯಂತ ಸಣ್ಣ ಸಮಾಜದಿಂದ ಬಂದವರು. ಶ್ರೀ ವೀರಪ್ಪ ಮೊಯಿಲಿ ಅವರು ಸಣ್ಣ ಸಮಾಜದಿಂದ ಬಂದವರು, ಅದೇ ರೀತಿಯಲ್ಲಿ ಹಿಂದುಳಿದ ವರ್ಗದ ಶ್ರೀ ಸಿದ್ದರಾಮಯ್ಯನವರು ಆಗಬಹುದು, ದಿವಂಗತ ಬಂಗಾರಪ್ಪನವರು ಆಗಬಹುದು. . .

**ಡಾ:ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವ ರೀತಿ ಹೇಗಿದೆ ಎಂದರೆ ಬೇರೆ ಪಕ್ಷದವರು ಈ ಸಮುದಾಯಕ್ಕೆ ಗೌರವ ಕೊಡುವುದಿಲ್ಲ ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ. ಹಾಗಾದರೆ, ಶ್ರೀ ಎಸ್.ಎಲ್.ಭೋಜೇಗೌಡರ ಪಕ್ಷವೂ ಕೊಡುವುದಿಲ್ಲ ಎಂದರ್ಥ. ಹಾಗಾದರೆ, ಕಾಂಗ್ರೆಸ್ ಪಕ್ಷ ಮಾತ್ರ ಈ ಸಮಾಜಕ್ಕೆ ಗೌರವ ಕೊಡುತ್ತದೆ ಎಂದರ್ಥ.

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀಯುತ ನಾರಾಯಣಸ್ವಾಮಿಯವರೇ, ಅವರಿಗೆ ತಮ್ಮ ಭಾಷಣ ಮುಗಿಸಲಿಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಮಾನ್ಯ ಸದಸ್ಯರುಗಳು ಸಹಕಾರ ಕೊಡಬೇಕು. ನಾನು ಇಷ್ಟೆಲ್ಲಾ ಹೇಳಿಕೊಂಡು, ಮೊದಲೇ ಮನವಿ ಮಾಡಿಕೊಂಡು ತೊಂದರೆ ಕೊಡಬೇಡಿ ಎಂದು ಹೇಳಿದರೂ ಸಹ ತೊಂದರೆ ಕೊಟ್ಟರೆ ನಾನು ಏನು ಮಾಡಲಿ? ನನ್ನದು ಏನಾದರೂ ಸಣ್ಣ ತಪ್ಪುಗಳಿದ್ದರೆ ಅದನ್ನು ಬದಲಾವಣೆ ಮಾಡಿಕೊಳ್ಳುತ್ತೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಗಿಸಬೇಕು. ಮಾತನಾಡಲಿಕ್ಕೆ ಬಹಳ ಜನರು ಇದ್ದಾರೆ.

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ನನಗೆ 5 ನಿಮಿಷ ಕೊಡಿ. ನಾವು ಏತಕ್ಕೆ ಮಾತನಾಡುತ್ತಿದ್ದೇನೆಂದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದು ಈಗಲೇ. ಕಾಂಗ್ರೆಸ್ ಪಕ್ಷದಲ್ಲಿ ನಮ್ಮ ಹಿಂದುಳಿದ ವರ್ಗದವರಾದ ಶ್ರೀ ಎಸ್.ಬಂಗಾರಪ್ಪನವರು, ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಲಿಕ್ಕೆ ಅವಕಾಶವಾಯಿತು. ಇವತ್ತು ಎಷ್ಟೋ ಪಕ್ಷಗಳು ಅಧಿಕಾರಕ್ಕೆ ಬರುತ್ತವೆ, ಹೋಗುತ್ತವೆ. ಹಿಂದುಳಿದ ವರ್ಗದವರಾದ ಶ್ರೀ ಧರ್ಮಸಿಂಗ್ ರವರು ಆ ಪಕ್ಷಗಳಲ್ಲಿ ಮುಖ್ಯಮಂತ್ರಿಯಾಗುವಂತಹದ್ದು ಮರೀಚಿಕೆ ಎನ್ನುವುದನ್ನು ನೆನಪು ಮಾಡಿಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ನಾನು ಎರಡನೆಯ ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ. ರಾಜಕೀಯದಲ್ಲಿ ನಾವು ಈಗ ಶ್ರೀ ಹೆಚ್.ಡಿ.ದೇವೇಗೌಡರವರನ್ನು, ಶ್ರೀ ಸಿದ್ದರಾಮಯ್ಯನವರನ್ನು, ಶ್ರೀ ಬಿ.ಎಸ್.ಯಡಿಯೂರಪ್ಪನವರನ್ನು ನಾವು ಮೆಚ್ಚಬೇಕಾಗುತ್ತದೆ. ಎಷ್ಟೇ ಕಷ್ಟ ಪರಿಸ್ಥಿತಿಯಲ್ಲಿ ಬರಲಿ, ಎಷ್ಟೇ ಚುನಾವಣೆಗಳಲ್ಲಿ ಸೋಲಲಿ, ರಾಜಕೀಯದಲ್ಲಿ ಸ್ಥಿರತೆ ಇದ್ದು, ಅವರುಗಳು ಧೈರ್ಯವಾಗಿ ಎದುರಿಸುತ್ತಾರೆ. ಇವತ್ತು ನಮ್ಮ ಸಂವಿಧಾನದಲ್ಲಿ ಏನಾಗಿದೆ ಎಂದರೆ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗದಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ಕೊನೆಯದಾಗಿ ಹೇಳಲಿಕ್ಕೆ ಬಯಸುತ್ತೇನೆ. ಆಗಿದೆ. ಇವತ್ತು ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗದಲ್ಲಿ ಏನಾಗಿದೆ ಎಂದರೆ 'right man in the wrong place and wrong man in the right place'. ಅಂದರೆ ಒಳ್ಳೆಯವರನ್ನು ಒಳ್ಳೆಯ ಕಡೆ ಹಾಕಬೇಕು. ಈಗ ಸರ್ಕಾರಗಳಿವೆ. ಸರ್ಕಾರಗಳು ಏನು ಮಾಡಬೇಕೆಂದರೆ ಮಂತ್ರಿಗಳು ಎಲ್ಲವನ್ನು ನೋಡಲಿಕ್ಕೆ ಆಗುವುದಿಲ್ಲ. ಈಗ ಐ.ಎ.ಎಸ್., ಮತ್ತು ಐ.ಪಿ.ಎಸ್., ಆಫೀಸರ್‌ಗಳಿದ್ದಾರೆ, ಅವರುಗಳಿಗೆ ಸಮಾಜ ಕಲ್ಯಾಣ ಇಲಾಖೆಗೆ ಆಗಲಿ, ಹಿಂದುಳಿದ ವರ್ಗಗಳ ಇಲಾಖೆಗೆ ಆಗಲಿ, ನಿಯೋಜನೆ ಮಾಡಿದರೆ ಆ ಸಮಾಜಗಳ ಬಗ್ಗೆ ಕನಿಕರ ಇರಬೇಕು.

**ಮುಂದು. .**

**(475) 17.03.2020 01.40 ಎಸ್‌ವಿ-ಜಿಆರ್**

**ಶ್ರೀ ಎಂ.ಸಿ.ವೇಣುಗೋಪಾಲ್ (ಮುಂದು):-**

ಇಲ್ಲವಾದಲ್ಲಿ ಅಂತಹ ಅಧಿಕಾರಿಗಳನ್ನು ಹಾಕಿ ಏನು ಪ್ರಯೋಜನ? ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತಿರುತ್ತಾರೆ. What is that backward class, what is that S.C., what is that S.T., ಎಂದು ಕೇಳುತ್ತಾರೆ. ನಾನು ಕೆಲವು ಅಧಿಕಾರಿಗಳನ್ನು ನೋಡಿದ್ದು, ಅವರ ಹೆಸರನ್ನು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ. ಕೆಲವರು ಬಹಳ ಕಾಳಜಿಯಿರುವಂತಹ ಹಾಗೂ ಬದ್ಧತೆಯುಳ್ಳಂತಹ ಅಧಿಕಾರಿಗಳಿದ್ದಾರೆ. ಅವರು ಹೋಗಿ ರಾಜಕೀಯ ಲಾಬಿಯನ್ನು ಮಾಡಿ ಹಾಕಿಸಿಕೊಳ್ಳುವುದಿಲ್ಲ. ಆದ್ದರಿಂದ ನಾನು ಸಂವಿಧಾನದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಹೇಳಬಯಸುವುದೇನೆಂದರೆ right man in the right place - ಒಳ್ಳೆಯ ಅಧಿಕಾರಿಗಳನ್ನು ಒಳ್ಳೆಯ ಜಾಗಕ್ಕೆ ನಿಯುಕ್ತಿಗೊಳಿಸಬೇಕು. ಇದರಿಂದ ಅನುಕೂಲವಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ವೇಣುಗೋಪಾಲ್ ಅವರೇ, ನೀವು ಕೇಳಿದ ಐದು ನಿಮಿಷಗಳ ಕಾಲಾವಕಾಶ ಮುಗಿಯಿತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, voice of today is the choice of tomorrow. ಇಂದಿನ ದನಿ ಮುಂದಿನ ಆಯ್ಕೆ. ಸಂವಿಧಾನದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಇದು ಧ್ವನಿಯಾಗಬೇಕು. ಸಂವಿಧಾನವು ಚಿರಾಯುವಾಗಿ, ಶಾಶ್ವತವಾಗಿ ಉಳಿಯಬೇಕು. ಬಡತನ ನಿರ್ಮೂಲನೆ ಮಾಡುವುದಕ್ಕೆ, ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಕ್ಕೆ, ಅಕ್ಷರಸ್ಥರನ್ನು ಮಾಡಲಿಕ್ಕೆ, ಅನಕ್ಷರತೆಯನ್ನು ತೊಡೆದು ಹಾಕುವುದಕ್ಕೆ ಸಂವಿಧಾನ ಧ್ವನಿಯಾಗಬೇಕು. ಇದು ಕೇವಲ ಒಂದು ಕವಿತೆ ಅಥವಾ ಸಾಹಿತ್ಯದಂತೆ ಆಗಬಾರದು. ಎರಡೂ ಸದನಗಳು ಜನರ ದನಿಯಾಗಬೇಕು. ಇಂದು ಮತದಾರರಲ್ಲಿ ಯಾರಿಗೆ ಸಂವಿಧಾನ ತಿಳಿದಿದೆ? ಪಂಚಾಯ್ತಿಯಿಂದ ಹಿಡಿದು ಪಾರ್ಲಿಮೆಂಟಿನವರೆವಿಗೆ ಚುನಾವಣೆ ಎಂಬುದು ಮಾತ್ರ ತಿಳಿದಿದೆ. ಸಂತೇಮರಹಳ್ಳಿ ಕ್ಷೇತ್ರದಿಂದ ಶ್ರೀ ಧ್ರುವನಾರಾಯಣ್ ಅವರು ಶಾಸಕರಾಗಿ ಆಯ್ಕೆಯಾದರು. ಒಂದು ಲಕ್ಷ ಅಂತರದಲ್ಲಿ ಗೆದ್ದರೂ ಅವರು ಶಾಸಕರೇ, ಒಂದು ಮತದಲ್ಲಿ ಗೆದ್ದರೂ ಅವರು ಶಾಸಕರೇ. ಇಂದು ಬಲಿಷ್ಠ ಜಾತಿಗಳು ನಮ್ಮ ಜಾತಿಯ ಇಷ್ಟು ಮತಗಳಿವೆ, ನಮಗೆ ಇಷ್ಟು ಮಂತ್ರಿ ಮಾಡಿಕೊಡಿ; ಇಷ್ಟು ಮತಗಳಿವೆ, ಇಷ್ಟು ಎಂ.ಎಲ್.ಸಿ., ಕೊಡಿ ಎಂದು ಕೇಳುತ್ತಾರೆ. ಆ ಒಂದು ಮತ ಸವಿತಾ ಸಮಾಜದ್ದೇಕೆ ಆಗಿರಬಾರದು. ಆ ಒಂದು ಮತ ಮಡಿವಾಳ ಸಮಾಜದ್ದೇಕೆ ಆಗಿರಬಾರದು. ಕೇವಲ ಬಹುಮತ ಇರುವಂತಹವರಿಗೆ ಸದಾ ಅವಕಾಶ ಕೊಡುವುದಲ್ಲ. ಈ ಸಣ್ಣ ಸಣ್ಣ ಸಮಾಜಗಳಿಗೂ ಅವಕಾಶ ಕೊಡಬೇಕು.

ಆದ್ದರಿಂದ ಇಂದು ಸಂವಿಧಾನದ ಬಗ್ಗೆ ಚರ್ಚೆಯನ್ನು ಮಾಡಿರುವ ಉಭಯ ಸದನಗಳಿಗೆ ನಾನು ಮನವಿ ಮಾಡುತ್ತೇನೆ. Voice of today is the choice of tomorrow - ಮುಂದಿನ ಆಯ್ಕೆ ಆಗಬೇಕು. ಬಡತನವನ್ನು ನಿರ್ಮೂಲನೆ ಮಾಡಲಿಕ್ಕೆ, ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲಿಕ್ಕೆ, ಅನಕ್ಷರತೆಯನ್ನು ತೊಡೆದುಹಾಕುವುದಕ್ಕೆ ಇದು ಧ್ವನಿಯಾಗಬೇಕು. ಎಲ್ಲಾ ಶಾಲಾ-ಕಾಲೇಜುಗಳಲ್ಲಿ, ಎಲ್ಲಾ ಕೋರ್ಸುಗಳಲ್ಲಿ ಈ ಸಂವಿಧಾನವನ್ನು ಪಠ್ಯವನ್ನಾಗಿಡಬೇಕು. ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಅನುಚ್ಛೇದ 208(1)ರ ಮೇರೆಗೆ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಸದಸ್ಯರಾದ ನಾವು ನಮ್ಮನ್ನು ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ಇದರ ಬಗ್ಗೆ ನಾವು ಕಾನೂನಿನ ಚೌಕಟ್ಟಿನಲ್ಲಿ ಎಷ್ಟು ನಡೆಯುತ್ತಿದ್ದೇವೆ? ಯಾವ ರೀತಿಯಲ್ಲಿ ಮಾತನಾಡುವಾಗ ಒಬ್ಬರಿಗೊಬ್ಬರು ಅಡಚಣೆಯನ್ನು ಮಾಡಿಕೊಳ್ಳುತ್ತೇವೆ? Time is very important. ಹೊಸದಾಗಿ ಸದಸ್ಯರಾದ ನನ್ನಂತಹವರಿಗೆ ಇದು ಒಂದು ಸುವರ್ಣಾವಕಾಶ. ಇದು ವಿಚಿತ್ರವೋ, ಅದ್ಭುತವೋ ಗೊತ್ತಿಲ್ಲ. ಸಂವಿಧಾನದ 70ನೇ ವರ್ಷಾಚರಣೆಯ ಸಂದರ್ಭದಲ್ಲಿ ನನ್ನಂತಹವನೊಬ್ಬನು ಈ ಸದನದ ಸದಸ್ಯನಾಗಿರುವುದು ಏಳು ಅದ್ಭುತಗಳಲ್ಲಿ ಒಂದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇನ್ನೂ ಮಾತನಾಡುವುದಿತ್ತು. ಆದರೆ ಒತ್ತಾಯದಿಂದ ಮಾತನಾಡುವುದು ಸರಿಯಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಭಾರತದ ಸಂವಿಧಾನದ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ನಮನಗಳನ್ನು ಸಲ್ಲಿಸುತ್ತಾ, ಸಂವಿಧಾನದ ಬಗ್ಗೆ ವಿಶೇಷವಾದ ಚರ್ಚೆ ಎರಡೂ ಸದನಗಳಲ್ಲಿ ಕಳೆದ ವಾರದಿಂದ ನಡೆಯುತ್ತಿದೆ. ಸಂವಿಧಾನವನ್ನು ರಚಿಸಿದ ಡಾ:ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

12ನೇ ಶತಮಾನದಲ್ಲಿ ಅಣ್ಣ ಬಸವಣ್ಣನವರು ವಿಶ್ವದ ಮೊದಲ ಪಾರ್ಲಿಮೆಂಟ್ ಅನ್ನು ಜಗತ್ತಿಗೆ ನೀಡಿದವರು. ಬಸವಣ್ಣನವರ ಪಾರ್ಲಿಮೆಂಟ್‌ನ ಕಲ್ಪನೆಯಲ್ಲಿ ವರ್ಗರಹಿತ ಮತ್ತು ವರ್ಣರಹಿತ ಸಮಾಜವನ್ನು ಕಟ್ಟಬೇಕು ಎಂಬುದಾಗಿತ್ತು. ಈಗಷ್ಟೇ ನಮ್ಮ ಶಾಸಕ ಮಿತ್ರರಾದ ಶ್ರೀ ಹಣಮಂತ ನಿರಾಣಿಯವರು ಹೇಳಿದರು.

ಇವ ನಾರವ ಇವ ನಾರವ ಇವ ನಾರವ ಎನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವ ಕೂಡಲಸಂಗಮದೇವಾ
ನಮ್ಮ ಮನೆಯ ಮಗನೆಂದೆಣಿಸಯ್ಯಾ॥

ಹೀಗೆ ವರ್ಗರಹಿತ ಮತ್ತು ವರ್ಣರಹಿತ ಸಮಾಜದ ಪರಿಕಲ್ಪನೆಯನ್ನು ಇಡೀ ವಿಶ್ವಕ್ಕೆ ಕೊಟ್ಟವರು ಅಣ್ಣ ಬಸವಣ್ಣನವರು. 12ನೇ ಶತಮಾನದಲ್ಲಿಯೇ ಸ್ತ್ರೀ ಸಮಾನತೆಯ ಪರಿಕಲ್ಪನೆಯನ್ನು ಭಾರತಕ್ಕೆ ನೀಡಿದವರು ಅಣ್ಣ ಬಸವಣ್ಣನವರು. ಆ ಆಧಾರದ ಮೇಲೆಯೇ ಭಾರತದ ಸಂವಿಧಾನವನ್ನು ಡಾ:ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿದರು. ಸ್ವಾತಂತ್ರ್ಯಪೂರ್ವದಲ್ಲಿ ಭಾರತ 500ಕ್ಕೂ ಹೆಚ್ಚು ರಾಜ-ಮಹಾರಾಜರಿಂದ, ಸಾಮಂತ ರಾಜರಿಂದ ರಚಿತವಾದ ಭಾರತ ದೇಶವನ್ನು ಒಗ್ಗೂಡಿಸಿ, ಇಲ್ಲಿರುವಂತಹ ವ್ಯವಸ್ಥೆಯನ್ನು ಸರಿಪಡಿಸಿ ಸ್ವತಂತ್ರ ಭಾರತವನ್ನು ರಚಿಸಲಾಯಿತು. ಇದರ ಜೊತೆಗೆ ಸ್ವಾತಂತ್ರ್ಯದ ನಂತರ ಭಾರತದ ಕಲ್ಪನೆಯನ್ನು ಯಶಸ್ವಿಗೊಳಿಸುವಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲರು ಪ್ರಮುಖವಾದ ಪಾತ್ರವನ್ನು ವಹಿಸಿದರು.

ನಮ್ಮ ಎರಡೂ ಸದನಗಳು ಸಂವಿಧಾನದ ಕುರಿತು ವಿಶೇಷವಾದ ಚರ್ಚೆಯನ್ನು ಮಾಡುತ್ತಿದೆ. ಸಂವಿಧಾನ ರಚನಾಕಾರರಾದ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಧನ್ಯವಾದಗಳನ್ನು ಹೇಳುತ್ತಾ, ಈ ಒಂದು ಉತ್ತಮವಾದ ಚರ್ಚೆಗೆ ನಾಂದಿ ಹಾಡೋಣ. ಅದನ್ನು ಜಾರಿಗೆ ತರುವಲ್ಲಿ, ವರ್ಗರಹಿತ ಮತ್ತು ವರ್ಣರಹಿತ ಸಮಾಜವನ್ನು ಕಟ್ಟುವಲ್ಲಿ ನಾವು ಪಕ್ಷಾತೀತವಾಗಿ ನಮ್ಮನ್ನು ನಾವು ತೊಡಗಿಸಿಕೊಳ್ಳೋಣ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಸಂವಿಧಾನದ ವಿಚಾರದಲ್ಲಿ ಮಾತನಾಡಲು ಬಹಳಷ್ಟು ದಿನಗಳು ಕಾಯ್ದು ಇಂದು ನನಗೆ ಅವಕಾಶವನ್ನು ನೀಡಿದ್ದಕ್ಕಾಗಿ ಧನ್ಯವಾದಗಳು. ಸಂವಿಧಾನದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದ್ದು, ಎಲ್ಲಾ ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ನನಗೆ ಹೊಸದಾಗಿ ಏನಾದರೂ ಮಾತನಾಡಲಿಕ್ಕೆ ಸಿಗಬಹುದೋ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲವೋ ಎಂದು ನಾನು ಭಾವಿಸಿದ್ದೆನು. ಸಂವಿಧಾನದಲ್ಲಿರುವ ಯಾವುದಾದರೂ ಹೊಸ ಅಂಶಗಳ ಬಗ್ಗೆ ನಾವು ಚರ್ಚೆ ಮಾಡಬಹುದು ಎಂದು ನಾನು ಭಾವಿಸಿದ್ದೆನು. ಬಹುಶಃ ಎಲ್ಲಾ ವಿಷಯಗಳ ಬಗ್ಗೆ ಪ್ರಸ್ತಾಪ ಆಗಿದೆ. ನಮ್ಮ ಸಂವಿಧಾನವನ್ನು ರಚನೆ ಮಾಡುವಾಗ ಏನೆಲ್ಲಾ ಹೋರಾಟ ನಡೆಯಿತು? ವಿಶೇಷವಾಗಿ ಸ್ವಾತಂತ್ರ್ಯ ಬರಬೇಕೆಂದರೆ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಬ್ರಿಟಿಷರನ್ನು ಹೊರ ಹಾಕಿ ನಮ್ಮದೇ ಆದ ಆಡಳಿತವನ್ನು ತರಬೇಕು ಎಂದು ಕಾಂಗ್ರೆಸ್ ಪಕ್ಷ ಒಂದು ಆಂದೋಲನವನ್ನು ಪ್ರಾರಂಭ ಮಾಡಿತು ಎಂಬುದನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಸ್ವಾತಂತ್ರ್ಯ ಬಂದ ನಂತರ ಜವಾಹರಲಾಲ್ ನೆಹರು ಅವರು ಪ್ರಧಾನಮಂತ್ರಿಯಾದ ಮೇಲೆ ನಮ್ಮದೇ ಆದ ಒಂದು ಸಂವಿಧಾನವನ್ನು ನಾವು ಹೊಂದಿರಬೇಕು. ಅದರಡಿಯಲ್ಲಿ ನಾವು ಕೆಲಸ ಮಾಡುವ ಮೂಲಕ ಒಂದು ಬಲಿಷ್ಠ ರಾಷ್ಟ್ರವನ್ನು ನಿರ್ಮಾಣ ಮಾಡುವುದಕ್ಕೆ ಒಂದು ಬುನಾದಿಯನ್ನು ಹಾಕಬೇಕೆಂದು ಹೇಳಿ ಸಂವಿಧಾನ ರಚನೆಯ ಕರಡು ಸಮಿತಿಯನ್ನು ರಚಿಸಲಾಯಿತು. Constituent Assembly ಯಲ್ಲಿ ಹಲವಾರು ಚರ್ಚೆಗಳಾಗಿದ್ದು, ಅದರ ಬಗ್ಗೆ ಒಂದು ಪುಸ್ತಕ ಇಲ್ಲಿ ನನ್ನ ಬಳಿ ಇದೆ. ಯಾವ ಯಾವ ವಿಷಯಗಳ ಬಗ್ಗೆ ಏನೇನು ಚರ್ಚೆಯಾಗಿದೆ ಎನ್ನುವುದಕ್ಕೆ ಇದು ಒಂದು ದಾಖಲೆಯಾಗಿ ಉಳಿದಿದೆ. ನಾವೆಲ್ಲರೂ ಸಮಯ ದೊರೆತಾಗ ಈ Constituent Assembly ಚರ್ಚೆಯನ್ನು ಓದಬೇಕೆಂದು ನಾನು ಭಾವಿಸುತ್ತೇನೆ. ಏಕೆಂದರೆ ಪ್ರತಿಯೊಂದು ಆರ್ಟಿಕಲ್ ಸಹ ಅದರಲ್ಲಿ ಏನು ಅಳವಡಿಸಲಾಗಿದೆ ಎನ್ನುವ ಕುರಿತು ಸಾಕಷ್ಟು ಚರ್ಚೆಗಳ ನಂತರ ಅಂಗೀಕಾರಗೊಳ್ಳುತ್ತದೆ.

ಸಂವಿಧಾನದ ಕುರಿತು ವಿಶೇಷವಾಗಿ ಚರ್ಚೆ ಮಾಡಬೇಕೆಂದರೆ ನಾವು ಯಾವತ್ತೂ ಪ್ರಸ್ತಾವನೆಯನ್ನು ಮರೆಯಬಾರದು. ನನ್ನ ಪ್ರಕಾರ ಪ್ರತಿಯೊಬ್ಬ ಭಾರತೀಯ ಅಂದರೆ ಮಕ್ಕಳಿರಬಹುದು ಅಥವಾ ಹಿರಿಯರಿರಬಹುದು; ಸಂವಿಧಾನದ ಪ್ರಸ್ತಾವನೆಯು ತಿಳಿದಿಲ್ಲ ಎಂದರೆ ಅದು ಬಹಳ ನೋವಿನ ಸಂಗತಿ. ನಾವು ಚಿಕ್ಕವರಿದ್ದಾಗ ಪೌರನೀತಿ ವಿಷಯದಲ್ಲಿ ಸಂವಿಧಾನದ ಪ್ರಸ್ತಾವನೆಯನ್ನು ಬಾಯಿಪಾಠ ಮಾಡಿ ಅಂಕವನ್ನು ಪಡೆದುಕೊಳ್ಳುತ್ತಿದ್ದೆವು.

**(...ಮುಂದು)**

(476) 1.50 17.3.2020 KG MD

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು):-**

ನಾನು ಅದಕ್ಕೆ ಸಂವಿಧಾನದ ಬಗ್ಗೆ ಮಾತನಾಡುವಾಗ preamble ಅನ್ನು ಓದಿ ಪ್ರಾರಂಭ ಮಾಡುತ್ತೇನೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಮ್ಮ ಸಂವಿಧಾನದಲ್ಲಿ,

> *"WE, THE PEOPLE OF INDIA, having solemnly resolved to constitute India into a SOVEREIGN SOCIALIST SECULAR*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*DEMOCRATIC REPUBLIC and to secure to all its citizens JUSTICE, social, economic and political; LIBERTY of thought, expression, belief, faith and worship; EQUALITY of status and of opportunity; and to promote among them all FRATERNITY assuring the dignity of the individual and the unity and integrity of the Nation;”*

ಈ ಪ್ರಸ್ತಾವನೆಯನ್ನು ನಾವು ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡು ವಿಶೇಷವಾಗಿ ಸರ್ವೋಚ್ಚ ನ್ಯಾಯಾಲಯ ಸಹ *I. R. Coelho* Vs. *State of Tamil Nadu* ಪ್ರಕರಣದ ಸಂದರ್ಭದಲ್ಲಿ ಈ ರೀತಿ ಹೇಳುತ್ತಾರೆ. *“The preamble is controlled Constitution, not framed by Parliament.”* ನಮಗೆ ಏಕೆ ಸಂವಿಧಾನ ಬಹಳ ಮುಖ್ಯವಾಗಿದೆ, ಸಂವಿಧಾನದ ಪ್ರಸ್ತಾವನೆಯಲ್ಲಿ ಏನಿದೆ, ಅದು ಏಕೆ ಮುಖ್ಯವಾಗಿದೆ ಎಂದು Kesavananda Bharati Sripadagalvaru and Ors. v. State of Kerala ಪ್ರಕರಣದಲ್ಲಿ ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಪ್ರಸ್ತಾಪ ಮಾಡಿರುತ್ತದೆ.

**Sri S.L.BOJEGOWDA:-** After lapse of 16 years the Supreme Court has come to know that, it is part of the Constitution ಎನ್ನುವುದು ದುರ್ದೈವ ಎನ್ನುವಂಥದ್ದನ್ನು ಸಹ ಹೇಳಬೇಕಾಗುತ್ತದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, it is ‘Better late than never’. ನಮ್ಮ Judiciary ಏನಿದೆ, ನಾವು ಅವರನ್ನು criticize ಮಾಡುವುದಕ್ಕಿಂತ ಸಂದರ್ಭ ಬಂದಾಗ ಮಾತ್ರ ಮಾನ್ಯ ಸರ್ವೋಚ್ಚ ನ್ಯಾಯಾಲಯ ಆ ರೀತಿ ಹೇಳಿದೆ. ಆ ಸಂದರ್ಭ ಮತ್ತು ಈ ಪ್ರಕರಣದ ನಡುವೆ ಬಂದಿರುವಂತಹ ವಿಷಯ ಅದು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಹ ಅದನ್ನು ಎತ್ತಿ ಹಿಡಿದಿದೆ. ನಮ್ಮ ಸಂವಿಧಾನದ ಪ್ರಸ್ತಾವನೆ ಏನಿದೆ, ಅದನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ, ನಾವು ಸಂವಿಧಾನದ ಪ್ರಸ್ತಾವನೆಯಡಿಯೇ ಕೆಲಸ ಮಾಡಬೇಕಾಗುತ್ತದೆ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಹಿಡಿದು ಪ್ರತಿಯೊಂದು ರಾಜಕೀಯ ಪಕ್ಷ, ಪ್ರತಿಯೊಬ್ಬ ಪ್ರಜೆಯೂ ಇದನ್ನು ಅಳವಡಿಸಿಕೊಳ್ಳಬೇಕಾಗಿದೆ. ನಮ್ಮ ಸಂವಿಧಾನದ ಮುಖ್ಯ ಅಂಶ ಏನೆಂದರೆ, ನಮ್ಮದು secular ರಾಷ್ಟ್ರ. ನಮ್ಮ ಸಂವಿಧಾನದ ಪ್ರಕಾರ, ನಮಗೆ ಯಾವುದೇ ಧರ್ಮ ಇಲ್ಲ. ನಮ್ಮ ಸಂವಿಧಾನ ಯಾವುದೇ ಜಾತಿಗಳ ಆಧಾರದ ಮೇಲೆ ಹಕ್ಕುಗಳನ್ನು ಕೊಡುವುದಿಲ್ಲ. The Constitution of India stands for the Secular State. The state has no official religion. Secularism prevents

its provisions which give full opportunity to all persons to profess, practice and propagate religion of their choice. The Constitution not only guarantees a person's freedom of religion and conscious, but also ensures freedom for one who has no religion. And it surplusly restrains the state from making any discrimination on the ground of religion. A single citizenship is assured to all persons irrespective of their religion. ನಮ್ಮಲ್ಲಿ ಇದರ ಬಗ್ಗೆ ಅವಶ್ಯಕತೆ ಇದೆ ಎಂದು ಹೇಳಿದರೆ, ನಾವು secular ಆಗಿ ಇರಬೇಕು. ನಾವು ಯಾವುದೇ ಜಾತಿಯ ಆಧಾರದ ಮೇಲೆ ರಾಜಕೀಯ ಮಾಡಬಾರದು. ನಮ್ಮ ದೇಶದಲ್ಲಿ ಹಿಂದೂ, ಮುಸಲ್ಮಾನರು, ಕ್ರೈಸ್ತರು, ಸಿಕ್ಕರು ಎಂಬ ಎಷ್ಟೋ religions ಇವೆ. ನಾವು ಇವೆಲ್ಲವನ್ನು ಸೇರಿ ಬಾಳಬೇಕಾಗುತ್ತದೆ. ಇದನ್ನು ಹೊಡೆದು ಹಾಕುವಂತಹ ಪ್ರಯತ್ನ ಮಾಡಬಾರದು. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದಲ್ಲಿ secularism ಎಂದು ಹೇಳುತ್ತೇವೆ. ನಾವು ಇದನ್ನು ಆಧರಿಸಬೇಕಾಗಿದೆ, ಆತ್ಮಾವಲೋಕನ ಮಾಡಬೇಕಾಗಿದೆ. ಯಾವ ಪಕ್ಷಗಳು, ಯಾವ ಮುಖಂಡರು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ, ನಾವು ಏಕೆ ದ್ವೇಷದ ರಾಜಕಾರಣವನ್ನು ಮಾಡುತ್ತಿದ್ದೇವೆ, ಏಕೆ ನಮ್ಮ ನಮ್ಮಲ್ಲಿ ಹೊಡೆದಾಡುವಂತಹ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಸಂವಿಧಾನದ ಚರ್ಚೆಯಲ್ಲಿ ಏನಾದರೊಂದು ಮಹತ್ವವಾದ ವಿಷಯ ಬಂದರೆ ಅದನ್ನು ಸದನ ಒಪ್ಪಬೇಕಾಗುತ್ತದೆ. ನಾವು ಎಲ್ಲಾ ಜಾತಿಯವರು ಸಹ ಒಂದಾಗಿ ಬಾಳಬೇಕಾಗಿದೆ. ನಮಗೆ ಸಂವಿಧಾನದ ಮಹತ್ವ ಏಕೆ ಇದೆ ಎಂದರೆ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠರವರು ಹೇಳಿದ್ದಾರೆ. ಶ್ರೀ ಬಸವಣ್ಣನವರು

**ಕಳಬೇಡ**
**ಕೊಲಬೇಡ**
**ಹುಸಿಯ ನುಡಿಯಲು ಬೇಡ**
**ಮುನಿಯ ಬೇಡ**
**ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ**
**ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ**
**ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ**

ಎಂದು ಬಹಳ ಸರಳವಾಗಿ ಹೇಳಿದ್ದಾರೆ. ನಾವು ಸಾವಿರಾರು ವರ್ಷಗಳಿಂದ ವಿಜಾಪುರದಲ್ಲಿ ಹಿಂದೂ ಮುಸಲ್ಮಾನರು ಯಾವ ರೀತಿ ಬಾಳುತ್ತೀವೆಂದರೆ, ನಮ್ಮ ದೇವಸ್ಥಾನದಿಂದ ಪೂಜಾರಿ ರಂಜಾನ್‌ನಲ್ಲಿ ನಮಾಜ್ ಆಗುವಂತಹ ವೇಳೆಯಲ್ಲಿ ಅಲ್ಲಿ ನಮಾಜ್ ಮಾಡುತ್ತಾರೆ. ನಾವು ದೇವರ ಆಚರಣೆ ಮಾಡಬೇಕಾದರೆ, ಮುಸಲ್ಮಾನರ ಸಮಾಜದ ಮೌಲಾನಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರವರನ್ನು ಕರೆದು ಅಲ್ಲಿ ಪೂಜೆ ಮಾಡುತ್ತಾರೆ. ನಾನು ರಂಜಾನ್‌ನಲ್ಲಿ 'ರಾಮ' ಇದ್ದಾನೆ. ದೀಪಾವಳಿಯಲ್ಲಿ 'ಆಲಿ' ಇದ್ದಾನೆಂದು ಬಹಳಷ್ಟು ಸಲ ಹೇಳಿದ್ದೇನೆ. ನಾವೆಲ್ಲರೂ ಒಂದಾಗಿ ಬಾಳಬೇಕು. ಈ ದ್ವೇಷದ ರಾಜಕಾರಣ ಮಾಡುವುದು ಬೇಡ. ನಾವೆಲ್ಲರೂ ಸೇರಿ ದೇಶದಲ್ಲಿ ಮುಂದೆ ಬರಬೇಕು. ನಮ್ಮಲ್ಲಿ ಸಮಸ್ಯೆಗಳು ಬಹಳ ಇವೆ. ಸಮಾಜದಲ್ಲಿ ಶೋಷಿತ ವರ್ಗದವರಿಗೆ ಸಮಾನವಾದ ಅವಕಾಶ ಕೊಡಬೇಕೆಂದು ಸಂವಿಧಾನದಲ್ಲಿ ಹೇಳುತ್ತದೆ. ನಮ್ಮೆಲ್ಲರಿಗೂ ಸಂವಿಧಾನದಲ್ಲಿ ಸಮಾನವಾದ ಅವಕಾಶಗಳು ಬೇಕು. ಸಮಾನತೆಯೇ ನಮ್ಮ ಸಂವಿಧಾನದ ಆಧಾರವಾಗಿದೆ. ನಾವೆಲ್ಲರೂ ಸೇರಿ ಎಲ್ಲರಿಗೂ ಅವಕಾಶಗಳನ್ನು ಕೊಡಬೇಕು. ದ್ವೇಷದ ರಾಜಕಾರಣವನ್ನು ಮಾಡಬಾರದು. ಆಗ ಮಾತ್ರ ಈ ಸಂವಿಧಾನದ ಮೇಲಿನ ಚರ್ಚೆಗೆ ಅವಕಾಶ ಬರುತ್ತದೆ. ಇವತ್ತು ನಾವು 70 ವರ್ಷದ ಸಂವಿಧಾನದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇವತ್ತು ನಾವು ಸಂಭ್ರಮಿಸಬೇಕಾಗಿದೆ. ಇಂತಹ ಒಂದು ವೈವಿಧ್ಯತೆಯಲ್ಲಿ ನಮ್ಮ ಹಲವಾರು ಸಂಸ್ಕೃತಿಯಲ್ಲಿ 'Unity in Diversity' ಎಂದು ಹೇಳುತ್ತೇವೆ, ಇಂತಹ ಒಂದು ಸಂದರ್ಭದಲ್ಲಿ, ತಾವು ನಮಗೆಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಮಾನ್ಯ ಸದಸ್ಯರುಗಳು ಸಂವಿಧಾನದ ಮೇಲೆ ಚರ್ಚೆ ಮಾಡುತ್ತೀರಬೇಕಾದರೆ, ನನಗೆ ಇದರಲ್ಲಿ ಫಲಿತಾಂಶ ಬರಬಹುದು, ನಮ್ಮ ಸದನಗಳಲ್ಲಿ ಸಂವಿಧಾನಕ್ಕೆ ತಿದ್ದುಪಡಿ ಮಾಡುವಂತಹ ಹಕ್ಕು ನಮ್ಮಲ್ಲಿ ಇಲ್ಲ. ಈ ಸಂವಿಧಾನದ ಬಗ್ಗೆ ಚರ್ಚೆ ಮಾಡಿ ನಾವು ಏನನ್ನು ಸಾಧನೆ ಮಾಡುತ್ತೇವೆಂದು ಸ್ವಲ್ಪ ಹೊತ್ತಿನಲ್ಲಿ ನನ್ನಲ್ಲಿ ಸಂಕೋಚ ಇತ್ತು. ಆದರೆ, ಮಾನ್ಯ ಸದಸ್ಯರೆಲ್ಲರೂ ಸೇರಿ ಮಾತನಾಡುವುದನ್ನು ನೋಡಿ 70 ವರ್ಷಗಳ ಒಂದು ಸಂಭ್ರಮದ ವಾತಾವರಣ ಇದೆ ಎನಿಸಿತು. ನಮ್ಮದು ಬಿಜೆಪಿಯವರ ಜೊತೆಗೆ ಸಾಕಷ್ಟು ಭಿನ್ನಾಬಿಪ್ರಾಯ ಇರಬಹುದು, ನಮ್ಮದು ಮತ್ತು ಅವರ ತತ್ವ ಸಿದ್ಧಾಂತಗಳು ಬೇರೆ ಬೇರೆ ಇರಬಹುದು. ಆದರೂ ಸಹ ಇವತ್ತು ನಾವೆಲ್ಲರೂ ಸೇರಿ ಸಂವಿಧಾನದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ನಾವೆಲ್ಲರೂ ಸಂವಿಧಾನವನ್ನು ಒಂದಾಗಿ ಒಪ್ಪಿಕೊಂಡಿದ್ದೇವೆ. ನಾವೆಲ್ಲರೂ ಸಂವಿಧಾನದ ಅಚ್ಚುಗಳನ್ನು ಒಳಪಡಿಸಿ ಆಡಳಿತವನ್ನು ಮಾಡಬೇಕೆಂದು ಸಂಕಲ್ಪ ಕೊಡುತ್ತಿದ್ದೇವೆ ಇದು ನಮ್ಮ ದೊಡ್ಡತನವೆಂದು ನಾನು ಭಾವಿಸಿದ್ದೇನೆ. ನಾನು ಬಿಜೆಪಿಯವರ ತತ್ವ ಸಿದ್ಧಾಂತಗಳ ಮೇಲೆ ಮಾತನಾಡುವುದಿಲ್ಲ. ಆದರೆ, ನಮ್ಮ ಸಂವಿಧಾನದಡಿಯಲ್ಲಿ ಯಾವ ತರಹ ನಡೆದುಕೊಳ್ಳಬೇಕೆಂದು ಅದನ್ನು ತಾವು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಒಂದು ಸಂಭ್ರಮದಲ್ಲಿ ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಅದಕ್ಕೆ ತಮಗೆ ಧನ್ಯವಾದಗಳು. ಸಂವಿಧಾನ ಎಷ್ಟೇ ಒಳ್ಳೆಯದಾಗಲಿ ಅಥವಾ ಎಷ್ಟೇ ಕೆಟ್ಟದ್ದಾಗಲಿ ಅದರ ಬಗ್ಗೆ ನಾವು ಸಾಕಷ್ಟು ವಿಮರ್ಶೆಗಳನ್ನು ಮಾಡಬಹುದು. ಬಹುಶಃ ಭಾರತದ ಸಂವಿಧಾನ ಇಡೀ ಪ್ರಪಂಚದಲ್ಲಿಯೇ 2ನೇ ಅತಿ ದೊಡ್ಡದಾದ ಲಿಖಿತ ಮೂಲಕ ಇರುವಂತಹ ಸಂವಿಧಾನ. ಸಂವಿಧಾನ ಕರಡು ಸಮಿತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಚನೆ ಮಾಡಿದಾಗ ನಾವು ಸಂವಿಧಾನದಲ್ಲಿ ಅಳವಡಿಸಿಕೊಂಡಿದ್ದೇವೆ, ಅದು ಬಹಳಷ್ಟು ದೇಶಗಳ ಸಂವಿಧಾನಗಳ ಅಂಶಗಳನ್ನು ಅದರಲ್ಲಿ ಅಡಗಿಸಿಕೊಂಡಿದ್ದೇವೆ. ಡಾ॥ಬಿ.ಆರ್.ಅಂಬೇಡ್ಕರ್‌ರವರು,

> *"I feel however good a Constitution may be, it is sure to turn out to be bad because those who are called to work it, happen to be a bad lot. However bad a Constitution may be, it may turn out to be good if those who are called to work it, happen to be a good lot."*

ಎಂದು ಹೇಳುತ್ತಾರೆ. ಅದಕ್ಕೆ ನಾವು ಎಂತಹ ಒಳ್ಳೆಯ ಸಂವಿಧಾನ ಇದ್ದರೂ ಸಹ, ನಾವು ಅದನ್ನು ಯಾವ ತರಹ ಅದರಡಿಯಲ್ಲಿ ನಡೆದುಕೊಳ್ಳುತ್ತಿದ್ದೇವೆ ಎಂಬುದನ್ನು ವಿಮರ್ಶೆ ಮಾಡಬೇಕಾಗಿದೆ. ನಾವು ಸಂವಿಧಾನದಲ್ಲಿ ಏನು ಅಳವಡಿಸಿಕೊಳ್ಳುತ್ತಿದ್ದೇವೆ ಹಾಗೂ ನಮ್ಮ ನ್ಯೂನತೆಗಳ ಬಗ್ಗೆಯೂ ಸಹ ಚರ್ಚೆ ಮಾಡಬೇಕಾಗಿದೆ.

ಮುಂದು.,

(477)17–03–2020(2–00)ಎಂವಿ–ಎಂಡಿ

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು...):–**

ನಮ್ಮ ಸಮಾಜ ಮತ್ತು ದೇಶ ವಿವಿಧತೆಯಲ್ಲಿ ಏಕತೆ ಇರುವ ದೇಶವಾಗಿದೆ. ನಾನಾ ಭಾಷೆ, ಜಾತಿ, ಜನಾಂಗ, ಧರ್ಮ ಈ ರೀತಿ ಎಷ್ಟಿದೆ ಎಂದು ನಾವು ಹೇಳುವುದಕ್ಕಾಗುವುದಿಲ್ಲ. ಈಗ ಜಾತಿ, ಧರ್ಮ ಮತ್ತು ಭಾಷೆ ಇವೆಲ್ಲವನ್ನೂ ಒಂದಾಗಿ ಅಳವಡಿಸಿಕೊಂಡು ಸಂವಿಧಾನವನ್ನು ರಚನೆ ಮಾಡಲಾಗಿದೆ. ಸುಮಾರು 73 ವರ್ಷಗಳ ಕಾಲದಲ್ಲಿ ಒಂದು ಬಲಿಷ್ಠವಾದ ದೇಶವನ್ನು ಕಟ್ಟಿದ್ದು, ಇವತ್ತಿನ ದಿವಸ ನಾವೆಲ್ಲರೂ ಸಂವಿಧಾನದ ಅಡಿಯಲ್ಲಿ ನಾವು ಮಾಡಿದಂತಹ ಸಾಧನೆ ಬಗ್ಗೆ ಕೂಡ ಆಲೋಚನೆ ಮಾಡಬೇಕಾಗಿದೆ. ತಮಗೂ ಕೂಡ ಗೊತ್ತಿದೆ, ನಮಗೆ ಸ್ವಾತಂತ್ರ್ಯ ಬಂದ ನಂತರ, ನಾವು ಒಂದು ಸೂಜಿಯನ್ನು ಕೂಡ ಉತ್ಪಾದನೆ ಮಾಡುತ್ತಿರಲಿಲ್ಲ. ನಾವು ಬೇರೆ ಬೇರೆ ದೇಶಗಳಿಂದ ಆಹಾರವನ್ನು ತರಿಸಿಕೊಳ್ಳುತ್ತಿದ್ದೆವು. ಏಕೆಂದರೆ, ಆ ಸಂದರ್ಭದಲ್ಲಿ ನಮ್ಮ ದೇಶದ ಬಡ ಜನರಿಗೆ ಆಹಾರ ಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೆ, ಇವತ್ತಿನ ದಿವಸ ನಾವು ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಜವಾಹರ್ ಲಾಲ್ ನೆಹರುರವರನ್ನು ನೆನಪಿಸಿಕೊಳ್ಳ ಬೇಕಾಗುತ್ತದೆ. ಅವರು ಐದು ವರ್ಷಗಳ ಪಂಚ ವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು. ಉದ್ಯೋಗ ಸೃಷ್ಠಿ ಮಾಡುವುದಕ್ಕೆ ಹಲವಾರು ಸಾರ್ವಜನಿಕ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದರು. ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ ಶಾಲೆಗಳನ್ನು ಪ್ರಾರಂಭ ಮಾಡಿದರು. ಈ ತರಹದ ಅಡಿಪಾಯವನ್ನು ಶ್ರೀ ಜವಾಹರ್‌ಲಾಲ್ ನೆಹರುರವರು ಹಾಕಿದರು. ಅದಕ್ಕೆ ಇವತ್ತಿನ ದಿವಸ ನಾವು ಸಂವಿಧಾನದ ಶಿಲ್ಪಿ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ರಚಿಸಿದಂತಹ ಸಂವಿಧಾನಕ್ಕೆ ಗೌರವ ತರಬೇಕಾದರೆ, ನಾವು ಏನು ಸಾಧನೆಗಳನ್ನು ಮಾಡಿದ್ದೇವೆಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೋಡಬೇಕಾಗುತ್ತದೆ. ಹಲವಾರು ಮಾನ್ಯ ಸದಸ್ಯರು ಮತ್ತು ಹಿರಿಯ ಸದಸ್ಯರು ಇದರ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಮಾನ್ಯ ಜವಾಹರ ಲಾಲ್ ನೆಹರುರವರು ಈ ದೇಶದ ಮೊಟ್ಟ ಮೊದಲ ಪ್ರಧಾನ ಮಂತ್ರಿಗಳಾದಾಗ ಏನಾಯಿತು ಮತ್ತು ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಶ್ರೀಮತಿ ಇಂದಿರಾ ಗಾಂಧೀಯವರು ಪ್ರಧಾನ ಮಂತ್ರಿಗಳಾದ ಮೇಲೆ ಏನು ಕೆಲಸವನ್ನು ಮಾಡಿದರು ಎಂದರೆ, ಈ ದೇಶದ ಬಡವರಿಗೆ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ತಂದುಕೊಟ್ಟರು. ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದರು, ಇಂತಹ ಹಲವಾರು ಕಾರ್ಯಕ್ರಮಗಳನ್ನು ಶ್ರೀಮತಿ ಇಂದಿರಾ ಗಾಂಧೀಯವರು ಕೊಟ್ಟಿರುವುದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಅದೇ ತರಹ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು 'ಜೈ ಜವಾನ್, ಜೈ ಕಿಸಾನ್' ಎಂಬ ಘೋಷಣೆಯನ್ನು ಕೊಟ್ಟು, ಈ ದೇಶದ ಹಸಿರು ಕ್ರಾಂತಿಗೆ ಬುನಾದಿಯನ್ನು ಹಾಕಿದರು, ಅದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಶ್ರೀ ರಾಜೀವ್ ಗಾಂಧೀಯವರು ಪ್ರಧಾನ ಮಂತ್ರಿಗಳಾದ ಮೇಲೆ, ಮಾಹಿತಿ ಮತ್ತು ತಂತ್ರಜ್ಞಾನಕ್ಕೆ ಕೊಟ್ಟಂತಹ ಅವಕಾಶಗಳು, "The world will become a village' ಎಂದು ಹೇಳಿದರು. ಅದಕ್ಕೆ ನಾವೆಲ್ಲಾ ನಗುತ್ತಿದ್ದೆವು. ಶ್ರೀ ಸಂಜಯ ಗಾಂಧಿಯವರು ಒಂದು ಸಣ್ಣ ಕಾರನ್ನು ಮಾಡಬೇಕೆಂದಾಗ ನಾವುಗಳೆಲ್ಲರೂ ಸಹ ನಗುತಿದ್ದೆವು. ನಾವು ಕಂಪ್ಯೂಟರ್‌ಗಳನ್ನು ತರುತ್ತಿದ್ದೇವೆ ಮತ್ತು ಟೆಲಿಫೋನ್‌ಗಳನ್ನು ತರುತ್ತಿದ್ದೇವೆ, ಮಾಹಿತಿ ತಂತ್ರಜ್ಞಾನ ಬಹಳ ವೇಗವಾಗಿ ಸಾಗುತ್ತದೆ ಎಂದು ಹೇಳಿದಾಗ ಅದಕ್ಕೆ ನಾವೆಲ್ಲರೂ ಸಹ ನಗುತ್ತಿದ್ದೆವು. ಆದರೆ, ಇವತ್ತು ಅವರು ಕೊಟ್ಟಿರುವಂತಹ ಕೊಡುಗೆಯಿಂದ ದೇಶ ಪ್ರಗತಿ ಕಾಣುವುದನ್ನು ನೋಡಿದ್ದೇವೆ. ಆದುದರಿಂದ ನಾವು ಅವರನ್ನು ಸ್ಮರಿಸಬೇಕಾಗಿದೆ. ನಾವು ಇಂತಹ ಸಾಧನೆಗಳನ್ನು ಮಾಡಿದ್ದು, ಅವುಗಳನ್ನು ಸ್ಮರಿಸಬೇಕಾಗಿದೆ. ಸಂವಿಧಾನದ ಅಡಿಯಲ್ಲಿ ಕೆಲಸ ಮಾಡಿಸಿಕೊಂಡು, ವಿವಿಧತೆಯಲ್ಲಿ ಇಷ್ಟೊಂದು ಸಾಧನೆಯನ್ನು ಮಾಡಿರುವುದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ನಾವು ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಪಿ.ವಿ.ನರಸಿಂಹ ರಾವ್ ರವರನ್ನು ಸಹ ನೆನಪಿಸಿಕೊಳ್ಳಬೇಕಾಗಿದೆ ಏಕೆಂದರೆ, ಅವರು ದೇಶದಲ್ಲಿ ಆರ್ಥಿಕ ಕ್ರಾಂತಿಯನ್ನು ಸೃಷ್ಟಿ ಮಾಡಿದರು. ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಡಾ॥ಮನಮೋಹನ್ ಸಿಂಗ್‌ರವರು ಪ್ರಧಾನ ಮಂತ್ರಿಗಳಾದಾಗ 2004 ರಿಂದ 2014ರವರೆಗೆ ಏನು ಪ್ರಗತಿಯನ್ನು ಮಾಡಿದ್ದೇವೆ ಅದರ ಬಗ್ಗೆ ಸಹ ನಾವು ನೆನಪಿಸಿಕೊಳ್ಳಬೇಕಾಗಿದೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಮಾತನಾಡುವುದಕ್ಕೆ ಇನ್ನು ಎಷ್ಟು ನಿಮಿಷ ಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್:-**ಮಾನ್ಯ ಸಭಾಪತಿಯವರೇ, ಇನ್ನು ಸಮಯವಿದೆ. ನಾನು ಈಗ ಶುರು ಮಾಡಿದ್ದೇನೆ. ನಾನು ಇನ್ನು ಅರ್ಧ ಗಂಟೆ ಮಾತನಾಡುತ್ತೇನೆ. ಭೋಜನವಾದ ಮೇಲೆ ಮುಂದುವರೆಸಿ ಎಂದರೆ ನಂತರವೇ ಮಾತನಾಡುತ್ತೇನೆ. ಇದನ್ನು ಬೇಗ ಮುಗಿಸುವುದಕ್ಕೆ ಆಗುವುದಿಲ್ಲ. ನಾವು ಹಲವಾರು ಸಮಸ್ಯೆಗಳನ್ನು ಎದುರಿಸಿ ಈ ಸಾಧನೆಗಳನ್ನು ಮಾಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ನಿಮಗೆ ಮತ್ತೆ ಸಮಯಾವಕಾಶವನ್ನು ನೀಡುತ್ತೇನೆ. ಆದುದರಿಂದ ನೀವು ಭೋಜನ ವಿರಾಮದ ನಂತರ ಮುಂದುವರೆಸಿ. ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 45 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

(478)17.03.2020/3.00/ವೈಎಲ್-ಎಕೆ

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಸದನದಲ್ಲಿ ವಿರೋಧ ಪಕ್ಷದ ಸದಸ್ಯರು ಯಾರು ಇಲ್ಲ, ಎಲ್ಲಿ ಹೋಗಿದ್ದಾರೆ.

**ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ 3 ಜನರಿಗಿಂತ ಹೆಚ್ಚಿನ ಸಂಖ್ಯೆಯ ಸಚಿವರಿದ್ದಾರೆ. ವಿರೋಧ ಪಕ್ಷದಲ್ಲಿ ಎಷ್ಟು ಜನರಿದ್ದಾರೆ?

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೊರೊನಾ ವೈರಸ್‌ನ ಪ್ರತಿ ದಿನದ ಬೆಳವಣಿಗೆಗೆ ಸಂಬಂಧಿಸಿದಂತೆ ಪ್ರತಿ ದಿನ ಕನಿಷ್ಠ ಹತ್ತು ನಿಮಿಷಗಳನ್ನು ಚರ್ಚೆಗೆ ನಿಗದಿ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಎ.ಬಸವರಾಜು(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ನಂತರ ಮಾತನಾಡಲಿ. ಈಗ ಪ್ರಶ್ನೋತ್ತರ ಅವಧಿ ತೆಗೆದುಕೊಂಡರೆ ಅನುಕೂಲವಾಗುತ್ತದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿರುತ್ತೇನೆ. ವಿರೋಧ ಪಕ್ಷದ ಸದಸ್ಯರೆಲ್ಲರೂ ಬಂದ ನಂತರ ಪ್ರಶ್ನೋತ್ತರ ಅವಧಿಯನ್ನು ಕೈಗೊಳ್ಳಿ.

**ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರೀ ಡಿ.ವಿ.ಗುಂಡಪ್ಪನವರ ಕಗ್ಗದ ಒಂದು ಪದ್ಯ ಹೀಗೆ ಹೇಳುತ್ತದೆ:

ಹೋರಾಡು ಬೀಳ್ವನ್ನಮೊಬ್ಬೊಂಟಿಯಾದೊಡಂ।
ದೀರಪಥವನೇ ಬೆದಕು ಸಕಲಸಮಯದೊಳಂ॥
ದೂರದಲಿ ಗೊಣಗುತ್ತ ಬಾಳ್ವ ಬಾಳ಼್ೇನು ಬೆಲೆ?।
ಹೋರಿ ಸತ್ತ್ವವ ಮೆರಸು-ಮಂಕುತಿಮ್ಮ॥

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದ್ದರಿಂದ ಯಾರನ್ನು ಕಾಯಬೇಕಾಗಿಲ್ಲ. ಮಾನ್ಯ ಸದಸ್ಯರೇ ತಾವು ಮಾತನಾಡಿ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸದಸ್ಯರೇ, ಬ್ಯಾಟಿಂಗ್ ಮಾಡುವುದಕ್ಕೆ ತಮಗೆ ಅವಕಾಶ ಇದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಹೌದು, ಒಳ್ಳೆಯ ಬ್ಯಾಟಿಂಗ್ ಮಾಡುವುದಕ್ಕೆ ಅವಕಾಶ ಸಿಕ್ಕಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗ ವಿರೋಧ ಪಕ್ಷದ ನಾಯಕರು ಯಾರು ಇಲ್ಲ. ನಿನ್ನೆ ದಿವಸ 2 ನಿಮಿಷ ನಾನು ಬರುವುದು ತಡವಾಗಿದ್ದಕ್ಕೆ ಒಂದು ನಿಮಿಷದಲ್ಲಿ ಅವರು ಬ್ರಾಹ್ಮಾಂಡ ಮಾಡಿಬಿಟ್ಟರು. ಆದರೂ ಅಡ್ಡಿ ಇಲ್ಲ, ನಾವು ಸಹಿಸಿಕೊಳ್ಳುತ್ತೇವೆ.

**ಶ್ರೀ ಸಿ.ಟಿ.ರವಿ:-** ಅದರಲ್ಲಿಯು ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಮಾತ್ರ ಇರುವುದು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾನಾಯಕರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಹೇಳುವುದಷ್ಟೆ. ಆದರೆ, ಮಾಡುವುದೆಲ್ಲಾ ನೀವೇ!

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಒಂದು ಕಾರ್ಯಕ್ರಮಕ್ಕೆ Guest ಆಗಿ ಆಹ್ವಾನಿಸಲಾಗಿತ್ತು.

**ಸಭಾಪತಿಯವರು:-** ಈಗ ಮಾನ್ಯ ಅರುಣ ಶಹಾಪುರರವರೇ ತಾವು ಹೇಳುವುದನ್ನು ಯಾರಿಗೆ ಹೇಳಬೇಕು, ಹೇಳಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರಿಗೆ ಅರ್ಥವಾಗಲಿ ಎಂದು ಹೇಳುತ್ತಿದ್ದೇನೆ. ಆ ಕಾರ್ಯಕ್ರಮದಲ್ಲಿ Guest ಮಾತನಾಡಿದ ಮೇಲೆ ಕೊನೆಯವರೆಗೂ ಒಬ್ಬರೇ ಕುಳಿತುಕೊಂಡಿರುತ್ತಾರೆ. ಯಾರೋ ಒಬ್ಬರು ಹೋಗಿ ಏತಕ್ಕೆ ಒಬ್ಬರೇ ಕುಳಿತಿದ್ದೀರಿ ಎಂದು ಕೇಳಿದಾಗ ಕೆಳಗೆ ಹಾಸಿರುವುದು ನನಗೆ ಸೇರಿದ್ದು ಎಂದು ಹೇಳುತ್ತಾರೆ. ಹಾಗಾಗಿ ಮಾನ್ಯ ಸದಸ್ಯರ ಪರಿಸ್ಥಿತಿ ಈಗ ಅದೇ ರೀತಿ ಆಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸದಸ್ಯರೆ, ಅಷ್ಟೆಲ್ಲಾ ಕಥೆ ಹೇಳುವುದು ಬೇಡ.

**ಸಭಾಪತಿಯವರು:-** ಆಯಿತು. ಮಾತನಾಡಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಭೋಜನ ವಿರಾಮಕ್ಕೂ ಮೊದಲು ಮಾತನಾಡುತ್ತಿರುವಾಗ ನಮ್ಮ ಸಂವಿಧಾನದಲ್ಲಿ 70 ವರ್ಷಗಳ ನಂತರ ಆಗಿರುವಂಥ ಸಾಧನೆಗಳು, ಸಂಭ್ರಮಗಳು ಹೀಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಹಲವಾರು ಸಾಧನೆಗಳನ್ನು ನಮ್ಮ ಸಂವಿಧಾನದ ಮೂಲಕ ಮಾಡಿರುವ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಶ್ರೀ ಜವಾಹರ್ ಲಾಲ್ ನೆಹರೂ, ಶ್ರೀ ಲಾಲ್ ಬಹದ್ದೂರ್‌ಶಾಸ್ತ್ರಿ, ಶ್ರೀಮತಿ ಇಂದಿರಾಗಾಂಧಿ, ಶ್ರೀ ರಾಜೀವ್‌ಗಾಂಧಿ, ಶ್ರೀ ಪಿ.ವಿ.ನರಸಿಂಹ ರಾವ್,

ಡಾ॥ ಮನಮೋಹನ್ ಸಿಂಗ್ ಇವರೆಲ್ಲರೂ ಪ್ರಧಾನಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಏನೆಲ್ಲಾ ಕಾನೂನು ತಂದು ನಮ್ಮ ದೇಶದಲ್ಲಿ ಪ್ರಗತಿಯಾಗಿದೆ,...

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೂ ಮಾನ್ಯ ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದ ಮೇಲೆ ಏನೆಲ್ಲಾ ಪ್ರಗತಿಯಾಗಿದೆ ಎಂಬುದನ್ನು ಹೇಳಲಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸದಸ್ಯರೇ, ಅವರ ಬಗ್ಗೆಯು ಮಾತನಾಡುವುದಕ್ಕೆ ಬರುತ್ತಿದ್ದೇನೆ. ಸ್ವಲ್ಪ ಸಮಾಧಾನದಿಂದ,...

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಬರೀ ಕಾಂಗ್ರೆಸ್ ಪಕ್ಷದವರ ಬಗ್ಗೆ ಹೇಳುವುದಲ್ಲ. ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಮತ್ತು ಶ್ರೀ ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದ ಮೇಲೆ ಬಡವರು ಎಷ್ಟು ಉದ್ಧಾರವಾಗಿದ್ದಾರೆ ಎಂಬುದೆಲ್ಲವನ್ನೂ ಹೇಳಲಿ. ಕೇವಲ ಕಾಂಗ್ರೆಸ್ ಪಕ್ಷದವರ ಬಗ್ಗೆಯೇ ಪ್ರಶ್ನೆ ಮಾಡುವುದು ಬೇಡ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ. ಸ್ವಲ್ಪ ಸಮಾಧಾನ,...

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೆಳಕು ಚೆಲ್ಲುತ್ತಾರೆ, ಸಂವಿಧಾನದ ಶಿಲ್ಪಿಯಾದ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಕಾಯಬೇಕಾಗಿತ್ತು ಎಂಬುದೆಲ್ಲವನ್ನೂ ಹೇಳುತ್ತಾರೆ. ಯಾವುದನ್ನೂ ಮುಚ್ಚಿಡುವುದಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಆಗಿನ ಸಮಸ್ಯೆಯೇನೆಂದರೆ, ನಾನು ಯಾರ್‍ಯಾರು ಪ್ರಧಾನಮಂತ್ರಿಗಳಾಗಿದ್ದ ಸಮಯದಲ್ಲಿ ಏನೇನು ಪ್ರಗತಿಯಾಗಿತ್ತು ಎಂಬುದರ ಬಗ್ಗೆ ಚರ್ಚೆ ಮಾಡುತ್ತಿದ್ದೆ. ಆದರೆ, ಮಾನ್ಯ ಎಸ್.ವ್ಹಿ.ಸಂಕನೂರುರವರು ಕೇವಲ ಕಾಂಗ್ರೆಸ್ ಪಕ್ಷದವರ ಬಗ್ಗೆ ಹೇಳುವುದು ಬೇಡ ಎಂದು ಹೇಳಿದ್ದರು. ಈಗಾಗಲೇ ನಮ್ಮ ಸದಸ್ಯರು ಹಲವಾರು ಮಾತನಾಡುವಾಗ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಮಾಡಿರುವ ಸಾಧನೆಗಳ ಬಗ್ಗೆಯು ಚರ್ಚೆ ಮಾಡೋಣ. ಬಹುಶಃ ಅವರ ಸಮಯದಲ್ಲಿಯು ಒಳ್ಳೆಯ ಕೆಲಸವಾಗಿದೆ. ಇವತ್ತು ರಾಷ್ಟ್ರದ ಉದ್ದಗಲಕ್ಕೂ ರಾಷ್ಟ್ರೀಯ ಹೆದ್ದಾರಿಗಳನ್ನು ನೋಡುತ್ತಿದ್ದೇವೆ, ಅದನ್ನು ಮಾಡಿದವರು ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು. ಹಾಗಾಗಿ ಅವರು ಪ್ರಧಾನಮಂತ್ರಿಗಳಾಗಿದ್ದಾಗ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುವುದನ್ನೂ ಸ್ಮರಿಸೋಣವೆಂದರು. ನಾನು ಯಾವುದೇ ಟೀಕೆ ಮಾಡುತ್ತಿಲ್ಲ. ಹಲವಾರು ಪ್ರಧಾನಮಂತ್ರಿಗಳು ಅಧಿಕಾರದಲ್ಲಿದಾಗ ಹಲವಾರು ಪಕ್ಷಗಳು ಅಧಿಕಾರದಲ್ಲಿದ್ದಾಗ ಸಂವಿಧಾನದ ಅಡಿಯಲ್ಲಿ ಸಾಕಷ್ಟು ಪ್ರಗತಿಯ ಕೆಲಸಗಳನ್ನು ಮಾಡಿರುವುದರಿಂದ ನಮ್ಮ ದೇಶ ಪ್ರಪಂಚದಲ್ಲಿಯೇ 3ನೇ ದೊಡ್ಡ ಆರ್ಥಿಕ ದೇಶವಾಗಿದ್ದು, ನಾವು ಬಲಿಷ್ಠರಾಗಿದ್ದೇವೆ. ಏತಕ್ಕೆ ಇಷ್ಟೊಂದು ಪ್ರಗತಿ ಮಾಡಿದ್ದರೂ ಸಹ ಇವತ್ತಿಗೂ ಪ್ರಗತಿಯನ್ನು ಮಾಡುತ್ತಿದ್ದೇವೆ,... ಇವತ್ತಿನ ಪ್ರಧಾನಮಂತ್ರಿಗಳು ಸಹ ಒಳ್ಳೆಯ ಕೆಲಸ ಮಾಡಿಲ್ಲ ಎಂದು ಹೇಳುವುದಿಲ್ಲ. ಅವರು ಸಹ ಸಂವಿಧಾನದ ಅಡಿಯಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಕೆಲವು ವಿವಾದಾತ್ಮಕ ಮಸೂದೆಗಳನ್ನು ತಂದಿದ್ದು, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇವತ್ತು ಸಂವಿಧಾನದಲ್ಲಿ ಏನು ಸಂಭ್ರಮಿಸಬೇಕು ಎಂಬುದನ್ನು ನೋಡಿದರೆ, 'ವಿವಿಧತೆಯಲ್ಲಿ ಏಕತೆ' ಅಂದರೆ 'Unity in Diversity" ಎನ್ನುವುದನ್ನು ನೋಡಿದಾಗ ನಾವು ನಮ್ಮ ಏಕತೆಯನ್ನು ಪ್ರದರ್ಶಿಸಬೇಕಾದರೆ, ವಿವಿಧತೆ ಏನಿದೆ, ಅದನ್ನು ಮರೆಯುವುದಕ್ಕಾಗುವುದಿಲ್ಲ. ನಾವು ಬಲಿಷ್ಠವಾದ ರಾಷ್ಟ್ರ ನಿರ್ಮಾಣ ಮಾಡಬೇಕಾದರೆ, ವಿವಿಧತೆಯೇ ಕಾರಣ ಎಂಬುದನ್ನು ಬಲವಾಗಿ ಹೇಳಬೇಕಾಗುತ್ತದೆ. ನಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ದೇಶದಲ್ಲಿ 1605 ಭಾಷೆಗಳಿದ್ದು, ಭಾಷೆ ರೂಪದಲ್ಲಿ 2000 ಕ್ಕಿಂತ ಜಾಸ್ತಿ dialects ಇದೆ. ಜಾತಿಗಳಂತೂ ಲೆಕ್ಕವೇ ಇಲ್ಲ. ನಮ್ಮ ದೇಶದಲ್ಲಿ 2000 ದಿಂದ 20000 ಗಳಷ್ಟು ಜಾತಿಗಳಿವೆ. ಇಂತಹ ಒಂದು ದೇಶದಲ್ಲಿ ನಾವೆಲ್ಲಾ ಒಂದಾಗಿ 70 ವರ್ಷಗಳ ಕಾಲ ಸಂವಿಧಾನದ ಅಡಿಯಲ್ಲಿ ಪ್ರಗತಿಪರ ಕೆಲಸ ಮಾಡುತ್ತಿದ್ದೇವೆ ಎಂದರೆ, ಅದು ನಮ್ಮ 'ಭಾರತ ದೇಶ' ಮಾತ್ರ. ಅದರಲ್ಲಿಯೂ ವಿಶೇಷವಾಗಿ 'ವಿವಿಧತೆಯಲ್ಲಿ ಏಕತೆ' ಏನಿದೆ, ಅದನ್ನು ಮರೆಯಬಾರದು.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ತಮ್ಮ ಮಾತನ್ನು 5 ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಇನ್ನು 10–15 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, 15 ನಿಮಿಷ ಎಂದು ಹೇಳಿದ್ದೆವು. ಆದರೆ, ನೀವು 30 ನಿಮಿಷ ಸಮಯ ತೆಗೆದುಕೊಂಡಲ್ಲಿ,...

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, 10 ನಿಮಿಷ ಅಷ್ಟೇ ಮಾತನಾಡಿರುವುದು.

**ಸಭಾಪತಿಯವರು:–** ಇಲ್ಲ. ತಾವು ಮಾತನಾಡಲು ಶುರು ಮಾಡಿ 17 ನಿಮಿಷವಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಆಯಿತು. ಆದಷ್ಟು ಬೇಗ ನನ್ನ ಮಾತನ್ನು ಮುಗಿಸುತ್ತೇನೆ. ಅದರಲ್ಲಿಯು ಸ್ವಲ್ಪ ತೊಂದರೆಯಾಗಿತ್ತು. ಈಗಾಗಲೇ ನಮ್ಮ ಸರ್ವೋಚ್ಛ ನ್ಯಾಯಾಲಯ ಈ ಕೆಳಕಂಡಂತೆ ಹೇಳಿದೆ:–

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*"Our country is the world's most heterogeneous society…""…several races have converged in this sub-continent and they carried with them their own cultures, languages, religions and customs affording positive recognition to the noble and ideal way of life - 'Unity in Diversity'. Though these diversities created problems, in early days, they were mostly solved on the basis of human approaches and harmonious reconciliation of differences, usefully and peacefully."*

ನಮ್ಮ ದೇಶ ಪ್ರಗತಿಯಾಗಬೇಕಾದರೆ, ವಿವಿಧತೆಯ ನಡುವೆ ಒಂದಾಗಿ ನಮ್ಮ ದೇಶವನ್ನು ಪ್ರಗತಿ ಮಾಡುವುದಕ್ಕೆ ಬಲವಾಗಿ ಕೆಲಸ ಮಾಡಬೇಕು. ನಮ್ಮ ಸಂವಿಧಾನ ರಚನೆಯಾಗಬೇಕಾದರೆ, ಇಷ್ಟೊಂದು ದೊಡ್ಡ ದೇಶದ ಸಂವಿಧಾನದಲ್ಲಿ ಹಲವಾರು ಜಾತಿಗಳಿದ್ದರೂ ಸಹ ನಾವೆಲ್ಲರೂ ಒಂದಾಗಿ, ಒಂದು ದೇಶವಾಗಿ ಎಲ್ಲರಿಗೂ ಸಮಾನತೆ ನೀಡಬೇಕು. We have to give ideals of justice, liberty, equality and liberty ಎಂಬುದನ್ನು ಹೇಳುತ್ತಾ, ಇವತ್ತು ನಾವೆಲ್ಲರೂ ಅದನ್ನು ಆಚರಿಸುವುದಕ್ಕೆ ಅವಕಾಶ ನೀಡಿದ್ದೀರಿ. ಈ ವ್ಯವಸ್ಥೆಯಲ್ಲಿ ಭಾಗವಹಿಸಲು ಅವಕಾಶ ನೀಡಿದ್ದಕ್ಕೆ ಬಹಳ ಸಂತೋಷವಾಗುತ್ತಿದ್ದು, ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಸಂವಿಧಾನದಲ್ಲಿ ಸಾಕಷ್ಟು ಟೀಕೆ–ಟಿಪ್ಪಣಿಗಳಾಗಿದ್ದು, ರಾಷ್ಟ್ರಪಿತ ಮಹಾತ್ಮ ಗಾಂಧೀಜೀಯವರನ್ನು ಒಳಗೊಂಡಂತೆ ಸಂವಿಧಾನದ ರಚನಾಕಾರರಾದ ಭಾರತ ಸಂವಿಧಾನದ ಶಿಲ್ಪಿಯಾದ ಡಾ॥ ಬಿ.ಆರ್.ಅಂಬೇಡ್ಕರ್‌ರವರನ್ನು ಟೀಕೆ ಮಾಡಿದ್ದೇವೆ. ಕೆಲವರು ಈ ಸಂವಿಧಾನದಲ್ಲಿ 'cut and paste' or 'copy and paste' ಮಾಡಿದ್ದಾರೆ ಎಂದು ಹೇಳುತ್ತಾರೆ. ಕೆಲವರು ರಾಷ್ಟ್ರಪಿತ ಮಹಾತ್ಮ ಗಾಂಧೀಜೀಯವರನ್ನು ಟೀಕೆ ಮಾಡುತ್ತಾರೆ. ನನ್ನ ಪ್ರಕಾರ ಹೇಳುವುದಾದರೆ, ಯಾರೇ ಆದರೂ ನಮ್ಮ ಸ್ವತಂತ್ರ್ಯ ಹೋರಾಟಗಾರರನ್ನು ಟೀಕೆ ಮಾಡುವಂಥ ಕೆಲಸವನ್ನು ಮಾಡಬಾರದು. ಬ್ರಿಟಿಷರು ನಮ್ಮ ದೇಶವನ್ನು ಬಿಟ್ಟು ಹೋಗುವುದಕ್ಕೆ ಲಕ್ಷಾಂತರ ಜನ ಸಾಕಷ್ಟು ಹೋರಾಟ ಮಾಡಿ, ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಇವತ್ತು ಸ್ವತಂತ್ರ್ಯ ಹೋರಾಟಗಾರರ ಬಗ್ಗೆ ಲಘುವಾಗಿ ಮಾತನಾಡಿದರೆ ಅದು ಸರಿಯಲ್ಲ.

(ಮುಂದು) . . .

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(479)/17.03.2020/3.10/ಎಸ್‌ಕೆ-ಆರ್‌ಎನ್

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):-**

ಅದನ್ನು ಮನವರಿಕೆ ಮತ್ತು ಆತ್ಮಾವಲೋಕನ ತಾವು ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಬಹುಶಃ ಡಾ॥ ಬಿ.ಆರ್. ಅಂಬೇಡ್ಕರ್‌ರವರನ್ನು ಟೀಕೆ ಮಾಡುವಾಗ ಒಂದು ಮಾತನ್ನು ಹೇಳಿದರು. ನಾನು ಸಂವಿಧಾನ ಬರೆದಿರುವುದಕ್ಕೆ, ನನಗೆ ಕೀರ್ತಿಯನ್ನು ಕೊಡಬೇಡಿ. ಆದರೆ ನಮ್ಮ ಸಂವಿಧಾನದ ಕರಡು ಸಮಿತಿಯವರಿಗೆ ಕೊಡಿ ಎಂದು ಡಾ॥ ಬಿ.ಆರ್. ಅಂಬೇಡ್ಕರ್‌ರವರು ಹೇಳಿದ್ದಾರೆ. ಅಂತಹ ಮಹಾನುಭಾವನಿಗೆ ನಾವು ಟೀಕೆ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಇದರ ಜೊತೆಗೆ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಜಾತಿ ವ್ಯವಸ್ಥೆಯ ಬಗ್ಗೆ ಹೇಳುತ್ತಾರೆ. ಜಾತಿಯ ವ್ಯವಸ್ಥೆಯನ್ನು ರಾಷ್ಟ್ರ ದ್ರೋಹಿ ವ್ಯವಸ್ಥೆ ಎನ್ನುತ್ತಾರೆ. ಜಾತಿಗಳು ಸಾಮಾಜಿಕ ಜೀವನದಲ್ಲಿ ಪ್ರತ್ಯೇಕತೆ ಭಾವನೆಗಳನ್ನು, ತಾರತಮ್ಯ, ಭಾವನೆಗಳು, ಅಸೂಯೆ, ಶತೃತ್ವ ಭಾವನೆಗಳು, ಜಾತಿ ಜಾತಿಯ ಮಧ್ಯೆ ಹುಟ್ಟಿಸುತ್ತಿರುವ ಅಸಮಾನತೆಯನ್ನು ರಾಷ್ಟ್ರ ದ್ರೋಹಿ ಎಂದು ಕರೆಯುತ್ತಾರೆ. ಇದನ್ನು ಮೊದಲು ತೆಗೆದು ಹಾಕಬೇಕು. ಸ್ವಾತಂತ್ರ್ಯದಲ್ಲಿ ಸಮಾನತೆ, ಪ್ರಭುತ್ವದ ಭಾವನೆಗಳು ಬೆಳೆಯುವಲ್ಲಿ ದೇಶ ಅಭಿವೃದ್ಧಿಯಾಗಿರುವುದು ಸತ್ಯ ಎಂದು ಹೇಳುತ್ತಾರೆ. ಇವತ್ತು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ನಮ್ಮಲ್ಲಿರುವ ಶತೃತ್ವದ ಭಾವನೆಗಳನ್ನು ನಮ್ಮ ದೇಶದಲ್ಲಿ ಸೃಷ್ಟಿ ಮಾಡುತ್ತಿದ್ದೇವೆ. ಅದರ ವಿರುದ್ಧ ನಾವೆಲ್ಲರೂ ಒಂದಾಗಿ, ಈ ಒಂದು ಅಸಮಾನತೆ ಏನು ಬೆಳೆಯುತ್ತಿದೆ, ಅದಕ್ಕೆ ನಾವು ಕಡಿವಾಣವನ್ನು ಹಾಕಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಸಾಮಾಜಿಕ ಪ್ರಜಾಪ್ರಭುತ್ವದಲ್ಲಿ ನಾವು ಸಾಗಬೇಕಾಗಿದೆ. ರಾಜಕೀಯ ಪ್ರಜಾಪ್ರಭುತ್ವದಲ್ಲಿ ಮತದಾನದ ಹಕ್ಕು ಸಿಕ್ಕಿದೆ. ಎಷ್ಟೇ ದೊಡ್ಡ ವ್ಯಕ್ತಿಯಾಗಲೀ, ಕಡು ಬಡವನಾಗಿರಲಿ, ಮಹಿಳೆಯರಾಗಲಿ ನಾವು ಮತದಾನದ ಹಕ್ಕನ್ನು ಕೊಟ್ಟಿದ್ದೇವೆ. ಸನ್ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಯಿದ್ದಾಗ, 73 ಮತ್ತು 74 ರ ತಿದ್ದುಪಡಿಯನ್ನು ತಂದು, ರಾಮರಾಜ್ಯವನ್ನು ಮಾಡಬೇಕೆಂದು ರಾಜೀವ್ ಗಾಂಧಿಯವರು ಕಲ್ಪನೆ ಇತ್ತು. ಅದನ್ನು ಗ್ರಾಮ ಪಂಚಾಯಿತಿಯವರೆಗೆ ಮೀಸಲಾತಿಯನ್ನು ತಂದು, ವಿಶೇಷವಾಗಿ ಐವತ್ತು ಪ್ರತಿಶತ ಮಹಿಳೆಯರಿಗೂ ಅದರಲ್ಲಿ ಅವಕಾಶವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರು ಏನಿದ್ದಾರೆ ಅವರಿಗೆ ಒಂದು ಸಮಾನತೆಯನ್ನು ಕೊಡುವುದರಲ್ಲಿ ನಾವು ಗ್ರಾಮ ಪಂಚಾಯಿತಿ ವ್ಯವಸ್ಥೆಯಿಂದ ಹಿಡಿದು ಲೋಕಸಭೆಯವರೆಗೂ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ರಾಜಕೀಯ ವ್ಯವಸ್ಥೆಯಲ್ಲಿ ಒಂದು ಸಮಾತನೆಯ ಅವಕಾಶವನ್ನು ಕೊಟ್ಟಿದ್ದನ್ನು ನಾವು ನೋಡಿದ್ದೇವೆ. ಇವತ್ತು ಸಾಮಾಜಿಕ ಪ್ರಜಾಪ್ರಭುತ್ವದಲ್ಲಿ ಅಸ್ಪೃಶ್ಯತೆಯ ಬಗ್ಗೆ ಸಾಕಷ್ಟು ಬಾರಿ ಮಾತನಾಡಿದ್ದೇವೆ. ಇವತ್ತು ಅಸ್ಪೃಶ್ಯತೆ ತಾಂಡವಾಡುತ್ತಿರುವುದನ್ನು ನೋಡುತ್ತಿದ್ದೇನೆ. ಹಲಾವರು ಹಳ್ಳಿಗಳಲ್ಲಿ ಅಸ್ಪೃಶ್ಯತೆಯ ಒಂದು ಕೂಗನ್ನು ನಾವು ಕೇಳುತ್ತಿದ್ದೇವೆ. ಒಬ್ಬ ಲೋಕಸಭಾ ಸದಸ್ಯರಿಗೆ ದೇವಸ್ಥಾನದಲ್ಲಿ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಗುವಂತಹ ಅವಕಾಶವನ್ನು ಕೊಡುತ್ತಿರಲಿಲ್ಲ ಎಂಬುದರ ಬಗ್ಗೆ ನಾವು ನೋಡಿದ್ದೇವೆ. ನಾವು ಇದರ ಬಗ್ಗೆ ಹೋರಾಟ ಮಾಡಬೇಕಾಗಿದೆ. ಸಾಮಾಜಿಕ ಪ್ರಜಾಪ್ರಭುತ್ವದಲ್ಲಿ ಈ ತರಹ ಹಲವಾರು ವ್ಯವಸ್ಥೆಯಿರುವುದು ನಮಗೆ ಗೊತ್ತಿದೆ. ನಾನೊಬ್ಬ ಲಂಬಾಣಿ ಸಮಾಜದಿಂದ ಬಂದವನು. ನಮಗೆ ಮೊದಲು 1970ನೇ ಇಸವಿಯಲ್ಲಿ ಲಂಬಾಣಿ ಎಂದು ಹೇಳಿದರೆ, ಯಾಡಿಯೇ ಇಂಗಿಯೇ ಎಂದು ಒಂದು ಸಮಯದಲ್ಲಿ ನಮ್ಮನ್ನು ಹೀಯಾಳಿಸುತ್ತಿದ್ದರು. ಸರ್ಕಾರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದನ್ನು ಶಮನ ಮಾಡುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿದೆ. ಇವತ್ತು ನಾನು ಸಮಾಜದಲ್ಲಿ ಎಲ್ಲರ ಜೊತೆಗೆ ಸಮಾನ ಭಾವನೆಯಿಂದ ಮಾತಾಡಬೇಕೆಂದರೆ, ಸಂವಿಧಾನದಲ್ಲಿ ನನಗೆ ಅವಕಾಶ ಮಾಡಿ ಕೊಟ್ಟಿದೆ. ಹಲವಾರು ವರ್ಷಗಳಿಂದ ಶೋಷಣೆಗೊಳಗಾಗಿ ನಮ್ಮ ತಾಂಡಗಳ ಬಗ್ಗೆ ಹೇಳಬೇಕೆಂದರೆ, ಊರಿನ ಹೊರಗಡೆ ತಾಂಡಗಳು ವಾಸ ಮಾಡುತ್ತಿದ್ದರು. ಇಂತಹ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೇಲ್ಮನೆಗೆ ನಾವು ಬರಲು ಸಂವಿಧಾನ ಅವಕಾಶವನ್ನು ಮಾಡಿಕೊಟ್ಟಿದೆ ಎಂಬುದು ಒಂದು ಕಾರಣ. ವ್ಯವಸ್ಥೆಯ ವಿನಾಶವಲ್ಲದೇ ಬೇರೆ ಯಾವ ಮಾರ್ಗದಲ್ಲಿಯೂ ಕೆಳ ಜಾತಿಯವರ ಏಳಿಗೆಗಾಗಿ ಸಾಧ್ಯವಿಲ್ಲ. ಡಾ॥ ಅಂಬೇಡ್ಕರ್‌ರವರು 1930ರಲ್ಲಿ ಹೇಳಿದ್ದಾರೆ. ಇದರ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಒಂದು ಸಮಾನತೆ. ಇವತ್ತು ಉದ್ಯೋಗಿಗಳು ಅಥವಾ ಉದ್ಯಮಿಗಳು ಅವರು ಸಂಗ್ರಹಿಸಿದ ಹಣ ಎಲ್ಲೋ ಒಂದು ಕಡೆ ಹೋಗುತ್ತಿದೆ. ದೇಶದಲ್ಲಿರುವ ಸಮಾನತೆ ಆರ್ಥಿಕವಾಗಿ ಬೆಳೆಯುತ್ತಿಲ್ಲ. ಅದರ ಬಗ್ಗೆ ಇವತ್ತು ನಾವು ಚಿಂತನೆ ಮಾಡಬೇಕಾಗಿದೆ. ನಮ್ಮ ಸಮಾಜದಲ್ಲಿ ಇನ್ನೂ ಸಾಕಷ್ಟು ಕೆಲಸಗಳು ಮಾಡಬೇಕಾಗಿದೆ. ಈ ಸಂವಿಧಾನದಡಿಯಲ್ಲಿ ಕೆಲಸವನ್ನು ಮಾಡುವಾಗ, ನಮ್ಮದು ಅತಿ ದೊಡ್ಡದಾದ ಸಂವಿಧಾನವಾಗಿದೆ. ಅದರೆ ಇವತ್ತು ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯವಾಗಲೀ ಅಥವಾ ರಾಷ್ಟ್ರವಾಗಲೀ ಇದರಲ್ಲಿ ನಮ್ಮ ಸಚಿವರುಗಳಿಗೆ ಮತ್ತು ಪ್ರಧಾನಿ ಮಂತ್ರಿಯವರಿಗೆ ಏನೂ executive powers ಕೊಟ್ಟಿದ್ದೇವೆ, ಇದರ ಬಗ್ಗೆಯೂ ಕೂಡ ಚರ್ಚೆ ಮಾಡಬೇಕಾಗಿದೆ. ನಾವು ಎಲ್ಲರಿಗೂ; *Security justice to all- social, economic and political, is one of the chief aims of our Constitution. But this has hardly been actually put into action. The judicial system is thre to provide justice to each and every individual. But there are thousand of cases pending in courts. Even fast track courts take 3-4 years to solve cases; the term 'fast tract curt' thus fails the purpose. Besides the procedure to approach the courts is so tedious that a poor farmer ends up selling his land, the only source of his livelihood, to pay so that he can get his rights back. The guidelines issue in the landmark judgment of D.K.Base v. State of West Bengal in order to bring about prison reforms are rarely followed. There are a lot of under-trial prisoners are still*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*in jail, living in inhuman and are being denied basic rights of living.*ಈ ತರಹ ಸಮಾಜದಲ್ಲಿ ನಮಗೆ ನ್ಯಾಯ ಸಿಗಬೇಕು. ಅದು ವಿಳಂಬವಾಗುತ್ತಿದೆ. ಇವತ್ತು ಲಕ್ಷಾಂತರ ಕೇಸ್‌ಗಳು ಕೋರ್ಟಿನಲ್ಲಿ ಪೆಂಡಿಂಗ್ ಇರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು Right to Education ನಲ್ಲಿ ಎಲ್ಲರಿಗೂ ಶಿಕ್ಷಣದ ಹಕ್ಕುಗಳನ್ನು ಕೊಟ್ಟಿದ್ದೇವೆ. ಹದಿನಾಲ್ಕು ವರ್ಷದ ಮಕ್ಕಳಿಗೆ ಉತ್ತಮವಾದಂತಹ ಶಿಕ್ಷಣ ಕೊಡುವುದರಲ್ಲಿ ನಾವು ಇನ್ನೂ ವಿಫಲರಾಗಿದ್ದೇವೆ. ಸಂವಿಧಾನದಲ್ಲಿ ಈ ಹಕ್ಕನ್ನು ಕೊಟ್ಟಿದ್ದರೂ ಸಹ ಇದನ್ನು ನಾವು ಪರಿಪೂರ್ಣವಾಗಿ ಪಾಲನೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಮಾನ್ಯ ಸಭಾಪತಿಯವರಿಗೆ ಹೇಳಬಯಸುತ್ತೇನೆ. ಮಾನ್ಯ ಸಭಾಪತಿಯವರೇ, ಸಂವಿಧಾನದಲ್ಲಿ Fundamental Duties ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ. Fundamental Duties ಅನ್ನು ಅದರಲ್ಲಿ ಯಾವುದೇ ತರಹವಾದಂತಹ . . .

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೋ ಅಥವಾ ಬೇಡವೋ?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ. ನಾನು ಏನು ಹೇಳುತ್ತಿದ್ದೇನೆಂದರೆ, ನಾವು ಇದರ ಬಗ್ಗೆ ಚರ್ಚೆ ಮಾಡಿ, ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದ್ದೇವೆ. ಆದರೆ ಇದರಲ್ಲಿ ನಾಲ್ಕೈದು ಲೋಪದೋಷಗಳನ್ನು ಸರಿ ಮಾಡಬೇಕು.

**ಸಭಾಪತಿಯವರು:–** ಲೋಪದೋಷವನ್ನು ಸರಿ ಮಾಡಬೇಕೆಂದರೆ ಎಲ್ಲರೂ ಬಂದು ಈ ಸದನದಲ್ಲಿ ಕುಳಿತುಕೊಳ್ಳಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರೂ ಸೇರಿ ಇಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಏನು ಚರ್ಚೆಯನ್ನು ಮಾಡಿದ್ದಾರೆ, ಅದನ್ನು ತಾವು ಒಂದು ಅಂತಿಮ ರೂಪಕ್ಕೆ ತಂದು, ಇದರ ಬಗ್ಗೆ ಚರ್ಚೆಗಳೇನು ಮಾಡಿದ್ದೇವೆ. ಅದನ್ನು ಕೇಂದ್ರ ಸರ್ಕಾರಕ್ಕೆ, ಪಾರ್ಲಿಮೆಂಟ್, ಸಭಾಪತಿಯವರಿಗೆ, ಅಲ್ಲಿರುವ ಹಲವಾರು ಪಕ್ಷದ ಮುಖಂಡರಿಗೆ ಕಳುಹಿಸಿ, "ನಾವು ಕರ್ನಾಟಕ ರಾಜ್ಯದಲ್ಲಿ ಸಂವಿಧಾನದ ಬಗ್ಗೆ ಸುದೀರ್ಘವಾಗಿ ಕೆಲವು ಅಂಶಗಳ ಬಗ್ಗೆ ಚರ್ಚೆ ಮಾಡಿದ್ದೇವೆ". ಅವುಗಳು ಸುಧಾರಣೆ ಆಗಬೇಕೆಂದು ನಾನು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತಿದ್ದೇನೆ. ಇದರ ಜೊತೆಗೆ ಒಂದು resolution ಅನ್ನು ಮಾಡಿ, ಇದರ ಜೊತೆಗೆ Fundamental Duties, ಅದರ ಬಗ್ಗೆ ನಮಗೆ ಸಂವಿಧಾನಬದ್ಧವಾದಂತಹ ಹಕ್ಕು ಇಲ್ಲ. ಅದನ್ನು ನಾವು ತಿದ್ದುಪಡಿ ಮಾಡಿ, ಅದನ್ನು ತರಬೇಕೆಂದು ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಇವತ್ತು ನೀರಿನ ವಿಚಾರದಲ್ಲಿ ಸಾಕಷ್ಟು ಸಂವಿಧಾನದಲ್ಲಿ ತಿದ್ದುಪಡಿಯನ್ನು ತರಬೇಕಾಗಿದೆ. Pollution Controlling Act ನಲ್ಲಿ ಕೂಡ ನಾವು ಸಾಕಷ್ಟು ತಿದ್ದುಪಡಿಗಳನ್ನು ತರಬೇಕು. ಇವತ್ತಿನ ದಿವಸ ನೀರು ಮಾಲಿನ್ಯಗೊಳ್ಳುತ್ತಿದೆ. ಅದನ್ನು ನಿಯಂತ್ರಣ ಮಾಡುವುದಕ್ಕೆ ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಲ್ಲಿ ಒಂದು ತಿದ್ದುಪಡಿಯನ್ನು ತರಬೇಕು. ಪ್ರಧಾನಿ ಮಂತ್ರಿಗಳು ನದಿಗಳನ್ನು ಜೋಡಿಸುವ ಕಾರ್ಯಕ್ರಮಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅದು ಅರ್ಥಪೂರ್ಣವಾಗಿ ಆಗಬೇಕು. ಅದು logical end ಗೆ ಹೋಗಬೇಕು.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಇವತ್ತು ಸಂವಿಧಾನದಲ್ಲಿ ಏನು ಬಿಕ್ಕಟ್ಟು ಇದೆ. ನಾವು ಅದನ್ನು ಸರಿ ಮಾಡಬೇಕೆಂದು ತಮಗೆ ಹೇಳಬಯಸುವುದೇನೆಂದರೆ, ನಾನು ಮಾತನಾಡಲು ಒಂದು ಅಂಶವಿದೆ. ಇದರ ಬಗ್ಗೆ ಸಾಕಷ್ಟು ಟೀಕೆ–ಟಿಪ್ಪಣಿಗಳು ಆಗಿವೆ. ಬಹಳಷ್ಟು ಜನರು ಹೇಳುತ್ತಾರೆ. ಸಂವಿಧಾನದ ರಚನಾತ್ಮಕ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು 1952 ರಲ್ಲಿ ಚುನಾವಣೆಯಲ್ಲಿ ಸೋತಾಗ, ಕಾಂಗ್ರೆಸ್ ಪಕ್ಷ ಅವರಿಗೆ ಬೆಂಬಲ ಕೊಡಲಿಲ್ಲ ಎಂದು ಹೇಳಿ, ಇದರ ಬಗ್ಗೆ ಸಾಕಷ್ಟು ಬಾರಿ ಚರ್ಚೆಯಾಗಿದೆಂಬ ಬಗ್ಗೆ ನಾನು ಗಮನಕ್ಕೆ ತರಬೇಕಾಗಿದೆ. ಇವತ್ತು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಆ ಚುನಾವಣೆಯಲ್ಲಿ ಏನು ಸೋತರು, ಆಗ ಹಿಂದೂ ಮಹಾಸಭಾದವರು ಆ ಸಮಯದಲ್ಲಿ ಒಂದು candidate ನ್ನು ಹಾಕಿದ್ದರು. ಇವತ್ತು fake news ಏನಿದೆ? ಆ fake WhatsApp ಗಳ ಮುಖಾಂತರ ಸಾಮಾಜಿಕ ಜಾಲ ತಾಣದಲ್ಲಿ fake news ಬರುತ್ತಿವೆ.

(ಮುಂದು...)

(480) 17.03.2020 3.30 ಟಿಸಿಹೆಚ್–ಆರ್‌ಎನ್

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು):–**

ಅದನ್ನು ನಿಯಂತ್ರಣ ಮಾಡತಕ್ಕಂಥ ಅವಕಾಶಗಳಿವೆ. ಇವತ್ತಿನ ದಿವಸ ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಮಹಾತ್ಮ ಗಾಂಧೀಜಿ ಮತ್ತು ಪಂಡಿತ್ ಜವಾಹರ್ ಲಾಲ್ ನೆಹರುರವರ ಬಗ್ಗೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಟೀಕೆ ಟಿಪ್ಪಣಿಗಳು ಆಗುತ್ತಿವೆ, ಸುಳ್ಳು ಮಾಹಿತಿಗಳನ್ನು ಏನು ಸಾಮಾಜಿಕ ಜಾಲತಾಣದಲ್ಲಿ ಬಳಸುತ್ತಿದ್ದೇವೆ, ಅದನ್ನು ನಿಯಂತ್ರಣ ಮಾಡಬೇಕು. ಯಾರು ಈ ರೀತಿ ಸುಳ್ಳು ಸುದ್ದಿಯನ್ನು ಹರಡುತ್ತಿದ್ದಾರೆ, ಅಂತಹವರಿಗೆ ಶಿಕ್ಷೆಯನ್ನು ಕೊಡಬೇಕು. ಅವರನ್ನು ಶಿಕ್ಷಿಸುವಂತಹ ಅವಶ್ಯಕತೆ ಇದೆಯೆಂದು ನಾನು ಭಾವಿಸುತ್ತೇನೆ. ಇನ್ನೊಂದು ಅಂಶವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಬಹಳ ವಿವಾದಾತ್ಮಕವಾದಂತಹ Citizenship

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Amendment Act ಮತ್ತು NPR (National Population Register) ಮತ್ತು NRC(National Register of Citizens)ಎಂಬ ಕಾನೂನನ್ನು ಜಾರಿಗೆ ತಂದಿದ್ದಾರೆ. ಇದು ವಿವಾದಾತ್ಮಕ amendment ಎಂದು ನಾನು ಭಾವಿಸುತ್ತೇನೆ. ಇದನ್ನು ತಿರಸ್ಕಾರ ಮಾಡಬೇಕು. ನಮ್ಮ ಸಂವಿಧಾನದಲ್ಲಿ . . . ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಭಾರತದ ಪ್ರಜೆಗಳು ಮೆಚ್ಚುವಂತಹ ಏಕೈಕ ಕಾಯ್ದೆ ಎಂದರೆ, ಅದು ಸಿಎಎ ಕಾಯ್ದೆಯಾಗಿದೆ.

**ಡಾ॥ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಸಿಎಎ ಯನ್ನು ಪಾರ್ಲಿಮೆಂಟ್ ಒಪ್ಪಿಕೊಳ್ಳುವುದಕ್ಕೆ ಮುಂಚೆ ತಿರಸ್ಕಾರ ಮಾಡಬಹುದಿತ್ತು. ಆದರೆ, ಸಿಎಎ ಯನ್ನು ಪಾರ್ಲಿಮೆಂಟ್ ಕೂಡ ಒಪ್ಪಿಕೊಂಡಿದೆ. ಒಂದು ಕಾಯ್ದೆ ಚರ್ಚೆಯಾದ ನಂತರ ಅದನ್ನು ತಿರಸ್ಕಾರ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಕಪಿಲ್ ಸಿಬಲ್ ರವರೇ ಹೇಳಿದ್ದಾರೆ, ಅದನ್ನು ನಾವೆಲ್ಲರು ಪುರಸ್ಕರಿಸಬೇಕಾಗುತ್ತದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ.ಡಾ॥ತೇಜಸ್ವಿನಿ ಗೌಡವರು ಕೂಡ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ನಾನು ಹೇಳುತ್ತಿರುವುದು ಏನೆಂದರೆ, ಈ ಸಿಸಿಎ ಕಾಯ್ದೆ ಒಂದು. . .

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಸಿಎಎ ತಿದ್ದುಪಡಿ ಕಾಯ್ದೆಯನ್ನು ಸಂವಿಧಾನ ಬದ್ಧವಾಗಿಯೇ ಜಾರಿಗೆ ತಂದಿದ್ದಾರೆ. ತಿದ್ದುಪಡಿ ಸಂವಿಧಾನಬದ್ಧವಾಗಿಯೇ ಕೆಲಸ ಮಾಡಿದ್ದಾರೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನಿಮಗೆ majority ಇದೆಯೆಂದು ಅದನ್ನು ತಿದ್ದುಪಡಿ ತಂದು, ಅದು ಸರಿ ಇದೆಯೆಂದು ಹೇಳಿದರೆ ಹೇಗೆ. ಅದು ಸರಿ ಆಗಿಲ್ಲ. ನೋಡಿ. . .

**ಡಾ॥ತೇಜಸ್ವಿನಿ ಗೌಡ:–** ತಿದ್ದುಪಡಿ ತರಲು majority ಇತ್ತು, ಹಾಗಾಗಿ, ಅದು ಸಾಧ್ಯವಾಯಿತು. ಇದು ಬಹಳ contradiction.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನನ್ನ ಮಾತುಗಳನ್ನು ಮುಗಿಸಿಬಿಡುತ್ತೇನೆ.

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಡಾ॥ತೇಜಸ್ವಿನಿ ಗೌಡ ರವರೇ, ತಾವು ಏನಾದರು ಹೇಳಿ. ..

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯ ಸಭೆಯಲ್ಲಿ ಚರ್ಚೆಯಾದಂತಹ ಸಮಯದಲ್ಲಿ ಮಾನ್ಯ ಕಪಿಲ್ ಸಿಬಲ್ ಮತ್ತು ಗುಲಾಬ್ ನಬೀ ಆಜಾದ್ ಇವರಿಗೆ, ಕೇಂದ್ರ ಗೃಹ ಸಚಿವರಾದ ಮಾನ್ಯ ಅಮಿತ್‌ಷಾ ರವರು ಸಂವಿಧಾನಕ್ಕೆ ವಿರೋಧವಾಗಿ ಮಾಡಿಲ್ಲ, ಇದನ್ನು ಎಲ್ಲರಿಗೂ ಒಪ್ಪಿಗೆ ಆಗುವ ರೀತಿಯಲ್ಲಿ ನಾವು ನಡೆದುಕೊಳ್ಳುತ್ತೇವೆ ಎನ್ನತಕ್ಕಂಥ ವಿಚಾರವನ್ನು ಹೇಳಿದಾಗ ಅದಕ್ಕೆ ಕಾಂಗ್ರೆಸ್‌ನವರು ಪೂರ್ಣ ಪ್ರಮಾಣದಲ್ಲಿ ಸಹಮತಿಯನ್ನು ಕೊಟ್ಟಿದ್ದಾರೆ. ಹಾಗಾಗಿ, ಆ ವಿಚಾರವನ್ನು ನಾವು ಹೇಳಬೇಕಾಗುತ್ತದೆ.

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ನಾವು ಒಪ್ಪಿಕೊಂಡಿದ್ದೇವೆ, ನೀವು ಕೂಡ ಅದನ್ನು ಒಪ್ಪಿಕೊಳ್ಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಡಾ॥ತೇಜಸ್ವಿನಿ ಗೌಡ ರವರೇ, ನಾನು ಹೇಳುವುದು ಇಷ್ಟೆ. ಕಾಂಗ್ರೆಸ್ ಪಕ್ಷಕ್ಕೆ ವಿರುದ್ಧವಾಗಿ ಏನು ಸಿಎಎ ಮತ್ತು ಎನ್‌ಪಿಆರ್ ಕಾಯ್ದೆ ಜಾರಿಗೆ ತಂದಿದ್ದೀರಿ, Citizenship Amendment Act ಮಾಡಬಾರದೆಂದು ನಾವೇನು ಹೇಳಲಿಲ್ಲ. ಈ ದೇಶದಲ್ಲಿ ಎಲ್ಲರನ್ನು ಸಮಾನತೆಯಿಂದ ನೋಡಬೇಕು. ಎಲ್ಲಾ ಜಾತಿಗಳನ್ನು ಕೂಡ ಅದರಲ್ಲಿ include ಮಾಡಿ.

**ಶ್ರೀ ಸಿ.ಟಿ.ರವಿ (ಪ್ರವಾಸೋಧ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಪ್ರಕಾಶ್ ಕೆ.ರಾಥೋಡ್:–**ಮಾನ್ಯ ಸಭಾಪತಿಯವರೇ, ಶ್ರೀ ಸಿ.ಟಿ.ರವಿಯವರು ಮಂತ್ರಿಗಳಿದ್ದಾರೆ, ಅವರು ನಾನು ಮಾತನಾಡಿದ ನಂತರ ಮಾತನಾಡಬಹುದು.

**ಶ್ರೀ ಸಿ.ಟಿ.ರವಿ:–** ತಾವು ಒಂದು ನಿಮಿಷ yield ಆಗಿ.ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರೇ,ಯಾರು ಧಾರ್ಮಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ, ಆ ಆರು ಸಮುದಾಯಗಳಿಗೆ ಎಂದು ಸೀಮಿತಗೊಳಿಸಿದ್ದಾರೆ.ಪಾಕಿಸ್ತಾನದಲ್ಲಿ ಮುಸಲ್ಮಾನರು ಧಾರ್ಮಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎಂದರೆ, ನೀವು ನಂಬುತ್ತೀರಾ? ಆಫ್ಘಾನಿಸ್ತಾನದಲ್ಲಿ ಧಾರ್ಮಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆಂದರೆ ನಂಬಿತ್ತೀರಾ? ಪಾಕಿಸಾನ, ಆಫ್ಘಾನಿಸ್ತಾನಮತ್ತು ಬಾಂಗ್ಲಾದೇಶದ ಮುಸಲ್ಮಾನರಿಗೂ ನಾವು ಪೌರತ್ವ ಕೊಟ್ಟರೆ, ಪ್ರತ್ಯೇಕ ದೇಶ ಕೊಟ್ಟಿರುವುದು ಸರಿ ಎನ್ನುತ್ತೀರೊ, ತಪ್ಪು ಎನ್ನುತ್ತೀರೊ ಹೇಳಿ. ನಾವು ಧಾರ್ಮಿಕ ಹಿನ್ನೆಯಲ್ಲಿಯೇ ಅವು ಪ್ರತ್ಯೇಕ ದೇಶಗಳಾಗಿವೆ. ಆ ದೇಶಗಳನ್ನು ಇಸ್ಲಾಮಿಕ್ ದೇಶಗಳು ಎಂದು 1956ರಲ್ಲಿ ಪಾಕಿಸ್ತಾನ ಮತ್ತು 1976ರಲ್ಲಿ ಬಾಂಗ್ಲಾದೇಶಗಳು ನಾವು ಪ್ರತ್ಯೇಕ ದೇಶ ಮಾಡಿಕೊಂಡಿದ್ದೇವೆಂದು ತಮ್ಮನ್ನು ತಾವೇ declare ಮಾಡಿಕೊಂಡಿದ್ದಾರೆ. ಈಗ ನೀವು ಅವರಿಗೂ ಪೌರತ್ವ ಕೊಡಬೇಕೆಂದರೆ, ಅರ್ಥ ಏನು ಉಳಿಯುತ್ತದೆ? ಅವರು ನಮಗೆ ಪಾಕಿಸ್ತಾನ ಬೇಡ, ಅಖಂಡ ಭಾರತವೆಂದು ಹೇಳಿದರೆ, ನಾವು ಎಲ್ಲರಿಗೂ ಪೌರತ್ವನ್ನು ಕೊಡೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. 1996ರಲ್ಲಿ ತಿದ್ದುಪಡಿ, 2003 ತಿದ್ದುಪಡಿ ಮತ್ತು 2005 ತಿದ್ದುಪಡಿ ಮತ್ತು 2015 ತಿದ್ದುಪಡಿ ಮಾಡಿದ್ದಾರೆ. . .

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:-**ಮಾನ್ಯ ಸಭಾಪತಿಯವರೇ, ಅವರು ಹೇಳುವುದನ್ನೆಲ್ಲಾ ಮುಜರಾಯಿ ಸಚಿವರಾದ ಮಾನ್ಯ ಸಿ.ಟಿ.ರವಿಯವರು ಹೇಳಿದ್ದಾರೆ.

**ಸಭಾಪತಿಯವರು:-**ಶ್ರೀ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು ಅರ್ಧ ಗಂಟೆಯಿಂದ ಮಾತನಾಡುತ್ತಿದ್ದೀರಿ. ಬೇರೆ ಸದಸ್ಯರಿಗೆ ಅವಕಾಶ ಕೊಡುವುದು ಬೇಡವೇ? ಬೇಗನೆ ಮಾತನಾಡಿ ಮುಗಿಸಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರೆ ಮಾತನಾಡುತ್ತಿದ್ದಾರೆ, ನಾನು ಏನು ಮಾಡಲಿ. ಆಯಿತು. ನಾನು ಒಂದು ಸೆಕೆಂಡ್‌ನಲ್ಲಿ ಮಾತನಾಡಿ ಮುಗಿಸುತ್ತೇನೆ. ಶ್ರೀ ಸಿ.ಟಿ.ರವಿಯವರೇ, ನಾನು Citizenship Amendment Act ಅನ್ನು ಜಾರಿಗೆ ತರಬೇಡಿ ಎಂದು ಹೇಳಲಿಲ್ಲ. ಆದರೆ ನಾನು ಹೇಳುವುದಿಷ್ಟೆ. ಒಂದು ಜಾತಿಯನ್ನು ಬಿಟ್ಟು, ತಾವು ಸಿಎಎ ಕಾಯ್ದೆಯನ್ನು ಜಾರಿಗೆ ತಂದಿದ್ದೀರಿ. ಅದು ಅಸಂವಿಧಾನಿಕವಾಗಿದೆ. ನಮ್ಮ ಸಂವಿಧಾನದ ಪ್ರಸ್ತಾವನೆಗೆ ವಿರುದ್ಧವಾಗಿದೆ. ನಾವು ಯಾವುದೇ ಜಾತಿ ಆಧಾರದ ಮೇಲೆ ಯಾವುದೇ ಕಾನೂನನ್ನು ಮಾಡುವುದಿಲ್ಲ. ನೀವು ಮುಸಲ್ಮಾನರನ್ನು ಹೊರಗಿಟ್ಟು ಕಾನೂನನ್ನು ಜಾರಿಗೆ ತಂದಿದ್ದು, ಅದಕ್ಕೆ ನಮಗೆ ಬೆಂಬಲ ನೀಡಿ ಎಂದು ಹೇಳುತ್ತಿದ್ದಾರೆ. Sorry, ಇದೆಲ್ಲಾ ಆಗುವುದಿಲ್ಲ. ಆ ಸಿಎಎ ಕಾನೂನನ್ನು ಜಾರಿಗೆ ತಂದಿರುವುದು ಸಂವಿಧಾನಕ್ಕೆ ವಿರುದ್ಧವಾಗಿದೆ.

**ಶ್ರೀ ಎನ್.ರವಿಕುಮಾರ್(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಪ್ರಕಾಶ್ ಕೆ.ರಾಥೋಡ್:-**ಮಾನ್ಯ ಸಭಾಪತಿಯವರೇ, ಅವರು ಜಾರಿಗೆ ತಂದಿರತಕ್ಕಂಥ ಸಿಎಎ ಕಾಯ್ದೆ ಸಂವಿಧಾನಕ್ಕೆ ವಿರುದ್ಧವಾಗಿದೆ. ನಾವು ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ amendment ತನ್ನಿ. ಕೇಂದ್ರದ ಗೃಹ ಮಂತ್ರಿಗಳಾದ ಮಾನ್ಯ ಅಮಿತ್‌ಷ ರವರು ಏನು ಹೇಳಿದ್ದಾರೊ ಅದಕ್ಕೆ ತಿದ್ದುಪಡಿ ತನ್ನಿ.

**ಡಾ॥ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಆ ಸಿಎಎ ಕಾಯ್ದೆ ಪಾರ್ಲಿಮೆಂಟ್‌ನಲ್ಲಿ ಒಪ್ಪಿಗೆಯಾಗಿರುವುದನ್ನು ಪ್ರಶ್ನೆ ಮಾಡುವುದೇ ಅಸಂವಿಧಾನವಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ.ರಾಥೋಡ್:-**ಮಾನ್ಯ ಸಭಾಪತಿಯವರೇ, ಕೇಂದ್ರದ ಗೃಹ ಮಂತ್ರಿಗಳಾದ ಮಾನ್ಯ ಅಮಿತ್‌ಷಾ ರವರು ರಾಜ್ಯಸಭೆಯಲ್ಲಿ ನಾವು ಯಾವುದೇ ಸಮುದಾಯವನ್ನು ಬಿಟ್ಟು ಮಾಡುವುದಿಲ್ಲವೆಂದು ಹೇಳಿರುವುದಕ್ಕೆ ತಿದ್ದುಪಡಿ ಮಾಡಿ, ಆಗ ನಾವು ಕೂಡ ಅದಕ್ಕೆ ಬೆಂಬಲ ಕೊಡುತ್ತೇವೆ. ಬೇರೆ ಕಡೆಯಿಂದ ಯಾರೇ ಬಂದರೂ ಅವರನ್ನು ಶೋಷಣೆಗೆ ಒಳಗಾಗಿದ್ದರೆ, ಅವರಿಗೆ ನೀವು ಪೌರತ್ವ ಕೊಡುವುದಾದರೆ, ಕೊಡಿ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ನೀವು amendment ಅನ್ನು ತರುವುದಕ್ಕೆ ಅಭ್ಯಂತರವಿಲ್ಲ. ನೀವು ಕೇವಲ ಒಂದು ಜಾತಿಗೆ ಸೀಮಿತ ಮಾಡಬೇಡಿ.

**ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಸಂವಿಧಾನದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರತಕ್ಕಂಥ ತಮಗೂ ಮತ್ತು ಕೆಳಮನೆಯ ಸಭಾಧ್ಯಕ್ಷರಿಗೂ ಕೂಡ ಈ ಸಂದರ್ಭದಲ್ಲಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಸಂವಿಧಾನ ಜಾರಿಗೆ ಬಂದು 70 ವರ್ಷಗಳಾಯಿತು. ಇವತ್ತಿನ ದಿವಸ ನಮ್ಮ ಸಂವಿಧಾನವು ಸಮಾನತೆಯ ಆಧಾರದ ಮೇಲೆ, ಸ್ವಾತಂತ್ರ್ಯದ ಆಧಾರದ ಮೇಲೆ, ಪ್ರಜಾಪ್ರಭುತ್ವದ ಆಧಾರದ ಮೇಲೆ, ಬ್ರಾತೃತ್ವದ ಆಧಾರದ ಮೇಲೆ ನಿಂತಿದೆ. ಇದು ನಮ್ಮ ದೇಶದ 135 ಕೋಟಿ ಜನರಿಗೂ ಕೂಡ ಗೊತ್ತಿರತಕ್ಕಂಥ ಸಂಗತಿ. ಸ್ವಾತಂತ್ರ್ಯ, ಸಮಾತೆ,ಬ್ರಾತೃತ್ವ ಮತ್ತು ಪ್ರಜಾಪ್ರಭುತ್ವ ಏಕೆ ಈ ನಾಲ್ಕು ಅಂಶಗಳ ಆಧಾರದ ಮೇಲೆ ಸಂವಿಧಾನ ನಿಂತಿದೆ ಎಂದು ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಳಿದರೆಂದರೆ, ಬ್ರಿಟೀಷರು ಆಳ್ವಿಕೆ ಮಾಡತಕ್ಕಂಥ ಸಂದರ್ಭದಲ್ಲಿ, ಅದಕ್ಕಿಂತ ಹಿಂದೆ ಮೊಗಲರು ಆಳುತ್ತಿರುವ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಎನ್ನತಕ್ಕಂಥದ್ದು ಮೊಟಕುಗೊಂಡಿತ್ತು. ಸಮಾನತೆ ಎನ್ನತಕ್ಕಂಥದ್ದು ಪ್ರಶ್ನಾರ್ಹವಾಗಿತ್ತು. ಭ್ರಾತೃತ್ವ ಎನ್ನತಕ್ಕಂಥದ್ದು ಇನ್ನೂ question mark ಆಗಿತ್ತು. ಈ ಹಿನ್ನೆಲೆಯಲ್ಲಿ, ನಮ್ಮ ದೇಶವನ್ನು ಸಮಾನತೆಯ ಆಧಾರದ ಮೇಲೆ ಕಟ್ಟಬೇಕು, ಪ್ರಜಾಪ್ರಭುತ್ವದ ಆಧಾರದ ಮೇಲೆ ಕಟ್ಟಬೇಕು, ಭ್ರಾತೃತ್ವದ ಆಧಾರದ ಮೇಲೆ, ಸಹೋದರತೆಯ ಆಧಾರದ ಮೇಲೆ ಈ ದೇಶವನ್ನು ಕಟ್ಟಬೇಕೆಂದು ಈ ದೇಶಕ್ಕೆ ಬಹಳ ದೊಡ್ಡ ತಳಹದಿಯನ್ನು ಹಾಕಿರತಕ್ಕಂತಹ ಕೀರ್ತಿ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರಿಗೆ ಸಲ್ಲುತ್ತದೆ. ನಾನು ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಬಗ್ಗೆ ಎರಡು ಮಾತುಗಳನ್ನು ಆಡುವುದಾದರೆ, ನಮ್ಮ ದೇಶದಲ್ಲಿ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಅತ್ಯಂತ ಶೋಷಣೆಗೆ ಒಳಗಾದಂತಹ ಮಹಾನ್ ವ್ಯಕ್ತಿ. ಅವರು ಬಹಳ ಅಗಾಧವಾದಂತಹ ನೋವನ್ನು ಅನುಭವಿಸಿರತಕ್ಕಂಥ ಮಹಾನ್ ವ್ಯಕ್ತಿ. ಅವರಿಗೆ ಸಮಾನತೆ ಸಿಗಲಿಲ್ಲ, ಹಕ್ಕುಗಳು ಸಿಗಲಿಲ್ಲ, ಸರಿಯಾದ ಆಹಾರ ಸಿಗಲಿಲ್ಲ, ಅವೊತ್ತು ಅವರಿಗೆ ಶಿಕ್ಷಣಕ್ಕೂ ಕೂಡ ಬೇರೆಯವರನ್ನು ಬೇಡಬೇಕಾದಂತಹ ಪರಿಸ್ಥಿತಿ ಇತ್ತು. ಇವೆಲ್ಲಾ ನೋವನ್ನು ಅನುಭವಿಸಿದಂತಹ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು ನಮ್ಮ ದೇಶದ ಯಾವುದೇ ಪ್ರಜೆಗೂ ಸಹ ಈ ರೀತಿಯ ಸಮಸ್ಯೆಗಳು ಆಗಬಾರದೆಂದು ಇದಕ್ಕೆ ಪರಿಹಾರವನ್ನು ಕಂಡುಹಿಡಿಯುತ್ತಾರೆ. ಅದಕ್ಕೆ ಅವರ ಜೀವನವನ್ನು ಈ ರೀತಿ ಮೂರು ಹಂತಗಳಲ್ಲಿ ವಿಭಜನೆಯನ್ನು ಮಾಡಬಹುದು. 1918-1932ರವರೆಗಿನ ಅವಧಿಯನ್ನು ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ರವರ ಅಧ್ಯಯನ, ಅಧ್ಯಯನ, ಅಧ್ಯಯನ, ಶಿಕ್ಷಣ, ಶಿಕ್ಷಣ, ಶಿಕ್ಷಣ ಎಂದು ಕರೆಯಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1932–1953ರವರೆಗಿನ ಅವಧಿಯನ್ನು ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ರವರ ಹೋರಾಟ, ಹೋರಾಟ, ಹೋರಾಟ ಎಂದು ನಾವು ಕರೆಯಬಹುದು. ಕೊನೆಯ ಕಾಲದವರೆಗೆ ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ರವರನ್ನು ಸಂಘಟನೆ, ಸಂಘಟನೆ, ಸಂಘಟನೆ ಎಂದು ನಾವು ಕರೆಯಬಹುದು. ಹಾಗಾಗಿ, ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ರವರನ್ನು ನಾವು ಮೂರು ಶಬ್ಧಗಳಲ್ಲಿ ಚಿತ್ರಿಸುತ್ತೇವೆ. ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಎಂದರೆ, ಶಿಕ್ಷಣ, ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಎಂದರೆ ಹೋರಾಟ. ಡಾ:ಬಾಬಾ ಸಾಹೇಬ್ ಅಂಬೇಡ್ಕರ್ ಎಂದರೆ ಸಂಘಟನೆ. ಡಾ:ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಈ ದೇಶಕ್ಕೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ನಾವು ಈ ದೇಶವನ್ನು ಧರ್ಮದ ಆಧಾರದ ಮೇಲೆ 135 ಕೋಟಿ ಜನರನ್ನು ಸಮಾನವಾಗಿ ಕಾಣುವುದಕ್ಕೆ ಸಾಧ್ಯವಾಗಲಿಲ್ಲ.

**(ಮುಂದು...)**

(481)17.3.2020/3.30/ಎಂ.ಎಂ–ವಿ.ಕೆ

**ಶ್ರೀ ಎನ್. ರವಿಕುಮಾರ್ (ಮುಂದು):–**

ಸಹೋದರತೆಯ ಆಧಾರದ ಮೇಲೆ ಈ ದೇಶವನ್ನು ನಾವೆಲ್ಲರೂ 'ಸಮಾನರು' ಎಂದು ಟ್ರೀಟ್ ಮಾಡುವುದಕ್ಕೆ ಆಗಲಿಲ್ಲ. ಇದನ್ನು ಬಹಳ ಬಲವಾಗಿ ಅಧ್ಯಯನ ಮಾಡಿರುವಂತಹ, ಶಿಕ್ಷಣವನ್ನು ಪಡೆದಿರುವಂತಹ ಜರ್ಮನಿ, ಅಮೇರಿಕಾ, ಇಂಗ್ಲೆಂಡ್, ಭಾರತ ಹೀಗೆ ಅನೇಕ ದೇಶಗಳನ್ನು ಸುತ್ತಿದಂತಹ ಡಾ: ಬಿ.ಆರ್. ಅಂಬೇಡ್ಕರ್ ಈ ದೇಶವನ್ನು ಯಾವುದರ ಆಧಾರದ ಮೇಲೆ ಒಂದು ಮಾಡುತ್ತಾರೆ ಎಂದು ಹೇಳಿದರೆ, ಸಾವಿರಾರು, ಲಕ್ಷಾಂತರ ಜನರ ಸ್ವಾತಂತ್ರ್ಯ ಹೋರಾಟಗಾರರು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಡುವುದಕ್ಕೆ ತಮ್ಮ ತಮ್ಮ ಬಲಿದಾನ, ತ್ಯಾಗವನ್ನು ಮಾಡಿದರು. ಇವರೆಲ್ಲರಿಗಿಂತ ಮಿಗಿಲಾಗಿರುವಂತಹ ಒಂದು ಕೊಡುಗೆಯನ್ನು ಕೊಟ್ಟರು, ಅದೇನೆಂದರೆ, ನಮ್ಮ ದೇಶವನ್ನು ಕಾನೂನಿನ ತಳಹದಿಯ ಮೇಲೆ ಈ ದೇಶವನ್ನು ಒಂದು ಮಾಡಿರುವಂತಹ ಕೀರ್ತಿ ಡಾ: ಬಿ.ಆರ್. ಅಂಬೇಡ್ಕರ್‌ರವರಿಗೆ ಸಲ್ಲುತ್ತದೆ. ನಮ್ಮ ದೇಶದ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಮತ್ತು ಧರ್ಮ ಸಂವಿಧಾನದ ಕೆಳಗಡೆ ಬರುತ್ತದೆ. ನಮ್ಮ ದೇಶ ಯಾವುದರ ಆಧಾರದ ಮೇಲೆ ಚಲಿಸುತ್ತದೆ, ನಡೆಯುತ್ತದೆ ಎಂದರೆ, ಸಂವಿಧಾನದ ಆಧಾರದ ಮೇಲೆ ನಡೆಯುತ್ತದೆ. ನಮ್ಮ ದೇಶದ ಎಲ್ಲಾ ಜನರಿಗೆ ಅಂಬೇಡ್ಕರ್‌ರವರು ಧರ್ಮ ಕೊಟ್ಟರು, ಆದರೆ ಸರ್ಕಾರಕ್ಕೆ ಧರ್ಮ ಕೊಡಲಿಲ್ಲ. ನಮ್ಮ ದೇಶದ ಎಲ್ಲಾ ಜನರಿಗೆ ಸ್ವಾತಂತ್ರ್ಯವನ್ನು, ಸಂಸ್ಕೃತಿಯನ್ನು ಡಾ: ಬಿ.ಆರ್. ಅಂಬೇಡ್ಕರ್‌ರವರು ಕೊಟ್ಟರು. ಅವರು ಈ ದೇಶಕ್ಕೆ ಯಾವುದೇ ಸರ್ಕಾರ ಇರಲಿ ಅದು ರಾಜ್ಯ ಸರ್ಕಾರ ಇರಲಿ, ಕೇಂದ್ರ ಸರ್ಕಾರ ಇರಲಿ ಆ ಸರ್ಕಾರಕ್ಕೆ ತನ್ನದೇ ಆಗಿರತಕ್ಕಂತಹ ಧರ್ಮ ಇರಬಾರದು ಎಂದು ಅಂಬೇಡ್ಕರ್‌ರವರು ಸಂವಿಧಾನವನ್ನು ಬರೆದರು. ಜನಕ್ಕೆ ಧರ್ಮ ಇರಬಹುದು ಆದರೆ ಸರ್ಕಾರಕ್ಕೆ ಧರ್ಮ ಇರಬಾರದು. ಸರ್ಕಾರದ ಧರ್ಮ, ಜಾತ್ಯಾತೀತತೆಯ ಧರ್ಮ, ಸರ್ಕಾರದ ಕಾನೂನು ಜಾತ್ಯಾತೀತತೆಯ ಕಾನೂನು, ಸರ್ಕಾರದ ಸಾರ್ವಭೌಮತ್ವ, ಜಾತ್ಯಾತೀತತೆಯ ಸಾರ್ವಭೌಮತ್ವ. ಈ ರೀತಿ ಡಾ: ಬಿ.ಆರ್. ಅಂಬೇಡ್ಕರ್‌ರವರು ಎಲ್ಲಿಯೂ ಕೂಡ ವಿವಾದಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳಗಾಗದಂತೆ ಕಾನೂನನ್ನು ರೂಪಿಸಿದರು. ನಮ್ಮ ದೇಶದಲ್ಲಿ ಹಕ್ಕುಗಳಿರಲಿಲ್ಲ, ಹಕ್ಕುಗಳನ್ನು ಕೊಟ್ಟರು. ಅವತ್ತಿನ ಪರಿಸ್ಥಿತಿಯಲ್ಲಿ ಶಿಕ್ಷಣದಿಂದ ವಂಚಿತರಾಗುತ್ತಿದ್ದರು. 'ಧರ್ಮಪಾಲ್'ರವರು ಬರೆದಿರುವಂತಹ 'The Beautiful Tree'ಪುಸ್ತಕವನ್ನು ನಾವೆಲ್ಲರೂ ಓದಬೇಕು. ಅಂದಿನ ಪರಿಸ್ಥಿತಿಯಲ್ಲಿ ನಮ್ಮ ದೇಶದೊಳಗಡೆ ಶಿಕ್ಷಣ ಸಿಗುತ್ತಿತ್ತು. ಆದರೆ ಎಲ್ಲಾ ವರ್ಗದವರಿಗೂ ಶಿಕ್ಷಣ ಸಿಗುತ್ತಾ ಇರಲಿಲ್ಲ. ಅದಕ್ಕೆ ತಮ್ಮ 'The Beautiful Tree' ಪುಸ್ತಕದಲ್ಲಿ ವರ್ಣಿಸುತ್ತಾರೆ. ಹಿಂದುಳಿದ ಪ್ರದೇಶವಾದಂತಹ ಬಳ್ಳಾರಿಯಲ್ಲಿಯೂ ಕೂಡ ಅವತ್ತು ಶಿಕ್ಷಣ ಸಿಗುತ್ತಿತ್ತು. ಬೆಂಗಳೂರಿನಲ್ಲಿಯೂ ಕೂಡ ಶಿಕ್ಷಣ ಸಿಗುತ್ತಿತ್ತು. ಆದರೆ ದೇಶದಲ್ಲಿ ಹೋಲಿಕೆ ಮಾಡಿದರೆ ಶೋಷಿತರಿಗೆ ಅಷ್ಟೊಂದು ಶಿಕ್ಷಣ ಸಿಗುತ್ತಾ ಇರಲಿಲ್ಲ ಎಂಬಂತಹದ್ದನ್ನು 'The Beautiful Tree' ಪುಸ್ತಕದಲ್ಲಿ ಧರ್ಮಪಾಲ್‌ರವರು ಬರೆಯುತ್ತಾರೆ. ಹೀಗೆ ಡಾ: ಬಿ.ಆರ್. ಅಂಬೇಡ್ಕರ್‌ರವರು ಶಿಕ್ಷಣದ ಹಕ್ಕನ್ನು, ಸಮಾನತೆಯ ಹಕ್ಕು, ಶೋಷಣೆಯ ವಿರುದ್ಧದ ಹಕ್ಕನ್ನು ಕೊಡುತ್ತಾರೆ, ಯಾಕೆಂದರೆ, ನಮ್ಮ ದೇಶದಲ್ಲಿ ಶೋಷಣೆ ಆಗುತ್ತಾ ಇರುತ್ತದೆ. ಅವರು ಕೂಡ ಶೋಷಿತರೇ ಆಗಿದ್ದರು. ಹಾಗಾಗಿ ಶೋಷಣೆಯ ವಿರುದ್ಧದ ಹಕ್ಕು ಎಂದರೆ, ನಿನಗೇನಾದರೂ ಶೋಷಣೆ ಆಗುತ್ತಿದೆ ಎಂದರೆ ನೀನು ಕೋರ್ಟ್‌ಗೆ ಹೋಗಬಹುದು. ನಾನು ಮೊನ್ನೆ ಒಂದು ಪತ್ರಿಕೆಯಲ್ಲಿ ಓದುತ್ತಿದ್ದೆ. ಚಿಕ್ಕ ಮಕ್ಕಳು ಕೂಡ ಜೀತದ ಅಡಿ ದುಡಿಯುತ್ತಿದ್ದಾರೆ. ಅವರು ಮನೆಗೆ ಹೋಗುತ್ತಿರಲಿಲ್ಲ, ಹೋಗುವುದಕ್ಕೆ ಬಿಡುತ್ತಿರಲಿಲ್ಲ ಮತ್ತು ಪತ್ರಿಕೆಯಲ್ಲಿ ಓದಿದಂತೆ ಒಂದು ಕುಟುಂಬವು ಒಂದು ತೋಟದಲ್ಲಿ ಒಟ್ಟಿಗೇ ದುಡಿಯುತ್ತಿದ್ದಾರೆ. Reservation ಮಾಡಿಸಿಕೊಂಡು ಊರಿಗೆ ಹೋಗಿ ಬಿಡುತ್ತಾರೆಂದು ಅರ್ಧ ಜನರು ಇಲ್ಲಿರಿ, ಇನ್ನರ್ಧ ಜನರು ಊರಿಗೆ ಹೋಗಿ ಬನ್ನಿ ಎಂದು ಹೇಳಿದ್ದಾರೆ. ಪತ್ರಿಕೆಗಳಲ್ಲಿ ಓದಿದಂತೆ ಇವತ್ತು ಕೂಡ ಜೀತ ಪದ್ಧತಿ ಇದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಇಲ್ಲದೇ ಇರಬಹುದು ಆದರೆ ಜೀತ ಪದ್ಧತಿ ಇದೆ. ಒಂದು ವರ್ಷಕ್ಕೆ 2,000, 3,000, 4,000 ರೂಪಾಯಿಗಳಿಗೆ ಚಿಕ್ಕ ಮಕ್ಕಳು ಕೂಡ ಜೀತ ಮಾಡುತ್ತಿರುವುದನ್ನು ನಾವು ನೋಡುತ್ತೇವೆ. ಕಣ್ಣಿಗೆ ಕಾಣದೇ ಇರಬಹುದು, ಕಣ್ಣಿಗೆ ಕಾಣುವಂತೆಯೂ ಇರಬಹುದು, ಹೋಟೆಲ್‌ಗಳಲ್ಲಿ, ಕಾರ್ಖಾನೆಗಳಲ್ಲಿ ಚಿಕ್ಕ ಮಕ್ಕಳು ಕೆಲಸ ಮಾಡುತ್ತಿರುವುದನ್ನು ನೋಡುತ್ತೇವೆ. ಹೊಲ ಮನೆಗಳಲ್ಲಿ ಒಂದು ವರ್ಷಕ್ಕೆ ಇಷ್ಟು ಎಂದು ಜೀತ ಪದ್ಧತಿಯಲ್ಲಿ ದುಡಿಯುತ್ತಿರುವುದನ್ನು ನೋಡುತ್ತೇವೆ, ಆದರೆ ಕಾನೂನಿನ ಅರಿವಿಗೆ ಬಾರದೇ, ನಮ್ಮ ಕಣ್ಣಿಗೆ ಕಾಣದೇ, ಕಂಡರೂ ಕಾಣದಂತೆ ಜಾಣ ಕುರುಡನ್ನು ನಾವು ಮೆರೆದು ಶೋಷಣೆಯನ್ನು ಸಹಿಸಿಕೊಳ್ಳುತ್ತೇವೆ. ಹೀಗೆ ನಮ್ಮ ದೇಶದಲ್ಲಿ ಶೋಷಣೆ ಇವತ್ತೂ ಜೀವಂತವಾಗಿದೆ. ಅದೇ ರೀತಿ ಮೇಲು–ಕೀಳು ಇವತ್ತು ಕೂಡ ಇದೆ. ಉದಾಹರಣೆಗೆ, ಯಾರೋ ಐ.ಎ.ಎಸ್., ಮಾಡಿರುವಂತಹ ಒಬ್ಬ ಅಧಿಕಾರಿ ಬಂದರೆ ನಾವು ಅವರಿಗೆ ಕೊಡುವಂತಹ ಗೌರವವೇ ಬೇರೆ, ಅದೇ ಒಬ್ಬ ಹಳ್ಳಿಯ ಹೈದ, ದನ ಮೇಯಿಸುವಂತಹ, ಕುರಿ ಮೇಯಿಸುವಂತಹವನು, ನಿರಕ್ಷರಕುಕ್ಷಿ ಬೆಂಗಳೂರಿಗೆ ಬಂದರೆ, ಒಂದು ಆಫೀಸಿಗೆ ಬಂದರೆ ಅವನನ್ನು ಕಾಣುವಂತಹ ರೀತಿಯೇ ಬೇರೆ. ಹಾಗೆಂದು ನಾನು ಎಲ್ಲರಿಗೂ ಕಾನೂನು ಇದೆಯೇ ಎಂದು ಕೇಳಿದರೆ, ಕಾನೂನಿನಲ್ಲಿ ಅವಕಾಶ ಇಲ್ಲ. ಆದರೆ ನಮ್ಮ ವರ್ತನೆಯಲ್ಲಿ, ನಾವು ಕಾಣುವ ರೀತಿಯಲ್ಲಿ ಇದೆ. ನಾವು ಕಾಣುವಂತಹ ದೃಷ್ಟಿಕೋನದಲ್ಲಿ ಇವತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಆ ರೀತಿ ಅಸಮಾನತೆ ಇರುವುದನ್ನು ನೋಡುತ್ತಿದ್ದೇವೆ. ಅದೇ ರೀತಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವು ಮೂರರ ಕಾರ್ಯ ವೈಖರಿಯನ್ನು ವಿಶ್ಲೇಷಣೆ ಮಾಡುವುದಾದರೆ, ಶಾಸಕಾಂಗ ಹೇಗಿದೆ ಎನ್ನುವುದನ್ನು ಸ್ವಲ್ಪ ವಿಶ್ಲೇಷಣೆ ಮಾಡುವುದಾದರೆ, ಒಂದು ಕಡೆ ಡಾ: ಬಿ.ಆರ್. ಅಂಬೇಡ್ಕರ್‌ರವರು 1950ನೇ ಇಸವಿಯಲ್ಲಿ ಸಂವಿಧಾನ introduce ಆಗಿರುತ್ತದೆ. ಆ ಸಂದರ್ಭದಲ್ಲಿ ಅದರ ಪರಿಚಯವಾದ ಮೇಲೆ ಈ ದೇಶಕ್ಕೆ ಅದನ್ನು ಅನ್ವಯಿಸಿದ ಮೇಲೆ ಡಾ|| ಬಿ.ಆರ್.ಅಂಬೇಡ್ಕರ್‌ರವರಿಗೆ ಈ ದೇಶಕ್ಕೆ ಸಂವಿಧಾನವನ್ನು ಲಾಗೂ ಮಾಡಿದಿರಿ, ಸಂವಿಧಾನದಂತೆ ನಡೆಯಬೇಕೆಂದು ಈ ದೇಶಕ್ಕೆ ಹೇಳಿದಿರಿ, ಅದನ್ನು ಈ ದೇಶ ಸ್ವೀಕಾರ ಮಾಡಿದೆ. ಹಾಗಾದರೆ ಇನ್ನು ಮುಂದೆ ಈ ದೇಶ ಹೇಗಿರುತ್ತದೆ ಎಂದು ಕೆಲವು ಜನ ಪ್ರಶ್ನೆ ಕೇಳುತ್ತಾರೆ. ಆಗ ಡಾ|| ಬಿ.ಆರ್. ಅಂಬೇಡ್ಕರ್‌ರವರು ಬಹಳ ಸೊಗಸಾದ, ಎಲ್ಲರಿಗೂ ಖುಷಿಯಾಗುವಂತಹ ಆದರೆ ಎಲ್ಲರಿಗೂ educate ಆಗುವಂತಹ ಉತ್ತರವನ್ನು ಅವರು ಕೊಡುತ್ತಾರೆ. ಅದೇನೆಂದರೆ, ನೋಡಿ ಒಂದು ದೇಶಕ್ಕೆ ಒಳ್ಳೆ ಸಂವಿಧಾನ, ಕೆಟ್ಟ ಸಂವಿಧಾನ ಎಂದು ಇರುವುದಿಲ್ಲ, ಒಳ್ಳೆ ಸಂವಿಧಾನ ಹೇಗಾಗುತ್ತದೆ ಎಂದರೆ ಯಾರು Elected Representatives ಬರುತ್ತಾರೆ, ಯಾರು ಶಾಸಕರಾಗಿ, ಸಂಸದರಾಗಿ ಬರುತ್ತಾರೆ, ಆ ಶಾಸಕರು, ಸಂಸದರು ಹೇಗಿರುತ್ತಾರೆ ಎನ್ನುವುದರ ಮೇಲೆ ಸಂವಿಧಾನ ಚೆನ್ನಾಗಿರುತ್ತದೆ, ಆ ಚುನಾಯಿತ ಪ್ರತಿನಿಧಿ ಒಂದು ವೇಳೆ ಒಳ್ಳೆಯವರಾಗಿದ್ದರೆ, ಅವರು ಒಳ್ಳೆಯ ಆಡಳಿತವನ್ನು ಕೊಡುವಂತಹ ಪ್ರತಿನಿಧಿಯಾಗಿದ್ದರೆ, ಶಾಸಕನಾಗಿದ್ದರೆ, ಸಂಸದನಾಗಿದ್ದರೆ ಈ ಸಂವಿಧಾನ ಚೆನ್ನಾಗಿರುತ್ತದೆ. ಒಂದು ವೇಳೆ ಆರಿಸಿ ಬಂದಂತಹ ವ್ಯಕ್ತಿ ಕೆಟ್ಟವನಾಗಿದ್ದರೆ ಆ ಸಂವಿಧಾನ ಕೆಟ್ಟದ್ದಾಗುತ್ತದೆ ಎಂದು ಬಹಳ ಸುಶಿಕ್ಷಿತವಾದಂತಹ, ಬಹಳ enlightened ಉತ್ತರವನ್ನು ಅಂಬೇಡ್ಕರ್‌ರವರು ಕೊಡುತ್ತಾರೆ. ನಮ್ಮ ದೇಶದಲ್ಲಿ 70 ವರ್ಷಗಳ ಶಾಸಕಾಂಗ, ಶಾಸಕರು, ಸಂಸದರು ಬಹಳಷ್ಟು ಜನ ಆಗಿ ಹೋಗಿದ್ದಾರೆ. ಬಹಳಷ್ಟು ಜನ ಮೇಧಾವಿಗಳು ಆಗಿ ಹೋಗಿದ್ದಾರೆ. ಆದರೆ ನಾವೆಲ್ಲರೂ ಕೂಡ ಕೆಲವರನ್ನು ಮಾತ್ರ ನೆನಪಿಸಿಕೊಳ್ಳುತ್ತೇವೆ. ಉದಾಹರಣೆಗೆ, ನಾನು ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನವನು, ಅದು ಅತ್ಯಂತ ಹಿಂದುಳಿದಿರುವಂತಹ ತಾಲ್ಲೂಕು. ಆ ತಾಲ್ಲೂಕಿನಲ್ಲಿ ಒಬ್ಬ ವ್ಯಕ್ತಿ, ಅವರು ದಾವಣಗೆರೆ ಜಿಲ್ಲೆಗೆ ಸಂಸದರಾಗಿದ್ದರು. ಮುಸ್ಲಿಂ ಸಮುದಾಯಕ್ಕೆ ಸೇರಿದ 'ಶ್ರೀ ಇಮಾಂಸಾಬ್'ರವರ ಬಗ್ಗೆ ನಾನು ಓದುತ್ತಿದ್ದೆ. ಅವರು ಬಹಳ ಸುಪ್ರಸಿದ್ಧರಾದಂತಹ ಸಂಸದರಾಗಿದ್ದರು. ಜಾತಿಯಿಂದ ಮುಸ್ಲಿಂರಾಗಿದ್ದರೂ ಕೂಡ; ಉದಾಹರಣೆಗೆ ಬ್ರಿಟಿಷ್ ಇತಿಹಾಸವನ್ನು ಓದಿದಂತಹ ಸಂದರ್ಭದಲ್ಲಿ ಮೈಸೂರು ಆಡಳಿತವನ್ನು ಓದುವಂತಹ ಸಂದರ್ಭದಲ್ಲಿ 'ಮಿರ್ಜಾ ಇಸ್ಮಾಯಿಲ್' ರವರ ಬಗ್ಗೆ ಓದಿದ್ದೇವೆ. ಆಮೇಲೆ 'ಶ್ರೀ ನಜೀರ್ ಸಾಬ್'ರವರ ಬಗ್ಗೆ ನಾವು ಓದಿದ್ದೇವೆ. ನಾನು ಬಿ.ಜೆ.ಪಿ., ಅಥವಾ ಆರ್.ಎಸ್.ಎಸ್., ಎಂದು ಹೇಳಿದರೆ ಇವರು ಮುಸ್ಲಿಂ ವಿರೋಧಿಗಳು ಎಂದು ತಿಳಿದುಕೊಳ್ಳುತ್ತಾರೆ. ಸಾಧ್ಯವೇ ಇಲ್ಲ, ಆ ರೀತಿ ಶಿಕ್ಷಣವನ್ನು ನಮ್ಮ ಸಂಘಟನೆಯಲ್ಲಿ, ಪಕ್ಷದಲ್ಲಿ, ನಮ್ಮ ಸಂವಿಧಾನದಲ್ಲಿ ಕೂಡ ಆ ರೀತಿಯದ್ದು ಇಲ್ಲ. ಆ ರೀತಿ ನಜೀರ್ ಸಾಬ್‌ರವರನ್ನು ನಾವು ಇಷ್ಟ ಪಡುತ್ತೇವೆ. ಇಮಾಮ್‌ರವರನ್ನು ಮತ್ತು ಎ.ಪಿ.ಜೆ. ಅಬ್ದುಲ್ ಕಲಾಂ ಅವರನ್ನು ಕೂಡ ನಾವು ಇಷ್ಟ ಪಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾತಂತ್ರ್ಯ ಹೋರಾಟಗಾರ, ಬ್ರಿಟಿಷ್ ರೈಲಿನ ದರೋಡೆಯನ್ನು ಮಾಡಿದಂತಹ 'ಶ್ರೀ ಅಶ್‌ಫಾಖುಲ್ಲಾ ಖಾನ್' ಅವರ ಇತಿಹಾಸವನ್ನು ಓದಿ ನಾವೆಲ್ಲಾ ಪ್ರೇರಣೆ ಪಡೆದುಕೊಂಡಿದ್ದೇವೆ. ನಮ್ಮ ದೇಶದ ಇತಿಹಾಸದಲ್ಲಿ ಹೇಗೆ ಹಿಂದುಗಳ ಕೊಡುಗೆ ಇದೆಯೋ ಅಷ್ಟೇ ಮುಸಲ್ಮಾನರ ಕೊಡುಗೆ ಕೂಡ ಇದೆ. ಈ ದೇಶದಲ್ಲಿ, ದೇಶದ ಆಡಳಿತದಲ್ಲಿ ಮುಸ್ಲಿಂಮರ ಕೊಡುಗೆ ಹೇಗಿದೆಯೋ, ಹಿಂದುಗಳ ಕೊಡುಗೆಯೂ ಹಾಗೇ ಇದೆ. ಹಾಗೆ ಅಂಬೇಡ್ಕರ್‌ರವರು ಈ ದೇಶಕ್ಕೆ ಜಾತ್ಯಾತೀತವಾಗಿರುವಂತಹ ಆಡಳಿತವನ್ನು, ಜಾತ್ಯಾತೀತವಾಗಿರುವಂತಹ ಧರ್ಮವನ್ನು ಯಾರಿಗೋ ವಿಪರೀತ ತುಷ್ಟೀಕರಣ ಮಾಡಬೇಕು ಎನ್ನುವಂತಹ ಸಂವಿಧಾನವನ್ನು ಅಂಬೇಡ್ಕರ್‌ರವರು ಕೊಡಲಿಲ್ಲ. ಹಾಗೆ ಇವತ್ತು ಶಾಸಕಾಂಗ ಏನಾಗಿದೆ ಎಂದರೆ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಕಂಡಂತಹ ಕನಸಿಗೂ, ಇವತ್ತು ಶಾಸಕರು, ಸಂಸದರು ಇರತಕ್ಕಂತಹ ರೀತಿಗೂ ಬಹಳ ಅಜಗಜಾಂತರವಾದಂತಹ ವ್ಯತ್ಯಾಸ ಇದೆ.

(ಮುಂದು)

(482) 17-03-2020/ 03-40/ ಕೆಹೆಚ್-ವಿಕೆ

**ಶ್ರೀ ಎನ್.ರವಿಕುಮಾರ್ (ಮುಂದು):-** ಇವತ್ತಿನ ದಿವಸ ಬಹಳ ಆದರ್ಶವಾಗಿರುವಂತಹ system ಇಲ್ಲ. ಹಾಗಾದರೆ ಈ ಆದರ್ಶವನ್ನು ತರಬೇಕಾಗಿರುವವರು ಯಾರು? ನಾವೇ ಈ ಆದರ್ಶವನ್ನು ತರಬೇಕೆಂದು ಡಾ॥ ಬಿ.ಆರ್.ಅಂಬೇಡ್ಕರ್‌ರವರು ಹೇಳಿ ಹೋಗಿದ್ದಾರೆ. ಒಳ್ಳೆಯ ಸಂವಿಧಾನ, ಕೆಟ್ಟ ಸಂವಿಧಾನ ಎಂದು ಇರುವುದಿಲ್ಲ. ನೀವು ಒಳ್ಳೆಯವರಾದರೆ, ಸಂವಿಧಾನದ ಕೆಲಸ ಒಳ್ಳೆಯದಾಗುತ್ತದೆ. ನೀವು ಕೆಟ್ಟವರಾದರೆ, ಸಂವಿಧಾನದ ಕೆಲಸ ಕೆಟ್ಟದಾಗುತ್ತದೆ. ಸಂವಿಧಾನದ ಒಟ್ಟಾರೆ ಉದ್ದೇಶವೇನೆಂದರೆ, ದೇಶಕ್ಕೆ ಒಳ್ಳೆಯದಾಗಬೇಕು. ನೀವು ಒಳ್ಳೆಯವರಾದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ನೀವು ಕೆಟ್ಟವರಾದರೆ ದೇಶಕ್ಕೆ ಕೆಟ್ಟದಾಗುತ್ತದೆ. ಹಾಗಾಗಿ ನಮ್ಮ ದೇಶ ಹೇಗಿದೆ ಎಂದರೆ, ನಾವು ಹೇಗೆ ಇದ್ದೇವೋ, ಹಾಗೇ ದೇಶ ಇದೆ. ಹಾಗಾಗಿ ಇವತ್ತಿನ ದಿವಸ ಶಾಸಕಾಂಗ ಪಕ್ಷ, ನಮ್ಮ ದೇಶದ Parliament ಹೇಗೆ ಇದೆಯೋ; ನಮ್ಮ ದೇಶದ ಸಂಸದರು, ಶಾಸಕರು ಹೇಗೆ ಇದ್ದಾರೋ, ಆ ರೀತಿ ನಮ್ಮ ದೇಶ ಇದೆ. ಅದಕ್ಕೆ ನಾನು ಶಾಸಕಾಂಗದ ಬಗ್ಗೆ ಮತ್ತು ಚುನಾವಣೆ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ ಇವತ್ತಿನ ದಿವಸ ಯಾರು ಕೂಡ ಬಡವರು ಚುನಾವಣೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯ ಇಲ್ಲ. ಇನ್ನೂ ಹೆಣ್ಣು ಮಕ್ಕಳಿಗಂತೂ ಸಾಧ್ಯವೇ ಇಲ್ಲ. ಅದರೊಳಗೂ ಕೂಡ ದುಡ್ಡು ಇಲ್ಲದೇ ಇರುವಂತಹವರಿಗೆ ಸಾಧ್ಯವೇ ಇಲ್ಲ. ದುಡ್ಡು ಹೇಗೆ ಬರುತ್ತದೆ? ಒಂದು ಎಂ.ಎಲ್.ಎ., ಚುನಾವಣೆಗೆ 28 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ನಿಯಮದ ಪ್ರಕಾರ ಕನಿಷ್ಠ 28 ಲಕ್ಷ ರೂಪಾಯಿಗಳು ಖರ್ಚಾಗಬೇಕು. ಆದರೆ, ಎಂ.ಪಿ., ಚುನಾವಣೆಗೆ ಗರಿಷ್ಠ ಎಷ್ಟು ರೂಪಾಯಿಗಳು ಖರ್ಚು ಮಾಡಬೇಕೆಂದರೆ, ಸುಮಾರು 70 ರಿಂದ 75 ಲಕ್ಷ ರೂಪಾಯಿಗಳು ಖರ್ಚಾಗಬೇಕು. ಆದರೆ, ಈ ಚುನಾವಣೆಗೆ ಎಷ್ಟು ಖರ್ಚಾಗುತ್ತದೆ? ಈ ಸದನದಲ್ಲಿ ಕುಳಿತುಕೊಂಡಿರುವಂತಹ ಎಲ್ಲಾ ಸದಸ್ಯರನ್ನೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅಂತಹ ಒಂದು ಎಂ.ಪಿ., ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಎಂ.ಎಲ್.ಎ., ಕ್ಷೇತ್ರ ಕೂಡ ಸಿಗುವುದಿಲ್ಲ. ಅಷ್ಟರೊಳಗೆ ನಾನು ಖರ್ಚು ಮಾಡಿ ಎಂ.ಎಲ್.ಎ., ಮತ್ತು ಎಂ.ಪಿ., ಆಗಿದ್ದೇನೆ ಎನ್ನುವಂತಹವರು ಸಿಗುವುದಿಲ್ಲ. ಆ ರೀತಿ ಚುನಾವಣೆ ವ್ಯವಸ್ಥೆ ಎನ್ನುವಂತಹದ್ದು, ವಿಪರೀತವಾಗಿ ಹಣ ಖರ್ಚು ಮಾಡುವಂತಹ ವ್ಯವಸ್ಥೆಯಾಗಿದೆ. ಹಾಗಾದರೆ ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡಿಕೊಂಡು ಬಂದಿರುವಂತಹ ವ್ಯಕ್ತಿ, ಅವನು ಹಣವನ್ನು ಮಾಡಿಕೊಳ್ಳದೇ ಸುಮ್ಮನೆ ಬಿಡುತ್ತಾನೆಯೇ, ನಾನು ಇಷ್ಟು ಕೋಟಿ ಹಣವನ್ನು ಖರ್ಚು ಮಾಡಿ ಎಂ.ಪಿ., ಆಗಿ ಬಂದಿದ್ದೇನೆ. ಅದಕ್ಕೆ ನಾನು invest ಮಾಡಿದ್ದೇನೆ. ನಾವು ಇನ್ನು ಅನೇಕ ಶಬ್ದಗಳನ್ನು ಕೇಳಬೇಕು. ಇವತ್ತಿನ ದಿವಸ ಚುನಾವಣೆ ಎನ್ನುವಂತಹದ್ದು, ಬಂಡವಾಳ ಹೂಡುವಂತಹದ್ದು ಎಂದು ಅರ್ಥ. ಇದೊಂದು ಉದ್ದಿಮೆ ಆಗಿಬಿಟ್ಟಿದೆ. ಇದೊಂದು ಹೊಸ ರೀತಿಯ ಕೈಗಾರಿಕೆ ಮತ್ತು ವ್ಯಾಪಾರ ಆಗಿಬಿಟ್ಟಿದೆ. ಹಾಗಾಗಿ ಕಾಂಗ್ರೆಸ್, ಜೆ.ಡಿ.(ಎಸ್), ಬಿಜೆಪಿ., ಈ ಯಾವುದೇ ಪಕ್ಷಗಳ ಗೋಜಿಗೂ ಹೋಗುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಾವೆಲ್ಲಾ ದೇಶ ಸುಧಾರಣೆಯಾಗಬೇಕೆಂದು ಹೇಳಿದರೆ, ಎಲ್ಲರೂ ಕೂಡ ಅದಕ್ಕೆ ಕೈಜೋಡಿಸಿದರೆ ದೇಶ ಸುಧಾರಣೆಯಾಗುತ್ತದೆ. ಇಲ್ಲದಿದ್ದರೆ, ದೇಶ ಕುಲಗೆಟ್ಟು ಹಾಳಾಗಿ ಹೋಗುತ್ತದೆ. ಹಾಗಾಗಿ ಇವತ್ತಿನ ದಿವಸ ಪ್ರಜಾಪ್ರಭುತ್ವ ಎನ್ನುವಂತಹದ್ದು, ಹಣ ಉಳ್ಳವರ ಮತ್ತು ಅಧಿಕಾರ ಉಳ್ಳವರ ಸ್ವತ್ತಾಗಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ರವಿಕುಮಾರ್‌ರವರೇ ಇದಕ್ಕೆ ಏನಾದರೂ ಪರಿಹಾರ ಇದೆಯೇ?

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದಕ್ಕೆ ನಮ್ಮಲ್ಲಿ ಪರಿಹಾರವನ್ನು ಕಂಡುಕೊಂಡರೇ ಖಂಡಿತವಾಗಿಯೂ ಪರಿಹಾರ ಇದೆ. ಇದಕ್ಕೆ ಯಾರಾದರೂ ಒಬ್ಬರು ಉದಾಹರಣೆ ಆಗಲೇ ಬೇಕು. ಉದಾಹರಣೆಗೆ ನಾವೆಲ್ಲಾ ಬೈ-ಟೆಕ್‌ಗಳಿಗೆ ಮತ್ತು ಮೀಟಿಂಗ್‌ಗಳಿಗೆ ಹೋದಂತಹ ಸಂದರ್ಭಗಳಲ್ಲಿ ನಮಗೆ ಸುಳ್ಯ ಎಂ.ಎಲ್.ಎ., ಚುನಾವಣೆಯು ಉದಾಹರಣೆಯಾಗಿ ಸಿಗುತ್ತಿತ್ತು. ಸುಳ್ಯ ಎಂ.ಎಲ್.ಎ., ಶ್ರೀಯುತ ಅಂಗಾರ ರವರ ಚುನಾವಣೆ ಎಷ್ಟು ಲಕ್ಷ ರೂಪಾಯಿಗಳಲ್ಲಿ ನಡೆಯುತ್ತಿತ್ತೆಂದರೆ, ಕಳೆದ 10 ವರ್ಷಗಳ ಹಿಂದೆ 10 ರಿಂದ 12 ಲಕ್ಷಗಳ ಒಳಗೆ ಚುನಾವಣೆ ಮುಗಿದಿರುವುದರ ಬಗ್ಗೆ ನಾನು ಉದಾಹರಣೆ ಸಮೇತವಾಗಿ ಕೊಡುತ್ತೇನೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-**ಮಾನ್ಯ ರವಿಕುಮಾರ್‌ರವರೇ ಒಂದು ನಿಮಿಷ. 2008ರಲ್ಲಿ ನಾವು ಶಾಸಕರಾಗಿ ಬಂದಂತಹ ಸಂದರ್ಭದಲ್ಲಿ ಕೆಲವು ಜನರು ಬಳ್ಳಾರಿಗೆ ಹೋದಾಗ ಸ್ವಲ್ಪ ಗೊಂದಲಗಳು ನಡೆದಿತ್ತು. ಅಂಗಾರ ಎಂಬಾತನು ಈ ಚುನಾವಣೆಯನ್ನು dissolve ಮಾಡಿ, ಹೊಸದಾಗಿ ಚುನಾವಣೆಯನ್ನು ಮಾಡೋಣ ಎಂದು ಹೇಳಿದ. ನನ್ನ ಪಕ್ಷದಲ್ಲಿ ಕುಳಿತಿದ್ದ ಅಂಗಾರರವರನ್ನು ಚುನಾವಣೆಗೆ ಎಷ್ಟು ಖರ್ಚು ಮಾಡಿದ್ದೆ ಎಂದು ಕೇಳಿದಾಗ ಈ ಬಾರಿ ತುಂಬಾ ಖರ್ಚಾಯಿತು ಅಣ್ಣಾ, ಎಂದು ಹೇಳಿದ. ಮತ್ತೆ ಎಷ್ಟು ಖರ್ಚಾಯಿತು ಎಂದಾಗ ಅವರು 35 ಸಾವಿರ ರೂಪಾಯಿಗಳು ಖರ್ಚಾಯಿತು ಎಂದು ಹೇಳಿದ. 35

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾವಿರ ರೂಪಾಯಿಗಳಾದರೆ ತಿಂಗಳಿಗೊಂದು ಚುನಾವಣೆಯನ್ನು ಮಾಡಿ ಎಂದು ಹೇಳುತ್ತೇನೆ ಎಂದು ಅವರಿಗೆ ಹೇಳಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದು ಅವರ ಮೊದಲ ಚುನಾವಣೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್‌ರವರೇ ಒಂದು ನಿಮಿಷ. ಮಾನ್ಯ ಸಭಾಪತಿಯವರು 3 ರಿಂದ 4 ಚುನಾವಣೆಗಳಲ್ಲಿ ಸತತವಾಗಿ ಗೆದ್ದು ಬಂದವರು. ಇನ್ನೊಂದು ಚುನಾವಣೆಯಲ್ಲಿ ಕೆಲವು ವೋಟ್‌ಗಳಿಂದ ಸೋತು, ಪುನಃ ನಾನು ವೋಟ್‌ಗಳನ್ನು ಹೇಗೆ ಪಡೆಯಲಿ ಎಂದು ಹೇಳಿದ್ದರು. ಮಾನ್ಯ ಸಭಾಪತಿಯವರು ಹೇಳಿದ ಮಾತು ನನಗೆ ಈಗಲೂ ನೆನಪು ಇದೆ. 'ಯಾರ ಕಿಸೆಯಲ್ಲಿ ದುಡ್ಡು ಇದೆ ಎಂದು ನಾನು ಚುನಾವಣೆಯಲ್ಲಿ ನಿಲ್ಲುವುದಕ್ಕೆ ತಯಾರಿಲ್ಲ' ಎಂದು ಹೇಳಿದರು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದು ಚುನಾವಣೆ ರೀತಿಯಾಗಿದೆ. ನಾನು ಬೆಂಗಳೂರಿನ Varthur ನಲ್ಲಿರುವ ನಮ್ಮ ಸ್ನೇಹಿತರ ಮನೆಗೆ ಹೋಗಿದ್ದೆ. Varthur ನಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ಆಗಿದೆ. ಈ Varthur ಈಗ ಬಿ.ಬಿ.ಎಂ.ಪಿ.,ಗೆ ಸೇರಿದೆ. ಆ Varthur ನಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಕ್ಕೆ ನಡೆದಂತಹ ಚುನಾವಣೆಯಲ್ಲಿ ಎಷ್ಟು ಖರ್ಚಾಯಿತು ಎಂದು ಕೇಳಿದಾಗ ಒಂದೂವರೆ ಕೋಟಿ ರೂಪಾಯಿಗಳು ಖರ್ಚಾಯಿತು ಎಂದು ಹೇಳುತ್ತಾರೆ. ಇವತ್ತಿನ ದಿವಸ ಚುನಾವಣೆ ಎನ್ನುವುದು, . . .

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಇನ್ನು ಎಷ್ಟು ನಿಮಿಷಗಳ ಕಾಲಾವಕಾಶ ಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇನ್ನು ಅರ್ಧ ಗಂಟೆಯೊಳಗೆ ಮಾತನಾಡಿ ಮುಗಿಸುತ್ತೇನೆ. ದಯವಿಟ್ಟು ಸ್ವಲ್ಪ ಹೆಚ್ಚು ಸಮಯ ಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, 4 ಗಂಟೆಯೊಳಗೆ ಮಾತನಾಡುವುದನ್ನು ಮುಗಿಸಿ. ನಂತರ ವಿಶೇಷ ಪ್ರಸ್ತಾವನೆಯೆಂದರೆ, ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಪ್ರಜಾಪ್ರಭುತ್ವ ಎನ್ನುವಂತಹದ್ದು ಮತ್ತು ಚುನಾವಣೆ ಎನ್ನುವಂತಹದ್ದು, ಒಂದು ರೀತಿ ಹಣ ಉಳ್ಳವರ ಸ್ವತ್ತಾಗಿದೆ. ಯಾರ ಹತ್ತಿರ ಹಣವಿರುತ್ತದೆ, ಯಾರ ಹತ್ತಿರ ಜಾತಿ ಬಲ ಇರುತ್ತದೆ; ಕೇವಲ ಜಾತಿ ಒಂದಿದ್ದರೆ ಆಗುವುದಿಲ್ಲ, ಜಾತಿ ಜೊತೆಯಲ್ಲಿ ಹಣವು ಕೂಡ ಇರಬೇಕು. ಜಾತಿ plus ಹಣ equals result. ಇಲ್ಲದಿದ್ದರೆ ಇದರಲ್ಲಿ ಯಾವುದಾದರೂ ಒಂದು ಕಡಿಮೆ ಆಯಿತೆಂದರೆ ನಿಮಗೆ result ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:–** ಮಾನ್ಯ ಎನ್.ರವಿಕುಮಾರ್‌ರವರೇ, ಎಂ3 ಎಂದು ಬಳಸಿ, ಎಂ3 ಎಂದರೆ, Muscle power, money power and man power.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇನ್ನು ಕಾರ್ಯಾಂಗದ ಬಗ್ಗೆ ಬರುವುದಾದರೆ, ಯಾವಾಗಲೂ ಮಾನ್ಯ ಶಾಸಕರು ಹೇಗೆ ಇರುತ್ತಾರೋ, ಹಾಗೆಯೇ ಅಧಿಕಾರಿಗಳು ಇರುತ್ತಾರೆ. ಹಣ ಏನು ಖರ್ಚು ಮಾಡಿಲ್ಲ. ಅವನು ಆದರ್ಶವಾಗಿದ್ದುಕೊಂಡು ಚುನಾವಣೆಯಲ್ಲಿ ಗೆದ್ದು ಬಂದಿದ್ದಾನೆ, ಅವನು ಜೀವನಪೂರ್ತಿ, ಏನೇನೂ corruption ಮಾಡಿಲ್ಲ ಎಂದರೆ, ಖಂಡಿತವಾಗಿಯೂ ಅವರ ಮಾತನ್ನು ಕೇಳುತ್ತಾರೆ. ನಾವೆಲ್ಲರೂ ಕೂಡ ಮಾನ್ಯ ಆಟಲ್ ಬಿಹಾರಿ ವಾಜಪೇಯಿಯವರ ಹೆಸರನ್ನು ಏಕೆ ಹೇಳುತ್ತೇವೆ, ನಾನು ಆಗಲೇ ಇಮಾಮ್ ಸಾಬ್‌ರವರ ಹೆಸರನ್ನು ಹೇಳಿದೆ. ತಾವು ಚುನಾವಣೆಗೆ ಏನು ಹಣ ಖರ್ಚು ಮಾಡದೆಯೇ, ನಿಮ್ಮ ನಡತೆ ಪ್ರಾಮಾಣಿಕವಾಗಿತ್ತೆಂದರೆ, ನೀವು ಬಹಳ ಶುದ್ಧ ಹಸ್ತರಾಗಿದ್ದೀರಿ ಎಂದು ಹೇಳಿದರೆ, ಖಂಡಿತವಾಗಿಯೂ ಅಧಿಕಾರಿಗಳು ತಮ್ಮ ಮಾತನ್ನು ಕೇಳುತ್ತಾರೆ. ಹಾಗಾಗಿ ಶಾಸಕಾಂಗದಲ್ಲಿ ಶಾಸಕರು ಹೇಗಿದ್ದಾರೆ, ಸಂಸದರು ಹೇಗಿದ್ದಾರೆ ಎನ್ನುವುದರ ಮೇಲೆ ಅಧಿಕಾರಿಗಳು ಅವರ ಮಾತನ್ನು ಕೇಳುತ್ತಾರೆ. ಆ ರೀತಿ ಕಾರ್ಯಾಂಗ ಇರುತ್ತದೆ. ಇವತ್ತಿನ ದಿವಸ ಕಾರ್ಯಾಂಗದ ಅಧಿಕಾರಿಗಳು ಹೇಗಿದ್ದಾರೆ ಎಂದರೆ, *IAS, IPS, IRS, IFS, KAS officers*ಮತ್ತು ಇನ್ನಿತರೆ, ಈ ರೀತಿಯ ಅಧಿಕಾರಿಗಳ ವರ್ಗವನ್ನು ತೆಗೆದುಕೊಳ್ಳಿ, ನೌಕರರ ವರ್ಗ ಎಂದು ತೆಗೆದುಕೊಳ್ಳಿ. ಅಧಿಕಾರಿ ವರ್ಗದಲ್ಲಿ ಎ. ಬಿ. ಸಿ ಮತ್ತು ಡಿ ಎಂದು ಈ ರೀತಿಯಲ್ಲಿ ತೆಗೆದುಕೊಳ್ಳಿ. ಇವುಗಳ ಕ್ವಾಲಿಟಿ ಹೇಗಿದೆ, ಇವುಗಳ quality ಎಷ್ಟು ಚೆನ್ನಾಗಿದೆಯೋ, ಕೆಳಗಡೆ ಅಷ್ಟು quality work ಆಗುತ್ತದೆ. ನನಗೆ ಬಹಳ ಬೇಸರವಾಗುತ್ತದೆ. ನನಗೆ ರಾಜಕೀಯದ ಅನುಭವ ಅಷ್ಟಿಲ್ಲ. ನಾನು ಸಾಮಾಜಿಕ ಕ್ಷೇತ್ರದಿಂದ ಮತ್ತು ಶೈಕ್ಷಣಿಕ ಕ್ಷೇತ್ರದಿಂದ ಬಂದಂತಹವನು. ಅಲ್ಲಿ ನಡೆಯುತ್ತಿರುವಂತಹ ವ್ಯವಹಾರಗಳನ್ನು, ಅಲ್ಲಿ ನಡೆಯುತ್ತಿರುವಂತಹ ರೀತಿ–ನೀತಿಗಳನ್ನು ನೋಡಿದರೆ, ಅತ್ಯಂತ ಅಸಹ್ಯ ಪಡುವಂತಹ ರೀತಿಯಾಗುತ್ತದೆ. ಎಲ್ಲಾ ಕಡೆಯಲ್ಲಿಯೂ ಸಹ ಶೇಕಡಾ 5 ರಷ್ಟು, ಶೇಕಡಾ 10 ರಷ್ಟು, ಶೇಕಡಾ 15 ರಷ್ಟು ಮತ್ತು ಶೇಕಡಾ 20 ರಷ್ಟು ಕಮೀಷನ್ ಅನ್ನು ತೆಗೆದುಕೊಳ್ಳುತ್ತಿದ್ದಾರೆ. ನಾವು ಈ ದೇಶವನ್ನು ಮಾರಾಟ ಮಾಡುವುದಕ್ಕೆ ಹೋಗುತ್ತಿದ್ದೇವೆ.

ಡಾ|| ಬಿ.ಆರ್.ಅಂಬೇಡ್ಕರ್‌ರವರ ಕನಸು ಸಂವಿಧಾನದ ಬಹು ಮುಖ್ಯವಾಗಿರುವಂತಹ ಉದ್ದೇಶ ಏನೆಂದರೆ, ಸಮಾಜದ ಅತ್ಯಂತ ಕೊನೆಯವನಿಗೂ ಸಹ ನ್ಯಾಯ ಸಿಗಬೇಕು. ಮಾನ್ಯ ದೀನ ದಯಾಳ್ ಉಪಾಧ್ಯಾಯರು ಇದನ್ನು 'ಅಂತ್ಯೋದಯ' ಎಂದು ಹೇಳುತ್ತಾರೆ. ಕಟ್ಟಕಡೆಯ ವ್ಯಕ್ತಿಗೆ ನ್ಯಾಯ ಸಿಗಬೇಕು. ಅದು ನ್ಯಾಯಾಂಗದ, ಕಾರ್ಯಾಂಗದ ಮತ್ತು ಶಾಸಕಾಂಗದ ಉದ್ದೇಶವಾಗಿದೆ. ಇದು ಸಂವಿಧಾನದ ಮಹೋನ್ನತವಾಗಿರುವಂತಹ ಉದ್ದೇಶವಾಗಿದೆ. ಇವತ್ತು ಕಟ್ಟಕಡೆಯ ವ್ಯಕ್ತಿಗೆ ನ್ಯಾಯವೇ ಸಿಗುತ್ತಿಲ್ಲ. ಶೋಷಣೆ ಅತ್ಯಂತ ವೇಗವಾಗಿ ಜಾರಿಯಲ್ಲಿದೆ. ಇದರಿಂದ ಎಷ್ಟು ಜನ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದರೆ, ನೌಕರಿಗಳು ಸಿಗಲಿಲ್ಲವೆಂದು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಾವು ನೋಡಿದ್ದೇವೆ. ಕೆಲಸ ಕೊಡಿಸುವುದಕ್ಕಾಗಿ ಸಾಲ ಮಾಡಿರುವಂತಹದ್ದನ್ನು ಸಹ ನಾವು ನೋಡಿದ್ದೇವೆ. ಮಗನಿಗೆ ಅಥವಾ ಮಗಳಿಗೆ ನೌಕರಿಯನ್ನು ಕೊಡಿಸಬೇಕೆಂದು 50 ಲಕ್ಷ, 60 ಲಕ್ಷ, ಒಂದು ಕೋಟಿಗಟ್ಟಲೆ ರೂಪಾಯಿಗಳನ್ನು ಸಾಲ ಮಾಡಿರುವುದನ್ನು ಸಹ ನಾನು ನೋಡಿದ್ದೇನೆ. ಯು.ಪಿ.ಎಸ್.ಸಿ., ಮತ್ತು ಕೆ.ಪಿ.ಎಸ್.ಸಿ., ಯಲ್ಲಿ ನಡೆದಿರುವುದನ್ನು ನೋಡಿದರೆ ಅದರ ಬಗ್ಗೆ ಮಾತನಾಡುವುದಕ್ಕೆ ನಾಚಿಕೆಯಾಗುತ್ತದೆ. ಇದರಿಂದ ತಲೆ ತಗ್ಗಿಸಬೇಕೆಂದು ಅನಿಸುತ್ತದೆ. ಡಾ॥ ಬಿ.ಆರ್.ಅಂಬೇಡ್ಕರ್‌ರವರು ಸಂವಿಧಾನವನ್ನು ಬರೆಯಬೇಕಾದರೆ ಈ ರೀತಿಯ ಕಲ್ಪನೆಗಳನ್ನು ಇಟ್ಟುಕೊಂಡಿದ್ದರೆ, ಅವರು ಸಂವಿಧಾನವನ್ನೇ ಬರೆಯುತ್ತಿರಲಿಲ್ಲವೇನೋ.

(ಮುಂದು)

**(483) 17/03/2020/3:50/ಎಸ್‌ಪಿಆರ್/ಬಿಎನ್‌ಎಸ್**
**ಶ್ರೀ ಎನ್.ರವಿಕುಮಾರ್(ಮುಂದು):-**

ನನ್ನ ಪ್ರಕಾರ ಅಂದಿನ ದಿನಗಳಲ್ಲಿ ಚುನಾವಣೆಯ ವೆಚ್ಚ ಸಾವಿರ, ಲಕ್ಷಗಟ್ಟಲೆ ಇತ್ತೋ ಏನೋ ನನಗೆ ಗೊತ್ತಿಲ್ಲ. ಆದರೆ ಇವತ್ತಿನ ದಿವಸ ಕೋಟಿಗಟ್ಟಲೆಯಾಗಿದೆ. ಎಲ್ಲದರಲ್ಲೂ ಬಹಳ ಬುದ್ಧಿವಂತಿಕೆಯಿಂದ ಭ್ರಷ್ಟಾಚಾರ ಮಾಡುತ್ತಿದ್ದಾರೆ. ಬಹಳ ಬುದ್ಧಿವಂತಿಕೆಯಿಂದ ಆಗುವ ಕೆಲಸವನ್ನು ತಪ್ಪಿಸುತ್ತಾರೆ. ಇದು ಕೆಲವು ಬಡವರಿಗೆ ಅರ್ಥವಾಗುತ್ತದೆ, ಇನ್ನು ಕೆಲವರಿಗೆ ಅರ್ಥವಾಗುವುದಿಲ್ಲ. ಆತನಿಗೆ ನೌಕರಿಯು ಯಾಕೆ ಸಿಕ್ಕಿತು ಎನ್ನುವುದು ಅವನಿಗೆ ಕೊನೆಗೆ ಅರ್ಥವಾಗುತ್ತದೆ. ಏಕೆ ಆತನಿಗೆ ವರ್ಗಾವಣೆಯಾಗಲಿಲ್ಲ ಎನ್ನುವುದು ಅವನಿಗೆ ಕೊನೆಯಲ್ಲಿ ಗೊತ್ತಾಗುತ್ತದೆ. ವರ್ಗಾವಣೆಯು ಒಂದು ರೀತಿಯ ದಂಧೆಯಾಗಿದೆ. ಅದೇ ರೀತಿಯಾಗಿ ಕಮಿಷನ್ ಸಹ ಒಂದು ದಂಧೆಯಾಗಿದೆ. ಇವು ಸಂವಿಧಾನದ ಉದ್ದೇಶ ಹಾಗೂ ಆಶಯಗಳಲ್ಲ. ಡಾ॥ ಬಿ.ಆರ್.ಅಂಬೇಡ್ಕರ್‌ರವರು ಏಕೆ ದೇವರಾಗಿ ಕಾಣುತ್ತಾರೆಂದರೆ, ನಮಗೆ ಎದುರಿಗೆ ಕಾಣಿಸುತ್ತಿರುವ ಫೋಟೋಗಳಲ್ಲಿರುವ ಶ್ರೀ ಲಾಲ್ ಬಹದೂರ್ ಶಾಸ್ತ್ರಿ, ಸರ್ ಎಂ.ವಿಶ್ವೇಶ್ವರಯ್ಯ ಇವರುಗಳೆಲ್ಲರೂ ನಮಗೆ ಆದರ್ಶ ವ್ಯಕ್ತಿಗಳಾಗಿದ್ದಾರೆ. ಇವರುಗಳೆಲ್ಲರೂ ಬಹಳ ವರ್ಷಗಳ ಹಿಂದಿನವರಾಗಿದ್ದಾರೆ. ನನಗೆ ನನ್ನ ಅಜ್ಜನ ಹಾಗೂ ಅವರ ಅಜ್ಜನ ಹೆಸರುಗಳು ನೆನಪಿಲ್ಲ. ಏಕೆಂದರೆ ಅವರುಗಳು ಯಾರೂ ಸಹ ಒಳ್ಳೆಯ ಕೆಲಸಗಳನ್ನು ಮಾಡಿಲ್ಲ. ಈ ಕಾರಣಕ್ಕಾಗಿ ನನಗೆ ನನ್ನ ಅಜ್ಜನ ಹೆಸರು ನೆನಪಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಹಾಗಿದ್ದರೆ, ಮಾನ್ಯ ಸದಸ್ಯರಿಗೆ ಪೌರತ್ವ ಸಿಗುವುದು ಕಷ್ಟವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದೇಶದ ಪೌರತ್ವ ಪಡೆಯಲು ಅಜ್ಜನ ಹೆಸರು ಜ್ಞಾಪಕವಿಟ್ಟುಕೊಳ್ಳುವ ಅವಶ್ಯಕತೆ ಇಲ್ಲ. ಪ್ರಾಮಾಣಿಕತೆಯಿಂದ ಇದ್ದರೆ, ಈ ದೇಶದವರು ಎಂದು ತಿಳಿಯುತ್ತದೆ. ಅದರ ಗೋಜಿಗೆ ಹೋಗುವ ಅವಶ್ಯಕತೆ ಇಲ್ಲ. ಈ ದೇಶದ ಪ್ರಜೆಗಳು ಯಾರು, ಯಾರು ಈ ದೇಶದ ಪ್ರಜೆ ಅಲ್ಲ ಎನ್ನುವುದು hundred percent ಗೊತ್ತಾಗುತ್ತದೆ. ಮುಖ ನೋಡಿದರೆ ಹನುಮಂತ ಎಂದು ಗೊತ್ತಾಗುತ್ತದೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕಮಿಷನ್ ದಂಧೆಯ ಬಗ್ಗೆ ಮಾತನಾಡುತ್ತಿದ್ದಾರೆ. ಇದು ಯಾರನ್ನು ಉದ್ದೇಶಿಸಿ ಮಾತನಾಡುತ್ತಿರುವುದು ಎಂದು ಹೇಳಿದರೆ ಒಳ್ಳೆಯದು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಯಾರನ್ನು ಉದ್ದೇಶಿಸಿ ಮಾತನಾಡುತ್ತಿದ್ದೇನೆ ಎಂದು ಹೇಳಿದರೆ, ನಾನು ಮಾತನಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದರ ಬಗ್ಗೆ ಬೆಳಕನ್ನು ಚೆಲ್ಲಿದರೆ ಚೆನ್ನಾಗಿ ಇರುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿದ್ದಾರೆಯೇ ಅಥವಾ ನಿರ್ದಿಷ್ಟವಾಗಿ ಯಾವುದರ ಬಗ್ಗೆ ಮಾತನಾಡುತ್ತಿದ್ದಾರೆ? ಅದರ ಬಗ್ಗೆ ಮಾಹಿತಿ ಇದೆಯೇ ಎಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಸಂವಿಧಾನದ Preamble ನಲ್ಲಿ "WE, THE PEOPLE OF INDIA" ಎಂದು ನಮೂದಾಗಿದೆ. ಅದರಂತೆ ಭಾರತದ ಮಹಾಜನತೆಯ ಭಾಗವಾಗಿ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್ ರವರು ಮಾತನಾಡುತ್ತಿರುವುದರಿಂದ ಕೇಳುತ್ತಿದ್ದೇವೆ. ಆದರೆ ಡಾ|| ವೈ.ಎ.ನಾರಾಯಣ ಸ್ವಾಮಿರವರು ಮಾತನಾಡುತ್ತಿದ್ದರೆ ನಾವು ಕೇಳುತ್ತಿರಲಿಲ್ಲ. ಏಕೆಂದರೆ ನಮಗೆ ಅವರ ಬಗ್ಗೆ ಗೊತ್ತಿದೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ವಿರೋಧ ಪಕ್ಷದ ಸದಸ್ಯರು ನಿಮಗೆ Certificate ಅನ್ನು ನೀಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಎಲ್ಲಾ ವಿಚಾರದಲ್ಲಿ ನಮ್ಮ ಗುರುಗಳಾಗಿದ್ದಾರೆ. ಅವರು ನನಗೆ ರಾಜಕೀಯ ಲೆಕ್ಕಾಚಾರ ಹಾಗೂ ಖರ್ಚು–ವೆಚ್ಚಗಳಲ್ಲಿಯೂ ಸಹ ಗುರುಗಳಾಗಿದ್ದಾರೆ. ಅವರ ಹಿಂದೆ ನಾವಿದ್ದೇವೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನ್ಯಾಯಾಂಗದ ವಿಚಾರವನ್ನು ಹೇಳುವುದಾದರೆ, ಅಲ್ಲಿಯೂ ಸಹ ಕೆಲವು ಒಳ್ಳೆಯ ನ್ಯಾಯಾಧೀಶರನ್ನು ಮತ್ತೆ ಕೆಲವು ಕೆಟ್ಟ ನ್ಯಾಯಾಧೀಶರನ್ನು ನಾವು ಕಾಣುತ್ತೇವೆ. ನ್ಯಾಯಾಲಯಗಳಲ್ಲಿ ನಾಲ್ಕು ಲಕ್ಷಕ್ಕಿಂತ ಹೆಚ್ಚು ಪ್ರಕರಣಗಳು ಬಾಕಿ ಇವೆ. ಮೊನ್ನೆಯ ದಿನ ಕಾನೂನು, ಸಂಸದೀಯ ವ್ಯವಹಾರಗಳ ಮಂತ್ರಿಗಳಾದ ಮಾನ್ಯ ಜೆ.ಸಿ.ಮಾಧುಸ್ವಾಮಿರವರು ಮಾತನಾಡುವಾಗ ಈ ಅಂಕಿ–ಅಂಶಗಳನ್ನು ಹೇಳಿದ್ದರು. ಆಗ ನಾನು ಅದನ್ನು ಬರೆದುಕೊಂಡಿದ್ದೆನು. ನ್ಯಾಯಾಲಯವು ಮುಂದಿನ 24 ಗಂಟೆಗಳಲ್ಲಿ ಬೆಂಗಳೂರಿನಲ್ಲಿರುವ ತ್ಯಾಜ್ಯವನ್ನು ತೆರವುಗೊಳಿಸಬೇಕೆಂದು ನಿರ್ದೇಶನ ನೀಡುತ್ತದೆ.

**ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ನ್ಯಾಯಾಲಯದ ಬಗ್ಗೆ ಪ್ರಸ್ತಾಪಿಸಿದಾಗ ನಾನೊಂದು ಸಂಗತಿಯನ್ನು ಹೇಳಲಿಚ್ಛಿಸುತ್ತೇನೆ. ನನ್ನ ಚಿಕ್ಕಮ್ಮನ ಮಗನನ್ನು ಎಲ್.ಎಲ್.ಬಿ. ಓದಿದ ನಂತರ ಅಭ್ಯಾಸ ಮಾಡಲು ಬೆಂಗಳೂರಿನಲ್ಲಿ ಬಿಟ್ಟೆ. ಆಗ ಭೋಜೇಗೌಡರವರಂತಹ ನನ್ನ ಸ್ನೇಹಿತರೊಬ್ಬರು 'ನೋಡಯ್ಯ ನೀನು argument Lawyer ಆಗುತ್ತಿಯೋ ಅಥವಾ adjustment Lawyer ಆಗುತ್ತಿಯೋ' ಎಂದು ಕೇಳಿದರು. Argument Lawyer ಆದರೆ ಕಾನೂನಿನ ಎಲ್ಲಾ ಪುಸ್ತಕಗಳನ್ನು ಓದಿ ಗಂಭೀರವಾಗಿ ವಾದ ಮಾಡಬೇಕಾಗುತ್ತದೆ. ಒಂದು ವೇಳೆ adjustment Lawyer ಆದರೆ, ನ್ಯಾಯಾಧೀಶರಿಗೆ ಏನು ಬೇಕು ಎನ್ನುವುದನ್ನು ತಿಳಿದುಕೊಂಡು adjust ಮಾಡಬೇಕಾಗುತ್ತದೆ ಎಂದು ಹೇಳಿದರು. ಆಗ ನನ್ನ ಚಿಕ್ಕಮ್ಮನ ಮಗನು ಎರಡೂ ರೀತಿಯ ವಕೀಲ ಆಗುವುದಿಲ್ಲವೆಂದು ಹೇಳಿ ಊರಿಗೆ ಮರಳಿದನು.

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುವಾಗ ಶ್ರೀ ಭೋಜೇಗೌಡರವರ ಹೆಸರನ್ನು ಏಕೆ ಉದಾಹರಣೆಯಾಗಿ ಹೇಳಿದರು?

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಕೆಲವರು ಅದನ್ನೂ ಸಹ ಮೀರಿದವರಾಗಿದ್ದಾರೆ. ಅದರಲ್ಲಿ ಶ್ರೀ ಭೋಜೇಗೌಡರೂ ಸಹ ಒಬ್ಬರಾಗಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಭೋಜೇಗೌಡರವರನ್ನು compete ಮಾಡುವುದಕ್ಕಾಗುವುದಿಲ್ಲ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಕೆಲವೊಂದಕ್ಕೆ parameter ಇರುವುದಿಲ್ಲ. ಹೀಗಾಗಿ ಅಳೆಯುವುದಕ್ಕಾಗುವುದಿಲ್ಲ. ಅದೇ ರೀತಿಯಾಗಿ ಶ್ರೀ ಭೋಜೇಗೌಡರವರನ್ನು ಅಳೆಯುವುದಕ್ಕಾಗುವುದಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಶ್ರೀ ಭೋಜೇಗೌಡರ ಬಗ್ಗೆ ಹೇಳುವುದಾದರೆ, ಅವರು ವರ್ತಮಾನದ ಅತ್ಯಂತ ಚಲಾವಣೆಯಲ್ಲಿರುವ ನಾಣ್ಯದಂತೆ,

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಮಾತನಾಡುತ್ತಾ, ಮಾತನಾಡುತ್ತಾ ಭೋಜೇಗೌಡರು ಪೂರ್ತಿಯಾಗಿ ಬಿ.ಜೆ.ಪಿ. ಪಕ್ಷದ ಕಡೆಗೆ ವಾಲಿದರೇ ಎಂದೆನಿಸುತ್ತದೆ. ಏಕೆಂದರೆ ನಾವುಗಳು ಮೊನ್ನೆಯಿಂದ ನೋಡುತ್ತಿದ್ದೇವೆ. ಮಾತೆತ್ತಿದರೆ ಶ್ರೀ ರವಿಕುಮಾರ್‌ರವರು ಶ್ರೀ ಭೋಜೇಗೌಡರವರಿಗೆ ಸಮಯಾವಕಾಶ ಕೊಡುತ್ತಾರೆ. ಅದೇ ರೀತಿಯಾಗಿ ಶ್ರೀ ಭೋಜೇಗೌಡರವರು ಶ್ರೀ ರವಿಕುಮಾರ್‌ರವರಿಗೆ ಸಮಯಾವಕಾಶವನ್ನು ಕೊಡುತ್ತಾರೆ. ಇದು ಏನೋ direction change ಆದ ರೀತಿಯಲ್ಲಿ ಕಾಣುತ್ತಿದೆ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಶ್ರೀ ಯು.ಬಿ.ವೆಂಕಟೇಶ್ ರವರು ನಮ್ಮ ಹತ್ತಿರದಲ್ಲಿದ್ದಾರೆ. ಹೀಗಾಗಿ ಅವರು ನಮ್ಮ ಪಕ್ಷಕ್ಕೆ ಬೇಗ ಬರುತ್ತಾರೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಕೆಲವರನ್ನು ನಮ್ಮವರಾಗಿ ಮಾಡಿಕೊಳ್ಳಬೇಕು. ಆದರೆ ಮತ್ತೆ ಕೆಲವರು ಈಗಾಗಲೇ ನಮ್ಮವರಾಗಿಬಿಟ್ಟಿದ್ದಾರೆ. ಶ್ರೀ ವೆಂಕಟೇಶ್‌ರವರೂ ಸಹ ನಮ್ಮವರಾಗಿಬಿಟ್ಟಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅದನ್ನು ಕಡತದಿಂದ ತೆಗೆದುಹಾಕಿ. ಮಾನ್ಯ ಮಂತ್ರಿಗಳು ಹೇಳಿದಂತೆ ಆಗುವುದಿಲ್ಲ. ನಾನು ಯಾವಾಗಲೂ ಸೈದ್ಧಾಂತಿಕವಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದವನಾಗಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, **"ಹೃದಯ ಹೃದಯಗಳ ವಾತ್ಸಲ್ಯಕ್ಕೆ ಕೊಂಡಿಯ ಅವಶ್ಯಕತೆ ಇದೆಯೇ? ಅದು ಯಾವಾಗಲೂ ಒಬ್ಬರೊಬ್ಬರನ್ನು ಅರಿತಾಗ ಮಾತ್ರ"** ಎಂಬ ನಾಣ್ನುಡಿಯಂತೆ ನಾವು ಇಲ್ಲಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನ್ಯಾಯಾಲಯಗಳ ಬಗ್ಗೆ ಒಂದು ವಿಚಾರವನ್ನು ನಾನು ತಿಳಿಸಬಯಸುತ್ತೇನೆ. ನ್ಯಾಯಾಲಯಗಳಲ್ಲಿ ಪಾವತಿಸುವ ಫೀಸು, ವಕೀಲರು ಕೇಳುವ ಹಣ, ವಕೀಲರು ಮಾತನಾಡುವ ಶೈಲಿಗಳಿಂದಾಗಿ ನ್ಯಾಯಾಲಯಕ್ಕೆ ಹೋಗುವುದಕ್ಕೆ ಸಾಧ್ಯವೇ ಇಲ್ಲ ಹಾಗೂ ಇಲ್ಲಿ ಅವನಿಗೆ ನ್ಯಾಯವು ದೊರೆಯುವುದಿಲ್ಲವೆಂದು ಬಡವನಿಗೆ ಅನ್ನಿಸುತ್ತದೆ. ಈ ಕಾರಣದಿಂದಾಗಿ ಬಡವನು ತನ್ನ ಜಮೀನಿಗೆ ಸಂಬಂಧಪಟ್ಟ ಅಥವಾ ಇನ್ನಾವುದೇ ವಿವಾದಗಳನ್ನು ಗ್ರಾಮಗಳ ಮಟ್ಟದಲ್ಲಿಯೇ ಪರಿಹರಿಸಿಕೊಳ್ಳುತ್ತಾನೆ. ಇವತ್ತಿನ ದಿವಸ ಅನೇಕರು ನ್ಯಾಯಾಲಯದಿಂದ ಹೊರಗಡೆ ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳುತ್ತಾರೆ. ಈ ವಿಚಾರದಲ್ಲಿ ಅನೇಕ ಏಜೆನ್ಸಿಗಳಿವೆ. ನ್ಯಾಯಾಲಯದ ವ್ಯಾಜ್ಯಗಳನ್ನು ಬಗೆಹರಿಸಲು ಅನ್ಯ ಮಾರ್ಗಗಳನ್ನು ಅನುಸರಿಸುತ್ತಾರೆ. ಉದಾಹರಣೆಗೆ ಇರುವ 20 ಸೈಟುಗಳ ಪೈಕಿ 5 ಸೈಟುಗಳನ್ನು ನೀಡುವಂತೆ ಕೋರುತ್ತಾರೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಏನೋ ಮಾತನಾಡುವವರಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ನ್ಯಾಯಾಲಯಗಳ ಬಗ್ಗೆ ಬಹಳವಾಗಿ ಮಾತನಾಡಿದ್ದೇವೆ. ದುರ್ದೈವದ ಸಂಗತಿ ಎಂದರೆ ಇಂತಹ ಯಾವ ವಿಷಯಗಳು ಮಾಧ್ಯಮಗಳಲ್ಲಿ ವರದಿಯಾಗಿಲ್ಲ. ನ್ಯಾಯಾಧೀಶರುಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ವೃಂದದ ಅಧಿಕಾರಿಗಳನ್ನು ನ್ಯಾಯಾಲಯದಲ್ಲಿ ನಿಲ್ಲಿಸಿಕೊಂಡು ಏನು ಬೇಕಾದರೂ ಮಾತನಾಡುತ್ತಾರೆ. ಆಗ ಅಧಿಕಾರಿಗಳು ತಲೆ ತಗ್ಗಿಸುವಂತಾಗುತ್ತದೆ. ಈ ವಿಚಾರದಲ್ಲಿ ನಾನೊಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ನ್ಯಾಯಾಧೀಶರೊಬ್ಬರು ರೈಲ್ವೆ ನಿಲ್ದಾಣಕ್ಕೆ ಬರುವಾಗ ಅಲ್ಲಿದ್ದ ಎಲ್ಲಾ ವಾಹನಗಳನ್ನು ತೆರವುಗೊಳಿಸುತ್ತಾರೆ. ನಾನು ಮತ್ತು ಮಾನ್ಯ ಕೊಂಡಯ್ಯರವರು ನೋಡಿದಂತೆ, ಕಳೆದ 29 ವರ್ಷಗಳಿಂದ ಪ್ರಕರಣವೊಂದು ವಿಚಾರಣೆಯಲ್ಲಿದ್ದು, ಇವತ್ತಿಗೂ ಸಹ ಅದು ಮುಕ್ತಾಯಗೊಂಡಿರುವುದಿಲ್ಲ. ನ್ಯಾಯಾಧೀಶರುಗಳಿಗೆ ಕೇಳುವವರು, ಹೇಳುವವರು ಯಾರೂ ಇಲ್ಲ. ಪ್ರಕರಣದ ವಿಚಾರಣೆಯ ದಿನಾಂಕವನ್ನು ನೀಡುತ್ತಿರುತ್ತಾರೆ ಹಾಗೂ ವಿಚಾರಣೆಯು ಮುಂದಕ್ಕೆ ಹೋಗುತ್ತಿರುತ್ತದೆ. ಅವರು ತಮ್ಮ ಮನಸ್ಸಿಗೆ ಬಂದ ಹಾಗೆ ಮಾಡುತ್ತಾರೆ. ಇದನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ. ನಮ್ಮಲ್ಲಿನ ದೌರ್ಬಲ್ಯದಿಂದಾಗಿ ನ್ಯಾಯಾಧೀಶರುಗಳೇ ಸರ್ಕಾರವನ್ನು ನಡೆಸುತ್ತಾರೆ. ಇದನ್ನೇ ಮಾಡಿ, ಹೀಗೆ ಮಾಡಿ ಎನ್ನುವ ನಿರ್ದೇಶನಗಳನ್ನು ಕೊಡುತ್ತಾರೆ. ನಾವುಗಳೆಲ್ಲರೂ ಯಾವುದೋ ದೊಡ್ಡ ಅಪರಾಧ ಮಾಡಿದ್ದೇವೆ ಎಂದು ನಾವು ಅವರ ಬಳಿ ಹೋಗುವಂತಹ ತಪ್ಪನ್ನು ಮಾಡುತ್ತೇವೆ. ಎಲ್ಲದರಲ್ಲಿಯೂ ಸಹ ನ್ಯಾಯಾಧೀಶರುಗಳಿಗೆ ಅಧಿಕಾರವಿದೆ. ನ್ಯಾಯಾಲಯಗಳಲ್ಲಾಗುತ್ತಿರುವ ಅನ್ಯಾಯ, ದೌರ್ಜನ್ಯಗಳ ಬಗ್ಗೆ ಶಾಸನ ಸಭೆಗಳಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಚಮಚದಿಂದ ಮೊದಲುಗೊಂಡು ಎಲ್ಲವೂ ಬೇಕು. ನಿರ್ದಿಷ್ಟವಾಗಿ ಇಂತಹುದೇ ಮನೆ, ಕರ್ಟನ್‌ಗಳಿರಬೇಕೆಂದು ನ್ಯಾಯಾಧೀಶರುಗಳು ಕೇಳುತ್ತಾರೆಂದು ನಾನು ಇವತ್ತಿನ ದಿವಸ ಬೆಳಗ್ಗೆ ವಾಯುವಿಹಾರಕ್ಕೆ ಹೋದಾಗ, ಇಂಜಿನೀಯರ್‌ರೊಬ್ಬರು ನನಗೆ ಹೇಳಿದರು. ಅವರ ಬೇಡಿಕೆಗಳನ್ನು ಈಡೇರಿಸದಿದ್ದರೆ ಏನು ಮಾಡುತ್ತಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯಾಂಗದ ಬಗ್ಗೆ ನಾವು ಬಹಳವಾಗಿ ವಿಚಾರ ಮಾಡಬೇಕು. ನಾನು ಮತ್ತು ಮಾಜಿ ವಿಧಾನ ಪರಿಷತ್ತಿನ ಸದಸ್ಯರಾದ ವೀರ್ ಕುಮಾರ ಅಪ್ಪಾಸೋ ಪಾಟೀಲ್ ರವರು ರೈಲಿನ 1 ಕ್ಲಾಸ್ ಎ.ಸಿ.ಗೆ ಹೋಗಿದ್ದೆವು. ಅಲ್ಲಿ ನಮ್ಮಿಬ್ಬರನ್ನು ಹೊರತುಪಡಿಸಿ, ಇಬ್ಬರು ನ್ಯಾಯಾಧೀಶರು ಒಟ್ಟಾರೆಯಾಗಿ ನಾಲ್ಕು ಜನರಿಗೆ ಸೀಟು ಇತ್ತು. ಆಗ ಟಿ.ಟಿ.ಇ.ಯವರು ಬಂದು ನಮ್ಮಿಬ್ಬರನ್ನು ಕುರಿತು ದಯಮಾಡಿ ನಿಮಗೆ ಕೈ ಮುಗಿದು ಕೇಳುತ್ತೇನೆ. ನಿಮ್ಮಿಬ್ಬರಿಗೆ ಬೇರೆ ಸೀಟುಗಳನ್ನು ನೀಡುತ್ತೇನೆ ಎಂದು ಹೇಳಿದನು. ಇದಕ್ಕೆ ಕಾರಣವನ್ನು ಕೇಳಿದಾಗ, ಅಲ್ಲಿ ನ್ಯಾಯಾಧೀಶರು ಬರುವವರಿದ್ದಾರೆಂದು ತಿಳಿಸಿದರು. ಅವರುಗಳು ಬಂದರೆ ಏನಾಯಿತು, ಈ ಸೀಟುಗಳು ನಮಗೆ ಅಲಾಟ್ ಆಗಿವೆ ಎಂದು ನಾವು ತಿಳಿಸಿದೆವು. ಆಗ ವೀರ ಕುಮಾರ ಅಪ್ಪಾಸೋ ಪಾಟೀಲ್ ರವರು ನ್ಯಾಯಾಧೀಶರಲ್ಲ ಅವರ ಅಜ್ಜ ಬಂದರೂ ಸಹ ನಾವು ಸೀಟುಗಳನ್ನು ಬಿಡುವುದಿಲ್ಲ, ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ತಿಳಿಸಿದರು. ನಾನು ಹೋಗಲಿ ಬಿಡು ಎಂದು ಮಾಜಿ ಶಾಸಕರಿಗೆ ತಿಳಿಸಿದೆನು. ಆಗ ಮಾಜಿ ಶಾಸಕರು ನನಗೆ ಸುಮ್ಮನೆ ಕುಳಿತುಕೊಳ್ಳುವುದಾಗಿ ತಿಳಿಸಿದರು. ಆಗ ನಮ್ಮಿಬ್ಬರ ಸಂಭಾಷಣೆಯನ್ನು ಕೇಳಿದ ನ್ಯಾಯಾಧೀಶರುಗಳು ಬೇರೆ ಕಡೆಗೆ ಹೋದರು. ಆಗ ಟಿ.ಟಿ.ಇ. ರವರು ನೀವು ಹೀಗೆ ಮಾಡಿದರೆ ನಾಳೆ ನನ್ನ ಪರಿಸ್ಥಿತಿ ಏನಾಗುತ್ತದೆ ಎಂದು ಕೇಳಿದನು. ಆಗ ಮಾಜಿ ಶಾಸಕರು ಅದು ನಿಮ್ಮ ಕರ್ಮ ಎಂಬುದಾಗಿ ತಿಳಿಸಿದರು. ಪ್ರತಿ ಹಂತದಲ್ಲಿ ನಾವು ನ್ಯಾಯಾಲಯಕ್ಕೆ ಹೋದರೆ, ಅಲ್ಲಿ ನಾವು ಯಾವ ರೀತಿಯ ಪರಿಸ್ಥಿತಿಯನ್ನು ಅನುಭವಿಸುತ್ತೇವೆಂದು ಆಲೋಚಿಸಬೇಕಾಗಿದೆ. ನ್ಯಾಯಾಲಯಗಳಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ವೃಂದದ ಅಧಿಕಾರಿಗಳಿಗೆ ಯಾವ ರೀತಿಯಲ್ಲಾದರೂ ಮಾತನಾಡುತ್ತಾರೆ. ನಾವುಗಳು ಯಾರೂ ಸಹ ಅದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಶಾಸನ ಸಭೆಗಳಲ್ಲಿ ನಮಗೆ ಇರುವ ಅಧಿಕಾರಗಳಿಂದ ನಾವು ಜನರಿಗೆ ನ್ಯಾಯ ಕೊಡುವ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕು. ಈ ವಿಚಾರದಲ್ಲಿ ಒಂದು ರೀತಿಯ ತೀರ್ಮಾನವಾಗಬೇಕು. ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳಲ್ಲಿರುವ ಎಷ್ಟು ನ್ಯಾಯಾಲಯಗಳಲ್ಲಿ ಎಷ್ಟು ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ ಎನ್ನುವ ಮಾಹಿತಿಯನ್ನು ಸದನಕ್ಕೆ ತರಿಸಬೇಕು. ಅವುಗಳು ವಿಲೇವಾರಿಯಾಗದಿರುವುದಕ್ಕೆ ಕಾರಣಗಳನ್ನು ತಿಳಿಸಬೇಕು. ನ್ಯಾಯಾಲಯಗಳಲ್ಲಿ ಅನ್ಯಾಯವು ಪರಮಾವಧಿಯ ಹಂತಕ್ಕೆ ತಲುಪಿದೆ. ಇದರ ಬಗ್ಗೆ ನಾವುಗಳು ಯಾರೂ ಸಹ ಪ್ರಶ್ನೆ ಮಾಡುವುದಿಲ್ಲ. ಇವತ್ತಿನ ರಾಜಕಾರಣದ ಚಿತ್ರಣವು ಬದಲಾಗಿದೆ. ಇದು ಮೊದಲಿನಂತಿಲ್ಲ; ನಮ್ಮ ಹೆಸರುಗಳನ್ನು ಬಳಸಿ, ಅವರುಗಳು ಒಳ್ಳೆಯವರಾಗುತ್ತಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಪ್ರಸ್ತಾಪಿಸಿದಂತೆ, ಐ.ಎ.ಎಸ್. ಮತ್ತು ಕೆ.ಎಸ್.ಎಸ್. ವೃಂದದ ಅಧಿಕಾರಿಗಳಿಗೆ accountability ಇದೆ. ಅದೇ ರೀತಿಯಾಗಿ ಶಾಸಕರುಗಳಿಗೆ ಹಾಗೂ ಸಂಸದರುಗಳಿಗೆ accountability ಇದೆ. ಆದರೆ ನ್ಯಾಯಾಧೀಶರುಗಳಿಗೆ ಏಕೆ accountability ಇಲ್ಲ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(484)/17-3-2020/4-00/ಎಲ್ಎಂ/ಬಿಎನ್ಎಸ್

**ಶ್ರೀ ಎಸ್.ಸುರೇಶಕುಮಾರ್(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, 10 ವರ್ಷಗಳ ಹಿಂದೆ ನಾನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವನಾಗಿದ್ದೆ. ಆಗ ಹೊಳ್ಳಲಕೇರಿಯಲ್ಲಿ ಕೋರ್ಟ್ ಉದ್ಘಾಟನಾ ಕಾರ್ಯಕ್ರಮವಿತ್ತು. ನಾನು ಅದಕ್ಕೆ ಮುಖ್ಯ ಅತಿಥಿಯಾಗಿದ್ದೆ. ಒಂದು ವಾರದ ಮುಂಚೆ ನಮ್ಮ ಮನೆಗೆ ಒಬ್ಬರು ಪೊಲೀಸ್‌ನವರು ಬಂದರು. I was staying in the Ministerial Quarters. ಪೊಲೀಸ್‌ನವರನ್ನು ಕರೆದು ಕೂಡಿಸಿ ಕಾಫಿ ಕೊಟ್ಟು ನಂತರ ಕೇಳಿದೆ, ಏನು ಸಮಾಚಾರ ನೀವು ಬಂದಿದ್ದೀರಾ ಎಂದು ಕೇಳಿದೆ, ಅದಕ್ಕೆ ಅವರು ನಿಮ್ಮಿಂದ ಕೆಲವು ವಿವರಗಳು ಬೇಕು ಸರ್ ಎಂದು ಕೇಳಿದರು, ಏನು ಕೇಳಿ ಎಂದಾಗ, ಆ ಪೊಲೀಸ್‌ನವರು 'ನಿಮ್ಮ ಹೆಸರು ಏನು' ಎಂದು ಕೇಳಿದರು. ಅಯ್ಯಾ ಬೋರ್ಡ್ ನೋಡಿಕೊಂಡೆ ಒಳಗೆ ಬಂದಿದ್ದೀರಿ ಮತ್ತೆ ನನ್ನ ಹೆಸರನ್ನು ಕೇಳುತ್ತೀರಲ್ಲ ಎಂದು ಹೇಳಿದೆ. ಸಾರಿ ಸರ್ ಎಂದು ಹೇಳಿ, ನಿಮ್ಮ ತಂದೆಯವರ ಹೆಸರು ಏನು ಎಂದು ಕೇಳಿದರು. ಮೂರನೇ ಪ್ರಶ್ನೆ 'ನಿಮ್ಮ ಮೇಲೆ ಏನಾದರು ಕ್ರಿಮಿನಲ್ ಕೇಸ್‌ಗಳು ಇವೆಯೇ ಸರ್' ಎಂದು ಕೇಳಿದರು. I was just upset. ತಕ್ಷಣ ಪೊಲೀಸ್ ಕಮೀಶನರ್‌ವರಿಗೆ ಫೋನ್ ಮಾಡಲಾಯಿತು. ಅಲ್ಲಿಗೆ ಒಂದು ಭಾಗ ಮುಗಿಯಿತು. ನಂತರ ಪೊಲೀಸ್‌ನವರು ಏಕೆ ಬಂದಿದ್ದರು ಎನ್ನುವುದು ಗೊತ್ತಾಯಿತು. ಆ ಕಾರ್ಯಕ್ರಮದಲ್ಲಿ ಭಾಗವಹಿಸಿದಂತಹ ಆಗಿನ Chief Justice, ನನ್ನ ಜೊತೆ ವೇದಿಕೆ ಮೇಲೆ ಕ್ರಿಮಿನಲ್ ಕೇಸ್ ಇರುವವರು ಯಾರು ಕುಳಿತುಕೊಳ್ಳಬಾರದು ಎಂದು ಸೂಚನೆ ಕೊಟ್ಟಿದ್ದರು. ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ವಿಷಯವನ್ನು ಎಸ್.ಪಿ. ಯವರಿಗೆ ಹೇಳಿದ್ದಾರೆ. ಎಸ್.ಪಿ. ಯವರು ಪೊಲೀಸ್‌ರನ್ನು ನಮ್ಮ ಮನೆಗೆ ಕಳುಹಿಸಿದ್ದಾರೆ. ನಾನು ಆ ಸಭೆಯಲ್ಲಿ ಮಾತನಾಡುತ್ತಾ, ಇನ್ನು ಮೇಲೆ ನಾನು ಕೂಡಾ ವೇದಿಕೆ ಮೇಲೆ ಕೂಡುವಾಗ ಯಾರ್ಯಾರ ಮೇಲೆ ಕ್ರಿಮಿನಲ್ ಕೇಸ್ ಇವೆ ಎನ್ನುವುದನ್ನು ನೋಡಿಕೊಂಡೆ ಕೂಡುತ್ತೇನೆ ಎಂದು ಹೇಳಿದೆ. Unfortunately, that Chief Justice was almost about to be Impeached. ಅವರು ರಾಜೀನಾಮೆ ಕೊಟ್ಟು ಹೇಗೆ ಹೋದರು ಎನ್ನುವುದು ಭೋಜೇಗೌಡರಿಗೆ ಗೊತ್ತು. ಅಂದರೆ ನಾವು ಬಹಳ ಶ್ರೇಷ್ಠರು ಬೇರೆಯವರು ಕನಿಷ್ಠ ಎನ್ನುವ ಭಾವನೆ ಸರಿಯಲ್ಲ. ಯಾವುದೇ ಕ್ಷೇತ್ರದವರಾದರೂ ಇನ್ನೊಂದು ಕ್ಷೇತ್ರಕ್ಕೂ ಗೌರವ ಕೊಡಬೇಕು. Unfortunately ಈ ಸ್ಥಿತಿಯಲ್ಲಿದ್ದೇವೆ.

(ಗೊಂದಲ)

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಗಳೆ, ಈ ವಿಚಾರವಾಗಿ ಒಂದು ಸಣ್ಣ ಕಥೆಯನ್ನು ಹೇಳುತ್ತೇನೆ, ನಮ್ಮ ಮಾಜಿ ಮುಖ್ಯಮಂತ್ರಿಗಳು ಬ್ಯಾಡ್ಮಿಟನ್ ಅಥವಾ ಟೆನ್ನಿಸ್ ಆಟವಾಡುತ್ತಿದ್ದರು. ಅವರ ಜೊತೆಗೆ ಒಬ್ಬರು Judge partner ಆಗಿ ಆಟವಾಡುತ್ತಿದ್ದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ urgent ಆಗಿ ಬರಬೇಕು ಎಂದು ಕಾಲ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತದೆ. ಆಗ ಮುಖ್ಯಮಂತ್ರಿಗಳು ಆಟ ಮುಂದುವರೆಸಿ ನಾನು ಮತ್ತೆ ಬರುತ್ತೇನೆ ಎಂದು ತಮ್ಮ ಪಕ್ಕದಲ್ಲಿರುವ ಸ್ನೇಹಿತರಿಗೆ ಹೇಳಿ ಹೋಗುತ್ತಾರೆ. ಸ್ನೇಹಿತರು ಮುಖ್ಯಮಂತ್ರಿಗಳಿಗೆ ಏನು ಹೇಳಲು ಆಗದೆ ಸುಮ್ಮನೆ ಆಯಿತು ಸರ್ ಎಂದು ಹೇಳುತ್ತಾರೆ. ಮುಖ್ಯಮಂತ್ರಿಗಳು ಹೋದಮೇಲೆ, Judge, ಬಾಪ್ಪಾ ಆಡೋಣ ಎಂದು ಹೇಳುತ್ತಾರೆ. ಅದಕ್ಕೆ ಆತ ಇಲ್ಲ ಸರ್ ನಾನು ಆಡುವುದಿಲ್ಲ ಎಂದು ಹೇಳಿದರು. ನಂತರ Judge ಕಿಟ್ ತೆಗೆದುಕೊಂಡು ಹೊರಗಡೆ ಬರುತ್ತಾರೆ. ಹೊರಗೆ ಬಂದು ಯಾಕ್ರಿ ನೀವು ಆಡಲಿಲ್ಲ ಎಂದು ಕೇಳುತ್ತಾರೆ. ಅದಕ್ಕೆ ಆ ವ್ಯಕ್ತಿ, ಇಲ್ಲ ಸರ್ ನನ್ನದೊಂದು ಕೇಸ್ ನಿಮ್ಮ ಮುಂದೆ ಇದೆ, ಯಾರಾದರೂ ನೋಡಿದರೆ ತಪ್ಪಾಗುತ್ತದೆ ಸರ್ ಎಂದು ಹೇಳಿದರು. ಅಂದರೆ ಜನರಲ್ಲಿ ಒಂದು ನಂಬಿಕೆ ಇದೆ. ಆದರೆ ಅವರಲ್ಲಿ ಆ ನಂಬಿಕೆ ಇಲ್ಲ. ಒಂದು ಉದಾಹರಣೆ ಹೇಳಿದೆ ಅಷ್ಟೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಗಳೆ, 1996ರ ನೆನಪುಗಳನ್ನು ಹೇಳುತ್ತೇನೆ. ನಾನು ಮತ್ತು ಮಾನ್ಯ ಸುರೇಶ್‌ಕುಮಾರ್‌ರವರು ಮೊದಲನೆಯ ಬಾರಿ ಕೆಳಮನೆಯ ಸದಸ್ಯರಾಗಿದ್ದೆವು. ಮಾನ್ಯ ದಿ:ಜೆ.ಎಚ್.ಪಟೇಲ್‌ರವರು ಆಗ ಮುಖ್ಯಮಂತ್ರಿಗಳಾಗಿದ್ದರು. ಅಂದು ಬೆಳಿಗ್ಗೆ ಹೈಕೋರ್ಟ್‌ನಲ್ಲಿ ಒಂದು PIL (Public Interest Litigation) file ಆಯಿತು, ಸಾರ್ವಜನಿಕ ಹಿತದೃಷ್ಟಿಯಲ್ಲಿ ಇಂತಹ ಒಂದು quarters ಬೇಕು ಎಂದು. ಅಂದು ಸಂಜೆ Judge ಇಂತಹ quarters ನ್ನು ಇಂತಹವರಿಗೆ ಕೊಡಿ ಎಂದು ಆದೇಶ ಮಾಡಿದರು. ಆ quarters ವಿಚಾರದ ಮೇಲೆ ಕೆಳಮನೆಯಲ್ಲಿ ದೊಡ್ಡ ಚರ್ಚೆ ನಡೆಯಿತು. ಆಗ ಕೆಳಮನೆಯಲ್ಲಿ ಶ್ರೀ ನಂಜೇಗೌಡರು, ಶ್ರೀ ರಮೇಶ್‌ಕುಮಾರ್‌ರವರು ಸಭಾಧ್ಯಕ್ಷರಾಗಿದ್ದರು. ಶ್ರೀ ಎಂ.ಪಿ.ಪ್ರಕಾಶ್‌ರವರು, ಶ್ರೀ ಸುರೇಶ್‌ಕುಮಾರ್ ಮತ್ತು ನಾನು ಎಲ್ಲರೂ ಆ ಸದನದಲ್ಲಿದ್ದೆವು. ಎಷ್ಟು ನಿರ್ಭಯವಾಗಿ ನ್ಯಾಯಾಂಗ ವ್ಯವಸ್ಥೆ ಬಗ್ಗೆ ಹಿರಿಯ ನಾಯಕರು ಮಾತನಾಡಿದ್ದಾರೆ ಎನ್ನುವುದನ್ನು ಅವತ್ತು ಸದನದಲ್ಲಿ ಆಗಿರುವ ಚರ್ಚೆಯನ್ನು ನಾವೆಲ್ಲರೂ ಓದಬೇಕು. ಅಂದು quarters allot ಮಾಡಿರುವ ವಿಷಯವನ್ನು ಇಟ್ಟುಕೊಂಡು ಬೆಳಿಗ್ಗೆಯಿಂದ ಸಂಜೆವರೆಗೆ ಅದ್ಭುತವಾದ ಚರ್ಚೆ ನಡೆಯಿತು. ಸಂಜೆ ಸರ್ಕಾರದಿಂದ ಉತ್ತರ ಕೊಡುತ್ತಾ, ಹೈಕೋರ್ಟ್ ಆದೇಶ ಮಾಡಿರುವುದು ನಿಜ. ಆದರೆ ಇದನ್ನು ನಾವು ನಿನ್ನೆಯೇ ಒಬ್ಬರಿಗೆ allot ಮಾಡಿದ್ದೇವೆ, it is infructuous ಎಂದು ಹೇಳಿದರು. Quarters ನ್ನು allot ಮಾಡಲಿಲ್ಲ. ಅಂದರೆ ಒಂದು quarters ವಿಷಯದಲ್ಲಿಯೂ Judges ಹೇಗೆ ತಮ್ಮ ಸ್ವಾರ್ಥವನ್ನು ಈಡೇರಿಸಿಕೊಳ್ಳುವ ಕೆಲಸವನ್ನು ಮಾಡುತ್ತಾರೆ ಎನ್ನುವುದು ಇದರಿಂದ ತಿಳಿಯುತ್ತದೆ. ಆದರೆ ಇವತ್ತು Judges ಬಗ್ಗೆ ಮಾತನಾಡುವುದಕ್ಕೆ ನಮಗೆ ಭಯವಾಗುತ್ತದೆ. ನಮ್ಮ background ಬಗ್ಗೆ ನಮಗೆ ವಿಶ್ವಾಸವಿಲ್ಲ. ನಮ್ಮ ಯಾವ ಕೇಸ್‌ಗಳು ಇವೆಯೋ ಏನೋ ಎಂದು. ನಮ್ಮ ಅಧಿಕಾರಿಗಳು ಕೋರ್ಟ್‌ಗೆ ಹೋದಾಗ ಅವರು ನಿಂತುಕೊಳ್ಳುವಂತಹ ರೀತಿಯನ್ನು ನೋಡಿದಾಗ ಅವರಿಗೂ ಆತಂಕ. ಇದು ಡಾ: ಬಿ.ಆರ್.ಅಂಬೇಡ್ಕರ್‌ರವರ ಆಶಯಕ್ಕೆ ವಿರುದ್ಧವಾದದ್ದು. ಅಲ್ಲಿ separate line ಇದೆ. ಅದು Legislature, Judiciary, Executive ಮಧ್ಯೆ separation

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

of power ಇದೆ. ಅದು over activism ಆಗಿದೆ. ಲಕ್ಷ್ಮಣ ರೇಖೆಯನ್ನು ಕೋರ್ಟ್‌ಗಳು ದಾಟುತ್ತಿವೆ. ಯಾರಿಗೂ ಪ್ರಶ್ನೆ ಮಾಡುವ ಧೈರ್ಯವಿಲ್ಲ. ಏಕೆಂದರೆ ಇಲ್ಲಿಂದ ಹೊರಗೆ ಹೋದಮೇಲೆ ಇನ್ನು ಯಾವ ಕೇಸ್‌ನಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ ಎನ್ನುವುದು ನಮಗೇ ಭಯ. ಈ ಕಾರಣಕ್ಕೆ ಕೋರ್ಟ್ ತಾನು ಹೇಳಿದ್ದೆ ಸರಿ ಎನ್ನುತ್ತಿದೆ. ಕೆಲವು ಸಾರಿ ಅಗತ್ಯ ಮೀರಿ ರಾಜಕಾರಣಿಗಳ ಬಗ್ಗೆ ಮತ್ತು ಅಧಿಕಾರಿಗಳ ಬಗ್ಗೆ comment ಮಾಡುತ್ತಿದೆ. ಕೋರ್ಟ್ ಛೇರ್‌ನಲ್ಲಿ ಕುಳಿತು ಹೇಳುವ ಎಲ್ಲ ಮಾತುಗಳು ಮೌಖಿಕ ಆದೇಶಗಳಾಗುತ್ತವೆ. ಹಾಗಾದರೆ ಅವರು ಮಾಡುವ ಟೀಕೆಗಳು ಆದೇಶಗಳೆಂದು ನಾವು ಸ್ವೀಕಾರ ಮಾಡಬೇಕೆ ಎನ್ನುವ ಪ್ರಶ್ನೆ ಈ ಸಂವಿಧಾನದ ಚರ್ಚೆಯಲ್ಲಿ ಬರುತ್ತಿದೆ. ನ್ಯಾಯಾಂಗ ಹೇಗೆ ತನ್ನ ಲಕ್ಷ್ಮಣ ರೇಖೆಯನ್ನ ದಾಟುತ್ತಿದೆ ಎನ್ನುವುದರ ಬಗ್ಗೆ ಮಾತನಾಡಬೇಕು ಎಂದರೆ, ನಾವು ನಿರ್ಭಯರಾಗಿ ಮಾತನಾಡುವಂತಹ ಸ್ಥಿತಿಗೆ ಬರಬೇಕು ಎನ್ನುವ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ನಾನು ಸಂವಿಧಾನದ ಮೇಲೆ ಮಾತನಾಡುವಾಗ ನ್ಯಾಯಾಂಗದ ಬಗ್ಗೆ ಮಾತನಾಡಲು ನನಗೆ ಅವಕಾಶವನ್ನೆ ಕೊಡಲಿಲ್ಲ. ಆದ್ದರಿಂದ ಈಗ ದಯಮಾಡಿ ಸ್ವಲ್ಪ ಸಮಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶನಿವಾರದ ದಿವಸ ಉಡುಪಿಯಲ್ಲಿ ನಾನೊಂದು ಸಮಾರಂಭದಲ್ಲಿ ಭಾಗವಹಿಸಿದ್ದೆ. I was the Chief Guest along with Supreme Court Judge and Administrative Judge of High Court in that function. ಅವರ ಜೊತೆಯಲ್ಲಿ ಸಮಾರಂಭದಲ್ಲಿ ಭಾಗವಹಿಸಿದೆ. ಆದರೆ ಎಂ.ಎಲ್.ಸಿ.ಯಾಗಿ ಅಲ್ಲ. I attended that function in the capacity of Member of Bar Council. There was a gathering of more than 1,000 people in that function. ಆ ಸಮಾರಂಭದ ಆಯೋಜಕರನ್ನು, ಜಿಲ್ಲಾ ಮಂತ್ರಿಗಳನ್ನು ಈ ಸಮಾರಂಭಕ್ಕೆ ಏಕೆ ಆಹ್ವಾನಿಸಿಲ್ಲ ಎಂದು ನಾನು ಕೇಳಿದೆ. ನಾನು ಬಾರ್ ಅಸೋಸಿಯೇಷನ್ ಅಧ್ಯಕ್ಷರನ್ನು, why have you not invited them ಎಂದು ಕೇಳಿದೆ. ಮಾನ್ಯ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು, ಸ್ಥಳೀಯ ಎಂಎಲ್ಎ ರವರು ಬರಬೇಕಾಗಿತ್ತು, ಏಕೆ ಅವರನ್ನು ಸಮಾರಂಭಕ್ಕೆ ಕರೆದಿರುವುದಿಲ್ಲ ಎಂದು ಕೇಳಿದೆ. 'If any politicians are invited, we are not going to share the dais' ಎಂದು ಹೇಳಿದರಂತೆ. ಅವರ ಮುಂದೆ ಕೇಸ್ ಇದ್ದರೆ, ಕ್ರಿಮಿನಲ್ ಕೇಸ್ ಇದ್ದರೆ ಅದರ ಬಗ್ಗೆ ಹೇಳಲಿ. ಆದರೆ ಯಾವುದೊ ಒಂದು ಸಣ್ಣ ವಿಚಾರಕ್ಕೆ ಕೋರ್ಟ್‌ನಲ್ಲಿ ಕೇಸ್ ಇರುತ್ತದೆ. ಹಾಗೆ ಇದ್ದರೆ ಅವರ ಜೊತೆಯಲ್ಲಿ ನಾನು ವೇದಿಕೆಯನ್ನು ಹಂಚಿಕೊಳ್ಳುವುದಿಲ್ಲ ಎನ್ನುವುದು ಎಷ್ಟು ಸರಿ. ಅವರ ಬಿಲ್ಡಿಂಗ್ ಕಟ್ಟಬೇಕಾದರೆ ಮಂತ್ರಿಗಳೆ ಹಣವನ್ನು ಮತ್ತು ಜಾಗವನ್ನು ಕೊಡಬೇಕು. ಇವರು ಹೇಳುವುದೆಲ್ಲವನ್ನು ಸರ್ಕಾರ ಪಾಸ್ ಮಾಡಿಕೊಡಬೇಕು, ಇವರ quarters ನ್ನು ಸರ್ಕಾರ ಕಟ್ಟಿಸಿಕೊಡಬೇಕು. ಆದರೆ, ಇವರ quarters ಗಳನ್ನು ಉದ್ಘಾಟನೆ ಮಾಡಲು ಎಂಎಲ್ಎ ಗಳು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಗಳು ಬರಬಾರದು ಎಂದರೆ ಏನು ಇದೆ. ಒಬ್ಬ Munsiff Judge ಗೆ ಇರುವಂತಹ quarters ಮಂತ್ರಿಗಳಿಗೂ ಇಲ್ಲ. ಐಎಎಸ್ ಅಧಿಕಾರಿಗಳನ್ನು ಎಷ್ಟು ಕೆಟ್ಟದಾಗಿ Court Hall ನಲ್ಲಿ ನಡೆಸಿಕೊಳ್ಳುತ್ತಾರೆ ಎಂದರೆ, ಅಧಿಕಾರಿಗಳು Executive ನಲ್ಲಿ ಕೆಲಸ ಮಾಡುವವರು ತಮ್ಮ busy schedule ನಿಂದಾಗಿ ಅರ್ಧ ಗಂಟೆ ತಡವಾಗಿ ಹೋಗುತ್ತಾರೆ. ಇವರ ಹಾಗೆ ಮನೆ ಬಿಟ್ಟ ತಕ್ಷಣ ಕೋರ್ಟ್ ಬಾಗಿಲಿಗೆ ಹೋಗಿ ಇಳಿಯುವುದಿಲ್ಲ. ಐಎಎಸ್ ಅಧಿಕಾರಿಗಳಿಗೆ ಎಷ್ಟೋ ಕೆಲಸಗಳಿರುತ್ತವೆ, ಅದಕ್ಕೆ ಅವರು ಸ್ವಲ್ಪ ತಡವಾಗಿ ಬಂದರೆ, ಅವರನ್ನು ಬೆಳಿಗ್ಗೆಯಿಂದ ಸಂಜೆವರೆಗೆ ಕೋರ್ಟ್ ಬಾಗಿಲ ಮುಂದೆ ನಿಲ್ಲಿಸುತ್ತಾರೆ. Free and independent Judiciary ಎಂದರೆ ಈ ಮಟ್ಟಕ್ಕೆ ಹೋಗುವುದೆ? ಅದಕ್ಕಾಗಿ ಇದರ ಬಗ್ಗೆ ನಾವೆಲ್ಲರೂ ಚರ್ಚೆ ಮಾಡಲೇಬೇಕು. ಈ ವ್ಯವಸ್ಥೆಯಲ್ಲಿ ನಾವು ಇದ್ದುಕೊಂಡು ಚರ್ಚೆ ಮಾಡದಿದ್ದರೆ ಹೇಗೆ? ಅವರೇನು ಆಕಾಶದಿಂದ ಅಥವಾ ದೇವಲೋಕದಿಂದ ಇಳಿದು ಬಂದಿದ್ದಾರೆಯೇ. ಇದರ ಬಗ್ಗೆ ಚರ್ಚೆ ಮಾಡಲು ದಯಮಾಡಿ ಅವಕಾಶ ಮಾಡಿಕೊಡಿ. Right to Information ಅವರಿಗೆ ಇಲ್ಲ. ಆದರೆ ಇವತ್ತು appointment ತೆಗೆದುಕೊಳ್ಳಬೇಕಾದರೆ, written test ನಲ್ಲಿ ಭಾಗವಹಿಸಿದವನು ಎಷ್ಟು ಅಂಕಗಳನ್ನು ತೆಗೆದುಕೊಂಡಿದ್ದಾನೆ ಎನ್ನುವ ಮಾಹಿತಿಯನ್ನು ನಾವು ಕೆಪಿಎಸ್‌ಸಿ ಎಲ್ಲ ಕಡೆಗಳಲ್ಲಿಯು ಕೊಡುತ್ತೇವೆ. ಆ candidate ಗೆ ಕೊಡುವುದಿಲ್ಲ, ನಾವು ಕೇಳುವ ಹಾಗೆ ಇಲ್ಲ ಎಂದರೆ ಏನು ಅರ್ಥ? ಇಂತಹ ವ್ಯವಸ್ಥೆಯಲ್ಲಿ ನಾವಿದ್ದೇವೆ. ಅವರು ನೇಮಕಾತಿಯನ್ನು ಮೆರಿಟ್ ಇರುವ ವ್ಯಕ್ತಿಯನ್ನೆ ಮಾಡಿಕೊಳ್ಳುತ್ತಾರೆಯೇ? ಇಲ್ಲಿ ಏನಾದರೂ ಒಂದು ವ್ಯತ್ಯಾಸವಾದರೆ ರಾಜಕಾರಣಿಗಳ ಬಗ್ಗೆ ದೊಡ್ಡದಾಗಿ ಮಾತನಾಡುತ್ತಾರೆ.

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ಇದರ ಬಗ್ಗೆ ನಾವು ಮಾತನಾಡಬೇಕು. ಇದರ ಚರ್ಚೆಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಡಿ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಗಳೆ, ನಾವು ಎಲ್ಲವನ್ನು ಅಧ್ಯಯನ ಮಾಡಿಕೊಂಡು ಬರುತ್ತೇವೆ. ಎಲ್ಲರೂ ಮಾತನಾಡಲು ಅವಕಾಶ ಮಾಡಿಕೊಡಿ. ಅದೇನು ಈ ವ್ಯವಸ್ಥೆಗೆ ಮೀರಿದ್ದಲ್ಲ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರೆ ಇಂದು ರಾಜ್ಯಸಭಾ ಸದಸ್ಯರಾಗಿದ್ದಾರೆ. ಹಿಂದೆ ಒಬ್ಬರು ರಾಜ್ಯಪಾಲರಾಗಿದ್ದರು. ಈ ರೀತಿಯ ಬೆಳವಣಿಗೆಗಳು ನಡೆಯುತ್ತಿವೆ.

**ಶ್ರೀ ಸಿ.ಟಿ.ರವಿ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):–** ಮಾನ್ಯ ಸಭಾಪತಿಗಳೆ. ಒಬ್ಬರು political party leader ನ ನಾಮಪತ್ರವನ್ನು prepare ಮಾಡಿದವರು, Judge ಆಗಿ ಬೇರೆಯೇ ತೀರ್ಪು ಕೊಟ್ಟರು. ನಿವೃತ್ತಿ ಹೊಂದಿದವರು ರಾಜ್ಯಸಭಾ ಸದಸ್ಯರಾಗುವುದು dispute ಎನ್ನುವುದಾದರೆ, ಒಬ್ಬರು ಕ್ಲರ್ಕ್ ಆಗಿ political

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

party leader ನ ನಾಮಪತ್ರವನ್ನು prepare ಮಾಡಿದವರು ನಂತರ Judge ಆಗುತ್ತಾರೆ ಎಂದರೆ, ನ್ಯಾಯಾಂಗ ವ್ಯವಸ್ಥೆ ಮೇಲೆ ಯಾವ ರೀತಿ ಪರಿಣಾಮ ಬೀರಬಹುದು ಯೋಚನೆ ಮಾಡಿ.

(ಮುಂದು)

(485)/17-03-2020/04-10/ಬಿಎಸ್‌ಡಿ-ಜಿಆರ್

**ಶ್ರೀ ಐವನ್ ಡಿ'ಸೋಜಾ:-** Leaders ಗಳೊಟ್ಟಿಗೆ ಅವರು dais ಅನ್ನು share ಮಾಡಬಾರದು, political leaders ಗಳನ್ನು ಸಭೆ-ಸಮಾರಂಭಗಳಿಗೆ ಕರೆಯಬಾರದು ಎಂದು Circular ಅನ್ನೇ ಕೊಟ್ಟಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕು.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಡಾ॥ ಬಿ.ಆರ್. ಅಂಬೇಡ್ಕರ್‌ರವರ ಜೀವನದ ಹೋರಾಟ, ಶಿಕ್ಷಣ ಮತ್ತು ಅವರ ಕೊನೆಯವರೆಗಿನ ಜೀವನದ ಮಹೋನ್ನತ ಉದ್ದೇಶ ಏನೆಂದರೆ, ನಮ್ಮ ದೇಶದ ದಲಿತರು ಮತ್ತು ನಿಮ್ನ ವರ್ಗದವರಿಗೆ ಮೀಸಲಾತಿಯನ್ನು ತಂದು ಕೊಡಬೇಕು ಹಾಗೂ ಅವರಿಗೆ ನ್ಯಾಯ ಸಿಗಬೇಕೆಂದು ಆಗಿತ್ತು. ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಸದನದಲ್ಲಿ ಹಿರಿಯ ಸದಸ್ಯರು, ಮಂತ್ರಿಗಳು ಹಾಗೂ ಪತ್ರಕರ್ತರೆಲ್ಲರೂ ಇದ್ದಾರೆ. ಒಂದು ವೇಳೆ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಮೀಸಲಾತಿಯನ್ನು ತರದಿದ್ದರೆ ನಮ್ಮ ದೇಶದಲ್ಲಿ ದಲಿತ ವರ್ಗದವರು M.L.A., M.P., Z.P., Members ಗಳಾಗುವುದಕ್ಕೆ ಆಗುತ್ತಿರಲಿಲ್ಲ. ಏಕೆಂದರೆ ಇವತ್ತಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯು ಅಷ್ಟೊಂದು ಕೆಟ್ಟು ಕೊಳೆತು ಹೋಗಿದೆ. ಚುನಾವಣೆಗೆ ಕೋಟಿಗಟ್ಟಲೆ ಹಣ ಖರ್ಚಾಗುತ್ತಿದೆ. S.C., S.T., O.B.C., ಮತ್ತು ಹಣ ಇಲ್ಲದೇ ಇರುವವರು ಚುನಾವಣೆಗೆ ನಿಲ್ಲುತ್ತಾರೆ ಎನ್ನುವುದೇ ದೊಡ್ಡ ವಿಷಯವಾಗಿದೆ. ಇಂತಹವರು ಬೇರೆಯವರ ವಿರುದ್ಧ ಚುನಾವಣೆಯಲ್ಲಿ fight ಮಾಡುತ್ತಾರೆ ಎನ್ನುವುದೇ ಜೀವನದ ಒಳ್ಳೆಯ ಕ್ಷಣವಾಗಿದೆ. ಇನ್ನೂ ಅವರು ಗೆಲ್ಲುವುದು ಬಹಳ ದೂರದ ಮಾತಾಗಿದೆ. ಒಂದು ವೇಳೆ ಮೀಸಲಾತಿ ತರದಿದ್ದರೆ ನಮ್ಮ ದೇಶದ ದಲಿತ ಹಾಗೂ ಶೋಷಿತರಲ್ಲಿ ಬಹಳಷ್ಟು ಜನರು ಶಾಸಕರಾಗುತ್ತಿರಲಿಲ್ಲ, ಸಂಸದರಾಗುತ್ತಿರಲಿಲ್ಲ ಹಾಗೂ ಮಂತ್ರಿಗಳಾಗುತ್ತಿರಲಿಲ್ಲ. ಡಾ॥ ಬಿ.ಆರ್. ಅಂಬೇಡ್ಕರ್‌ರವರು ಇನ್ನೂ ಮುಂದೆ ಹೋಗಿ ನಮ್ಮ ದೇಶದ ಕೇವಲ ದಲಿತರ vote bank ಆಗಬಾರದು. ಅವರು ಬಹಳ ಚೆನ್ನಾಗಿ ಹೇಳಿದ್ದಾರೆ, ನಾವು ಪುಸ್ತಕವನ್ನು ಓದಬೇಕು. ದಲಿತರು ಕೈಯಾಳು ಅಥವಾ ಡಿ ದರ್ಜೆ ನೌಕರರಾಗಬಾರದು. ಅವರ ಕೈಗೆ ಅಧಿಕಾರ ಸಹ ಸಿಗಬೇಕೆಂದು ಹೇಳುತ್ತಾರೆ. ಆದರೆ ನಮ್ಮ ದೇಶದಲ್ಲಿ ಇವೆಲ್ಲವನ್ನು ಬೇಡಿ ಪಡೆಯಬೇಕಾಗಿದೆ. ಮಂತ್ರಿಯಾಗುವುದಕ್ಕೆ, ಸೀಟನ್ನು ಪಡೆಯುವುದಕ್ಕೆ, ಗೆಲ್ಲುವುದಕ್ಕೆ ಬಹಳ ಕಷ್ಟವಾಗಿದೆ ಮತ್ತು ಪರಿಸ್ಥಿತಿ ಬಹಳ ಘೋರವಾಗಿದೆ. ಒಂದೊಂದನ್ನು ವಿಶ್ಲೇಷಣೆ ಮಾಡುತ್ತಿದ್ದರೆ ಹೆಚ್ಚೆಚ್ಚು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಯವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ಮೀಸಲಾತಿ, M.L.A., M.P., ಗಳಾಗುವುದು, ಬರೀ vote bank ಆಗಬಾರದು, ಅವರ ಕೈಗೆ ಅಧಿಕಾರ ಸಿಗಬೇಕು ಎಂದು ಡಾ॥ ಬಿ.ಆರ್. ಅಂಬೇಡ್ಕರ್ ಕನಸು ಕಂಡಿದ್ದಂತೆ ನನ್ನ ಪ್ರಕಾರ ಎಷ್ಟು per cent ಡಾ॥ ಬಿ.ಆರ್. ಅಂಬೇಡ್ಕರ್ ರವರ ಆಶಯ ಯಶಸ್ವಿಯಾಗಿದೆ ಎಂಬುದನ್ನು ನಾವು ವಿಶ್ಲೇಷಣೆ ಮಾಡಬೇಕಾಗಿದೆ. ಡಾ॥ ಬಿ.ಆರ್. ಅಂಬೇಡ್ಕರ್‌ರವರು ನಮ್ಮ ದೇಶದ ಗಡಿಗಳು ಹಾಗೂ ಸೇನೆಯ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಮ್ಮ ದೇಶ ಚೆನ್ನಾಗಿರಬೇಕೆಂದರೆ ದೇಶದ ಗಡಿಗಳು ಸುಭದ್ರವಾಗಿರಬೇಕೆಂದು ಹೇಳಿದ್ದಾರೆ. ನಮ್ಮ ದೇಶದ ಜನರು ಸುರಕ್ಷಿತವಾಗಿರಬೇಕೆಂದರೆ ನಮ್ಮ ದೇಶದ ಸೈನಿಕರು ಚೆನ್ನಾಗಿರಬೇಕೆಂದು ಹೇಳಿದ್ದಾರೆ. ನಮ್ಮ ದೇಶದ ಗಡಿ ಹೇಗಿತ್ತು? ನಮ್ಮ ದೇಶದ ಗಡಿ ಬಹಳ ಹೀನ ಹಾಗೂ ಕೆಟ್ಟ ಪರಿಸ್ಥಿತಿಯಲ್ಲಿತ್ತು ಎನ್ನುವುದಕ್ಕೆ ಇವತ್ತಿನ PoK (Pakistan occupied Kashmir) ಆಗಿದೆ. ನಮ್ಮ ದೇಶದ ಗಡಿ ಹಾಗೂ ಸೈನಿಕರು ಚೆನ್ನಾಗಿದ್ದಿದ್ದರೆ ಇವತ್ತು PoK ಸಮಸ್ಯೆ ಬರುತ್ತಿರಲಿಲ್ಲ. ಕಾಶ್ಮೀರ ಸಮಸ್ಯೆ ಉಲ್ಬಣವಾಗುತ್ತಿರಲಿಲ್ಲ. ನಮ್ಮ ದೇಶದಲ್ಲಿ ಭಯೋತ್ಪಾದನೆ ಹಾಗೂ ಉಗ್ರವಾದಿಗಳು ಬೆಳೆಯುತ್ತಿರಲಿಲ್ಲ. ನಮ್ಮ ದೇಶದಲ್ಲಿ ಪೊಲೀಸ್ ವ್ಯವಸ್ಥೆ ಹಾಗೂ ಸೈನಿಕ ವ್ಯವಸ್ಥೆ weak ಆಯಿತು. ನಾವು ಬಹಳ ನಗಣ್ಯವಾಗಿ ಕಂಡೆವು. ನಮ್ಮ ದೇಶದ ಗಡಿಗಳನ್ನು ಬಹಳ neglect ಮಾಡಿದೆವು. ಪರಿಣಾಮವಾಗಿ ನಮ್ಮ ದೇಶದ ಗಡಿಗಳು weak ಆದವು, ನಮ್ಮ ದೇಶದ ಶತ್ರು ರಾಷ್ಟ್ರಗಳು ಅವರ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಅವರದೇ ಆದ ತಂತ್ರ-ಕುತಂತ್ರಗಳನ್ನು ಮಾಡುತ್ತಾ ಹೋದರು. ಇನ್ನು ನಮ್ಮ ದೇಶದಲ್ಲಿ ಅಂಬೇಡ್ಕರ್‌ರವರು ಮೂಲಭೂತ ಹಕ್ಕುಗಳು ಎಲ್ಲರಿಗೂ ಸಮಾನವಾಗಿವೆ ಎಂದು ಹೇಳಿದ್ದಾರೆ. ಇದನ್ನು ಕೇಳಿದಾಗ ಬಹಳ ಖುಷಿ ಎನಿಸುತ್ತದೆ. ಇವುಗಳು ಜಾರಿಯಾಗಿರುವುದನ್ನು ನೋಡಿದಾಗ ಬಹಳ ಏರು-ಪೇರುಗಳಿಲ್ಲ. ಹಿಂದೂ, ಮುಸ್ಲೀಂ ಮತ್ತು ಕ್ರಿಶ್ಚಿಯನ್‌ಗಳಿದ್ದರೂ ಸಮಾನತೆಯಲ್ಲಿ ಎಲ್ಲರೂequal. ಶಿಕ್ಷಣದಲ್ಲಿ 14 ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಶಿಕ್ಷಣ ಇದೆ. ಧಾರ್ಮಿಕ ಶಿಕ್ಷಣ ಮತ್ತು ಧಾರ್ಮಿಕ ಸ್ವಾತಂತ್ರ್ಯ ಎಲ್ಲರಿಗೂ ಇದೆ. ನಮ್ಮ ದೇಶದಲ್ಲಿ ಸಮಾನವಾದ ನಾಗರಿಕ ಕಾಯ್ದೆ ಬೇಕು ಎಂದು ಹೇಳಿದ್ದಾರೆ. ಎಲ್ಲರಿಗೂ ಸಮಾನವಾದ ಮೂಲಭೂತ ಹಕ್ಕುಗಳು ಇರುವಂತೆ ಎಲ್ಲರಿಗೂ ಸಮಾನವಾದ ನಾಗರಿಕ ಕಾಯ್ದೆ ಬೇಕು ಎಂದು ಹೇಳಿದ್ದಾರೆ. ಈ ವಿಷಯ ಚರ್ಚೆಯಾಗಬೇಕಾಗಿದೆ. ನಮ್ಮ ದೇಶದ ಸಂವಿಧಾನವನ್ನು ಸಾಕಷ್ಟು amendments ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ನಮ್ಮ ದೇಶದ ಸಂವಿಧಾನವು ಅತ್ಯಂತ dynamic Constitution ಆಗಿದೆ. ನಮ್ಮ Constitution dynamic Constitution. ಇದು ಚಲಿಸುವ ಸಂವಿಧಾನವಾಗಿದೆ. ನಮ್ಮ ದೇಶದಲ್ಲಿ ಸಂವಿಧಾನವನ್ನು ಬರೆದ ಡಾ॥ ಬಿ.ಆರ್. ಅಂಬೇಡ್ಕರ್ ಕಾಲಕ್ಕೂ ಮತ್ತು ಇವತ್ತಿನ ಕಾಲಕ್ಕೂ ಬಹಳ ವ್ಯತ್ಯಾಸ ಇದೆ. ಹಾಗಾಗಿ ನಮ್ಮ ದೇಶದಲ್ಲಿ ಶಿಕ್ಷಣದಲ್ಲಿ quality education ಕೊಡುವುದಕ್ಕೆ ಆಗದೇ ಇರುವ ಪರಿಸ್ಥಿತಿ ಇರುವುದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚು commercialise ಆಗಿರುವುದನ್ನು ನೋಡುತ್ತಿದ್ದೇವೆ. ಏಕೆಂದರೆ ನಮ್ಮ ದೇಶದಲ್ಲಿ ಸರ್ಕಾರಿ ಶಾಲಾ-ಕಾಲೇಜುಗಳು quality education ಕೊಡುವುದರಲ್ಲಿ ವಿಫಲವಾಗಿವೆ. ಸ್ವಲ್ಪ quality education, quality teachers ಗಳು ಸಿಗಬಹುದು, accountability ಇದೆ, ಆಡಳಿತದಲ್ಲಿ ಹಿಡಿತ ಇದೆ ಎಂದೆಲ್ಲಾ ಮಾಡಬೇಕೆಂದರೆ ಇವತ್ತು Private Universities, Deemed Universities ಗಳೆಲ್ಲವೂ ಬಂದಿವೆ. ಅದೇರೀತಿ Private Colleges, Schools ಗಳೆಲ್ಲವೂ ಬಂದಿದ್ದು, K.G., (Kinder Garten) ಗೆ ಲಕ್ಷಗಟ್ಟಲೆ ಹಣ ತೆಗೆದುಕೊಳ್ಳುತ್ತಾರೆ. ನಾವು ಸಾವಿರಾರು ರೂಪಾಯಿಗಳಲ್ಲಿ ಡಿಗ್ರಿ ಮಾಡಿ education ಮುಗಿಸಿಕೊಂಡು ಬಂದಿದ್ದೇವೆ. ಆದರೆ ಇವತ್ತು ಲಕ್ಷ ಮತ್ತು ಕೋಟಿಗಟ್ಟಲೆ ಹಣವನ್ನು education ಗೆ ಖರ್ಚು ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದಲ್ಲಿ ಯಶಸ್ಸು ಎಂದರೆ ಕೊನೆ ವ್ಯಕ್ತಿಗೂ ಅಧಿಕಾರ ಸಿಗಬೇಕು ಎಂದು ಅಂಬೇಡ್ಕರ್ ಹೇಳಿದ್ದಾರೆ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಮಾನ್ಯ ರಾಜೀವ್ ಗಾಂಧಿಯವರಿಗೆ ಪಕ್ಷ ಭೇದವನ್ನು ಮರೆತು ನಾನು ಅಭಿನಂದಿಸುತ್ತೇನೆ. O.B.C., ಯವರಿಗೆ reservaton ತಂದುಕೊಟ್ಟರು. ಆವತ್ತು ಮಾನ್ಯ ವಿ.ಪಿ. ಸಿಂಗ್‌ರವರು Prime Minister ಆಗಿದ್ದರು. ಆವತ್ತು ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದು 27percent reservation ಕೊಟ್ಟಿದ್ದಕ್ಕಾಗಿ ಮಾನ್ಯ ವಿ.ಪಿ. ಸಿಂಗ್‌ರವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇವತ್ತು 124 ತಿದ್ದುಪಡಿಗಳಲ್ಲಿ 120 ತಿದ್ದುಪಡಿಗಳಾಗಿದ್ದು, ಇನ್ನೂ 4 ತಿದ್ದುಪಡಿಗಳಾಗಬೇಕಾಗಿದೆ. ಹಾಗಾಗಿ ನಮ್ಮ ದೇಶದ ಸಂವಿಧಾನವು dynamic ಸಂವಿಧಾನವಾಗಿದೆ. ಇನ್ನು ನಮ್ಮ ದೇಶದಲ್ಲಿ ಅಂಬೇಡ್ಕರ್‌ರವರ ಜೊತೆಯಲ್ಲಿ ಬಸವಣ್ಣನವರನ್ನು ನೆನಪಿಸಿಕೊಳ್ಳಲೇಬೇಕು. ಬಸವಣ್ಣನವರನ್ನು ಪ್ರಪಂಚದಲ್ಲಿಯೇ ಮೊದಲನೆಯ ಪ್ರಜಾಪ್ರಭುತ್ವವಾದಿ ಮತ್ತು ಮೊದಲನೆಯ democratic man ಎಂದು ಹೇಳಬಹುದು. Already ಅವರ ಬಗ್ಗೆ ಮಾನ್ಯ ಪ್ರಕಾಶ್‌ರವರು ಸೇರಿದಂತೆ ಬೇರೆಯವರು ಮಾತನಾಡಿದ್ದಾರೆ. ವಚನಗಳಲ್ಲಿ ' ಕಳಬೇಡ' ಎಂದರೆ ಕಳವು ಮಾಡಬೇಡ, ಇದು ಸಂವಿಧಾನದಲ್ಲಿ Section 378 of I.P.C., ಪ್ರಕಾರ ಬರುತ್ತದೆ. ' ಕೊಲಬೇಡ' ಎಂದರೆ ಕೊಲೆ ಮಾಡಬೇಡ, ಇದು Section 302 of I.P.C., ಪ್ರಕಾರ ಬರುತ್ತದೆ, ' ಹುಸಿಯ ನುಡಿಯಲು ಬೇಡ' ಎಂದರೆ false evidence, Section 192 of I.P.C.,. ಪ್ರಕಾರ ಬರುತ್ತದೆ. ' ಅನ್ಯರಿಗೆ ಅಸಹ್ಯ ಪಡಬೇಡ ' ಎಂದರೆ ಅಸ್ಪೃಶ್ಯತೆ ಅಥವಾ untouchability – Article 17 of the Constitution. 'ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ' ಎಂದರೆ abusing ಇದು Section 504 of I.P.C., ಪ್ರಕಾರ ಬರುತ್ತದೆ. ಇದನ್ನು ಬಸವಣ್ಣನವರು ಹಿಂದೆಯೇ ಹೇಳಿದ್ದರು. ಹೀಗೆ ನಮ್ಮ ದೇಶದಲ್ಲಿ ಸಂವಿಧಾನ ಇಲ್ಲದೇ ಇರುವ ಪರಿಸ್ಥಿತಿಯಲ್ಲಿಯೂ, ಸರ್ಕಾರಗಳು ಇಲ್ಲದೇ ಇರುವ ಪರಿಸ್ಥಿತಿಯಲ್ಲಿ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನ್ಯಾಯ-ಅನ್ಯಾಯಗಳ ಬಗ್ಗೆ ಮೊದಲಿನಿಂದಲೂ ಚರ್ಚೆ ನಡೆಯುತ್ತಿತ್ತು. ಧರ್ಮ ನಮ್ಮ ದೇಶವನ್ನು ಆಳುತ್ತಿತ್ತು. ಕನಕದಾಸರು ಜಾತಿ, ಮತ, ಪಂಥಗಳಿಂದ ಮೇಲೆದ್ದು ಈ ದೇಶಕ್ಕೆ ಧಾರ್ಮಿಕ ಮತ್ತು ನೈತಿಕ ತಳಹದಿಯನ್ನು ಹಾಕಿದರು. ಬಸವಣ್ಣನವರು ಆಧ್ಯಾತ್ಮಿಕ ಮತ್ತು ನೈತಿಕ ತಳಹದಿಯನ್ನು ಹಾಕಿದ್ದರು. ಧರ್ಮ, ನೀತಿ ಮತ್ತು ನೈತಿಕತೆ ಇಲ್ಲದೇ ಸಂವಿಧಾನದ ಯಶಸ್ಸು ಸಾಧ್ಯವೇ ಇಲ್ಲ.

(ಮುಂದು)

(486)/17.03.2020/4.20/ಹೆಚ್‌ವಿ-ಜಿಆರ್

**ಶ್ರೀ ಎನ್.ರವಿಕುಮಾರ್(ಮುಂದುವರೆದದ್ದು):-**
ಸನ್ಮಾನ್ಯ ಸಭಾಪತಿಯವರೇ, ಸಂವಿಧಾನ ಯಾವಾಗ ಯಶಸ್ಸು ಕಾಣುತ್ತದೆಂದರೆ, ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು, ಕನಕದಾಸ, ಚಾಣಕ್ಯ, ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣ ಪರಮಹಂಸರು ನಮ್ಮ ತಳಹದಿಯಾದಾಗ, ಯಾರ್‍ಯಾರು ಮಾನವ ಕುಲವನ್ನು ವಿಕಾಸಗೊಳಿಸುವುದಕ್ಕೆ ಮತ್ತು ನಮ್ಮ ಜೀವನವನ್ನು ಹಸನು ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆಯೋ ಅವರೆಲ್ಲರ ವಿಚಾರಧಾರೆಯನ್ನು ನಾವು ಅಳವಡಿಸಿಕೊಳ್ಳಬೇಕಾಗುತ್ತದೆ. ನಮ್ಮ ನೈತಿಕ ಪ್ರಜ್ಞೆಯನ್ನು ಯಾವಾಗಲು ಜಾಗೃತವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಸಂವಿಧಾನ ಇದೆ, ಕಾನೂನು ಇದೆಯೆಂದು ಅಸಡ್ಡೆ ಮನೋಭಾವವನ್ನು ತಳೆಯಬಾರದು. ಕಾನೂನು ಇದೆಯೆಂದು ನಾನು ಚಾಲುಕ್ಯ ಸರ್ಕಲ್‌ನಲ್ಲಿ ಸಿಗ್ನಲ್ ಲೈಟ್, ಪೋಲೀಸ್ ಇದ್ದಾರೆಂದು ಕಾನೂನಿನ ಪಾಲನೆ ಮಾಡುವುದಲ್ಲ, ಪೋಲೀಸ್ ಮತ್ತು ಸಿಗ್ನಲ್ ಲೈಟ್ ಇಲ್ಲದಿದ್ದರೂ ನಾನು ಕಾನೂನು ಪಾಲನೆ ಮಾಡಬೇಕಾಗುತ್ತದೆ. ಆ ಪ್ರಜ್ಞೆ ನನಗೆ ಇರಬೇಕಾಗುತ್ತದೆ. ನಮ್ಮ ದೇಶದ ಸಂವಿಧಾನ, ಶಾಸಕರು ಸಂಸದರು ಹೇಗಿದ್ದಾರೆ, ನಮ್ಮ ದೇಶದ ಆಡಳಿತ ವರ್ಗದವರು ಹೇಗಿದ್ದಾರೆ ಎನ್ನುವುದರ ಆಧಾರದ ಮೇಲೆ ಸಂವಿಧಾನದ ಯಶಸ್ಸು ನಿಂತಿದೆ.

**ಸಭಾಪತಿಯವರು:-** ಮಾನ್ಯ ಹೆಚ್.ಎಂ. ರೇವಣ್ಣನವರೇ, ತಾವು ತಮ್ಮ ಮಾತುಗಳನ್ನು ಪ್ರಾರಂಭಿಸಿ ಹತ್ತು ನಿಮಿಷಗಳಲ್ಲಿ ಮುಕ್ತಾಯಗೊಳಿಸಿ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ನಾಲ್ಕು ಸಾಲುಗಳು ಮಾತ್ರವಿದೆ. ಅದನ್ನು ಓದಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ತಾವು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ, ಮಾನ್ಯ ಹೆಚ್.ಎಂ.ರೇವಣ್ಣನವರು ಮಾತನಾಡಿದ ನಂತರ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಬೇಕಾಗಿದೆ. ತಾವು ಹೀಗೆ ಮಾತನಾಡುತ್ತಿದ್ದರೆ ಪ್ರಶ್ನೋತ್ತರ ವೇಳೆಗೆ ತೊಂದರೆಯಾಗುತ್ತದೆ.

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು 'ನನ್ನ ಜನರಿಗೆ ನನ್ನ ಸಂದೇಶ' ಎಂದು ಒಂದು ಸಂದೇಶವನ್ನು ಬರೆದಿದ್ದಾರೆ.

**ಸಭಾಪತಿಯವರು:–** ಮಾನ್ಯ ರೇವಣ್ಣನವರೇ, ತಾವು ತಮ್ಮ ಮಾತುಗಳನ್ನ ಪ್ರಾರಂಭಿಸಿ, ಈಗ ತಾವು ಮಾತನಾಡದಿದ್ದರೆ, ನಾಳೆ ತಮಗೆ ಅವಕಾಶವನ್ನು ಕೊಡುವುದಿಲ್ಲ. ಇವತ್ತು ಮಾತನಾಡುವುದಾದರೆ, 10 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

**ಶ್ರೀ ಹೆಚ್.ಎಂ.ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ದೊರೆಯಬೇಕಾಗಿದೆ. ನಿನ್ನೆಯಿಂದ ಎಲ್ಲರೂ ನಾನು ಮಾತನಾಡುವುದು ಬೇಡವೆಂದು ಕೂರಿಸಿದರು. ಈಗ ರವಿಕುಮಾರ್‌ರವರು ಸಹ ನನ್ನ ಸಮಯವನ್ನು ತೆಗೆದುಕೊಳ್ಳುತ್ತಿದ್ದಾರೆ.

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ.ರೇವಣ್ಣನವರು ಹಿರಿಯ ಸದಸ್ಯರಿದ್ದಾರೆ. ಅವರು ಮಾತನಾಡುವುದಕ್ಕೆ ನಿಂತರೆ ಯಾರೂ ಬೇಡವೆಂದು ಹೇಳುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ನನಗೆ ಮಾತನಾಡಲು ಅವಕಾಶವನ್ನೇ ಕೊಡದೇ ಪ್ರಶಂಸೆ ಮಾಡುತ್ತಿದ್ದಾರೆ.

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಜನಿಸಿದ್ದು 1891ರಲ್ಲಿ 1956ರಲ್ಲಿಅವರು ಮರಣ ಹೊಂದಿದ್ದಾರೆ. ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬರೆದಿರುವ 'ನನ್ನ ಜನರಿಗೆ ನನ್ನ ಸಂದೇಶ' ದಲ್ಲಿ;

"ಹೋರಾಡುತ್ತಲೇ ತನ್ನ ಜನರ ಆತ್ಮಶಕ್ತಿಯನ್ನು ತನ್ನ ದೇಶದ ಆತ್ಮಶಕ್ತಿಯನ್ನು ಒಟ್ಟೊಟ್ಟಿಗೆ ಬಡಿದೆಬ್ಬಿಸುತ್ತಾ, ಬಂದ ಅಂಬೇಡ್ಕರ್‌ರವರು ಇಷ್ಟೊಂದು ಪೂರ್ವಾಗ್ರಹಯುಕ್ತವಾದ ಜನರಿರುವ ದೇಶದಲ್ಲಿ ಜನ್ಮವೆತ್ತುವುದು ಪಾಪ; ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡೆಗಳಿಂದ ನನ್ನ ಮೇಲೆ ವಾಗ್ಬಾಣಗಳು ಎಸೆಯಲ್ಪಟ್ಟರೂ ಸಹ ನಾನು ಬೇಕಾದಷ್ಟು ಮಾಡಿದ್ದೇನೆ. ನಾನು ಸಾಯುವವರೆಗೂ ಹೀಗೆ ಮಾಡುತ್ತೇನೆ.” ಎಂದಿದ್ದಾರೆ.

ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ನಾನು ಸಾಯುವವರೆಗೂ ನನ್ನ ಕರ್ತವ್ಯವನ್ನು ಮಾಡುತ್ತೇನೆ ಎಂದು ಹೇಳಿದ್ದಾರೆ. “ನಾನು ಸಾಯುವವರೆಗೂ ನನ್ನ ಕರ್ತವ್ಯವನ್ನು ಮಾಡುತ್ತೇನೆ” ಎಂದು ಹೇಳುತ್ತಾ, ಅವರು ಕಣ್ಣೀರು ಸುರಿಸಿದ್ದರುಎಂಬ ಉಲ್ಲೇಖವಿದೆ. ಒಂದು ದಿನ ತಮ್ಮ ಗೌರವ ಆಪ್ತ ಕಾರ್ಯದರ್ಶಿ ದತ್ತು ಅವರನ್ನು ಕರೆದು, ‘ನನ್ನ ಜನರಿಗೆ ಹೇಳಿರಿ, ನಾನು ಮಾಡಿರುವುದನ್ನೆಲ್ಲ ನನ್ನ ಜೀವನ ಪರ್ಯಾಂತ ಘೋರ ಕಷ್ಟಗಳನ್ನು ಮತ್ತು ಅಂತ್ಯರಹಿತ ತೊಂದರೆಗಳನ್ನು ಅನುಭವಿಸುತ್ತಾ, ನನ್ನ ವಿರೋಧಿಗಳೊಂದಿಗೆ ಹೋರಾಡುತ್ತಾ, ಸಾಧಿಸಿದ್ದಾಗಿದೆ. ಬಹಳ ಕಷ್ಟದಿಂದ ನಾನು ಹೋರಾಟದ ರಥವನ್ನು ಇಂದು ಅದು ಕಾಣುತ್ತಿರುವ ಸ್ಥಳಕ್ಕೆ ತಂದು ನಿಲ್ಲಿಸಿದ್ದೇನೆ. ರಥವು ತನ್ನ ದಾರಿಯಲ್ಲಿ ಬಂದ ಅಡ್ಡಿಗಳನ್ನು ಲೆಕ್ಕಿಸದೇ ಮುಂದುವರಿಯಲಿ, ನನ್ನ ಸಹ ಕಾರ್ಯಕರ್ತರು ಅದನ್ನು ಮುಂದಕ್ಕೆಳೆದೊಯ್ಯಲು ಆಗದಿದ್ದರೆ, ಅವರು ಅದನ್ನು ಅಲ್ಲಿಯೇ ಬಿಡಲಿ. ಆದರೆ, ಎಂತಹ ಸನ್ನಿವೇಶ ಬಂದರೂ ಅದನ್ನು ಹಿಂದಕ್ಕೆ ಹೋಗಲು ಬಿಡತಕ್ಕದ್ದಲ್ಲ. ಇದೇ ನನ್ನ ಜನರಿಗೆ ನನ್ನ ಸಂದೇಶ’ ಎಂದು ಹೇಳುತ್ತಾರೆ. ಶ್ರೇಷ್ಠಮಟ್ಟದ ಸಂವಿಧಾನವನ್ನು ಬರೆದಂತಹ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ನಮ್ಮ ದೇಶದಲ್ಲಿ 70 ವರ್ಷಗಳ ಕಾಲ ಬದುಕಿದ್ದರು.

ಸನ್ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಸಂವಿಧಾನಕ್ಕೆ ಪ್ರಜಾಪ್ರಭುತ್ವಕ್ಕೆ ಅಪಮಾನವಾಗುವ ರೀತಿಯಲ್ಲಿ 1975ನೇ ಇಸವಿಯಲ್ಲಿ ತುರ್ತು ಪರಿಸ್ಥಿತಿಯನ್ನು ಜಾರಿಗೊಳಿಸಲಾಗುತ್ತದೆ. ನಮ್ಮ ದೇಶದ ಮಾಜಿ ಪ್ರಧಾನಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡರಾದಿಯಾಗಿ, ಅಟಲ್ ಬಿಹಾರಿ ವಾಜಪೇಯಿ ಆದಿಯಾಗಿ ಎಲ್ಲರನ್ನು ಜೈಲಿಗೆ ಕಳುಹಿಸಲಾಗಿತ್ತು. ಒಂದು ಕಡೆ ಇವರುಗಳು ನಾವೆಲ್ಲರೂ ಪ್ರಜಾಪ್ರಭುತ್ವವಾದಿಗಳೆಂದು ಹೇಳಿಕೊಳ್ಳುತ್ತಾರೆ. ಈ ರೀತಿ ಸಿದ್ಧಾಂತವೊಂದು ಅಡಚರಣೆ ಅಥವಾ ಮತ್ತೊಂದು ರೀತಿ ಎನ್ನುವಂತೆ ಆಗಬಾರದೆಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ರಾಜ್ಯಾಂಗವು ಸಂವಿಧಾನದ ಅಂಗವಾಗಿದೆ. ಮೂಲವಾಗಿ ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಭಾರತದ ನಾಗರೀಕರನ್ನು ಸಂರಕ್ಷಿಸುವ ಸ್ವರೂಪವಾಗಿದೆ ನಮ್ಮ ಸಂವಿಧಾನ. ಇದು ಪ್ರಸ್ತಾವನೆಯ ಆತ್ಮವಾಗಿದೆ. ಮೇಲಿನ ನಾಲ್ಕು ವಿಚಾರಗಳಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ಮೇಲ್ಮನೆಯಲ್ಲಿ ಬಹಳಷ್ಟು ಜನರು ಸಂವಿಧಾನದ ಮೇಲೆ ಸಾಕಷ್ಟು ಚೆನ್ನಾಗಿ ಮಾತನಾಡಿದ್ದಾರೆ. ನಾನು ಈ ದಿನ ಕೆಳ ಮನೆಯ ಸಭಾಧ್ಯಕ್ಷರಿಗೂ

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹಾಗೂ ಈ ಮನೆಯ ಸಭಾಪತಿಗಳಾದ ತಮಗೂ ಈ ಅವಕಾಶವನ್ನು ನಮಗೆ ಕಲ್ಪಿಸಿಕೊಟ್ಟಿರುವುದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಸಂವಿಧಾನದ ಬಗ್ಗೆ ಅರಿವನ್ನು ಪಡೆಯುವಂತಹ ನಿಟ್ಟಿನಲ್ಲಿ ಬಹಳ ಉತ್ತಮವಾಗಿರುವ ಚರ್ಚೆ ಮೇಲ್ಮನೆ ಮತ್ತು ಕೆಳಮನೆಗಳಲ್ಲಿ ನಡೆದಿದೆ. ಅದರ ಅವಶ್ಯಕತೆ ನಮಗಿತ್ತು. ನನ್ನ ಅನೇಕ ಮಿತ್ರರು ಸಾಕಷ್ಟು ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಸಾಮಾಜಿಕ ನ್ಯಾಯದ ಬಗ್ಗೆ ನಾನು ಮಾತನಾಡುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದಲಿತರಿಗಾಗಿಯೇ ಸಂವಿಧಾನವನ್ನು ಬರೆದಿದ್ದಾರೆಂದು ಅವರ ಮೇಲೆ ಕೆಲವರು ಆಪಾದನೆಯನ್ನು ಸಹ ಮಾಡಿದ್ದಾರೆ. ಸಂವಿಧಾನವನ್ನು ಡಾ॥ಬಿ.ಆರ್.ಅಂಬೇಡ್ಕರ್ ಅವರೊಬ್ಬರೇ ಬರೆದಿದ್ದಾರೆಂದು ವಾದಿಸುವಂತಹ ಜನರು ಇದ್ದಾರೆ. ಈ ಚರ್ಚೆಯ ಮೂಲಕ ಇವರೆಲ್ಲರಿಗೂ ಉತ್ತರ ಸಿಕ್ಕಿದೆಯೆಂದು ನಾನು ಭಾವಿಸುತ್ತೇನೆ. ಸಾಮಾಜಿಕ ನ್ಯಾಯದಡಿಯಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೌಲಭ್ಯವನ್ನು ಒದಗಿಸಿಕೊಟ್ಟಿರುವುದರ ಬಗ್ಗೆ ಬಹಳಷ್ಟು ಜನರಿಗೆ ತಿಳುವಳಿಕೆ ಇರಲಿಲ್ಲ. ಮೀಸಲಾತಿ ಎಂದ ಕೂಡಲೇ ದಲಿತರಿಗೆ ಮಾತ್ರ ಎನ್ನುವ ಭಾವನೆ ಬಹಳಷ್ಟು ಜನರಲ್ಲಿರುವುದನ್ನು ನಾನು ನೋಡಿದ್ದೇನೆ. ಆದರೆ, ಸಂವಿಧಾನದ ಅನುಚ್ಛೇದ 341ರಲ್ಲಿ ಅಲ್ಪಸಂಖ್ಯಾತರು, ದಲಿತರು ಮತ್ತು ಹಿಂದುಳಿದವರಿಗೆ ಹೀಗೆ ಈ ಮೂರು ವರ್ಗದವರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಸಾಮಾಜಿಕ ನ್ಯಾಯದಡಿಯಲ್ಲಿ ತಳ ಸಮುದಾಯದ ದೀನದಲಿತರ ಬಗ್ಗೆ ಮಹಾರಾಷ್ಟ್ರದಲ್ಲಿ ಮಹಾತ್ಮ ಜ್ಯೋತಿರಾವ್ ಫುಲೆಯವರು ಮತ್ತು ಸಾಹು ಮಹಾರಾಜರು ಕೊಟ್ಟಂಥ ಕೊಡುಗೆ ಅಪಾರವಾಗಿದೆ. ಸಂವಿಧಾನದಲ್ಲಿ ದೇವಸ್ಥಾನಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಿ ಕೊಡುವುದಕ್ಕೂ ಮೊದಲೇ ಕೇರಳದಲ್ಲಿ ನಾರಾಯಣ ಗುರುಗಳು, 'ನಮ್ಮದೇ ದೇವಸ್ಥಾನವನ್ನು ಕಟ್ಟಿಕೊಳ್ಳೋಣ. ಬೇರೆ ದೇವಸ್ಥಾನಗಳಿಗೆ ಹೋಗುವುದು ಬೇಡ' ಎಂದು ಚರಿತ್ರಾರ್ಹವಾದ ಚಳುವಳಿಯನ್ನು ಪ್ರಾರಂಭಿಸಿದ್ದರು. ಇದರ ಜೊತೆಗೆ ದ್ರಾವಿಡರು ಭಾರತದ ಮೂಲ ನಿವಾಸಿಗಳು ಎನ್ನುವುದನ್ನು ಈ ರಾಷ್ಟ್ರಕ್ಕೆ ಮತ್ತು ಪ್ರಪಂಚಕ್ಕೆ ತೋರಿಸಿಕೊಟ್ಟವರು ಪೆರಿಯಾರ್ ರಾಮಸ್ವಾಮಿಯವರು ಇವರೆಲ್ಲರ ಸಾಲಿನಲ್ಲಿ ನಿಲ್ಲುವವರು ನಮ್ಮ ಕರ್ನಾಟಕದ ಹೆಮ್ಮೆಯ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು, ಸ್ವಾತಂತ್ರ್ಯ ಪೂರ್ವದಲ್ಲಿಯೇ ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಟ್ಟು ಮಿಲ್ಲರ್ ಸಮಿತಿಯನ್ನು ರಚನೆ ಮಾಡಿ ಮೀಸಲಾತಿಯನ್ನು ಅವರ ಆಡಳಿತದಲ್ಲಿ ತಂದಿರುವುದು ಕರ್ನಾಟಕದ ಇತಿಹಾಸದಲ್ಲಿ ಅಚ್ಚಳಿಯದೇ ಉಳಿದಿದೆ. ಅವರು ಅಂದು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎನ್ನುವ ಆಧಾರದ ಮೇಲೆ ಬ್ರಾಹ್ಮಣರಿಗೆ ಶೇಕಡಾ 25ರಷ್ಟು ಮೀಸಲಾತಿ ಬ್ರಾಹ್ಮಣೇತರರಿಗೆ ಶೇಕಡಾ 75ರಷ್ಟು ಮೀಸಲಾತಿಯನ್ನು ಕಲ್ಪಿಸಿಕೊಟ್ಟಿದ್ದರು. ಸಂವಿಧಾನಾತ್ಮಕವಾಗಿ ಮೀಸಲಾತಿಯ ಬಗ್ಗೆ ನಾವು ಚರ್ಚೆ ಮಾಡುವುದಕ್ಕೂ ಮೊದಲೇ ಮಿಲ್ಲರ್ ಸಮಿತಿಯನ್ನು ರಚನೆ ಮಾಡಿ ಮೀಸಲಾತಿಯನ್ನು ಜಾರಿಗೊಳಿಸಿದಾಗ, ಅಂದಿನ ಮೈಸೂರು ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯನವರು ಅದನ್ನು ಧಿಕ್ಕರಿಸಿ ದಿವಾನ್‌ಗಿರಿಗೆ ರಾಜೀನಾಮೆಯನ್ನು ಕೊಡುತ್ತಾರೆ. ನನಗೆ ಸರ್.ಎಂ.ವಿಶ್ವೇಶ್ವರಯ್ಯನವರ ಬಗ್ಗೆ ಅಪಾರದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೌರವವಿದೆ. ಅವರು ತೆಗೆದುಕೊಂಡಿರುವ ನಿರ್ಧಾರ ಅವರ ವೈಯಕ್ತಿಕ ನಿರ್ಧಾರವಾಗಿದೆ. ರಾಷ್ಟ್ರದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಇವರು ಕೊಟ್ಟಂಥ ಕೊಡುಗೆ ಸಂವಿಧಾನ ಮತ್ತು ಸಂವಿಧಾನದ ಪೀಠಿಕೆಗೆ ಮೂಲವಾಗಿದೆ. ಸಾಮಾಜಿಕ ನ್ಯಾಯದಲ್ಲಿ ಇದು ಅಡಿಪಾಯ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 340ರಲ್ಲಿ ಹಿಂದುಳಿದ ವರ್ಗದವರು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರೆಯಬೇಕು ಎನ್ನುವ ಹಿನ್ನೆಲೆಯಲ್ಲಿ 1953ರಲ್ಲಿ ಪ್ರಥಮ ಬಾರಿಗೆ ಕಾಕಾ ಕಾಲೇಕರ್ ಅವರ ಆಯೋಗ ರಚನೆ ಆಗಿತ್ತು. ಅವತ್ತಿನ ಪರಿಸ್ಥಿತಿಯಲ್ಲಿ ಆಾಯೋಗದ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗಲಿಲ್ಲ.

(ಮುಂದುವರಿದಿದೆ)

(487) 17.3.2020 4.30 ಪಿಕೆ:ಎಂಡಿ

**ಶ್ರೀ ಹೆಚ್.ಎಂ.ರೇವಣ್ಣ(ಮುಂದುವರೆದಿದೆ)**

ಆದರೆ ಆವತ್ತಿನ ಪರಿಸ್ಥಿತಿಯಲ್ಲಿ ಅದು ಅನುಷ್ಠಾನಕ್ಕೆ ಬರಲಿಲ್ಲ. 1979ರಲ್ಲಿ ಬಿ.ಪಿ.ಮಂಡಲ್‌ರವರ ಅಧ್ಯಕ್ಷತೆಯಲ್ಲಿ ಕೇಂದ್ರದಲ್ಲಿ 2ನೇ ಆಯೋಗ ರಚನೆಯಾಯಿತು. ಆ ಆಯೋಗ 1980ರಲ್ಲಿ ವರದಿ ಕೊಟ್ಟಿತು. ಮಾನ್ಯ ರವಿಯವರು ಹೇಳಿದ ಹಾಗೆ ಹಿಂದುಳಿದ ವರ್ಗದವರಿಗೆ ಶೇಕಡ 27ರಷ್ಟು ಮೀಸಲಾತಿ ಕೊಟ್ಟಿದ್ದರಿಂದ ಕೇಂದ್ರ ಸರ್ಕಾರದ ಆಡಳಿತದಲ್ಲಿ ಇತರೇ ಹಿಂದುಳಿದ ವರ್ಗದಿಂದ IAS (Indian Administrative Service), IPS (Indian Police Service), *IRS (Internal Revenue Service* ), Indian Foreign Service (IFS) ಹುದ್ದೆಗಳಿಗೆ ಅವಕಾಶ ಕಲ್ಪಿಸಿದ್ದು ಮಂಡಲ್ ಕಮಿಷನ್ ಎಂದು ಹೇಳಬೇಕಾಗುತ್ತದೆ. ಆದರೆ, ನಂತರ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಕಷ್ಟವಾಯಿತು.

**ಸಭಾಪತಿಯವರು:–** ಮಾನ್ಯ ರೇವಣ್ಣನವರೇ, ನಿಮ್ಮ ಭಾಷಣವನ್ನು ನಾಳೆ ಮುಂದುವರೆಸಿ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ನಾಳೆ ಬೆಳಿಗ್ಗೆ ಮೊದಲು ನಿಮಗೆ ಅವಕಾಶ ಕೊಡುತ್ತೇನೆ.

7. **ಪ್ರಕಟಣೆ**

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ 17.3.2020ರಂದು ಈ ಕೆಳಕಂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕಗಳನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 2020

2) ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ 2020

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 1257**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಸ್.ಭೋಸರಾಜು:-** ಮಾನ್ಯ ಸಭಾಪತಿಯವರೇ, "ಪಡಿತರದಾರರಿಗೆ ಹಂಚಿಕೆ ಮಾಡುತ್ತಿರುವ ಪಡಿತರ ಪ್ರಮಾಣ ಎಷ್ಟು" ಎಂದು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಒಂದು ಸಂಖ್ಯೆಯನ್ನು ಕೊಟ್ಟಿದ್ದಾರೆ. ನನ್ನ ಎರಡನೆ ಪ್ರಶ್ನೆಯಲ್ಲಿ, "ಸರಿಯಾದ ವೇಳೆಗೆ ಪಡಿತರ ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ" ಎಂದು ಕೇಳಿದ್ದೇನೆ. ಅದಕ್ಕೆ, 2018-19 ಮತ್ತು 2019-2020ನೇ ಸಾಲಿನಲ್ಲಿ ಒಟ್ಟು 8 ಪ್ರಕರಣಗಳು ದಾಖಲಾಗಿವೆ; ಈ ಪೈಕಿ 2 ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ ಎಂದು ಹೇಳಿದ್ದಾರೆ. ರಾಯಚೂರು ಜಿಲ್ಲೆಯ ಒಂದೊಂದು ಶಾಪ್‌ಗೆ 8-10 ಶಾಪ್‌ಗಳನ್ನು attach ಮಾಡಿರುವ ಉದಾಹರಣೆಗಳಿದ್ದು, ಇದರಿಂದ ತುಂಬಾ ತೊಂದರೆಯಾಗಿದೆ. ಅನೇಕ ಕಡೆ ಕಾರಣಾಂತರಗಳಿಂದ ಅಂದರೆ, ರಾಜಕಾರಣಿಗಳ ಮತ್ತು ಅಧಿಕಾರಿಗಳ ಕಾರಣದಿಂದ 5-6 ಶಾಪುಗಳನ್ನು ರದ್ದು ಮಾಡಿ ಒಂದೇ ಕಡೆ attach ಮಾಡಿರುವುದರಿಂದ ಸರಿಯಾದ ಸಮಯಕ್ಕೆ ಆ ಗ್ರಾಮಗಳಿಗೆ ಪಡಿತರ ವಿತರಣೆ ಮಾಡುವುದಕ್ಕೆ ಆಗುತ್ತಿಲ್ಲ. ಈ ವಿಷಯದ ಬಗ್ಗೆ ನೀವು ಹೆಚ್ಚಿನ ಗಮನಹರಿಸಬೇಕು. ಏಕೆಂದರೆ ಈ ಯೋಜನೆಯನ್ನು ಬಡವರಿಗೋಸ್ಕರ ಮಾಡಲಾಗಿದೆ. ಒಂದೇ ಶಾಪ್‌ಗೆ 2-3-4 ಶಾಪ್‌ಗಳನ್ನು attach ಮಾಡುವುದರಿಂದ ಸಮಯಕ್ಕೆ ಸರಿಯಾಗಿ ಪಡಿತರ ಹಂಚಿಕೆಯಾಗುತ್ತಿಲ್ಲ. ಪಕ್ಕದ ಗ್ರಾಮಗಳಿಗೆ ತೆಗೆದುಕೊಂಡು ಹೋಗಿ ಕೊಡದೇ ಇರುವುದರಿಂದ ಆ ಗ್ರಾಮದ ಜನ 3-4 ಕಿಲೋ ಮೀಟರ್ ನಡೆದುಕೊಂಡು ಹೋಗಿ ಪಡಿತರವನ್ನು ಪಡೆದುಕೊಳ್ಳಬೇಕಾಗುತ್ತದೆ. ರಾಯಚೂರು ಜಿಲ್ಲೆಯಲ್ಲಿ attach ಮಾಡಿರುವಂತಹ ಎಷ್ಟು ಶಾಪ್‌ಗಳು ಇವೆ ಎಂಬುದರ ಮಾಹಿತಿ ತರಿಸಿಕೊಂಡು, ಅಲ್ಲಿರಬಹುದಾದ ಸ್ತ್ರೀಶಕ್ತಿ ಗುಂಪುಗಳಿಗೆ ಅಥವಾ ಇತರ ಏಜೆನ್ಸಿಗಳಿಗೆ ಅಥವಾ Registered Societies ಗಳಿಗೆ ವಹಿಸಿ, ಅವರ ಮುಖಾಂತರ ಪಡಿತರ ವಿತರಣೆ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಪಡಿತರ ವಿತರಣೆ ಇಂತಹ ಕಡೆ ಮಾಡುತ್ತೇವೆ ಎಂದು ಹೇಳಿ, 2-3 ತಾಸುಗಳ ಕಾಲ ವಿತರಣೆ ಮಾಡಿ ಅಂಗಡಿಯನ್ನು ಮುಚ್ಚಿಬಿಡುತ್ತಾರೆ. ಬಡವರು, ಕೂಲಿ-ಕಾರ್ಮಿಕರು ಬೆಳಿಗ್ಗೆ 9 ಗಂಟೆಯ ಒಳಗೆ ಮತ್ತು ಸಂಜೆ 6 ಗಂಟೆಯ ನಂತರ ಮನೆಗೆ ಬರುತ್ತಾರೆ. ಈ ಕಡೆಯೂ ತಾವು ಗಮನಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ಈ ಅಧಿವೇಶನ ಮುಗಿದ ಮೇಲೆ, ಬಹುಶಃ 1ನೇ ದಿನಾಂಕದ ನಂತರ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಭೇಟಿ ಕೊಡುತ್ತೇನೆ. ರಾಯಚೂರು ಜಿಲ್ಲೆಯ ಅನೇಕ ಶಾಸಕರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿನ ವ್ಯವಸ್ಥೆಯ ಬಗ್ಗೆ ನನ್ನ ಗಮನಸೆಳೆದಿದ್ದಾರೆ. ಬಡವರಿಗೆ ಕೊಡಬೇಕಾದ ಆಹಾರ-ಧಾನ್ಯ ಏನಿದೆ, ಅದು ಕಡ್ಡಾಯವಾಗಿ ಅವರಿಗೆ ತಲುಪಬೇಕು. ಈ ನಿಟ್ಟಿನಲ್ಲಿ ಕೆಲಸ ಮಾಡಲು ವಿರೋಧ ಪಕ್ಷದಲ್ಲಿರುವ ಎಲ್ಲಾ ಶಾಸಕರ ಸಹಾಯವನ್ನು ಕೋರುತ್ತೇನೆ. ಮಾನ್ಯ ಸಭಾಪತಿಯವರೇ, ನನಗೆ ಒಂದಿಷ್ಟು ಕಾಲಾವಧಿ ಬೇಕು. ಬಹುಶಃ ನೀವು ಹೇಳಿದ್ದರಲ್ಲಿ ಸತ್ಯಾಂಶ ಇದೆ ಎಂದು ಭಾವಿಸುತ್ತೇನೆ. ನಾನು ನಿನ್ನೆ ಸಂಜೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಈ ಅಧಿವೇಶನ ಮುಗಿದ ಮೇಲೆ, ಒಂದೂವರೆ ತಿಂಗಳಲ್ಲಿ ಪ್ರತಿ ಜಿಲ್ಲೆಯಲ್ಲಿನ ಆ ಭಾಗದ ಶಾಸಕರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಕೂಡಿ ಅವ್ಯವಸ್ಥೆಯನ್ನು ಸರಿಪಡಿಸುವ ಕೆಲಸ ಮಾಡೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಚಿವರೇ, ವಿಧಾನಸಭೆಯ ಶಾಸಕರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಎಂದು ಹೇಳಬೇಡಿ. ನಾವೂ ಕೂಡ ಶಾಸಕರು, ನೀವೂ ಶಾಸಕರು.

**ಶ್ರೀ ಕೆ.ಗೋಪಾಲಯ್ಯ:-** ಆಯಾ ಜಿಲ್ಲೆಗಳ ಎಲ್ಲಾ ಶಾಸಕರ ಜೊತೆ ಸೇರಿ, ಬಡವರಿಗೆ ಆಹಾರ-ಧಾನ್ಯಗಳು ಸರಿಯಾದ ರೀತಿಯಲ್ಲಿ ಹಂಚಿಕೆ ಆಗುವ ವ್ಯವಸ್ಥೆ ಮಾಡಿಸುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, Public Distribution System controlorder ಕೆಳಗಡೆ ಒಂದು shop ಗೆ 500 ಜನ Card Holders ನ್ನು ಫಿಕ್ಸ್ ಮಾಡಿರುತ್ತಾರೆ. ಆದರೆ 4-5 shops ಗಳನ್ನು ಹೆಚ್ಚುವರಿಯಾಗಿ ಕೊಟ್ಟರೆ ಅವರಿಗೆ manage ಮಾಡುವುದಕ್ಕೆ ಆಗುತ್ತದೆಯೇ ಎಂಬುದರ ಬಗ್ಗೆ ಚಿಂತನೆ ಮಾಡಿ. ಸರ್ಕಾರಗಳು ಬಡವರ ಹೊಟ್ಟೆಯ ತನಕ ಈ ಯೋಜನೆಗಳು ಮುಟ್ಟಲಿ ಎನ್ನುವ ಉದ್ದೇಶದಿಂದ ಇಂಥದ್ದನ್ನು ತಂದಿರುತ್ತಾರೆ. ಒಂದು ಶಾಪ್‌ಗೆ 4-5 ಶಾಪ್‌ಗಳನ್ನು attach ಮಾಡಿದರೆ 2-3 ಸಾವಿರ Card Holders ಗಳಿಗೆ ಪಡಿತರ ಹಂಚಿಕೆ ಮಾಡಲು ಸಾಧ್ಯವಾಗುತ್ತದೆಯೇ? Public Distribution System controlorder violation ತುಂಬಾ ಆಗುತ್ತಿರುವುದು ನಿಮಗೂ ಗೊತ್ತಿದೆ ಎಂದು ಭಾವಿಸುತ್ತೇನೆ. ಈ ವಿಚಾರವನ್ನು ನೀವು ಗಂಭೀರವಾಗಿ ತೆಗೆದುಕೊಳ್ಳಿ. ಕಾನೂನು ರೀತಿಯಲ್ಲಿ ವಿಚಾರಣೆ ಮಾಡಿ ಅಲ್ಲಿ ಯಾರಾದರೂ ಉಲ್ಲಂಘನೆ ಮಾಡಿರುವುದು ಕಂಡುಬಂದರೆ ಅವರನ್ನು cancel ಮಾಡಿ ಕಾನೂನಾತ್ಮಕವಾಗಿ ಅರ್ಹರಾಗಿರುವವರಿಗೆ ಕೊಡಿ. ಹೆಚ್ಚುವರಿಯಾಗಿ ಶಾಪ್‌ಗಳನ್ನು attach ಮಾಡುತ್ತಿರುವುದರಿಂದ ಪಡಿತರ ಹಂಚಿಕೆಯಲ್ಲಿ ದುರುಪಯೋಗವಾಗುತ್ತಿದೆ ಎಂದು ಮಾನ್ಯ ಭೋಸರಾಜ್‌ರವರು ಈ ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, 4-5 ಶಾಪ್‌ಗಳನ್ನು ಒಂದು ಶಾಪ್‌ಗೆ ಅಟ್ಯಾಚ್ ಮಾಡಿರುವ ಪ್ರಶ್ನೆ ಉದ್ಭವಿಸುವುದಿಲ್ಲ. ಕೆಲವು ಹಳ್ಳಿಗಾಡುಗಳಲ್ಲಿ 250-300-500-700-800 ಕಾರ್ಡ್

ಹೋಲ್ಡರ್‌ಗಳ ಸಂಖ್ಯೆ ಇವೆ. ಒಂದೇ ಅಂಗಡಿಗೆ 4-5 ಶಾಪ್‌ಗಳನ್ನು ಅಟ್ಯಾಚ್ ಮಾಡಿರುವಂತಹ ಪ್ರಕರಣ ನನ್ನ ಗಮನಕ್ಕೆ ಬಂದಿರುವುದಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಒಂದೇ ಶಾಪ್‌ಗೆ 8-10 ಶಾಪ್‌ಗಳನ್ನು attach ಮಾಡಿರುವ ಉದಾಹರಣೆಗಳಿವೆ. ಇಂಥದ್ದು ನಿಮ್ಮ ಗಮನಕ್ಕೆ ಬಂದಿಲ್ಲ ಎಂದರೆ ಹೇಗೇ? ಮಸ್ಕಿ ಗ್ರಾಮದಲ್ಲಿ 3 ಶಾಪ್‌ಗಳನ್ನು attach ಮಾಡಿದ್ದಾರೆ.

**ಶ್ರೀ ಕೆ.ಗೋಪಾಲಯ್ಯ:-** ಆ ರೀತಿ ಆಗಿದ್ದರೆ ಅಂಥದ್ದಕ್ಕೆ ಕಡಿವಾಣ ಹಾಕುತ್ತೇನೆ. ನಾನು ಸಚಿವನಾದ ಮೇಲೆ 5 ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದೇನೆ. ಬರುವ ಶನಿವಾರ 2 ಜಿಲ್ಲೆಗಳಿಗೆ ಹೋಗಿ ಬರಬೇಕು ಎಂದು ಉದ್ದೇಶಿಸಿದ್ದೆ. ಆದರೆ ಈಗ ಅಧಿವೇಶನ ನಡೆಯುತ್ತಿದೆ ಮತ್ತು ಕೊರೊನ ವೈರೆಸ್‌ನ ಹಾವಳಿ ಕೂಡ ಇದೆ. ನಾನು ಪ್ರತಿ ಜಿಲ್ಲೆಗೆ ಭೇಟಿ ಕೊಡುತ್ತೇನೆ. ಆ ರೀತಿಯ ಪ್ರಕರಣಗಳು ಇದ್ದರೆ ಅದಕ್ಕೆ ಕಡಿವಾಣ ಹಾಕುತ್ತೇನೆ. 2 ತಿಂಗಳು ಸಮಯ ಕೊಡಿ.

**ಶ್ರೀ ಶರಣಪ್ಪ ಮಟ್ಟೂರ:-** ಒಂದೇ ಶಾಪ್‌ಗೆ attach ಮಾಡಿರುವುದು ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದಿರಿ. ಆದರೆ ಈ ರೀತಿ ಆಗಿರುವುದಕ್ಕೆ ಬೇಕಾದ ಮೆಟೀರಿಯಲ್‌ಗಳನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. 7-9 ವರ್ಷಗಳಿಂದ ಒಂದೇ ಶಾಪ್‌ಗೆ 2-3 ಶಾಪ್‌ಗಳನ್ನು attach ಮಾಡಿರುವ ಉದಾಹರಣೆಗಳು ಈಗಲೂ ನಿಮಗೆ ಸಿಗುತ್ತವೆ.

**ಶ್ರೀ ಕೆ.ಗೋಪಾಲಯ್ಯ:-** ಈ ರೀತಿಯ ವ್ಯವಸ್ಥೆ ರಾಯಚೂರು ಜಿಲ್ಲೆಯಲ್ಲಾಗಲಿ ಅಥವಾ ರಾಜ್ಯದ ಇತರ ಜಿಲ್ಲೆಗಳಲ್ಲಿದ್ದರೆ ಈ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಂಡು ಅರ್ಹರಿಗೆ ವಿತರಣೆ ಮಾಡುವ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಚಿವರು ವಿಶೇಷವಾಗಿ ರಾಯಚೂರು ಜಿಲ್ಲೆಯ ಬಗ್ಗೆ ಗಮನಹರಿಸಬೇಕು.

**ಶ್ರೀ ಕೆ.ಗೋಪಾಲಯ್ಯ:-** ನಾನು ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ನನಗೆ ಸಹಕಾರ ಕೊಡಿ, 30 ಜಿಲ್ಲೆಗಳಿಗೆ ಭೇಟಿ ಕೊಟ್ಟು ಆ ಇಡೀ ವ್ಯವಸ್ಥೆಯನ್ನೇ ಸರಿಪಡಿಸುತ್ತೇನೆ. ನನಗೆ ಸ್ವಲ್ಪ ಸಮಯ ಕೊಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಕೂಲಿ ಕೆಲಸ ಮಾಡುವ ಮತ್ತು ಮನೆ ಕೆಲಸ ಮಾಡುವ ಹೆಂಗಸರ ಹೆಬ್ಬೆಟ್ಟನ್ನು ಗುರುತಾಗಿ ತೆಗೆದುಕೊಂಡರೆ ಸ್ಪಷ್ಟತೆ ಬರುವುದಿಲ್ಲ. ಇದನ್ನು ಸರಿಪಡಿಸಲು ಜಿಲ್ಲಾಧಿಕಾರಿಗಳು ಕೂಡ ಸೂಕ್ತ ಕ್ರಮ ಕೈಗೊಂಡಿಲ್ಲ. ಹೆಬ್ಬೆಟ್ಟು ಗುರುತು ಸರಿಯಾಗಿ ಬರುತ್ತಿಲ್ಲ ಎಂದು ಅವರನ್ನು ವಾಪಸ್ಸು ಕಳುಹಿಸಿಬಿಡುತ್ತಾರೆ. ಅವರು ಏನು ಮಾಡಬೇಕು? ಈ ನಿಟ್ಟಿನಲ್ಲಿ ತಾವು ಗಮನ ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಗೋಪಾಲಯ್ಯ:-** ಯಾರಿಗೆ ಹೆಬ್ಬೆಟ್ಟಿನ ಗುರುತು ಸ್ಪಷ್ಟವಾಗಿ ಬರುವುದಿಲ್ಲವೋ ಅಥವಾ ವಯಸ್ಸಾಗಿರುವವರು, ತಮ್ಮ ಪಕ್ಕದ ಮನೆಯವರಿಗೆ ಒಂದು ಪತ್ರ ಕೊಟ್ಟು ಅವರ ಮೂಲಕ ಪಡಿತರವನ್ನು ತರಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಈಗ ಕೊರೊನಾ ಸಮಸ್ಯೆ ಇರುವುದರಿಂದ ಹೆಬ್ಬೆಟ್ಟು ತೆಗೆದುಕೊಳ್ಳುವುದೂ ಕೂಡ ಸೂಕ್ತವಲ್ಲ. ಆದ್ದರಿಂದ ಮುಂದಿನ ಗುರುವಾರ-ಶುಕ್ರವಾರದಿಂದ, ದೂರವಾಣಿ ಮೂಲಕ ಕರೆ ಮಾಡಿದರೂ ಪಡಿತರ ವಿತರಣೆ ಆಗುವಂತಹ ವ್ಯವಸ್ಥೆ ಮಾಡುತ್ತಿದ್ದೇವೆ. ಎರಡು-ಮೂರು ದಿನಗಳಲ್ಲಿ ಇದನ್ನು ಸರಿಪಡಿಸುತ್ತೇವೆ. Biometric system ತೆಗೆದು ದೂರವಾಣಿ ಮುಖೇನ ಪಡಿತರ ವಿತರಣೆ ಮಾಡುವ ಕೆಲಸವನ್ನು ನಿನ್ನೆಯಿಂದ ಪ್ರಾರಂಭ ಮಾಡಿಸಿದ್ದೇನೆ. ಬಹುಶಃ 2-3 ದಿನಗಳಲ್ಲಿ ಇದನ್ನು ಸರಿಪಡಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:- ಮಾ**ನ್ಯ ಸಚಿವರೇ ತಾವು ಮಂಗಳೂರಿಗೆ ಭೇಟಿ ಕೊಟ್ಟಾಗ ನಮ್ಮ ಸಮಸ್ಯೆಗಳಿಗೆ ಪರಿಹಾರ ಒದಗಿಸಿದ್ದೀರಿ. ಆದರೆ, ಕೆಲವು ಕಡೆ ಸರ್ವರ್ ಸರಿಯಿಲ್ಲದೇ, ಇಂಟರ್‌ನೆಟ್ ಇಲ್ಲದೇ ಕೂಲಿ-ಕಾರ್ಮಿಕರು ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

***ಶ್ರೀ ಕೆ. ಗೋಪಾಲಯ್ಯ:-*** ಮಾನ್ಯ ಸಭಾಪತಿಯವರೇ, ಮುಂದಿನ ದಿನಗಳಲ್ಲಿ ಶಾಶ್ವತವಾದ ಪರಿಹಾರ ಕಲ್ಪಿಸುವ ವ್ಯವಸ್ಥೆ ಮಾಡಿಸುತ್ತೇನೆ.

(ಮುಂದು . . .)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(488) 17–03–2020 4.40 ಡಿಎಸ್–ಎಂಡಿ

**ಚುಕ್ಕೆ ಪ್ರಶ್ನೆ ಸಂಖ್ಯೆ:1235**
**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಎರಡು ಉಪ ಪ್ರಶ್ನೆ ಏನೆಂದರೆ, PICARD (Primary Cooperative Agriculture and Rural Development Bank) ಬ್ಯಾಂಕುಗಳಲ್ಲಿ ರೈತರು ಪಡೆದಿರುವಂತಹ ಸಾಲ ಮನ್ನಾ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಹಿಂದಿನ ಸರ್ಕಾರ ಕೃಷಿ ಸಾಲ ಮನ್ನಾ ಮಾಡಿತ್ತು. ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ, ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಜಿ.ಪರಮೇಶ್ವರ್ ನೇತೃತ್ವದ ಸರ್ಕಾರ. ಅಂದು ಮಾನ್ಯ ಬಂಡೆಪ್ಪ ಕಾಶಿಂಪುರ್‌ರವರು ಸಹಕಾರ ಸಚಿವರಾಗಿದ್ದರು. ಇಡೀ ಭಾರತ ದೇಶದಲ್ಲೇ ಯಾವುದೇ ಸರ್ಕಾರ ಸಹಕಾರ ಸಂಘಗಳು ಮತ್ತು ಕಮರ್ಷಿಯಲ್ ಬ್ಯಾಂಕ್‌ಗಳಲ್ಲಿ ಒಂದು ಲಕ್ಷ ಮತ್ತು ಎರಡು ಲಕ್ಷ ಸಾಲ ಮನ್ನಾ ಮಾಡಿರುವಂಥದ್ದು ಸುಮಾರು 42 ಸಾವಿರ ಕೋಟಿ ರೂಪಾಯಿಗಳು. ಭಾರತ ದೇಶದ ಇತಿಹಾಸದಲ್ಲೇ ಕರ್ನಾಟಕ ರಾಜ್ಯದಲ್ಲೇ ಪ್ರಥಮವಾಗಿ ರೈತರ ಸಾಲ ಮನ್ನಾ ಮಾಡಿರುವಂಥದ್ದು. ಅದನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ಅಂದು ಈ PICARD Bank ಗಳ ಸಾಲ ಮನ್ನಾವನ್ನು ಆ ಸರ್ಕಾರ ಮಾಡುವುದಕ್ಕೆ ಆಗಿರಲಿಲ್ಲ. ಅವರು ಎರಡನೇ ಹಂತದಲ್ಲಿ ಬಡ್ಡಿ ಮನ್ನಾ ಮಾಡಬೇಕೆನ್ನುವ ಚಿಂತನೆ ನಡೆದಿತ್ತು. ಅದನ್ನು ಮಾಡುವುದಕ್ಕಾಗಲಿಲ್ಲ. ಅಷ್ಟರಲ್ಲಿ ಸರ್ಕಾರ ಹೊರಟು ಹೋಯಿತು. ಈ ಸರ್ಕಾರ ಬಂದ ಮೇಲೆ ಯಾವುದೇ PICARD Bank ಗಳಲ್ಲಿ ಸಾಲ ಪಡೆದಂತಹ ರೈತರಿಗೆ ಯಾವುದೇ ಸಾಲ ಮನ್ನಾ ರಿಯಾಯಿತಿ ಸೌಲಭ್ಯಗಳು ಸಿಗಲಿಲ್ಲ. ಇವತ್ತು ಈ ಸರ್ಕಾರ ಸುಮಾರು 75,904 ಮಂದಿ ಸಾಲಗಾರರಿಗೆ ಒಟ್ಟು ಮೊತ್ತ ಸುಮಾರು 70,214 ಲಕ್ಷಗಳು. ಇವತ್ತು ಅದರಲ್ಲಿ 366 ಕೋಟಿ ಬಡ್ಡಿ ಮನ್ನಾ ಮಾಡಿದ್ದಾರೆ. ಅಸಲು 336 ಕೋಟಿ ರೂಪಾಯಿಗಳು. ಅಸಲಿಗಿಂತ ಬಡ್ಡಿಯೇ ಜಾಸ್ತಿಯಾಗಿದೆ. ನಮ್ಮ ಪಿಕಾರ್ಡ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರುವಂಥ ರೈತರು ಆ ಸಾಲ ದುರುಪಯೋಗವಾಗದೆ ಯಾವ ಉದ್ದೇಶಕ್ಕಾಗಿ ಸಾಲ ಪಡೆದುಕೊಳ್ಳುತ್ತಾರೆ ಅದೇ ಉದ್ದೇಶಕ್ಕೆ ಖರ್ಚು ಮಾಡತಕ್ಕಂಥ ನಿಯಮ ಇರತಕ್ಕಂಥದ್ದು. ಏಕೆಂದರೆ, ಕಂತುಗಳ ರೂಪದಲ್ಲಿ ಆ ಯೋಜನೆಗೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಇಲ್ಲಿ ದುರುಪಯೋಗವಾಗುವ ಪ್ರಶ್ನೆಯೇ ಇಲ್ಲ. ಇಂತಹ ಸಾಲ ಮನ್ನಾ ಮಾಡಲಿಲ್ಲ. ಇಲ್ಲಿ ಸಾಲ ಪಡೆದಂತಹ ರೈತರೆಲ್ಲರೂ ಬಹಳ ನಿರಾಸೆಯಲ್ಲಿದ್ದರು. ಈಗ ಬಂದಿರುವಂತಹ ಸರ್ಕಾರ ಅಸಲು ಮತ್ತು ಬಡ್ಡಿ ಮನ್ನಾ ಮಾಡುತ್ತಾರೆಂದು ಎಲ್ಲಾ ರೈತರು ನಿರೀಕ್ಷೆಯಲ್ಲಿದ್ದರು. ಕಳೆದ ಮೂರು ವರ್ಷಗಳಿಂದ ಈ ರಾಜ್ಯದಲ್ಲಿ ಸುಮಾರು 150 ತಾಲ್ಲೂಕುಗಳಲ್ಲಿ ಬರಗಾಲ, ಸುಮಾರು 70 ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಅತಿವೃಷ್ಟಿ. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಈ ರೈತರು ಮರುಪಾವತಿ ಮಾಡುವುದಕ್ಕಾಗಲಿಲ್ಲ. ಆದರೆ ಇವತ್ತು ಈ ಸರ್ಕಾರ ಸುಮಾರು 366 ಕೋಟಿ ಬಡ್ಡಿ ಮನ್ನಾ ಮಾಡಿದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಾದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಡಿಯೂರಪ್ಪನವರನ್ನು, ಸಹಕಾರ ಸಚಿವರಾದ ಮಾನ್ಯ ಸೋಮಶೇಖರ್‌ರವರನ್ನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಅಸಲು ಮನ್ನಾ ಮಾಡದಿದ್ದರೂ ಬಡ್ಡಿಯಾದರೂ ಮನ್ನಾ ಮಾಡಿದ್ದಾರೆಂದು ಸ್ವಲ್ಪ ಸಮಾಧಾನ ತಂದಿದೆ. ಅಸಲು ಮನ್ನಾ ಮಾಡಿದ್ದರೆ ನಾವು ಇನ್ನೂ ಸಂತೋಷಪಡುತ್ತಿದ್ದೆವು. ನಿಜಕ್ಕೂ ಕೂಡ ಈ ಎಲ್ಲಾ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ದಿನಾಂಕ:14-02-2020 ರಂದು ಆದೇಶ ಹೊರಡಿಸಿದ್ದಾರೆ. ಕೇವಲ 40 ದಿನಗಳು ಮಾತ್ರ ಕಾಲಾವಕಾಶವನ್ನು ಕೊಟ್ಟಿದ್ದಾರೆ. ದಿನಾಂಕ:31-03-2020 ರೊಳಗಡೆ ನೀವು ಅಸಲು ಪಾವತಿ ಮಾಡಿದರೆ ಈ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ 40 ದಿವಸ ಮಾತ್ರ ಸಮಯ ನಿಗದಿ ಮಾಡಿದ್ದಾರೆ. 40 ದಿನಗಳಲ್ಲಿ ಯಾವ ರೈತರು ಕೂಡ ಈ ಅಸಲನ್ನು ಪಾವತಿ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಚಿವರಿಗೆ ಗೊತ್ತಿದೆ, ಕಳೆದಸಾಲಿನಲ್ಲಿ ಸುಮಾರು 170 ತಾಲ್ಲೂಕುಗಳು ಬರಪೀಡಿತವಾಗಿದೆ ಎಂದು ಸರ್ಕಾರವೇ ಘೋಷಣೆ ಮಾಡಿದೆ. 70ಕ್ಕೂ ಹೆಚ್ಚು ಅತಿವೃಷ್ಟಿಯಿಂದ ಜನಜೀವನ ಬಹಳ ಅಸ್ತವ್ಯಸ್ತವಾಗಿದೆ. ದಯವಿಟ್ಟು ಈ ಮರುಪಾವತಿ ಅವಧಿಯನ್ನು ವಿಸ್ತರಣೆ ಮಾಡಬೇಕು. ಈಗ ನಬಾರ್ಡ್ ಸಾಲ ಕೊಟ್ಟರೂ ಕೂಡ ವರ್ಷದಲ್ಲಿ ಆರು ತಿಂಗಳಿಗೊಮ್ಮೆ ಸೆಪ್ಟೆಂಬರ್‌ನಲ್ಲಿ ಕಂತು ಪಾವತಿ ಮಾಡುವುದಕ್ಕೆ Financing Agency ಆದ ನಬಾರ್ಡ್ ಅವಕಾಶ ಕೊಟ್ಟಿದೆ. ದಯಮಾಡಿ ಇದನ್ನು ಸೆಪ್ಟೆಂಬರ್‌ವರೆಗೆ ಅವಧಿಯನ್ನು ವಿಸ್ತರಣೆ ಮಾಡಿದರೆ ಇದರಲ್ಲಿ ಶೇಕಡ 99 ಮಂದಿ ಫಲಾನುಭವಿಗಳು ಇದರ ಫಲವನ್ನು ಪಡೆಯುತ್ತಾರೆ. ಇದರಿಂದ ಎಲ್ಲರೂ ಹೊರಗೆ ಬರುತ್ತಾರೆ. ಆದ್ದರಿಂದ ಮುಂದಿನ ಸೆಪ್ಟೆಂಬರ್‌ವರೆಗೆ ಅಸಲು ಕಟ್ಟುವಂತಹ ಅವಧಿಯನ್ನು ವಿಸ್ತರಣೆ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ನನ್ನ ಎರಡನೇ ಉಪ ಪ್ರಶ್ನೆ ಏನೆಂದರೆ, ಸುಮಾರು ಹತ್ತು ವರ್ಷಗಳ ಹಿಂದೆ 'ದಾಮ್ ದುಪ್ಪಟ್ಟು' ಯೋಜನೆಯಲ್ಲಿ ಸರ್ಕಾರ ಸಾಲ ಮನ್ನಾ ಯೋಜನೆ ಜಾರಿಗೆ ತಂದಿತ್ತು. ಅವತ್ತು 53 ಕೋಟಿ ರೂಪಾಯಿಗಳನ್ನು ಸರ್ಕಾರ ಪಾವತಿಸಬೇಕಾಗಿತ್ತು. ನಿಗದಿತ ಸಮಯಕ್ಕೆ ಪಾವತಿಸಲಿಲ್ಲ. ಅದರ ಮುಂದುವರೆದ ಬಡ್ಡಿಯನ್ನು ನಬಾರ್ಡ್ ಸಂಸ್ಥೆ ಕಟ್ಟಬೇಕೆಂದು ರೈತರ ಮೇಲೆ ಸಾಲಗಾರರ ಮೇಲೆ ಏರಿತು. ರೈತರು ಕೂಡ ಯಾರು ಕಟ್ಟುವುದಕ್ಕೆ ತಯಾರಾಗಲಿಲ್ಲ. PICARD Bank and *KSCARD* (Karnataka State Cooperative Agriculture & Rural Development Bank) ಕೂಡ ಆ ಬಡ್ಡಿ ಹಣವನ್ನು ಕಟ್ಟುವುದಕ್ಕೆ ಆಗಲಿಲ್ಲ. ಇವತ್ತು ಕೆಲವರು ಕೋರ್ಟ್‌ಗೆ ಹೋಗಿ ತೆಗೆದುಕೊಂಡಿದ್ದಾರೆ. ಕೇವಲ 46 ಕೋಟಿ ರೂಪಾಯಿಗಳನ್ನು ದಾಮ್ ದುಪ್ಪಟ್ಟು ಯೋಜನೆಯಲ್ಲಿ ಸರ್ಕಾರ ಕೊಡಬೇಕಾಗಿದೆ. ಸರ್ಕಾರವೇ ಆ ಯೋಜನೆ ತಂದಿರುವಂಥದ್ದು. ಸರ್ಕಾರವೇ ಕೋರ್ಟ್‌ಗೆ ಹೋಗಿ ವ್ಯಾಜ್ಯ ಮಾಡುತ್ತಿದೆ. ಸರ್ಕಾರ ವ್ಯಾಜ್ಯಗಳನ್ನು ವಾಪಸ್ ತೆಗೆದುಕೊಂಡು ಆ 46 ಕೋಟಿ ರೂಪಾಯಿಗಳನ್ನು ಭರಿಸಬೇಕು. ದಾಮ್ ದುಪ್ಪಟ್ಟು ಯೋಜನೆಯಲ್ಲಿ ಯಾರ್‍ಯಾರು ಸಿಕ್ಕಿ ಹಾಕಿಕೊಂಡಿದ್ದಾರೆ, ಅವರು ಯಾರಿಗೂ ದರ್ಖಾಸ್ತುಗಳನ್ನು ವಾಪಸ್ ಕೊಟ್ಟಿಲ್ಲ. ಅವರು ಯಾರು ಸಾಲ ಪಡೆಯುತ್ತಿಲ್ಲ. ಆದ್ದರಿಂದ ಆ ದಾಮ್ ದುಪ್ಪಟ್ಟು ಯೋಜನೆಯಲ್ಲಿ 46 ಕೋಟಿ

ರೂಪಾಯಿಗಳನ್ನು ಸರ್ಕಾರ ಕೊಟ್ಟರೆ ಆ ರೈತರಿಗೆ ದೊಡ್ಡ ಮಹಾದುಪಕಾರ ಮಾಡಿದ ಹಾಗೆ ಆಗುತ್ತದೆ. ಅದರ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆಂದು ದಯವಿಟ್ಟು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರ ಪ್ರಶ್ನೆಗೆ ಪೂರಕವಾಗಿ ಹೇಳುತ್ತಿದ್ದೇನೆ. ಇಡೀ ರಾಜ್ಯದಾದ್ಯಂತ PICARD Bank ಗಳಿಗೆ ಚುನಾವಣೆ ನಡೆಯುತ್ತಿದೆ. ಮಾರ್ಚ್, ಏಪ್ರಿಲ್‌ನಲ್ಲಿ ಈ ಚುನಾವಣೆ ಮುಗಿಯುತ್ತದೆ. ಹೊಸ ಆಡಳಿತ ಮಂಡಳಿ ಬರುವುದರಿಂದ ಈ ಅಸಲನ್ನು ಕಟ್ಟಿಸುವುದರಲ್ಲಿ ಅವರು ಆಸಕ್ತಿದಾಯಕವಾಗಿ ಕೆಲಸ ಮಾಡುತ್ತಾರೆ. ಆದ್ದರಿಂದ ಮಾನ್ಯ ಮರಿತಿಬ್ಬೇಗೌಡರು ಹೇಳಿದ ಹಾಗೆ ಅಸಲನ್ನು ಕಟ್ಟುವುದಕ್ಕೆ ಸಮಯವನ್ನು ಮತ್ತಷ್ಟು ವಿಸ್ತರಿಸಬೇಕು.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ಚೆನ್ನರಾಯಪಟ್ಟಣದಲ್ಲಿ 23 ಕೋಟಿ ಇದೆ. ಬರೀ 7 ಲಕ್ಷ, 8 ಲಕ್ಷ ಕಟ್ಟುತ್ತಿದ್ದಾರೆ. ಮಾನ್ಯ ರವಿ ಯವರು ಹೇಳಿದ ಹಾಗೆ, ಈ ತಿಂಗಳು, ಮುಂದಿನ ತಿಂಗಳು ಚುನಾವಣೆ ಇದೆ. ಮಾನ್ಯ ಮರಿತಿಬ್ಬೇಗೌಡರು ಹೇಳಿದ ಹಾಗೆ ಸೆಪ್ಟೆಂಬರ್‌ವರೆಗೆ ವಿಸ್ತರಣೆ ಮಾಡಿದರೆ ಸಂತೋಷ. ಮಾನ್ಯ ಸಚಿವರು ಕೂಡ ನಿರಂತರವಾಗಿ ಸಹಕಾರ ಕ್ಷೇತ್ರದಿಂದ ಬಂದಿರತಕ್ಕಂಥವರು. ಅದರ ಬಗ್ಗೆ ಇಲ್ಲೇ ಭರವಸೆ ಕೊಡಬೇಕೆಂದು ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, he is a veteran cooperative. ಅವರಿಗೆ ಗೊತ್ತಿಲ್ಲದ್ದು ಏನು ಇಲ್ಲ. ಅವರಿಗೆ ಎಲ್ಲಾ ಪೂರ್ತಿಯಾಗಿ ಗೊತ್ತಿದೆ. ಹೊಟ್ಟೆಯೊಳಗೆ ಇಟ್ಟುಕೊಳ್ಳಬೇಡಿ ಹೊರಗೆ ಹಾಕಿಬಿಡಿ. ದಿನಾಂಕ:31-03-2020 ರವರೆಗೆ ಕಾಲಾವಕಾಶ ನೀಡಿದ್ದೇವೆಂದು ಹೇಳಿದ್ದಾರಲ್ಲಾ ಮಾರ್ಚ್ ಅಂತ್ಯದಲ್ಲಿ ನಾವೇನು ಆದಾಯ ತೆರಿಗೆಯನ್ನು ಕಟ್ಟಬೇಕೇ? ಸಹಕಾರ ಸಂಘಗಳಿಗೆ ವಾರ್ಷಿಕ ಅಂತ್ಯ ಸೆಪ್ಟೆಂಬರ್‌ನಲ್ಲಿ ಇರುವುದು. ಅದರಲ್ಲಿ ಮಾನ್ಯ ಮರಿತಿಬ್ಬೇಗೌಡರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಸಹಕಾರ ಸಂಘಗಳಿಗೆ ಸೆಪ್ಟೆಂಬರ್‌ನಲ್ಲಿ ವಾರ್ಷಿಕ ಅಂತ್ಯ ಇರುವುದು. ಆ ತಾರೀಖಿನೊಳಗಡೆ ಅಸಲನ್ನು ಕಟ್ಟಿದರೆ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದರೆ ಅನುಕೂಲವಾಗುತ್ತದೆ. ನಮ್ಮ ಅಧಿಕಾರಿಗಳು ಇದನ್ನು ಸ್ಪಷ್ಟವಾಗಿ ಹೇಳಬೇಕು. ದಿನಾಂಕ:31-03-2020 ಎಂದು ಹೇಳಿದ್ದಾರಲ್ಲಾ ಇದು ತಪ್ಪು ಇದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ದಿನಾಂಕ:14-02-2020 ರಂದು ಹೊರಡಿಸಿರುವ ಆದೇಶದಂತೆ ದಿನಾಂಕ:31-03-2020ರೊಳಗೆ ಯಾರು ಅಸಲನ್ನು ಕಟ್ಟುತ್ತಾರೆ ಅವರಿಗೆ ಸುಸ್ತಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುತ್ತೇವೆಂದು ತಿಳಿಸಲಾಗಿದೆ. ಸುಮಾರು 466 ಕೋಟಿ ರೂಪಾಯಿಗಳನ್ನು ಮನ್ನಾ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಪಿಕಾರ್ಡ್ ಬ್ಯಾಂಕ್‌ಗಳಲ್ಲಿ 366 ಕೋಟಿ ರೂಪಾಯಿಗಳು, ಡಿಸಿಸಿ ಬ್ಯಾಂಕ್‌ನಲ್ಲಿ 100 ಕೋಟಿ ರೂಪಾಯಿಗಳು. ಎರಡೂ ಸೇರಿ 466 ಕೋಟಿ ರುಪಾಯಿಗಳನ್ನು ಅಸಲು ಕಟ್ಟಿದರೆ ಮನ್ನಾ ಮಾಡಬೇಕೆಂದು ಇದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ ಸುಮಾರು 60 ಕೋಟಿ ರೂಪಾಯಿಗಳ ಅಸಲನ್ನು ಸುಸ್ತಿದಾರರು ಕಟ್ಟಿದ್ದಾರೆ. ಯಾರು ಅಸಲು ಕಟ್ಟಿದ್ದಾರೆ ಅವರಿಗೆ ಮಾತ್ರ ಬಡ್ಡಿ ಮನ್ನಾ ಆಗುತ್ತದೆ. ಮಾನ್ಯ ಮರಿತಿಬ್ಬೇಗೌಡರು ಕೇಳಿದ ಹಾಗೆ ಅಸಲನ್ನು ಮನ್ನಾ ಮಾಡುವುದಿಲ್ಲ. ಅಡಿಷನಲ್ ಮಾಡಿ ಎಂದು ಕೇಳಿದ್ದಾರೆ. ನಬಾರ್ಡ್‌ನವರು ಏನು ಹೇಳಿದ್ದಾರೆ ಅದರ ಪ್ರಕಾರ ಕೃಷಿ ಮತ್ತು ಕೃಷಿ ಪೂರಕ ಸಾಲಗಳಲ್ಲಿ ಕೃಷಿ ಯಾಂತ್ರೀಕರಣ, ಪ್ಲಾಂಟೇಷನ್ ಮತ್ತು ತೋಟಗಾರಿಕೆ ಅಭಿವೃದ್ಧಿ ಉದ್ದೇಶಗಳನ್ನು ಸಹ ಬಡ್ಡಿ ಮನ್ನಾ ಯೋಜನೆಯಲ್ಲಿ ಸೇರ್ಪಡೆ ಮಾಡಲಾಗಿದೆ.

(ಮುಂದು)

489/17-3-2020/4-50/ಬಿಕೆಪಿ-ಎಕೆ

**(ಈ ಹಂತದಲ್ಲಿ ಉಪ ಸಭಾಪತಿಯವರು ಸಭಾಪೀಠವನ್ನಲಂಕರಿಸಿದರು)**

**ಶ್ರೀ ಎಸ್.ಟಿ.ಸೋಮಶೇಖರ್(ಮುಂದು. . .)**

ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಇದೂ ಸಹ ಸೇರ್ಪಡೆಯಾಗಿದೆ. ಹಣ ಪಾವತಿ ಮಾಡಲಿಕ್ಕೆ ಈ ತಿಂಗಳ 31 ರವರೆಗೂ ಸಮಯ ಇದೆ. 27, 28 ರವರೆಗೆ ಎಷ್ಟು ಅಸಲು ಮೊತ್ತವನ್ನು ರೈತರು ಕಟ್ಟುತ್ತಾರೆ? ಇನ್ನು 2-3 ದಿನಗಳು ಇರುವಾಗ ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈಗ ಇರುವಂತಹ ಅವಧಿ ಎಂದರೆ 31-3-2020. ನಿನ್ನೆಯವರೆಗೆ ಸುಮಾರು 60 ಕೋಟಿ ಹಣವನ್ನು ಈಗಾಗಲೇ ರೈತರು ಪಾವತಿ ಮಾಡಿದ್ದಾರೆ. ಇನ್ನು 31 ರವರೆಗೆ ಹಣ ಕಟ್ಟಲಿಕ್ಕೆ ಕಾಲಾವಕಾಶ ಇದೆ. ನಾವು ಸಮಯವನ್ನು ಮುಂದುವರಿಸುತ್ತೇವೆಂದು ಹೇಳಲಿಕ್ಕೆ ಆಗುವುದಿಲ್ಲ. ಅದ್ದರಿಂದ, ಇನ್ನು ಸಮಯ ಇರುವುದರಿಂದ ರೈತರು ಸಹ ಹಣವನ್ನು ಕಟ್ಟಲಿಕ್ಕೆ ಹಣವನ್ನು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಮಾನ್ಯ ಸದಸ್ಯರು 2ನೇ ಪ್ರಶ್ನೆಯನ್ನು ಕೇಳಿದರು. ಆದರೆ, ಅದು ಇದರಲ್ಲಿ ಇರುವುದಿಲ್ಲ. ಈ ಪ್ರಶ್ನೆಗೆ ಅರ್ಧ ಗಂಟೆಯಲ್ಲಿ ಉತ್ತರವನ್ನು ತರಿಸಿಕೊಂಡು ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರ ಜೊತೆ ಮಾತನಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುವುದರಲ್ಲಿ ಅರ್ಥ ಇದೆ. ದಿನಾಂಕವನ್ನು ನಿಗದಿಗೊಳಿಸಿದ್ದು, ಈಗಾಗಲೇ 66 ಕೋಟಿ ರೂಪಾಯಿಗಳು ಪಾವತಿಯಾಗಿದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. 466 ಕೋಟಿ ರೂಪಾಯಿಗಳ ಪೈಕಿ ಈಗಾಗಲೇ 66 ಕೋಟಿ ರೂಪಾಯಿಗಳು ಬಂದಿದೆ ಎಂದು ಹೇಳಿದ್ದಾರೆ. ಡಿ.ಸಿ.ಸಿ. ಬ್ಯಾಂಕ್ ಸೇರಿಸಿ ಹೇಳುತ್ತಿದ್ದಾರೆ. ಆದರೆ, ನಾನು ಕೇಳಿದ ಪ್ರಶ್ನೆ P-CARD (Primary Cooperative Agriculture and Rural Development) *Bank* ನ ವಿಷಯ. 460 ಕೋಟಿ ರೂಪಾಯಿಗಳಲ್ಲಿ 66 ಕೋಟಿ ರೂಪಾಯಿಗಳು ಬಂದಿದೆ ಎಂದು ಹೇಳುತ್ತಾರೆ. ಇನ್ನು ಸಮಯ ಇರುವಂತಹದ್ದು ಕೇವಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

14 ದಿವಸಗಳು ಮಾತ್ರ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಯಾವ ರೈತರ ಹತ್ತಿರವೂ ಹಣ ಇರುವುದಿಲ್ಲ. ಜೊತೆಗೆ ಬೆಳೆಯಿಲ್ಲದೆ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಇನ್ನು ಕೋವಿಡ್-19 ರೋಗ ಯಾರಿಗೂ ಹಣ ಸಿಗದ ರೀತಿಯಲ್ಲಿ ಮಾಡಿದೆ. ಇದರಿಂದ ಯಾರಿಗೂ ಸಹ ಒಂದು ಪೈಸೆ ಸಿಗುವುದಿಲ್ಲ, ಮಾರುಕಟ್ಟೆ ಬಂದ್ ಆಗಿದೆ. ರೈತ ಏನಾದರೊಂದು ಬೆಳೆಯನ್ನು ಮಾರಲಿಕ್ಕೆ ಇಟ್ಟುಕೊಂಡಿದ್ದರೆ, ಅದನ್ನು ಸಹ ಮಾರಾಟ ಮಾಡಲಿಕ್ಕೆ ಆಗುತ್ತಿಲ್ಲ. ಮತ್ತೆ ಕೋಳಿಯನ್ನು ಮಾರಾಟ ಮಾಡಲಿಕ್ಕೆ ಬೆಲೆಯೇ ಸಿಗುತ್ತಿಲ್ಲ. ಮರಿಗೂ ಬೆಲೆಯಿಲ್ಲ. Brandy ಗೆ ಬಿಟ್ಟರೆ ಬೇರೆ ಯಾವುದಕ್ಕೂ ಬೆಲೆ ಸಿಕ್ಕುತ್ತಿಲ್ಲ. ಮಾನ್ಯ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರಿಗೆ ಎಲ್ಲವೂ ಗೊತ್ತಿದೆ. ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ ಹೇಳುತ್ತೇನೆಂದು ಹೇಳಿದರು. ನಾನು ಸಹ ಸಹಕಾರ ಕ್ಷೇತ್ರದಲ್ಲಿ ಕಳೆದ 30 ವರ್ಷಗಳಿಂದ ಇದ್ದೇನೆ. ರೈತರಿಗೆ ಬಹಳ ಸಂಕಷ್ಟ ಇದೆ. ರೈತ ಈ ಹಣವನ್ನು ಅವನು ಪಾವತಿ ಮಾಡಬೇಕಾದರೆ ಕೊನೆಯ ಪಕ್ಷ 6 ತಿಂಗಳಿನಲ್ಲಿ ಒಂದು ಬೆಳೆ ಬರಬೇಕು. ಯಾವುದೇ ಒಂದು ಸರ್ಕಾರ ಒಂದು ಯೋಜನೆಯನ್ನು ಘೋಷಣೆ ಮಾಡಿದರೂ ಕೂಡ ರೈತ ಹಣವನ್ನು ಕಟ್ಟಲಿಕ್ಕೆ ಕನಿಷ್ಠ 6 ತಿಂಗಳಾದರೂ ಅವಕಾಶ ಕೊಡಲಿಲ್ಲವೆಂದರೆ ಹೇಗೆ? ರೈತ ಈಗ ಏನು ಮಾಡಬೇಕು, ರೈತನ ಹತ್ತಿರ ಇರುವಂತಹ ಚಿನ್ನ, ಬೆಳ್ಳಿ ಅಡಮಾನ ಇಟ್ಟು ಹಣವನ್ನು ತರಬೇಕು. ಅಂದರೆ ಈ ತಿಂಗಳ 31ನೇ ತಾರೀಖಿನೊಳಗೆ ಈ ಸಾಲವನ್ನು ತೀರಿಸಬೇಕಾದರೆ ಚಿನ್ನ, ಬೆಳ್ಳಿ ಅಡಮಾನ ಇಡುವುದರ ಮೂಲಕ ಇನ್ನೊಂದು ಸಾಲವನ್ನು ಅವನು ಮಾಡಬೇಕಾಗುತ್ತದೆ. ಹೀಗಾಗಿ, ರೈತನಿಗೆ ಇಂತಹ ಒಂದು ಪರಿಸ್ಥಿತಿ ಇದೆ. ದಯಮಾಡಿ 6 ತಿಂಗಳವರೆಗೆ, ಅಂದರೆ ಈ ವರ್ಷದ ಸೆಪ್ಟೆಂಬರ್‌ರವರೆಗೆ ಅವಕಾಶವನ್ನು ಕೊಡಬೇಕು. ಈ ರೀತಿಯಲ್ಲಿ ಅವಕಾಶವನ್ನು ಕೊಟ್ಟು ಮತ್ತೆ ನಾವು ಸಮಯವನ್ನು ಮುಂದುವರಿಸುವುದಿಲ್ಲವೆಂದು ಸರ್ಕಾರ ಹೇಳಲಿ. ಇದು ಒಂದು ಮಾನವೀಯತೆ ಆಗುತ್ತದೆ. ಸರ್ಕಾರವನ್ನೂ ಸಹ ನಾವು ಮತ್ತೆ 6 ತಿಂಗಳು, ಒಂದು ವರ್ಷ ಕಾಲಾವಕಾಶ ಕೊಡಿ, ಇನ್ನು ಮುಂದೆ ಕೊಡಿ ಎಂದು ಹೇಳಿ ಕೇಳುವುದು ಸರಿಯಾಗುವುದಿಲ್ಲ. ಕೊನೆಯ ಪಕ್ಷ ಸರ್ಕಾರ 6 ತಿಂಗಳ ಮಟ್ಟಿಗೆ ಒಂದು ಅವಕಾಶವನ್ನು ಕೊಟ್ಟರೆ 99% ರೈತರು ಹೇಗಾದರೂ ಮಾಡಿ, 6 ತಿಂಗಳ ಒಳಗಡೆ ಏನಾದರೂ ಬೆಳೆ ಬೆಳೆದು ಈ ಸಾಲವನ್ನು ತೀರಿಸುತ್ತಾರೆ. ಆ ದೃಷ್ಟಿಯಿಂದ ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-**ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿಯೇ ನನಗೆ 2-3 ಜನರು ದೂರವಾಣಿ ಮೂಲಕ ಮಾತನಾಡಿ, ಕೊನೆಯ ಪಕ್ಷ ಇನ್‌ಸ್ಟಾಲ್‌ಮೆಂಟ್ ಕೊಡಿಸಿ ಎಂದು ಕೇಳಿದರು. ಈ ವಿಚಾರದಲ್ಲಿ ಆರ್ಥಿಕ ಇಲಾಖೆಯವರು ಸಹ ಭಾಗಿಯಾಗಬೇಕಾಗುತ್ತದೆ. ಆರ್ಥಿಕ ಇಲಾಖೆಯವರು ಸಹ ಒಪ್ಪುತ್ತಿಲ್ಲ. ಮಾರ್ಚ್ 31 ಏನಿದೆ, ಅದನ್ನು ಏಪ್ರಿಲ್ ತಿಂಗಳು ಕೊಡಲಿಕ್ಕೂ ಒಪ್ಪುತ್ತಿಲ್ಲ. ಹೀಗಾಗಿ, ಆರ್ಥಿಕ ಇಲಾಖೆಯವರು ಈ ರೀತಿಯಲ್ಲಿ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಎರಡು ಕಂತುಗಳನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಕಷ್ಟಪಟ್ಟು 466 ಕೋಟಿ ರೂಪಾಯಿಗಳಿಗೆ ಆರ್ಥಿಕ

"ತಿದ್ದುಪಡಿಯಾಗದ ಪ್ರತಿ - ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯವರನ್ನು ಒಪ್ಪಿಸಿ ಮಾಡಿದ್ದಾರೆ. ಅದನ್ನು ಮುಂದುವರಿಸುತ್ತೇವೆಂದು ಹೇಳಿದರೆ ಈಗ ಅಸಲನ್ನು ಕಟ್ಟುವವರು ಸಹ ಕಟ್ಟುವುದಿಲ್ಲ. ಅದಕ್ಕೆ ಈಗ 31–3–2020 ರ ಏನು deadline ಇದೆ, ಅದಕ್ಕೆ ಈಗ ನಿಲ್ಲಿಸಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಆ ರೀತಿಯಲ್ಲಿ ಆಗುವುದಿಲ್ಲ. ರೈತರಿಗೆ ಸಮಯಾವಕಾಶ ಕೊಡಲಿಲ್ಲವೆಂದರೆ, ಅವರು ಮತ್ತೆ ಬೇರೆ ಸಾಲ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ಈ ರೀತಿಯಲ್ಲಿ ಹೇಳಿದರೆ ರೈತರಿಗೆ ಮತ್ತೆ ಹೊರೆಯಾಗುತ್ತದೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಈ ವಿಚಾರದಲ್ಲಿ ನಾವೇ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಇದಕ್ಕೆ ಆರ್ಥಿಕ ಇಲಾಖೆಯವರು ಒಪ್ಪಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರು ಸಹಕಾರಿ ಕ್ಷೇತ್ರದಲ್ಲಿ ಸುಮಾರು 50 ವರ್ಷಗಳಿಂದ ಇದ್ದಾರೆ. ಇವರು ರಾಜಕೀಯ ಕ್ಷೇತ್ರಕ್ಕೆ ಬರುವ ಮುನ್ನವೇ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಹೀಗಾಗಿ, ರೈತರ ಎಲ್ಲಾ ಸಮಸ್ಯೆಗಳು ಸಚಿವರಿಗೆ ಗೊತ್ತಿದೆ. ತಾವು ಹೊಸದಾಗಿ ಸಚಿವರಾಗಿ ಬಂದ ಕೂಡಲೇ ಮುಖ್ಯಮಂತ್ರಿಗಳ ಜೊತೆ ಸೇರಿ ಈ ಒಂದು ಕೆಲಸವನ್ನು ಮಾಡಿದ್ದಾರೆ. ಹೀಗಾಗಿ, ಮಾನ್ಯ ಸಚಿವರಿಗೂ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಅಭಿನಂದನೆಯನ್ನು ರೈತರ ಪರವಾಗಿ ಸಲ್ಲಿಸುತ್ತೇನೆ. ಆದರೆ, ಇದಕ್ಕೆ 6 ತಿಂಗಳು ಸಮಯಾವಕಾಶವನ್ನು ಕೊಡುವುದಿಲ್ಲವೆಂದರೆ ಹೇಗೆ?

**(ಗೊಂದಲ)**

**ಶ್ರೀ ಎಸ್.ಟಿ.ಸೋಮಶೇಖರ್:–** ಈ ವಿಚಾರವಾಗಿ ಬೇಕಾದಷ್ಟು ಚರ್ಚೆಯಾಗಿದೆ. ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ಇಲಾಖೆಯವರಿಗೆ ಮಾತನಾಡಿ 466 ಕೋಟಿ ರೂಪಾಯಿಗಳಿಗೆ ಒಪ್ಪಿಸಿದ್ದಾರೆ. ಈ ಅವಧಿಯನ್ನು ಮುಂದುವರಿಸಿ ಎಂದರೆ ಆರ್ಥಿಕ ಇಲಾಖೆಯವರು ಒಪ್ಪುವುದಿಲ್ಲ. ಇದನ್ನು ಮಾಡುವಾಗ ಆರ್ಥಿಕ ಇಲಾಖೆಯವರೊಂದಿಗೆ ಮಾನ್ಯ ಮುಖ್ಯಮಂತ್ರಿಗಳು ಕುಳಿತುಕೊಂಡು ಚರ್ಚೆ ಮಾಡಿ ಈ ಹಂತಕ್ಕೆ ಬರುವಲ್ಲಿ ಎಲ್ಲಾ ಸಾಹಸವನ್ನು ಮಾಡಿದ್ದಾರೆ. ಈ ಅವಧಿಯನ್ನು ಮುಂದುವರಿಸಬೇಕಾದರೆ, ಆರ್ಥಿಕ ಇಲಾಖೆಯವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಇಬ್ಬರು ಪ್ರಯತ್ನ ಮಾಡಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1288+1292**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇಲ್ಲಿ ನಾನು ಕೇಳಿರುವಂತಹ ಪ್ರಶ್ನೆ ಬಹಳ ಸಿಂಪಲ್ ಆಗಿರುತ್ತದೆ. ರಾಜ್ಯದಲ್ಲಿ ಗಣಿಗಾರಿಕೆ ಮಾಡಲು ಅನುಮತಿ ನೀಡಲಾಗಿದೆಯೇ; ಇದ್ದಲ್ಲಿ, ಎಷ್ಟು ಸ್ಥಳಗಳಲ್ಲಿ ಗಣಿಗಾರಿಕೆ ಮಾಡಲು ಅನುಮತಿ ನೀಡಲಾಗಿದೆ, 3 ವರ್ಷಗಳ ಜಿಲ್ಲಾವಾರು ಮಾಹಿತಿ ನೀಡುವುದು ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ ಮುಖ್ಯ ಖನಿಜ (ಕಬ್ಬಿಣದ ಅದಿರು) 7 ಗುತ್ತಿಗೆಗಳನ್ನು ಈ 3 ವರ್ಷದಲ್ಲಿ ಕೊಟ್ಟಿರುವುದಾಗಿದೆ. ಅದರಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ಇಲ್ಲಿ 7 ಗುತ್ತಿಗೆಗಳನ್ನು ಕೊಟ್ಟಿದ್ದಾರೆ. ಇಲ್ಲಿ ಜಿಂದಾಲ್ ಕಂಪನಿಗೆ 6 ಗುತ್ತಿಗೆಯನ್ನು ಕೊಟ್ಟಿರುವುದು ಇದೆ.

ಮಾನ್ಯ ಸಭಾಪತಿಯವರೇ, ಒಂದು ವರ್ಷದ ಹಿಂದೆ ಈ ರೀತಿಯಲ್ಲಿ ಜಿಂದಾಲ್‌ನವರಿಗೆ ಗುತ್ತಿಗೆಯನ್ನು ಕೊಟ್ಟಾಗ ವಿರೋಧ ಪಕ್ಷದಲ್ಲಿದ್ದಂತಹ ಬಿಜೆಪಿಯವರು ಅಂದು ಏನೆಲ್ಲಾ ರದ್ದಾಂತ ಮಾಡಿ, ರಾಜ್ಯದಲ್ಲಿ ಲೂಟಿ ಆಗಿ ಹೋಗಿದೆ, ಜಿಂದಾಲ್‌ರವರಿಗೆ ಮಾರಿ ಬಿಟ್ಟಿದ್ದಾರೆಂದು ಹೇಳಿ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರಚಾರ ಮಾಡಿದರು. ಆದರೆ, ಇವರು ಅಧಿಕಾರಕ್ಕೆ ಬಂದ ತಕ್ಷಣವೇ ಎಲ್ಲದಕ್ಕೂ ಅನುಮತಿಯನ್ನು ಕೊಟ್ಟಿದ್ದಾರೆ. ಇದು ಯಾವ ನ್ಯಾಯ? ನಾವು ಮತ್ತು ಜನರು ಏನು ತಿಳಿದುಕೊಂಡಿದ್ದೆವು ಎಂದರೆ ಬಿಜೆಪಿ.ಯವರು ಅಧಿಕಾರಕ್ಕೆ ಬಂದ ತಕ್ಷಣ ಜಿಂದಾಲ್‌ನವರಿಗೆ ಕೊಟ್ಟಿರುವಂತಹ ಗುತ್ತಿಗೆಗಳನ್ನೆಲ್ಲಾ ರದ್ದು ಮಾಡುತ್ತಾರೆ, ಅದನ್ನು ಹಿಂದಕ್ಕೆ ಪಡೆಯುತ್ತಾರೆ, ಅದರಿಂದ ನಮ್ಮ ರಾಜ್ಯಕ್ಕೆ ಒಳ್ಳೆಯದಾಗುತ್ತದೆ, ಕಾಂಗ್ರೆಸ್‌ನವರು ಮತ್ತು ಜನತಾದಳದವರು ಏನೋ ಕೆಟ್ಟದ್ದನ್ನು ಮಾಡಿದ್ದರು, ಇವರು ಬಂದು ಕೆಲಸಗಳನ್ನು ಚೆನ್ನಾಗಿ ಮಾಡುತ್ತಿದ್ದಾರೆ, ರಾಜ್ಯವನ್ನು ಸಂಪೂರ್ಣವಾಗಿ ಲೂಟಿ ಆಗದೇ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿ ಜನರಿಗೆ ಒಂದು ರೀತಿಯಲ್ಲಿ ಭ್ರಮೆ ಬರುವ ರೀತಿಯಲ್ಲಿ ಮಾಡಿದ್ದರು. ದಯವಿಟ್ಟು, ಇವರಿಗೆ ಹೇಗೆ ಕೊಟ್ಟರು, ಯಾವ ರೀತಿಯಲ್ಲಿ ಕೊಟ್ಟರು, ಇದು ಸರ್ಕಾರದ ಜಾಗವೇ? ಹಿಂದೆ ಇದ್ದುದ್ದನ್ನು ಮುಂದುವರಿಸಲಿಕ್ಕೆ ಕೊಟ್ಟಿದ್ದಾರೆಯೇ? ಕಾನೂನಿನಲ್ಲಿ ಇದೆ, 50 ವರ್ಷಗಳವರೆಗೆ ಲೀಸ್ ಕೊಟ್ಟಿದ್ದಾರೆ. 50 ವರ್ಷಗಳಿಗೆ ಕೊಟ್ಟಿರುವುದನ್ನು ಯಾವ ರೀತಿಯಲ್ಲಿ ಕೊಟ್ಟರು, ಸರ್ಕಾರದ ಜಾಗಗಳನ್ನು ಯಾವ ರೀತಿಯಲ್ಲಿ ಲೀಸ್‌ಗೆ ಕೊಟ್ಟಿದ್ದಾರೆ? ಬಳ್ಳಾರಿಯ ವಿಷಯವಾಗಿ ಸುಪ್ರೀಂಕೋರ್ಟ್ ಸ್ಪಷ್ಟ ತೀರ್ಮಾನವನ್ನು ಕೊಟ್ಟಿದ್ದಾರೆ. ಮತ್ತೆ ಹಿಂದೆ ಲೋಕಾಯುಕ್ತರಾಗಿದ್ದಂತಹ ಶ್ರೀ ಸಂತೋಷ್ ಹೆಗಡೆಯವರು ಕೊಟ್ಟಿರುವ ವರದಿಯಲ್ಲಿ ಸೂಕ್ಷ್ಮವಾಗಿ ಹೇಳಿದ್ದಾರೆ. ಬಳ್ಳಾರಿಯಲ್ಲಿ exploitation ಜಾಸ್ತಿಯಾಗಿ environmental problem ಆಗುತ್ತಿದೆ ಎಂದು ಹೇಳಿದ್ದಾರೆ. Environmental problem ಸರಿಪಡಿಸಲಿಕ್ಕೆ ಹೆಕ್ಟೇರ್‌ಗೆ ಯಾವುದೋ ಉತ್ತರದಲ್ಲಿ ಕೊಟ್ಟಿರುವಂತೆ 84 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಒಂದು ಹೆಕ್ಟೇರ್ ಪ್ರದೇಶದ environmental problem ಅಂದರೆ ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಿಪಡಿಸಲಿಕ್ಕೆ 84 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. 84 ಸಾವಿರ ರೂಪಾಯಿಗಳಲ್ಲಿ environmental problem ಪರಿಹಾರ ಮಾಡಲಿಕ್ಕೆ ಸಾಧ್ಯವೇ ಎನ್ನುವುದನ್ನು ಎಲ್ಲರೂ ಯೋಚನೆ ಮಾಡಬೇಕು. ಇಡೀ ದೇಶದಲ್ಲಿ ನಮ್ಮ ರಾಜ್ಯ ಸಂಪೂರ್ಣವಾಗಿ ಮುಳುಗಿ ಹೋದಮೇಲೆ ಅದನ್ನು 84 ಸಾವಿರ ರೂಪಾಯಿಗಳಲ್ಲಿ ಸರಿಪಡಿಸಲಿಕ್ಕೆ ಆಗುತ್ತದೆಯೇ? ಇದು ಬಹಳ ಮುಖ್ಯವಾದಂತಹ ಅಂಶ. ಇನ್ನು ಇದರ ಜೊತೆಗೆ ಇಲ್ಲಿ ಬೇರೆ ಗಣಿಗಾರಿಕೆಗಳ ಬಗ್ಗೆ ವಿವರವನ್ನು ಕೊಟ್ಟಿದ್ದಾರೆ. 3 ವರ್ಷಗಳಲ್ಲಿ ಗುತ್ತಿಗೆದಾರರಿಗೆ 890 sanctions ಕೊಟ್ಟಿದ್ದೇವೆ, ಅದು ನಿರ್ದಿಷ್ಟವಲ್ಲದ ಉಪ ಖನಿಜ. ಅಲಂಕಾರಿಕ ಶಿಲೆ ಅಂದರೆ ಅದು ಗ್ರಾನೈಟ್ ಆಗಿರಬಹುದು, ಮತ್ತೆ ಬಿಲ್ಡಿಂಗ್ ಕಟ್ಟಲಿಕ್ಕಂತಹ ಕಲ್ಲು ಇರಬಹುದು, ಈ ರೀತಿಯಲ್ಲಿ ಇತರೆ ಗಣಿಗಾರಿಕೆಗಳೆಲ್ಲವೂ ಸೇರಿ 3 ವರ್ಷಗಳಲ್ಲಿ 890 ಇದೆ. 890 ರಲ್ಲಿ 325 ಕೊಟ್ಟಿರತಕ್ಕಂತಹ ಗುತ್ತಿಗೆಗೆ ಲೈಸೆನ್ಸ್ ಕೊಟ್ಟಿರುವುದು ಸರ್ಕಾರಿ ಜಾಗಗಳಲ್ಲಿ ಇದೆ. ಅದರಲ್ಲಿ ಗೋಮಾಳ ಇರಬಹುದು, ಕಂದಾಯ ಭೂಮಿ ಇರಬಹುದು, ಮತ್ತೆ ಅರಣ್ಯ ಭೂಮಿ ಇರಬಹುದು, ಈ ರೀತಿಯಲ್ಲಿ ಸರ್ಕಾರಕ್ಕೆ ಸಂಬಂಧಪಟ್ಟ ಜಾಗಗಳಿಗೆ 325 ಲೈಸೆನ್ಸ್ ಕೊಟ್ಟಿದ್ದಾರೆ.

**ಮುಂದು. . .**

**(490) 17.03.2020 05.00 ಎಸ್‌ವಿ-ಎಕೆ**

**ಶ್ರೀ ಪಿ.ಆರ್.ರಮೇಶ್ (ಮುಂದು):-**

ಈ ರೀತಿ ಸರ್ಕಾರಕ್ಕೆ ಸಂಬಂಧಪಟ್ಟ ಜಾಗಗಳಿಗೆ 325 ಲೈಸೆನ್ಸ್ ಕೊಟ್ಟಿದ್ದಾರೆ. ಅದಕ್ಕೆ ಲೀಸ್ ಕೊಟ್ಟಿರುವುದು ಏನಾಗಿದೆ? ಸರ್ಕಾರ ಲೀಸ್ ಅನ್ನು ಯಾವ ರೀತಿಯಲ್ಲಿ ಕೊಟ್ಟಿದೆ? ನಮ್ಮ ರೆವಿನ್ಯೂ ಆಕ್ಟ್‌ನ ಪ್ರಕಾರ ಕೊಡಲಾಗಿದೆಯೇ? ಇವರು ನಾಲ್ಕು ತಿಂಗಳಿಗೆ ಕೊಟ್ಟಿದ್ದಾರೆ. ನಾಲ್ಕು ತಿಂಗಳಿಗೆ ಮೈನಿಂಗ್ ಅವಧಿ ಪೂರ್ಣಗೊಂಡಿದ್ದರೂ ಇನ್ನೂ ನಡೆಸಲಾಗುತ್ತಿದೆ. ಮೂರು ವರ್ಷ, ಎರಡು ವರ್ಷ ಈ ರೀತಿ ಕೊಡಲಾಗಿದೆ. ಇದಕ್ಕೆ ನನಗೆ ಉತ್ತರವನ್ನು ಕೊಟ್ಟರೆ ನಾನು ಮುಂದಿನ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ರಘು ಆಚಾರ್ ಅವರ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಲು ಅನುಮತಿಸಬೇಕು.

**ಉಪ ಸಭಾಪತಿಯವರು:-** ಮಾನ್ಯ ಡಿ'ಸೋಜಾ ಅವರೇ, ಮಾನ್ಯ ಪಿ.ಆರ್.ರಮೇಶ್ ಅವರು ಕೇಳಿದ ಪ್ರಶ್ನೆಯನ್ನೇ ಕೇಳುತ್ತೀರಾ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅದನ್ನು ಬಿಟ್ಟು ಬೇರೆ ಪ್ರಶ್ನೆ ಇದೆ. ಮಾನ್ಯ ರಘು ಆಚಾರ್ ಅವರ ಪರವಾಗಿ ನಾನು ಈ ಪ್ರಶ್ನೆ ಕೇಳುತ್ತಿದ್ದು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಕಳೆದ ಐದು ವರ್ಷದಲ್ಲಿ ಎಷ್ಟು royalty ಸಂಗ್ರಹವಾಗಿದೆ ಮತ್ತು ಅದನ್ನು ಯಾವ ಉಪಯೋಗಕ್ಕಾಗಿ ಬಳಕೆ ಮಾಡಲಾಗಿದೆ ಎಂಬುದಾಗಿದೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಎಲ್ಲಾ ಜಿಲ್ಲೆಗಳಲ್ಲಿಯೂ ಗಣಿಗಾರಿಕೆಯಿಂದ ಸಂತ್ರಸ್ತರಾಗಿರುವ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡಲಿಕ್ಕಾಗಿ District Mineral Fund ಎಂಬುದಾಗಿ ಇರುತ್ತದೆ. ಅದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿದ್ದು, ಜಿಲ್ಲಾಧಿಕಾರಿಗಳು ಸದಸ್ಯ ಕಾರ್ಯದರ್ಶಿಯವರಾಗಿರುತ್ತಾರೆ. ಜಿಲ್ಲೆಯ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರು ಸಹ ಅಧ್ಯಕ್ಷರಾಗಿರುತ್ತಾರೆ. ಅವರು royalty ದುಡ್ಡನ್ನು ಯಾವ ಉದ್ದೇಶಕ್ಕಾಗಿ ಬಳಕೆ ಮಾಡಬೇಕೆಂದು ತೀರ್ಮಾನ ಮಾಡಬೇಕು. ಕಳೆದ ಮೂರು ವರ್ಷಗಳಲ್ಲಿ ಒಂದೇ ಒಂದು ಸಭೆಯು ನಡೆಯಲಿಲ್ಲ. ರೂ.170 ಕೋಟಿ ಆ ಭಾಗದಲ್ಲಿ royalty ಸಂಗ್ರಹವಾಗಿದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದರಲ್ಲಿ ಮೊದಲ highest royalty collection ಆಗುವುದು ಬಳ್ಳಾರಿಯಲ್ಲಿ, ನಂತರ ಕಲಬುರಗಿಯಲ್ಲಿ, ಮೂರನೇ ಸ್ಥಾನದಲ್ಲಿ ಚಿತ್ರದುರ್ಗ ಇದೆ. ಆ ಪೈಕಿ ಸಭೆಯನ್ನೇ ಮಾಡಿಲ್ಲ, ಆ ದುಡ್ಡನ್ನು ಯಾವುದಕ್ಕಾಗಿ ಬಳಕೆ ಮಾಡಲಾಗಿದೆ ಎಂಬುದು ಗೊತ್ತಿಲ್ಲ. ಸಭೆಯನ್ನು ಏಕೆ ನಡೆಸಿಲ್ಲ ಎಂಬುದು ಮಾನ್ಯ ಸದಸ್ಯರ ಪ್ರಶ್ನೆ.

ಅದೇ ರೀತಿ ರಾಜ್ಯದಲ್ಲಿ ಸುಮಾರು 1600 ಕೋಟಿಗಳು ಈ ಫಂಡ್‌ನಲ್ಲಿದೆ. ಅದಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. ಬೇರೆ ಬೇರೆ ಸಚಿವರು ಅದಕ್ಕೆ ಸದಸ್ಯರಾಗಿರುತ್ತಾರೆ. ಆ ದುಡ್ಡೂ ಸಹ ಖರ್ಚಾಗಿಲ್ಲ ಎನ್ನುವುದು ಗಮನಾರ್ಹವಾದ ವಿಚಾರ. ಕರ್ನಾಟಕದಲ್ಲಿ Federation of Indian Mineral Industries ಎನ್ನುವ ಒಂದು ಪತ್ರಿಕೆಯಿದೆ. ಇವರು ಏನು ಹೇಳುತ್ತಾರೆಂದರೆ,

> *"In Karnataka Rs.1652 crores collected so far. Bellary district accounts for the majority - Rs.988 crores followed by Gulbarga - Rs.252 crores and Rs.117 crores from Chitradurga. The State identified that 1887 projects for Rs.1493 crores..."*

ಇದನ್ನು ಬಳಕೆಯೇ ಮಾಡಿಲ್ಲ ಎನ್ನುವ ರೀತಿಯಲ್ಲಿ ಹೇಳುತ್ತಾರೆ. ಹಾಗಾಗಿ ಇದನ್ನು ಯಾವಾಗ ಬಳಕೆ ಮಾಡಲಾಗುವುದು ಮತ್ತು ಸಭೆಯನ್ನು ಯಾವಾಗ ನಡೆಸಲಾಗುವುದು ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಸಿ.ಪಾಟೀಲ್ (ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಜಿಂದಾಲ್ ಅವರಿಗೆ ಏಕೆ ಕೊಡಲಾಯಿತು ಎನ್ನುವುದಾಗಿದೆ. MMDR [Mines and Minerals (Development and Regulation)] Actಅಡಿಯಲ್ಲಿ 50 ವರ್ಷಗಳವರೆಗೆ ಲೀಸ್ ಕೊಡಲಿಕ್ಕೆ ಅವಕಾಶವಿದೆ. ಹರಾಜು ಪ್ರೀಮಿಯಂ ಮುಖಾಂತರ ಮಾಡುವುದರಿಂದ ರಾಜ್ಯಕ್ಕೆ ಹೆಚ್ಚಿನ ರಾಜಸ್ವ ಬರುತ್ತದೆ. ಹರಾಜು ಮುಖಾಂತರ ಇದನ್ನು ನಾವು ಕೊಟ್ಟಿದ್ದೇವೆ. ಯಾರು ಹೆಚ್ಚಿನ ದರದಲ್ಲಿ ಹರಾಜನ್ನು ಕೂಗುತ್ತಾರೆಯೋ ಅವರಿಗೆ ಅದು ಬರುತ್ತದೆ. ಎರಡನೆಯದಾಗಿ ಕಬ್ಬಿಣದ ಅದಿರು ಗಣಿಯನ್ನು ಸುಪ್ರೀಂ ಕೋರ್ಟ್‌ನ ಗೈಡ್‌ಲೈನ್ಸ್‌ನ ಮುಖಾಂತರ ಹರಾಜು ಹಾಕಿದ್ದೇವೆ. ಮಾನ್ಯ ಸದಸ್ಯರು 890ರ ಬಗ್ಗೆ ಕೇಳಿದ್ದು 2016ಕ್ಕಿಂತಲೂ ಪೂರ್ವದಲ್ಲಿ ಯಾರು ಅರ್ಜಿ ಹಾಕಿದ್ದರೋ ಅವರಿಗೆ ಆದ್ಯತೆಯ ಮೇರೆಗೆ ಕೊಡಲಾಗಿದೆ. ಪರಿಸರ ವಿಷಯಕ್ಕೆ ಸಂಬಂಧಿಸಿದಂತೆ ಮಾಲಿನ್ಯ ನಿಯಂತ್ರಣ ಮಂಡಳಿಯಿದೆ. ಕಂದಾಯ ಮತ್ತು ಪರಿಸರ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ತಂದವರಿಗೆ ಅನುಮತಿ ಕೊಡಲಾಗುತ್ತದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇಲ್ಲಿ ಐ.ಬಿ.ಎಂ. ಎಂದು ಹೇಳಿದ್ದಾರೆ. ಅದರ ಅರ್ಥ ತಿಳಿಯಲಿಲ್ಲ. ಅದರ ಪ್ರಕಾರ ಅನುಮೋದನೆಯನ್ನು ನೀಡಲಾಗುತ್ತಿದೆ ಎಂದು ಹೇಳಲಾಗಿದೆ.

**ಶ್ರೀ ಸಿ.ಸಿ.ಪಾಟೀಲ್:–** ಐ.ಬಿ.ಎಂ. ಎಂದರೆ Indian Bureau of Mines.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ...

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾ ಅವರೇ ಪ್ರಶ್ನೆಯನ್ನು ಹಾಗೂ ಉತ್ತರವನ್ನು ಹೇಳಿದ್ದಾರೆ. ಹಣವನ್ನು ಬಳಕೆ ಮಾಡುವುದು ಜಿಲ್ಲಾ ಉಸ್ತುವಾರಿ ಸಚಿವರ ಕರ್ತವ್ಯ. ಜಿಲ್ಲಾವಾರು ಎಷ್ಟೆಷ್ಟು District Mineral Fund ಇದೆಯೋ ಅದನ್ನು ಬಳಸಿಕೊಳ್ಳುವುದಕ್ಕೆ ಕ್ರಿಯಾಯೋಜನೆಯನ್ನು ಕಳುಹಿಸಿಕೊಡುವಂತೆ ಈಗಾಗಲೇ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರಿಗೆ ಪತ್ರಮುಖೇನ ತಿಳಿಸಲಾಗಿದೆ. ಕ್ರಿಯಾಯೋಜನೆಯನ್ನು ಕಳುಹಿಸಿದ್ದನ್ನು ಜಿಲ್ಲಾ ಪಂಚಾಯ್ತಿಯವರು ಉಪಯೋಗಿಸಿಕೊಂಡಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸಭೆ ನಡೆಯುತ್ತದೆ. ಹಣವನ್ನು ಬಳಸಿಕೊಳ್ಳುವುದಕ್ಕೆ ಹೇಳಲಾಗುತ್ತದೆ. ಅದಕ್ಕೆ ನಮ್ಮದೇನೂ ನಿರ್ಬಂಧವಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಯಬೇಕು. ಸಭೆಯನ್ನು ನಡೆಸುವುದಕ್ಕೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಚಿವರೇ, ಇದರಿಂದ ಆಯಾ ಭಾಗದ ಶಾಸಕರು ತಮ್ಮ ಕ್ರಿಯಾಯೋಜನೆಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಮೂರು ವರ್ಷಗಳಿಂದ ಸಭೆಯನ್ನೇ ಕರೆದಿಲ್ಲವೆಂದಾಗ ನಿಷ್ಕ್ರಿಯಗೊಂಡ ಆ ಫಂಡ್ ಯಾವುದಕ್ಕಾಗಿ ಬಳಕೆಯಾಗುತ್ತಿದೆ ಎನ್ನುವುದು ಪ್ರಶ್ನೆಯಿದೆ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿಯನ್ನು ಮಾಡಿಕೊಂಡಿದ್ದೇವೆ. ಅದರಲ್ಲಿ ಆದಷ್ಟು ಬೇಗ ಸಭೆಯನ್ನು ಕರೆದು ಫಂಡ್ ಅನ್ನು ಬಳಕೆ ಮಾಡಿಕೊಳ್ಳಲು ತಿಳಿಸಲಾಗಿದೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಹೊಸ ಪಾಲಿಸಿ ಪ್ರಕಾರ ಇ–ಹರಾಜು ಮುಖಾಂತರ ಟೆಂಡರ್ ಹಾಕಿರುವುದು ಸರಿಯಿದೆ. ಏಕೆಂದರೆ ಹಿಂದೆ 2004ರಿಂದ illegal activities ಏನಾಗಿತ್ತೋ ಅವುಗಳನ್ನು ಸಿ.ಎ. ಸಮಿತಿಯವರು ಸುಪ್ರೀಂಕೋರ್ಟ್ ನಿರ್ದೇಶನದ ಪ್ರಕಾರ ಎಲ್ಲವನ್ನೂ ನಿಲ್ಲಿಸಿದರು. 'ಸಿ' ಕ್ಯಾಟಗರಿಯಡಿಯಲ್ಲಿ ಡಿಕ್ಲೇರ್ ಮಾಡಲಾದಂತಹ ಗಣಿಗಳನ್ನು ಇ–ಹರಾಜು ಹಾಕಲಾಯಿತು. ಮೊದಲು ಯಾರೇ ಖಾಸಗಿಯವರು ಅರ್ಜಿ ಹಾಕಿದರೂ ಕೊಡಲಾಗುತ್ತಿತ್ತು. ಕೇವಲ ಟನ್‌ಗೆ ರೂ.28 ಮಾತ್ರ royalty ಬರುತ್ತಿತ್ತು. ಐ.ಬಿ.ಎಂ. ನವರುNMDC (National Mineral Development Corporation) ದರವನ್ನು ನಿಗದಿ ಪಡಿಸಿದ ಮೇಲೆ ಅದರ ಮೇಲೆ percentage auction ಹಾಕಲಾಯಿತು. ಕೆಲವು ಗಣಿಗಳು ಶೇ.120ಕ್ಕೆ ಹೋದವು. ಅಂದರೆ ಸರ್ಕಾರಕ್ಕೆ ಸುಮಾರು 3 ರಿಂದ 4 ಸಾವಿರ ರೂಪಾಯಿಗಳು ಪ್ರತಿ ಟನ್‌ಗೆ ಬರುತ್ತದೆ.

ಮಾನ್ಯ ರಮೇಶ್ ಅವರೇ, ಇದು ಒಳ್ಳೆಯ ಪದ್ಧತಿಯಾಗಿದೆ. Illegal ಆಗಿ mining ಮಾಡುವುದಕ್ಕೆ ಅವಕಾಶವಿಲ್ಲ. ಹೊಸ ಪಾಲಿಸಿಯ ಪ್ರಕಾರ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ 2020 ಮಾರ್ಚ್ ವೇಳೆಗೆ ಸುಮಾರು 40 ಗಣಿಗಳು ಮುಚ್ಚಲ್ಪಡುತ್ತವೆ. ಇ–ಹರಾಜು ಹಾಕುವುದು ಒಳ್ಳೆಯದು. ಇದೇ ಪದ್ಧತಿಯನ್ನು ಮುಂದುವರೆಸಬೇಕೆಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಇಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಯಾರು ಗುತ್ತಿಗೆ ತೆಗೆದುಕೊಂಡು ಕ್ವಾರಿ ಕೆಲಸವನ್ನು ನಡೆಸುತ್ತಿದ್ದಾರೆ ಎಂಬ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ಡಿ.ಪಿ.ಜೈನ್ ಇನ್ಫ್ರಾಸ್ಟ್ರಕ್ಚರ್ ಎಂದು ಹೇಳಲಾಗಿದೆ. ಇಲ್ಲಿ ಈ ಕಂಪನಿ ಬಿಟ್ಟು ಈಗಾಗಲೇ ಬೇರೆ ಕಂಪನಿಯವರು ಕೆಲಸ ಮಾಡುತ್ತಿದ್ದಾರೆ. ಅಧಿಕಾರಿಗಳು ಮಾನ್ಯ ಸಚಿವರ ಮುಖಾಂತರ ಈ ರೀತಿಯಾಗಿ ಸದನಕ್ಕೆ ತಪ್ಪು ಉತ್ತರವನ್ನು ಕೊಡಿಸಿದರೆ ಅಧಿಕಾರಿಗಳು ಯಾವ ರೀತಿಯಿದ್ದಾರೆ ಎಂದು ತಿಳಿಯುತ್ತದೆ. ಇದು ಯಾವ ಕಾಲದಲ್ಲಿ ತಯಾರು ಮಾಡಿರುವ ಉತ್ತರವಾಗಿದೆ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಡಿ.ಪಿ.ಜೈನ್ ಕಂಪನಿಯು ಕೆಲಸವನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಗಿಸಿ ಒಂದೂವರೆ ವರ್ಷವಾಗಿದೆ. ಈಗ ಅದರ ಬದಲು ಬೇರೆ ಕಂಪನಿಯು ಅಲ್ಲಿ ಕೆಲಸ ಮಾಡುತ್ತಿದೆ. ಇದರ ಬಗ್ಗೆ ಅಧಿಕಾರಿಗಳಿಗೆ ಮಾಹಿತಿಯಿಲ್ಲವೇ? ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾಹಿತಿಯಿಲ್ಲವೇ? ಇದು ಸಮಯವಲ್ಲದಿದ್ದರೂ ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ನಾಗಮಂಗಲ ತಾಲ್ಲೂಕಿನಲ್ಲಿ ಯಾವುದೇ ಲೈಸೆನ್ಸ್ ಇಲ್ಲದೆ ಸರ್ಕಾರಿ ಗೋಮಾಳದಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಅವರ ಜಾಗವೇ ಬೇರೆಯಾಗಿದ್ದು, ಅವರು ಕಲ್ಲು ತೆಗೆದುಕೊಳ್ಳುತ್ತಿರುವ ಜಾಗವೇ ಬೇರೆಯಾಗಿದೆ. ಇದರ ಬಗ್ಗೆ ಅರ್ಧಗಂಟೆ ಕಾಲಾವಧಿಯ ಚರ್ಚೆಯನ್ನು ಮಾಡಿದರೆ ಇದು ಪರಿಸರದ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ, ಕೆಲವು ವ್ಯಕ್ತಿಗಳು ಯಾವ ರೀತಿಯಾಗಿ ಈ ಕಲ್ಲು ಗಣಿಗಾರಿಕೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ಚರ್ಚೆ ಮಾಡಬಹುದು. ತಾವು ಇದಕ್ಕೆ ಅವಕಾಶ ಕೊಡಬೇಕು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, Environment Protection and Restoration Fund ಎನ್ನುವ ಒಂದು ಫಂಡ್ ಇದೆ. ಅದಕ್ಕೆ ಸುಮಾರು 18ರಿಂದ 20 ಸಾವಿರ ಕೋಟಿ ರೂಪಾಯಿಗಳು ಸಂಗ್ರಹವಾಗಿವೆ. ಇದಕ್ಕೆ ಸಂಬಂಧಿಸಿದ ನಮ್ಮ ರಾಜ್ಯ ಮತ್ತು ಒಡಿಷಾ ರಾಜ್ಯದ ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿದ್ದವು. ಅದರಲ್ಲಿ ಒಡಿಷಾ ರಾಜ್ಯದ ಪ್ರಕರಣ ಕ್ಲಿಯರ್ ಆಗಿದೆ. ಕರ್ನಾಟಕ ರಾಜ್ಯದ್ದು ಇನ್ನೂ ಕ್ಲಿಯರ್ ಆಗಿರುವುದಿಲ್ಲ. ಸರ್ಕಾರ ಪ್ರಯತ್ನಿಸುತ್ತಿದ್ದರೂ ಆಗುತ್ತಿಲ್ಲ. ಸುಪ್ರೀಂ ಕೋರ್ಟ್ ಹಾಗೆಯೇ ಇಟ್ಟುಕೊಂಡಿದೆ. ದಯಮಾಡಿ ಅದನ್ನು move ಮಾಡಿದರೆ ಚಿತ್ರದುರ್ಗ, ತುಮಕೂರು ಮತ್ತು ಬಳ್ಳಾರಿ ಭಾಗಗಳಲ್ಲಿ degrade ಆಗಿರುವ environment restoration ಗೆ ಒಳ್ಳೆಯದಾಗುತ್ತದೆ. ಆದಷ್ಟು ಬೇಗ move ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಏನೂ ಉತ್ತರ ಹೇಳಲಿಲ್ಲ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಅವರು ಪ್ರಶ್ನೆ ಕೇಳುವುದೇ ಅರ್ಧಗಂಟೆಗಿಂತ ಹೆಚ್ಚಾಗಿದೆ.

**(...ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(491)17–03–2020 (5–10) ಕೆಜಿ ಆರ್‌ಎನ್

**ಶ್ರೀ ಸಿ.ಸಿ.ಪಾಟೀಲ್(ಮುಂದು):–**

ಗುತ್ತಿಗೆ ಅವಧಿ ಮುಗಿದಂತಹ ಕಬ್ಬಿಣದ ಅದಿರು ಗಣಿಗಳಿಗೆ ಕೂಡಲೇ ಇ–ಹರಾಜು ಮುಖಾಂತರ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಕೇಳಿದಂತಹ ಉಪ ಪ್ರಶ್ನೆಗೆ, ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ವಾದ ಮಾಡುವುದಕ್ಕೆ Senior Counsel ರವರನ್ನು ನೇಮಕ ಮಾಡುವಂತೆ ಇಲಾಖೆಯ ಅಧಿಕಾರಿಗಳಿಗೆ ಈಗಾಗಲೇ ಸೂಚನೆಯನ್ನು ಕೊಡಲಾಗಿದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನನಗೆ ಉತ್ತರ ಸಿಗುತ್ತಿಲ್ಲ. ಪ್ರಶ್ನೆಯನ್ನು ಮಾಡುವುದಕ್ಕೆ ಅವಕಾಶವು ಸಹ ಸಿಗುತ್ತಿಲ್ಲ. ನಾನೀಗ ಮಾನ್ಯ ಸಚಿವರನ್ನು ನಿಖರವಾಗಿ ಕೇಳಿದ್ದು ಏನೆಂದರೆ, 2018–2019 ರಲ್ಲಿ ಜಿಂದಾಲ್ ರವರಿಗೆ 50 ವರ್ಷಗಳಿಗೆ lease ಗೆ ಕೊಟ್ಟಿದ್ದಾರೆ. ಆದರೆ, ಮಾನ್ಯ ಸಚಿವರು 2016ರಲ್ಲಿಯೇ auction ಆಗಿದೆ ಎಂದು ಹೇಳಿದ್ದಾರೆ. ಜಿಂದಾಲ್‌ರವರಿಗೆ ಸಂಬಂಧಪಟ್ಟಂತೆ 6 ಮತ್ತು ಇನ್ನೊಂದು MSPL ರವರಿಗೆ ಕೊಟ್ಟಿದ್ದಾರೆ. ಇದನ್ನು auction ಮಾಡಲಾಗಿದೆಯೇ? ಒಂದು ವೇಳೆ, auction ಆಗಿದ್ದರೆ ಯಾವಾಗ auction ಆಯಿತು? ಮಾನ್ಯ ಸಚಿವರು ವಿರೋಧ ಪಕ್ಷದಲ್ಲಿದ್ದಾಗ, ಇದರ ಬಗ್ಗೆ ಸಾಕಷ್ಟು ಕಾಳಜಿವಹಿಸಿ ಇಡೀ ದೇಶದಲ್ಲಿ ಸರ್ಕಾರ ರಾಜ್ಯವನ್ನು ಜಿಂದಾಲ್‌ನವರಿಗೆ ಮಾರಾಟ ಮಾಡಿದೆ ಎಂದು ಬೊಬ್ಬೆ ಹೊಡೆದರು. ಅವರು ಆ ರೀತಿ ಬೊಬ್ಬೆ ಹೊಡೆದಾಗ ಜನರು ಸಮ್ಮಿಶ್ರ ಸರ್ಕಾರ entire State ಅನ್ನು ಮಾರಾಟ ಮಾಡುವುದಕ್ಕೆ ಹೊರಟಿದೆ ಎಂದು ಭಾವಿಸಿದರು. ಮಾನ್ಯ ಸಚಿವರು ಈಗ ಮಾಡಿರುವಂಥದ್ದು auction ಅಥವಾ ಅವರು ಮಾಡಿದ್ದು ಕೇವಲ ಮಾರಾಟ ಮಾಡುವುದಕ್ಕಾ ಎಂದು ದಯವಿಟ್ಟು clarification ಕೊಡಬೇಕು.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸರ್ವೋಚ್ಛ ನ್ಯಾಯಾಲಯದಿಂದ auction ಮುಖಾಂತರ ಹರಾಜು ಮಾಡಬೇಕೆಂದು ಆದೇಶ ಬಂದಿದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶ ಯಾವಾಗ ಬಂದಿದೆ ಎಂದು ಹೇಳಲಿ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, 2016 ರಿಂದ 2018ರ ಅವಧಿಯಲ್ಲಿ ಜಿಂದಾಲಿಗೆ ನೀಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, 2014 ರಲ್ಲಿ ಆದೇಶ ಕೊಟ್ಟಿದ್ದು, guidelines ಮುಖಾಂತರ ಈ ರೀತಿ ಒಂದು auction ಆಗುವಂತಹ ಮಾದರಿಯಲ್ಲಿ ಮತ್ತು environment guidelines ಇವೆಲ್ಲವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯ ಕೊಟ್ಟ ಮೇಲೆ ಹಾಕಿದ್ದಾರೆಂದು ಹೇಳಿದ್ದಾರೆ. ಮಾನ್ಯ ಸಚಿವರು ಈ ಹಿಂದೆ ವಿರೋಧ ಪಕ್ಷದಲ್ಲಿದ್ದಾಗ, ಇದು ಸರಿಯಿಲ್ಲ, ಇಲ್ಲಿ ಲೂಟಿಯಾಗಿದೆ, ಇಲ್ಲಿ ಸಾಕಷ್ಟು ಅವ್ಯವಹಾರ ಆಗಿದೆ, ಇಲ್ಲಿ ಕರ್ನಾಟಕ ರಾಜ್ಯವನ್ನು ಮಾರಾಟ ಮಾಡುತ್ತಿದ್ದಾರೆಂದು ಬಹಳ ದೊಡ್ಡ ಅಪಾದನೆ ಮಾಡಿದ್ದರು. ಅವತ್ತು ಏನಾಗಿತ್ತು, ಇವತ್ತು ಇವರು ಹೇಗೆ ಕೊಟ್ಟರು ಎಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ. ಅವತ್ತು ಅದೇ ಆಗಿತ್ತು. ಇವತ್ತು ಇದೇ ಆಗಿದೆ. ಆದರೆ, ಮಾನ್ಯ ಸಚಿವರು ವಿರೋಧ ಪಕ್ಷದಲ್ಲಿದ್ದಾಗ ಗಲಾಟೆ ಮಾಡಿದ್ದರು, ಅದನ್ನು ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ?

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಸರ್ಕಾರ ಪಾಲನೆ ಮಾಡಿದೆ. ಇದು ಸ್ಪಷ್ಟವಾಗಿದೆ. 2015 ರಲ್ಲಿ MMDR ಕಾಯಿದೆಗೆ ತಿದ್ದುಪಡಿ ಬರುತ್ತದೆ. 2015 ರ ನಂತರ ಎಲ್ಲಾ leases, auction ಮುಖಾಂತರ ಹರಾಜು ಮಾಡುತ್ತಿದ್ದೇವೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವುದು ಸರಿ ಇದೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಸಮ್ಮಿಶ್ರ ಸರ್ಕಾರ ಇದ್ದಾಗ, ಈ ರಾಜ್ಯದ ಸಂಪತ್ತನ್ನು ಲೂಟಿ ಮಾಡಿದ್ದಾರೆಂದು ದೊಡ್ಡ ಮಟ್ಟದಲ್ಲಿ ಜಿಂದಾಲ್ ವಿಷಯದಲ್ಲಿ ಹೋರಾಟ ಮಾಡಿದರು. ಆದರೆ, ಇವತ್ತು ಯಾವ ಮಟ್ಟದಲ್ಲಿ ಲೂಟಿ ಮಾಡಿದ್ದಾರೆಂದು ಕೇಳುತ್ತಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ಮಾನ್ಯ ಸಚಿವರು ಉತ್ತರ ಹೇಳುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ,

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆಯನ್ನು ಒಂದು ಗಂಟೆಯ ಕಾಲ ಕೇಳಿದರೆ ಹೇಗೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಇದ್ದಾರೆ. ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಏಕೆ ನಮಗೆ ಹೇಳಬೇಕು.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, Question Hour ಎಂದರೇನು? ಒಂದು ಗಂಟೆಯಲ್ಲಿ ಮುಗಿಸಬೇಕು ಅಲ್ಲವೇ, ಇವರಿಗೆ ಮೂರು ಪ್ರಶ್ನೆ ಕೇಳುವುದಕ್ಕೆ ಒಂದು ಗಂಟೆ ತೆಗೆದುಕೊಂಡರೆ ಹೇಗೆ? ಇದು ಯಾವ ನ್ಯಾಯ?

**(ಗೊಂದಲ)**

**ಶ್ರೀ ಎಸ್.ಸುರೇಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಉತ್ತರ ಕೊಡುವುದಕ್ಕೆ ಹೋಗಿಲ್ಲ. ಮೂರು ಪ್ರಶ್ನೆಗಳಿಗೆ ಮುಕ್ಕಾಲು ಗಂಟೆ ಆಯಿತು. ಮೂರು ಪ್ರಶ್ನೆಗಳಿಗೆ ಇಷ್ಟು ಟೈಮ್ ತೆಗೆದುಕೊಂಡರೆ ಹೇಗೆ ಎಂದು ಕೇಳುತ್ತಿದ್ದಾರೆ.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶರವಣರವರು ಪ್ರಶ್ನೆ ಕೇಳಿಲ್ಲ. ಹಾಗಾಗಿ, ಅವರು ಪ್ರಶ್ನೆ ಕೇಳುವಂತಿಲ್ಲ.

**(ಗೊಂದಲ)**

**ಶ್ರೀ ಎ.ನಾರಾಯಣಸ್ವಾಮಿ:–**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ಮಾನ್ಯ ಸಚಿವರು ಸರಿಯಾಗಿ ಉತ್ತರ ಕೊಟ್ಟಿಲ್ಲ ಎನ್ನುವ ಕಾರಣಕ್ಕೆ ಎಲ್ಲರೂ ಎದ್ದು ಕೇಳುವುದಕ್ಕೆ ಪ್ರಾರಂಭ ಮಾಡಿದೆವು.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರುಗಳೇ, ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ, ಇದು ಪ್ರಶ್ನೋತ್ತರ ಅವಧಿ. ಇಷ್ಟೊಂದು ಸಮಯ ಕೊಡುವುದಕ್ಕೆ ಆಗುವುದಿಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯಸಭಾಪತಿಯವರೇ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ environmental protection ಜೊತೆಗೆ auction ಮುಖಾಂತರ ಮಾಡುವುದಕ್ಕೆ ಒಂದು ನೀತಿ ರೂಪಿಸಿದೆ. ಆ ನೀತಿಯ ಪ್ರಕಾರ, ಸರ್ಕಾರ ಕೊಟ್ಟಿದೆ ಎಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಈ ಹಿಂದಿನ ಸರ್ಕಾರ ಇದನ್ನು ಕೊಡುವುದಕ್ಕೆ ಹೋರಟಾಗ, ಆಗ ವಿರೋಧ ಪಕ್ಷದಲ್ಲಿದ್ದ ಇವರು ಅವತ್ತು ಬಹಳಷ್ಟು ಉತ್ತಮವಾದಂತಹ ವಗ್ದಾಳಿಯನ್ನು ನಡೆಸಿ ಈ ಸರ್ಕಾರ ಮಾಡುತ್ತಿರುವುದು ಸರಿಯಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯ ಕೊಟ್ಟಿರಬಹುದು, ಆದರೆ, ನಮ್ಮ ರಾಜ್ಯದ ಭವಿಷ್ಯವನ್ನು ಹಾಗೂ ನಮ್ಮ ರಾಜ್ಯದ ಸಂಪತ್ತನ್ನು ಉಳಿಸಬೇಕು. ಹಾಗಾಗಿ ನಾವು ತಡೆಯುತ್ತೇವೆ. ಇದನ್ನು ಕೊಡುವುದಕ್ಕೆ ಬಿಡುವುದಿಲ್ಲವೆಂದು ಹೇಳಿದ್ದರು. ನಾನು very specifically ಕೇಳುವುದೇನೆಂದರೆ, ಇವರು ಅಧಿಕಾರಕ್ಕೆ ಬಂದ ಮೇಲೆ ಇದನ್ನು consider ಮಾಡುವುದಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಅವತ್ತು ಇರಲಿಲ್ಲವೇ? environmental protection ಇರಲಿಲ್ಲವೇ? ಅವತ್ತು ನೀತಿಗಳು ಇರಲಿಲ್ಲವೇ? ಅವತ್ತು ಇದ್ದಂತಹ ಕಾನೂನುಗಳು ಇವತ್ತು ಇಲ್ಲವೇ? ಅಥವಾ ಹೊಸ ಕಾನೂನು ಬಂದಿದೆಯೇ? ಇವತು ಇವರು ಬಂದ ಮೇಲೆ ಇದನ್ನು ಯಾವ ರೀತಿ ಪರಿಶೀಲಿಸಿ ಪರಿಗಣಿಸಿದ್ದಾರೆ? ಅದಕ್ಕೆ ಉತ್ತರ ಕೊಡಲಿ ಎಂದು ಕೇಳುತ್ತಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:–**ಮಾನ್ಯ ರಮೇಶ್‌ರವರೆ, ನೀವು ಪ್ರಶ್ನೆಯನ್ನು 20 ನಿಮಿಷಗಳ ಕಾಲ ಕೇಳಿದ್ದೀರಿ, ಇದು ಪ್ರಶ್ನೋತ್ತರ ವೇಳೆ. ಮಾನ್ಯ ಸಚಿವರಿಗೆ ಉತ್ತರ ಹೇಳುವುದಕ್ಕೆ ಬಿಡಿ. ಸುಮ್ಮನೆ ಕಾಲವ್ಯಯ ಮಾಡಿತ್ತಿದ್ದೀರಿ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–**ಮಾನ್ಯ ಸಭಾಪತಿಯವರೇ, ನಾನು ಕೇಳಿದ ಪ್ರಶ್ನೆ ಮಾನ್ಯ ಸಚಿವರಿಗೆ ಸ್ಪಷ್ಟವಾಗಿ ಅರ್ಥವಾಗಿಲ್ಲವೆಂದು ಅನ್ನಿಸುತ್ತದೆ. ಅದಕ್ಕೆ ನಿಖರವಾಗಿ ಕೇಳಿದೆ.

**(ಗೊಂದಲ)**

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಸಚೇತಕರು ಹೇಳಿದಂತೆ, ನಮ್ಮ ಸರ್ಕಾರದಲ್ಲಿ ಪ್ರತಿಯೊಬ್ಬ ಸಚಿವರು ಸಹ ಉತ್ತರ ಕೊಡುವುದಕ್ಕೆ ಸಮರ್ಥರಿದ್ದಾರೆ. ಆದರೆ, ಕೇಳುವಂತಹ ಪ್ರಶ್ನೆ ಸರಿಯಾಗಿದ್ದರೆ ಸರ್ಕಾರ ಅದಕ್ಕೆ ಸಮರ್ಥವಾಗಿ ಉತ್ತರ ಕೊಡುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(492)17–03–2020(5–20)ಎಂವಿ–ಆರ್‌ಎನ್

**ಶ್ರೀ ಸಿ.ಸಿ.ಪಾಟೀಲ್ (ಮುಂದು...):–**

Question should be asked in the interest of public development, not with the vested interest.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–**ಮಾನ್ಯ ಸಭಾಪತಿಯವರೇ, ನಾವು ಪ್ರಶ್ನೆಗಳನ್ನು ಕೇಳುತ್ತಿರುವುದೇ Public Interest ಗೆ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–**ಮಾನ್ಯ ಸಭಾಪತಿಯವರೇ, ನಾನು ಅವರ ಹೋರಾಟವನ್ನು ಜ್ಞಾಪಿಸಿದ್ದೇನೆ ಅಷ್ಟೆ.

**(ಗೊಂದಲ)**

**ಶ್ರೀ ಸಿ.ಸಿ.ಪಾಟೀಲ್:–**ಮಾನ್ಯ ಸಭಾಪತಿಯವರೇ,I am here to answer and ready to answer. They can ask many questions and if they are not satisfied with the answer, you can permit this question for half an hour discussion. If they need more clarification, they can come to my office. What else more? I will give you clarification there also. ಅದನ್ನು ಸುಪ್ರೀಂ ಕೋರ್ಟ್ ಮುಖಾಂತರ ಹರಾಜು ಹಾಕಲಾಗಿದೆ. ಈಗ 'ಸಿ' ಕೆಟಗರಿ ಗಣಿಗಳನ್ನು end user ಗೆ ಸುಪ್ರೀಂ ಕೋರ್ಟ್‌ನ ಆದೇಶದಂತೆ ಹರಾಜು ಹಾಕಲಾಗಿದೆ. ಎಲ್ಲವೂ ಸಹ ಸುಪ್ರೀಂ ಕೋರ್ಟ್‌ನ ಆದೇಶದಂತೆ ನಡೆಯುತ್ತದೆ. ಅದಕ್ಕೆ ಮಾನಿಟರಿಂಗ್ ಕಮಿಟಿ ಇದೆ. ಯಾವುದೂ ಸಹ illegal ಗೆ ಅವಕಾಶವಿಲ್ಲ. ಎಲ್ಲವೂ ಸಹ ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ, under the Monitoring Committee ನಡೆಯುತ್ತಿದೆ. ಮಾನ್ಯ ಸದಸ್ಯರಿಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದರೆ ಅದನ್ನು ನೀಡುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–**ಮಾನ್ಯ ಸಭಾಪತಿಯವರೇ, ಇದನ್ನು ಅರ್ಧ ಗಂಟೆ ಚರ್ಚೆ ನೀಡಿದ್ದಾರೆಯೇ?

**ಉಪ ಸಭಾಪತಿಯವರು:–** ಹೌದು ಅದನ್ನು ಅರ್ಧ ಗಂಟೆ ಚರ್ಚೆಗೆ ಎಂದು ಹೇಳಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಈ ಹಂತದಲ್ಲಿ ಸಭಾಪತಿಯವರು ಪೀಠಾಸೀನರಾದರು)**

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–**ಮಾನ್ಯ ಸಭಾಪತಿಯವರೇ, ನಾನು ತಮಗೆ ಕೈ ಮುಗಿಯುತ್ತೇನೆ, ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಸಿಗುತ್ತಿಲ್ಲ. ಹೊಸಪೇಟೆಯಲ್ಲಿ ಜಿಂದಾಲ್‌ಗೆ ಕೊಡುತ್ತಿರುವುದು ಸರಿಯಿಲ್ಲವೆಂದು ಹೇಳಿ, ಅವತ್ತಿನ ಹೊಸಪೇಟೆ ಶಾಸಕರು ರಾಜೀನಾಮೆ ಕೊಟ್ಟು ಹೋದರು. ಈಗ ಸರ್ಕಾರದಲ್ಲಿ ಸಚಿವರಾಗಿದ್ದಾರೆ. ಇವತ್ತು ಸರ್ಕಾರ ಅವರ ಅಂದಿನ ನಿಲುವಿನ ಪರವಾಗಿ ನಿಂತುಕೊಂಡಿದೆಯೇ? ಎಂಬುದು ನನ್ನ ಪ್ರಶ್ನೆಯಾಗಿದೆ. ಈಗ ಸಚಿವರು ಏನು ಉತ್ತರವನ್ನು ಕೊಡುತ್ತಿದ್ದಾರೆ ಅದನ್ನು ಸರಿಯಾದ ರೀತಿಯಲ್ಲಿ ನೀಡಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–**ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆಗೆ ಸುಮಾರು 31 ನಿಮಿಷ ಸಮಯವಾಗಿದೆ. ಈ ತರಹವಾದರೆ ಉಳಿದ ಸದಸ್ಯರು ಎಲ್ಲಿಗೆ ಹೋಗಬೇಕು. ಅದಕ್ಕೆ ನಾನು ಹೇಳುತ್ತೇನೆ, ದಯಮಾಡಿ ಇವತ್ತಿನ ಎಲ್ಲಾ ಅಜೆಂಡಾವನ್ನು ರಾತ್ರಿ ಎಷ್ಟೇ ಹೊತ್ತಾದರೂ ಮುಗಿಸಿಹೋಗಬೇಕು. ಉತ್ತರವನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಬೇರೆಯವರು ಏತಕ್ಕೆ ಬೇಕು. ಇಲ್ಲಿ ಸಭಾಪತಿಯವರು ಇದ್ದಾರೆ, ಮಂತ್ರಿಗಳು ಇದ್ದಾರೆ, ಸದನ ನಡೆಸುವುದಕ್ಕೆ ಒಂದು ರೀತಿ ನೀತಿ ಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಪ್ರಶ್ನೆ ಸಂಖ್ಯೆ: 1247)**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ಇದಕ್ಕೆ ಈ ಹಿಂದೆಕೋರ್ಟ್‌ನಿಂದ stay ಆಗಿ ಸುಮಾರು ಎರಡು ವರ್ಷವಾಗಿದೆ. ಈಗ ಅವರ ಅವಧಿಯನ್ನು ಮುಂದುವರೆಸುತ್ತಾರೋ ಅಥವಾ ಏನು ಮಾಡುತ್ತಾರೋ? ಏಕೆಂದರೆ, ಅದು ಬಹಳ ಮಹತ್ವವಾದುದು. ಈಗಾಗಲೇ ಒಂದು ವರ್ಷ ಹನ್ನೊಂದು ತಿಂಗಳು ಆಗಿದೆ. ಅವರನ್ನು ಮುಂದುವರೆಸುತ್ತಾರೋ ಹೇಗೆ? ಇಂತಿಷ್ಟು ದಿನಗಳಲ್ಲಿಯೇ ಅವರು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ನಿರ್ದೇಶನ ಕೊಡುತ್ತಾರೋ ಹೇಗೆ?

**ಶ್ರೀ ಕೆ.ಸಿ.ನಾರಾಯಣ ಗೌಡ:-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವುದಕ್ಕೆ, ಕಳೆದ ಒಂದೂವರೆ ವರ್ಷದಿಂದ, ಅಂದರೆ 18 ತಿಂಗಳುಗಳಿಂದ ಬೆಂಗಳೂರು, ಕಲ್ಬುರ್ಗಿ ಮತ್ತು ಧಾರವಾಡ ವಿಭಾಗಕ್ಕೆ ಸಂಬಂಧಪಟ್ಟಂತೆ ಉಚ್ಚ ನ್ಯಾಯಾಲಯದಿಂದ stay ಆಗಿತ್ತು. ದಿನಾಂಕ 03.09.2018ರಲ್ಲಿ ಇದನ್ನು withdraw ಮಾಡಿ, ಕಳೆದ ತಿಂಗಳ 10ನೇ ತಾರೀಖಿನಂದು ಕೋರ್ಟ್ ತೀರ್ಪು ನೀಡಿತ್ತು. 11ನೇ ತಾರೀಖಿನಂದು ಡಿ.ಸಿ., ಎ.ಸಿ., ಮತ್ತು ತಹಶೀಲ್ದಾರ್‌ರವರಿಗೆ ಇದನ್ನು ಕಳುಹಿಸಿ, ತಾವು ಚುನಾವಣೆಯನ್ನು ಮಾಡಬಹುದು ಎಂದು ತಿಳಿಸಿದ್ದೇವೆ. ಈ ದಿನ ಪುನಃ ಕೋರ್ಟ್‌ನಲ್ಲಿ ಪಿಟಿಷನ್ ಹೋಗಿ ಅಲ್ಲಿ argument ನಡೆದಿದೆ. ಆದರೆ ಇನ್ನು ನಮ್ಮ ಕೈಗೆ ಆರ್ಡರ್ ಬಂದಿಲ್ಲ. ಅದು ಬಂದ ತಕ್ಷಣ ನಾನು ತಮ್ಮ ಗಮನಕ್ಕೆ ತರುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ಇದು ಕೋರ್ಟ್‌ನಲ್ಲಿ ಮತೆ continue ಆಗಿದೆಯೇ? ಕೋರ್ಟ್‌ನಲ್ಲಿ ಮತ್ತೆ ಇದಕ್ಕೇನಾದರೂ stay ಬಂದಿದೆಯೇ? ಮತ್ತೆ ಇದನ್ನು ಕೋರ್ಟ್‌ಗೆ ಹಾಕಿದ್ದಾರೆಯೇ?

**ಶ್ರೀ ಕೆ.ಸಿ.ನಾರಾಯಣ ಗೌಡ:-**ಮಾನ್ಯ ಸಭಾಪತಿಯವರೇ, ಇದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಎಲ್ಲರಿಗೂ ಇದರ ನೋವಿದೆ ಮತ್ತು ಇಡೀ ಕರ್ನಾಟಕಕ್ಕೆ ನೋವಿದೆ. ನನಗೂ ಸಹ ನೋವಿದೆ. ಆದರೆ, ಉಚ್ಚ ನ್ಯಾಯಾಲಯ ತೆಗೆದುಕೊಳ್ಳುತ್ತಿರುವ ತೀರ್ಮಾನಕ್ಕೆ ನಾವು ಏನು ಮಾಡುವುದಕ್ಕೆ ಆಗುತ್ತದೆ. ಅದನ್ನು ನಾವು ಸಲ್ಲಿಸಿದ್ದೇವೆ. ನಾವು 10ನೇ ತಾರೀಖಿನಂದೇ ಅದನ್ನು ಒಪ್ಪಿಕೊಂಡಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ಈಗ ಅವರು 11ನೇ ತಾರೀಖಿಗೆ ಕೋರ್ಟ್ ಕ್ಲಿಯರ್ ಮಾಡಿದೆ ಎಂದು ಹೇಳಿದ್ದಾರೆ. ಮತ್ತೆ ಯಾರಾದರೂ ಕೋರ್ಟ್‌ಗೆ ಹೋಗಿದ್ದಾರೆಯೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಸಿ.ನಾರಾಯಣ ಗೌಡ:–**ಮಾನ್ಯ ಸಭಾಪತಿಯವರೇ, ಈ ದಿನ ಹೋಗಿದ್ದಾರೆಂದು ಚರ್ಚೆ ನಡೆದಿರುವುದು ನನ್ನ ಗಮನಕ್ಕೆ ಬಂದಿದೆ. ಆದರೆ, ಇನ್ನು ನಮ್ಮ ಕೈಗೆ ಆರ್ಡರ್ ಬಂದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳುತ್ತಿರುವುದು, ಈ ಕ್ಷಣದವರೆಗೆ ಏನಾದರೂ ಆದೇಶ ಇದೆಯೇ ಎಂದು ಕೇಳುತ್ತಿದ್ದಾರೆ.

**ಶ್ರೀ ಕೆ.ಸಿ.ನಾರಾಯಣ ಗೌಡ:–**ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೂ ನಮಗೆ ಏನೂ ವಿಷಯ ಗೊತ್ತಾಗಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–**ಮಾನ್ಯ ಸಭಾಪತಿಯವರೇ, ಅದು ನಿಮಗೆ ಗೊತ್ತಾಗಿಲ್ಲವೆಂದರೆ, ಸರ್ಕಾರದ ನಿರ್ಧಾರವೇನು ಎಂದು ಹೇಳಿ.

**ಶ್ರೀ ಕೆ.ಸಿ.ನಾರಾಯಣ ಗೌಡ:–**ಮಾನ್ಯ ಸಭಾಪತಿಯವರೇ, ಸರ್ಕಾರದ ನಿರ್ಧಾರ ಎಂದು ಹೇಳಿದರೆ, ಉಚ್ಚ ನ್ಯಾಯಾಲಯದ ಆದೇಶವನ್ನು ನಾವು ಪಾಲನೆ ಮಾಡಬೇಕಾಗುತ್ತದೆ ಎಂದು ಎಲ್ಲರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–**ಮಾನ್ಯ ಸಭಾಪತಿಯವರೇ, ಈಗ ನೋಡಿ ನಾನು simple ಆಗಿ ಹೇಳುತ್ತೇನೆ. ಕೋರ್ಟ್‌ಗೆ ಹೋಗಿ stay ತಂದಿದ್ದರು. ಆಗ ಅವರು ಅದನ್ನು ಕ್ಲಿಯರ್ ಮಾಡಿಸಿದ್ದಾರೆ. ಆಮೇಲೆ ಚುನಾವಣೆ ನಡೆಸಿ ಡಿ.ಸಿ., ಎ.ಸಿ., ಮತ್ತು ತಹಶೀಲ್ದಾರ್‌ಗಳಿಗೆ ತಿಳಿಸಿದ್ದಾರೆ. As on today, ಏನಾದರೂ ಕೋರ್ಟ್‌ನಿಂದ ನಿರ್ದೇಶನ ಬಂದಿದೆಯೇ? ಅಥವಾ ಸರ್ಕಾರದ ನಿರ್ಧಾರ ಏನು ಎಂಬುದನ್ನು ಸ್ಪಷ್ಟಪಡಿಸಿ ಎಂದು ಕೇಳುತ್ತಿದ್ದೇನೆ ಅಷ್ಟೆ.

**ಶ್ರೀ ಕೆ.ಸಿ.ನಾರಾಯಣ ಗೌಡ:–**ಮಾನ್ಯ ಸಭಾಪತಿಯವರೇ, ದಿನಾಂಕ 01.04.2020 ಎಂದು ನಮ್ಮ ಕಾರ್ಯದರ್ಶಿಯವರು ಅದರ ದಿನಾಂಕವನ್ನು ಕೊಟ್ಟಿದ್ದಾರೆ. ಅದರ ಒಳಗೆ ಚರ್ಚೆಯನ್ನು ಮಾಡಿ, ಕಾನೂನು ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ನಾವೆಲ್ಲರೂ ಸೇರಿ ಇದಕ್ಕೆ ಪರಿಹಾರವನ್ನು ಹುಡುಕಲೇಬೇಕಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:–**ಮಾನ್ಯ ಸಭಾಪತಿಯವರೇ, mere because of review petition or any writ petition before the High Court or without any order, ನಾವು ಏಕೆ wait ಮಾಡಬೇಕು? ಈಗ ಏನು ಸರ್ಕಾರ ತೀರ್ಮಾನ ಮಾಡಿದೆ ಅದರ ಪ್ರಕಾರ ನಡೆದುಕೊಳ್ಳಬೇಕು. ಇಲ್ಲವೆಂದರೆ ಕೋರ್ಟ್ decision ಮಾಡುವವರೆಗೂ wait ಮಾಡುತ್ತಾರೆಯೇ?

**ಶ್ರೀ ಕೆ.ಸಿ.ನಾರಾಯಣ ಗೌಡ:–**ಮಾನ್ಯ ಸಭಾಪತಿಯವರೇ, ಸರ್ಕಾರ ತೀರ್ಮಾನ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:-**ಮಾನ್ಯ ಸಭಾಪತಿಯವರೇ, ಸರ್ಕಾರದ ತೀರ್ಮಾನದಂತೆ ನಡೆಸಿಕೊಳ್ಳುತ್ತೇವೆಂದು ಹೇಳಿ ಪರವಾಗಿಲ್ಲ ಅದರಿಂದ ನಮಗೆ ಏನು ಬೇಜಾರಿಲ್ಲ. ನಮ್ಮ ಮಾನ್ಯ ಹೊರಟ್ಟಿ ಸಾಹೇಬರು ಕೇಳಿದ್ದು ಏನೆಂದರೆ, ಸರ್ಕಾರದ ತೀರ್ಮಾನಕ್ಕೆ ಕೋರ್ಟ್‌ನ ನಿರ್ದೇಶನ ಇದೆಯೇ ಎಂದು. ಇದ್ದರೆ ಇದೆ ಎಂದು ಹೇಳಿ, ಇಲ್ಲವಾದರೆ ಇಲ್ಲವೆಂದು ಹೇಳಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-**ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-**ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರೇ ನಾವು ಕೇಳುವುದು ಬೇಡವೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು confusion ಮಾಡಿಕೊಳ್ಳುವುದು ಬೇಡ. ದಿನಾಂಕ 11.03.2020ರಂದು ಅಧಿಸೂಚನೆ ಹೊರಡಿಸಿದ್ದಾರೆ. ಅಧಿಸೂಚನೆಯಂತೆ ಡಿ.ಸಿ., ಎ.ಸಿ., ಮತ್ತು ತಹಶೀಲ್ದಾರ್‌ಗಳಿಗೆ ನಿರ್ದೇಶನ ಕೊಟ್ಟಿದ್ದಾರೆ. ಈಗ ಕೋರ್ಟ್‌ಗೆ ಹೋಗಿದ್ದಾರೋ ಇಲ್ಲವೋ ಎಂದು ಗೊತ್ತಿಲ್ಲ. ಆದರೆ, ಅದರ ಬಗ್ಗೆ ಸುದ್ದಿ ಇದೆ. ಈಗ ನಿಮಗೆ ಏನಾದರೂ ಗೊತ್ತಿದೆಯಾ ಅವರು authentic ಆಗಿ ಕೋರ್ಟ್‌ಗೆ ಹೋಗಿದ್ದಾರೆಂದು. ಅದು ನಿಮಗೆ ಗೊತ್ತಿಲ್ಲ. ಅದಕ್ಕೆ ನಾನು ಏನನ್ನು ಹೇಳುತ್ತೇನೆಂದರೆ, ಈ ಅಧಿಸೂಚನೆಯಂತೆ ಕ್ರಮ ತೆಗೆದುಕೊಳ್ಳುವುದಕ್ಕೆ ನೀವು ನಿರ್ದೇಶನ ಕೊಡುತ್ತೀರೋ ಹೇಗೆ? ಇಷ್ಟೆ ನನ್ನ ಪ್ರಶ್ನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ಈಗ ದಿನಾಂಕ: 11.03.2020ರ ಅಧಿಸೂಚನೆಯನ್ನು ನ್ಯಾಯಾಲಯದ ಆದೇಶದಂತೆ ಯಾವ ರೀತಿ ಪ್ರಕಟಣೆಯನ್ನು ಮಾಡಲಾಗಿದೆ, ಅದರಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚನೆ ಕೊಟ್ಟು, ಯಾವ ರೀತಿ ಮೀಸಲಾತಿಯ ಆಧಾರದ ಮೇಲೆ ಬಂದಿದೆಯೋ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಸಬೇಕೆಂದು ಸರ್ಕಾರದಿಂದ ಹೋಗಿದೆ. ಆ ಎಲ್ಲಾ ಪ್ರಕ್ರಿಯೆಗಳನ್ನು ಜಿಲ್ಲಾಧಿಕಾರಿಗಳು ಮಾಡುತ್ತಿದ್ದಾರೆ. ನ್ಯಾಯಾಲಯದಿಂದ ಯಾವುದೇ ನಿರ್ದಿಷ್ಟವಾದ ತಡೆಯಾಜ್ಞೆ ಇಲ್ಲದೇ ಇರುವುದರಿಂದ, ಈಗ ಏನು ಸರ್ಕಾರ ಸೂಚನೆ ಕೊಟ್ಟಿದೆ. ಆ ಸೂಚನೆ ಅನ್ವಯವಾಗುತ್ತದೆ.

**ಸಭಾಪತಿಯವರು:-**ಸದಸ್ಯರಾದ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರ ಪ್ರಶ್ನೆ ಸಂಖ್ಯೆ:1280(154)ಗೆ ಸಮಯವನ್ನು ಕೇಳಿದ್ದಾರೆ. ಈಗ ಮಾನ್ಯ ಗೋಪಾಲಸ್ವಾಮಿಯವರು ತಮ್ಮ ಪ್ರಶ್ನೆ ಕೇಳುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಪ್ರಶ್ನೆ ಸಂಖ್ಯೆ: 1155)**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿನ ಹಲವಾರು ಬಡಾವಣೆಗಳಲ್ಲಿ ಒಳಚರಂಡಿ ಮತ್ತು ರಸ್ತೆಗಳು ಇಲ್ಲದೇ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ; ಸರ್ಕಾರ ಉತ್ತಮವಾದ ಉತ್ತರವನ್ನು ಕೊಟ್ಟಿದೆ. ಆದರೆ, ಚನ್ನರಾಯಪಟ್ಟಣ ತಾಲ್ಲೂಕು ಪುರಸಭೆಯಲ್ಲಿ ಈಗಾಗಲೇ ಸುಮಾರು 75 ಸಾವಿರ ಜನಸಂಖ್ಯೆಯಾಗಿದೆ. ಪ್ರತಿದಿನ ಸುಮಾರು ಹತ್ತು ಸಾವಿರ ಜನ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ತಮ್ಮ ವ್ಯಾಸಂಗವನ್ನು ನಡೆಸುತ್ತಿದ್ದಾರೆ. ಅಲ್ಲಿ ಪಾರ್ಕ್‌ನ ವ್ಯವಸ್ಥೆ ಇರುವುದಿಲ್ಲ ಮತ್ತು ಒಳಚರಂಡಿಯ ವ್ಯವಸ್ಥೆ ಇರುವುದಿಲ್ಲ.

**(ಮುಂದು...)**

(493) 17.03.2020 05.30 LL-VK

**ಶ್ರೀ ಎಂ.ಎ. ಗೋಪಾಲಸ್ವಾಮಿ:-** ಮುಂದುವರೆದಿದೆ...

ಚನ್ನರಾಯಪಟ್ಟಣದಲ್ಲಿ ಪುರಸಭೆ ಇದೆ. ಈಗಾಗಲೇ ಆ ವ್ಯಾಪ್ತಿಯಲ್ಲಿ ಜನಸಂಖ್ಯೆ ಸುಮಾರು 75 ಸಾವಿರ ಇದೆ. ಸುಮಾರು 10 ಸಾವಿರ ವಿದ್ಯಾರ್ಥಿಗಳು ಹಾಸ್ಟೆಲ್‌ಗಳು ಮತ್ತು ಇನ್ನಿತರ ಕಡೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅಲ್ಲಿ ಪಾರ್ಕ್ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಮಾನ್ಯ ಸಚಿವರು ಈಗಾಗಲೇ ಯಾವ್ಯಾವ ವಾರ್ಡ್‌ನಲ್ಲಿ ರಸ್ತೆಗಳು ಇರುವುದಿಲ್ಲ. ಪುರಸಭೆ ವ್ಯಾಪ್ತಿಯಲ್ಲಿ 23 ವಾರ್ಡ್‌ಗಳಿದ್ದು, ಅದರಲ್ಲಿ ಸುಮಾರು 15 ವಾರ್ಡ್‌ಗಳಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಇರುವುದಿಲ್ಲ. ಎನ್ನುವುದರ ಬಗ್ಗೆ ಅಧಿಕಾರಿಗಳ ಮುಖಾಂತರ ನಮಗೆ ತಿಳಿಸಿದ್ದಾರೆ. ಇದನ್ನು ಯಾವಾಗ ಮಾಡುತ್ತಾರೆಂಬ ಬಗ್ಗೆ ತಿಳಿಸಬೇಕು. ಹಾಗೆಯೇ, ಈ ಪುರಸಭೆಗೆ ಸುಮಾರು 4 ಕೋಟಿ ರೂಪಾಯಿ ಆದಾಯ ಇದೆ. ಹೈವೇಯಲ್ಲಿಯೇ ಸುಮಾರು 350 ವಾಣಿಜ್ಯ ಮಳಿಗೆಗಳು ಇವೆ. ಇಷ್ಟೊಂದು ಆದಾಯ ಇರತಕ್ಕಂತಹ ಪುರಸಭೆಗೆ ಮಾನ್ಯ ಸಚಿವರು ಯಾವ ರೀತಿ ಭರವಸೆ ಕೊಡುತ್ತಾರೆ ಹಾಗೂ ರಸ್ತೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಯಾವ ಮಟ್ಟದಲ್ಲಿ ನಿವಾರಿಸುತ್ತಾರೆಂಬ ಬಗ್ಗೆ ಉತ್ತರವನ್ನು ಬಯಸುತ್ತೇನೆ.

**ಶ್ರೀ ಬಿ.ಎ. ಬಸವರಾಜ:-** ಮಾನ್ಯ ಸಭಾಪತಿಯವರೇ, ಚನ್ನರಾಯಪಟ್ಟಣ ಪುರಸಭೆ ವಾರ್ಡ್‌ನಲ್ಲಿ ಒಟ್ಟು 23 ವಾರ್ಡ್‌ಗಳು ಪುರಸಭೆ ವ್ಯಾಪ್ತಿಗೆ ಬರುತ್ತವೆ. ಅದರಲ್ಲಿ ಹಳೆಯ ನಗರ ಅಂದರೆ 'Old City' ಏನಿತ್ತು ಅದರಲ್ಲಿ 7 ವಾರ್ಡ್‌ಗಳಲ್ಲಿ ಯುಜಿಡಿ ಕೆಲಸ ಸಂಪೂರ್ಣವಾಗಿ ಮುಗಿಸಿದ್ದೇವೆ. ಇನ್ನುಳಿದ 16 ವಾರ್ಡ್‌ಗಳಲ್ಲಿ ನಾವು UGD (Under Ground Drainage) ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಕೆಲಸ ನಡೆಯುತ್ತಿದೆ. ಈಗ ಸುಮಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

68 ಕಿಲೋಮೀಟರ್‌ನಷ್ಟು UGD ಕೆಲಸ ಮಾಡುತ್ತಿದ್ದು, 12 ಕಿಲೋಮೀಟರ್‌ನಷ್ಟು ಕೆಲಸ ಬಾಕಿ ಇದೆ. ಏಕೆಂದರೆ, ಇವೆಲ್ಲವೂ missingness. ಪುರಸಭೆ ಬಹಳ ವೇಗವಾಗಿ ಬೆಳೆಯುತ್ತಿರುವುದರಿಂದ ಹಾಗೂ ಈ ಮೊದಲು ಮನೆಗಳು ನಿರ್ಮಾಣವಾಗಿರಲಿಲ್ಲ. ಈಗಾಗಲೇ ಮನೆಗಳು ನಿರ್ಮಾಣವಾಗಿರುವ ಕಡೆ ಮಾತ್ರ ನಾವು ಯುಜಿಡಿ ಕಾಮಗಾರಿಗಳನ್ನು ಮಾಡಿದ್ದೇವೆ. ಈಗ ಮನೆಗಳನ್ನು ನಿರ್ಮಾಣ ಮಾಡಿರುವಂತಹ ಪ್ರದೇಶಗಳಲ್ಲಿಯೂ ಕೂಡ ನಾವು UGD ಕಾಮಗಾರಿಗಳನ್ನು ವಿಸ್ತರಣೆ ಮಾಡುತ್ತಿದ್ದೇವೆ. UGD ಕಾಮಗಾರಿಗಳಲ್ಲಿ 12 ಕಿಲೋಮೀಟರ್ ಬಾಕಿ ಇದೆ. ಇದನ್ನು ಆದಷ್ಟು ಬೇಗ ಪೂರ್ಣಗೊಳಿಸಿ, ಸಮರ್ಪಕವಾಗಿ ಮಾಡಿಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ ಎನ್ನುವುದನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಅದೇ ರೀತಿ ಕುಡಿಯುವ ನೀರಿನ ಯೋಜನೆ ಇದೆ, ಚನ್ನರಾಯಪಟ್ಟಣಕ್ಕೆ ಸುಮಾರು 42.72 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಕಾಮಗಾರಿಯನ್ನು ನಾವು ಕೈಗೆತ್ತಿಕೊಂಡು, ಕಾಮಗಾರಿಯನ್ನು ಮುಗಿಸಿ ಪುರಸಭೆಗೆ ಹಸ್ತಾಂತರ ಮಾಡಿದ್ದೇವೆ. ಮಾನ್ಯ ಸದಸ್ಯರು ಅನುದಾನಗಳ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ, 2017-18, 2018-19 ಮತ್ತು 2019-20ನೇ ಸಾಲಿನಲ್ಲಿ ನಮ್ಮ 14ನೇ ಹಣಕಾಸಿನ ಆಯೋಗದಲ್ಲಿ ರೂ.28.83 ಲಕ್ಷ ಅನುದಾನ ಬಂದಿರುತ್ತದೆ. ನಗರೋತ್ಥಾನ(ಮುನಿಸಿಪಾಲಿಟಿ) 3ನೇ ಹಂತದ ಯೋಜನೆಯಲ್ಲಿ ಸುಮಾರು ರೂ.750.00 ಲಕ್ಷ ಅನುದಾನದಲ್ಲಿ ರೂ.475.00 ಲಕ್ಷ ಅನುದಾನವನ್ನು ನಾವು ಬಿಡುಗಡೆ ಮಾಡಿದ್ದೇವೆ. 2018-19 ಮತ್ತು 2019-20ರಲ್ಲಿ ರೂ.1.46 ಲಕ್ಷ ಮತ್ತು ರೂ.50.28 ಲಕ್ಷ ರೂಪಾಯಿಗಳನ್ನು 'ಸ್ವಚ್ಛ ಭಾರತ್ ಅಭಿಯಾನ ಯೋಜನೆ' ಅನುದಾನದಡಿಯಲ್ಲಿ ಹಣ ಬಿಡುಗಡೆ ಮಾಡಲಾಗಿರುತ್ತದೆ. ಇವೊತ್ತಿನ ದಿವಸ ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ UGD ಕಾಮಗಾರಿ ಮುಗಿದ ತಕ್ಷಣವೇ ಆ ರಸ್ತೆಗಳನ್ನು ಸರಿಪಡಿಸುವುದು ಹಾಗೂ ಇನ್ನಿತರ ಕಾಮಗಾರಿಗಳನ್ನು ಮುಗಿಸಿಕೊಡುವಂತಹ ಕೆಲಸವನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಿ ಪುರಸಭೆಗೆ ಒಂದು ಆಯಕಲ್ಪವನ್ನು ಕಲ್ಪಿಸುವಂತಹ ಎಲ್ಲಾ ಕ್ರಮಗಳನ್ನು ಸರ್ಕಾರ ಕ್ರಮ ವಹಿಸುತ್ತದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಂ.ಎ. ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಸೈಟ್‌ಗಳು ನಗರ ಪ್ರಾಧಿಕಾರದಲ್ಲಿ ಇರುವುದರಿಂದ, ಅಲ್ಲಿ ರಸ್ತೆಗಳು ಹಾಗೂ ಇತರೆ ಕೆಲಸಗಳು ಆಗುತ್ತಿರಲಿಲ್ಲ. ಅಲ್ಲಿ 30 ಅಡಿ ರಸ್ತೆ ಹಾಗೂ ಮಳೆ ಕೊಯ್ಲು ಆಗತಕ್ಕಂಥ ನಿವೇಶನಗಳಿಗೆ ಅನುಮತಿ ನೀಡುವುದು ಹಾಗೂ ಅವುಗಳ ಖಾತೆ ಮಾಡುವುದರಲ್ಲಿ ನಗರ ಪ್ರಾಧಿಕಾರ ಕ್ರಮ ವಹಿಸುವುದಕ್ಕೆ ಸೂಕ್ತ ನಿರ್ದೇಶನ ನೀಡಬೇಕೆಂದು ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಬಿ.ಎ. ಬಸವರಾಜ:-** ಮಾನ್ಯ ಸಭಾಪತಿಯವರೇ, ಸೈಟ್‌ಗಳ ಖಾತೆ ಮಾಡುವ ಬಗ್ಗೆ ಕೆಳಮನೆಯಲ್ಲಿಯೂ ಸಹ ನಾವು ಚರ್ಚೆ ಮಾಡಿರುತ್ತೇವೆ. ಆದರೆ, ಈ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿ ತಡೆಯಾಜ್ಞೆ ತಂದಿರುತ್ತಾರೆ. ಆ ತಡೆಯಾಜ್ಞೆಯನ್ನು ಉನ್ನತ ಮಟ್ಟದ ವಕೀಲರೊಂದಿಗೆ ಸಮ್ಮುಖದಲ್ಲಿ ಚರ್ಚೆ ಮಾಡಿ, ಅದನ್ನು

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇತ್ಯರ್ಥ ಮಾಡಿ, ಸೈಟ್‌ಗಳ ಖಾತೆ ಮಾಡಿಕೊಡುವಂತಹ ಕೆಲಸವನ್ನು ಮಾಡುತ್ತೇವೆ ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1254**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ|| ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಬಹಳ ವಿವರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಹಾಹಾಕಾರ ಇದ್ದು, ಅಂತರ್ಜಲ ಮಟ್ಟ ಪಾತಾಳಕ್ಕೆ ಹೋಗಿ, ಯಾವುದೇ ಜಲಮೂಲಗಳಿಂದ ನಮಗೆ ಇವೊತ್ತಿನ ದಿವಸ ನೀರು ಸಿಗುತ್ತಿಲ್ಲ. ಅದರ ಪ್ರಯುಕ್ತ 'ಯರಗೋಳು ಯೋಜನೆ'ಯನ್ನು ಕೋಲಾರ, ಬಂಗಾರಪೇಟೆ ಮತ್ತು ಮಾಲೂರು ಪಟ್ಟಣಗಳಿಗೆ ಕುಡಿಯುವ ನೀರು ಕೊಡುವುದಕ್ಕೆ 2008–09ರಲ್ಲಿ ಯೋಜನೆಯನ್ನು ಪ್ರಸ್ತಾಪ ಮಾಡಲಾಗಿ, 2010ರಲ್ಲಿ ಯೋಜನೆಗೆ ಅನುಮೋದನೆ ಕೊಟ್ಟು ಟೆಂಡರ್ ಪ್ರಕ್ರಿಯೆ ಕರೆದು ಕಾಮಗಾರಿ ಪ್ರಾರಂಭಿಸಲು ಪ್ರಹಿಸಲಾಗಿರುತ್ತದೆ. ಈಗ 2020ನೇ ಇಸವಿಯಾದರೂ ಸಹ ಇನ್ನೂ ಆ ಯೋಜನೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಆ ಯೋಜನೆಗೆ ಬಹಳ ಮುಖ್ಯವಾಗಿ 2 ಭಾಗಗಳಾಗಿ ವಿಂಗಡನೆ ಮಾಡಿ, ಮೊದಲನೆಯ ಭಾಗ ಅಣೆಕಟ್ಟು ಕಟ್ಟುವುದು, *Rising Main*ತೆಗೆದುಕೊಂಡು ಬರುವುದಕ್ಕಾಗಿ ಸುಮಾರು 160 ಕೋಟಿ ರೂಪಾಯಿ ಅನುದಾನ ಮತ್ತು UIDSSMT (Urban Infrastructure Development Scheme for Small and Medium Towns)ಯೋಜನೆಯಲ್ಲಿ ಸುಮಾರು 88 ಕೋಟಿ ರೂಪಾಯಿಯಲ್ಲಿ pipeline and STP (Sewage Treatment Plant) ಅಳವಡಿಸುವ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಆದರೆ, Original Estimate ಸುಮಾರು 239 ಕೋಟಿ ರೂಪಾಯಿ ಇತ್ತು. Revised Estimate ಅನ್ನು 313 ಕೋಟಿ ರೂಪಾಯಿಗಳಿಗೆ ಅಂದರೆ, ಸುಮಾರು 74 ಕೋಟಿ ರೂಪಾಯಿಗಳಷ್ಟು ಜಾಸ್ತಿ ಮಾಡಿದ್ದಾರೆ. 74 ಕೋಟಿ ರೂಪಾಯಿ ಜಾಸ್ತಿ ಮಾಡಿ ಅದಕ್ಕೆ ಅನುಮೋದನೆ ನೀಡಿರುವುದಿಲ್ಲ. ಈಗಾಗಲೇ 10 ವರ್ಷ ಕಳೆದಿದೆ. ಆದರೆ, ಮಾನ್ಯ ಸಚಿವರು ಉತ್ತರದಲ್ಲಿ, ಫೆಬ್ರವರಿ 2019ರಲ್ಲಿ ಅನುಮೋದನೆ ಕಳುಹಿಸಿ 1 ವರ್ಷ ಆಗಿದೆ. ಅಂದರೆ, Revised Estimate ಗಾಗಿ ಡೈರೆಕ್ಟರ್‌ಗೆ ಅನುಮೋದನೆಗೆ ಕಳುಹಿಸಿದ್ದು, ಅದು ಇದುವರೆವಿಗೂ ಬಂದಿರುವುದಿಲ್ಲ. ಆ 'ಅನುಮೋದನೆ ಬಂದು 9 ತಿಂಗಳ ನಂತರ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇವೆಂದು' ಹೇಳಿದ್ದಾರೆ. ನಾನು ಮಾನ್ಯ ಸಚಿವರಿಗೆ ನೇರವಾಗಿ 2 ಪ್ರಶ್ನೆಗಳನ್ನು ಕೇಳುತ್ತೇನೆ. ಅದೇನೆಂದರೆ ಮೊದಲನೆಯದಾಗಿ, ಈ ಕಾಮಗಾರಿಗೆ ಒಂದು ವರ್ಷದ ಹಿಂದೆ ಅನುಮೋದನೆಗೆ ಹೋಗಿದ್ದರೂ, ಏತಕ್ಕೆ ಅನುಮೋದನೆ ನೀಡಿರುವುದಿಲ್ಲ. ಎರಡನೆಯದಾಗಿ, ಅನುಮೋದನೆ ಪಡೆದ ನಂತರ ಎಷ್ಟು ಕಾಲಾವಧಿಯಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ವಿವರವಾದ ಉತ್ತರವನ್ನು ಒದಗಿಸಿದ್ದೇವೆ. ಇವೊತ್ತಿನ ದಿವಸ ಯರಗೋಳು ಯೋಜನೆಯಲ್ಲಿ ನೀರಾವರಿ ಯೋಜನೆ ಕೋಲಾರ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂಗಾರಪೇಟೆ ಮತ್ತು ಮಾಲೂರು ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಕೊಡುವಂತಹ ಒಂದು ಮಹತ್ತರವಾದ ಯೋಜನೆಯಾಗಿದೆ. ಈ ಯೋಜನೆಗೆ ಕೆಲವು ಅಡೆ-ತಡೆಗಳಿಂದ ವಿಳಂಬವಾಗಿರುವುದು ನಿಜ. ಇಲ್ಲವೆಂದು ನಾನು ಹೇಳುವುದಿಲ್ಲ. ಏಕೆಂದರೆ, ಅರಣ್ಯ ಇಲಾಖೆ, ಪರಿಸರ ಮತ್ತು ಅಲ್ಲಿನ ಜಾಗ 325 ಎಕರೆ ಜಮೀನು ಭೂಸ್ವಾಧೀನ ಮಾಡಿಕೊಂಡಿರುವುದು ಸೇರಿದಂತೆ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವುದಕ್ಕೆ ಸುಮಾರು 3 ವರ್ಷಗಳ ಕಾಲ ವಿಳಂಬವಾಗಿರುತ್ತದೆ. ಈಗಾಗಲೇ ಶೇಕಡ 95 ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಿದ್ದೇವೆ. ಇನ್ನೂ ಕೇವಲ ಶೇಕಡ 5 ರಿಂದ 10 ರಷ್ಟು ಕಾಮಗಾರಿ ಬಾಕಿ ಇರುತ್ತದೆ. ಆ ಕಾಮಗಾರಿಗಾಗಿ ಹೆಚ್ಚುವರಿಯಾಗಿ 79 ಕೋಟಿ ರೂಪಾಯಿಗಳ ಅನುದಾನ ಮಂಜೂರಾತಿಗಾಗಿ ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಕಳುಹಿಸಿದ್ದೇವೆ. ಆರ್ಥಿಕ ಇಲಾಖೆಯ ಅನುಮೋದನೆ ಆದ ತಕ್ಷಣವೇ ಕಾಮಗಾರಿಯನ್ನು ಪೂರ್ಣಗೊಳಿಸಿ ಸದರಿ ಗ್ರಾಮಗಳಿಗೆ ಕುಡಿಯುವ ನೀರು ಕೊಡುವಂತಹ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುವುದಕ್ಕೆ ನಾನು ಬಯಸುತ್ತೇನೆ.

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುವುದನ್ನು ನಾನು ಒಪ್ಪುತ್ತೇನೆ. ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಕಡತ ಸಲ್ಲಿಸಿ 1 ವರ್ಷ ಕಳೆದಿರುತ್ತದೆ.

**ಶ್ರೀ ಬಿ.ಎ. ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು ಸಚಿವನಾಗಿ ಕೇವಲ 1 ತಿಂಗಳು ಆಗಿದೆ. ಇಷ್ಟು ಕಡಿಮೆ ಅವಧಿಯಲ್ಲಿ ಕಾಮಗಾರಿಗಳ ಫೋಟೋಗಳು, ಅಲ್ಲಿನ ಆಗುಹೋಗುಗಳ ಬಗ್ಗೆ ಮಾಹಿತಿ ಕಲೆಹಾಕಿ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ನೀಡಿರುತ್ತೇನೆ. ಜೊತೆಗೆ, ಈ ಕಾಮಗಾರಿಗೆ ಸಂಬಂಧಿಸಿದ ಕಡತ ಪ್ರಸ್ತುತ ಆರ್ಥಿಕ ಇಲಾಖೆಯಲ್ಲಿದೆ. ಈ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳು ಹಾಗೂ ಆರ್ಥಿಕ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ, ಆದಷ್ಟು ಬೇಗ ಅಂದರೆ ಮುಂದಿನ 1 ವರ್ಷದಲ್ಲಿ ಪೂರ್ಣಗೊಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, I am on Point of Order.

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಯಮಾಡಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಬೇಕು. **(ಗೊಂದಲ)** ನನ್ನ ಪ್ರಶ್ನೆ ಸಂಪೂರ್ಣವಾಗಿ ಮುಗಿದಿರುವುದಿಲ್ಲ. ಮಾನ್ಯ ಸಚಿವರು ಅಣೆಕಟ್ಟು ಜಾಗಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಬೇಕು.

**ಶ್ರೀ ಬಿ.ಎ. ಬಸವರಾಜ್:-** ಮಾನ್ಯ ಸಭಾಪತಿಯವರೇ, ಈ ಕಾಮಗಾರಿಗೆ ಸಂಬಂಧಪಟ್ಟಂತೆ, ಮಾನ್ಯ ಸದಸ್ಯರ ಜೊತೆ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿ, ಅಲ್ಲಿನ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿ, ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಮಗಾರಿಯಲ್ಲಿ ಏನೇನು ಅನುಕೂಲಗಳನ್ನು ಮಾಡಬಹುದು ಅವುಗಳನ್ನು ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**ಡಾ॥ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಯಲ್ಲಿ Point of Order ಗೆ ಅವಕಾಶವಿದೆಯೇ? ಯಾವ ನಿಯಮದಲ್ಲಿ ಅವಕಾಶ ಇದೆ ಅದನ್ನು ತಿಳಿಸಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಹೌದು. ನಿಯಮದಲ್ಲಿ ಅವಕಾಶ ಇದೆ. ಅದನ್ನು ನಾನು ಹೇಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯಲ್ಲಿ Point of Order ಗೆ ಅವಕಾಶವಿರುವುದಿಲ್ಲ. ಈ ರೀತಿ ತಾವು ಅವಕಾಶ ಕೊಟ್ಟರೆ ಇರುವಂತಹ ಪದ್ಧತಿ ಏನಾಗುತ್ತದೆ?

**(ಗೊಂದಲ)**

**ಸಭಾಪತಿಯವರು:–** ಈ ವಿಷಯದಲ್ಲಿ ಹೊಸತನ ಮಾಡುವುದು ಬೇಡ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಈ ಸದನದ ಎಲ್ಲಾ ಸದಸ್ಯರುಗಳು ಸಚಿವರು ಎಂದು ಕರೆಯುತ್ತಿದ್ದಾರೆ. ಶ್ರೀ ಬಸವರಾಜರವರು ಸಚಿವರು ಎಂದು ಕರೆದಿದ್ದಾರೆ. ತಾವು ಕೂಡ ಸಚಿವರು ಎಂದು ಕರೆದಿದ್ದೀರಿ. ಸಚಿವರ ಅರ್ಥ ಏನೆಂದರೆ, that means Secretary. ಸಚಿವರು ಎಂದು ಹೇಳಿದರೆ dictionary meaning is Secretary. **(ಗೊಂದಲ)** ಇದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ತಾವು ಇದನ್ನು ಪರಿಶೀಲನೆ ಮಾಡಬೇಕು. ಇದರಲ್ಲಿಯೂ ಕೂಡ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಎಂದು ಹಾಕಿದ್ದಾರೆ. ಇದನ್ನು ನಾವು ಸರಿಪಡಿಸಬೇಕು.

**ಸಭಾಪತಿಯವರು:–** ತಾವು ಯಾವುದೋ ಹೊಸ ಡಿಕ್ಷನರಿ ಬಗ್ಗೆ ಹೇಳುತ್ತಿದ್ದೀರಿ.

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(494)17.03.2020/5.40/ವೈಎಲ್-ವಿಕೆ

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾವು ಇದನ್ನು ಸರಿಪಡಿಸಬೇಕು. ಉಪ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳು ಎಂದು ಕರೆಯುತ್ತೇವೆಯೇ ವಿನಃ ಉಪ ಸಚಿವರು ಎಂದು ಹೇಳುವುದಿಲ್ಲ. ಮುಖ್ಯಮಂತ್ರಿಗಳಿಗೆ, ಮುಖ್ಯಮಂತ್ರಿಗಳು ಎಂದು ಕರೆಯುತ್ತೇವೆಯೇ ವಿನಃ ಮುಖ್ಯಸಚಿವರು ಎಂದು ಕರೆಯುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, Britain Constitution ನಲ್ಲಿ ಸಚಿವರು ಎಂದರೆ, ಕಾರ್ಯದರ್ಶಿಗಳು ಎಂದರ್ಥ, ಹಾಗಾಗಿ ಅಲ್ಲಿ 'ಕಾರ್ಯದರ್ಶಿ' ಎಂದು ಕರೆಯುವುದು ಸರಿಯಾಗಿದೆ. In our Constitution, ನಮ್ಮಲ್ಲಿ ಮಂತ್ರಿಗಳನ್ನು ಸಚಿವರು ಎಂದು ಕರೆಯುತ್ತಿರುವುದು ಸರಿಯಾಗಿದೆ.

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್.

**ಶ್ರೀ ಆಯನೂರು ಮಂಜುನಾಥ್:-**ಮಾನ್ಯ ಸಭಾಪತಿಯವರೇ, ಪ್ರಶ್ನೆ ಸಂಖ್ಯೆ 1260ನ್ನು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ತಾವು ಉತ್ತರ ಹೇಳಬೇಕು. ನನಗೆ ಮಾತನಾಡಲು ಅವಕಾಶ ನೀಡಿ. ಸಚಿವರನ್ನು ಕಾರ್ಯದರ್ಶಿಗಳು ಎಂದು ಹೇಗೆ ಕರೆಯುವುದಕ್ಕೆ ಸಾಧ್ಯ? ನನಗೆ ಉತ್ತರ ನೀಡಿ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿಯಲಿ ನಂತರ ಮಾತನಾಡೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮತ್ತೊಂದು ಪ್ರಶ್ನೆಯನ್ನು ಕೇಳಿದಾಗ, ಪುನಃ ಮೊದಲ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ.

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕನ್ನಡದ ರೂಢಾರ್ಥದಲ್ಲಿ 'ಸಚಿವರು' ಎನ್ನುವ ಪದ ತುಂಬಾ ಪ್ರಚಲಿತವಾದಂಥ ಪದ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸಚಿವರು ಎನ್ನುವುದು ಬಹಳ ಪ್ರಚಲಿತವಾದಂಥ ಪದ ಎಂದು ಅವರು ವಾದವನ್ನು ಮಾಡಬಹುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿ ಗೌಡ:-**...ಸಚಿವ ಸಂಪುಟ...

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಡಾ॥ ತೇಜಸ್ವಿನಿ ಗೌಡರವರೇ, ನಾವು ಉತ್ತರವನ್ನು ನೀಡುವುದಕ್ಕೆ ಈ ವಿಷಯವೇ ಬೇರೆ ಇದೆ. ಆ ವಿಷಯವನ್ನು ಎಲ್ಲಿ ತರಬೇಕೋ ಅಲ್ಲಿ ಮಾನ್ಯ ಸದಸ್ಯರು ತಂದರೆ, ನಾವೆಲ್ಲರೂ ಆ ಚರ್ಚೆಯಲ್ಲಿ ಪಾಲ್ಗೊಳ್ಳಬಹುದು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಂತರವಾದರೂ ಸ್ಪಷ್ಟೀಕರಣ ನೀಡಿ ಪರವಾಗಿಲ್ಲ. ನನ್ನ ಪ್ರಕಾರ it's a historical blunder. ಇದನ್ನು ಸರಿಮಾಡಬೇಕು. ಸಚಿವರು, ಕಾರ್ಯದರ್ಶಿಗಳು ಎಂದು ಒಟ್ಟಿಗೆ ಸೇರಿಸಬಾರದು. ಯಾವುದೇ ಸಚಿವರಾಗಲಿ, ಅವರಿಗೆ ಅವರೇ ಅವಮಾನ ಮಾಡಿಕೊಳ್ಳಬಾರದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಸುಮ್ಮನೆ ಮಾರಿ ಹಬ್ಬದಲ್ಲಿ, ಯುಗಾದಿ ಹಬ್ಬದ ಪ್ರಶ್ನೆ ಎತ್ತಿ, ಯಾವುದೋ ಪ್ರಶ್ನೆಯ ಸಮಯದಲ್ಲಿ ಯಾವುದೋ ಪ್ರಶ್ನೆ ಕೇಳಿದರೆ ಆಗುವುದಿಲ್ಲ. ಮಾರಿ ಹಬ್ಬದಲ್ಲಿ ಯುಗಾದಿ ಚಂದ್ರನ ತೋರಿಸುವ ಹಾಗೆ, ಯಾವುದೋ ಪ್ರಶ್ನೆಗೆ ಮತ್ಯಾವುದೋ ಪ್ರಶ್ನೆ ಕೇಳಿದರೆ ಹೇಗೆ?

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ತಾವು ಸ್ಪಷ್ಟೀಕರಣವನ್ನು ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ ದೇಶದಲ್ಲಿಯೇ ಪಾರ್ಲಿಮೆಂಟ್‌ನಲ್ಲೆಲ್ಲಾ ಸಚಿವರು ಎಂದೇ ಕರೆಯುತ್ತಾರೆ, ಮತ್ತೆ ನೀವು ಈಗ ಎಲ್ಲಿಂದ ಈ ಪ್ರಶ್ನೆ ತಂದಿದ್ದೀರಿ.

**ಶ್ರೀ ಆಯನೂರು ಮಂಜುನಾಥ್:-** ಅವರಿಗೇನೋ ಈಗ ಜ್ಞಾನೋದಯವಾಗಿದೆ, ಅದೇನು ದೊಡ್ಡ ವಿಷಯವಲ್ಲ ಬಿಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಚಿವರು ಎಂದು ಕರೆಯದೆ ಮತ್ತೇನು ಕರೆಯುತ್ತಾರೆ. ಯಾರೋ ಒಬ್ಬರು ಕೊಟ್ಟಿದ್ದಾರೆ ಎಂದು,... ಪುಸ್ತಕ ನೋಡಿ ಅಡಿಗೆ ಮಾಡಿದಂತೆ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರ ಕೆಲಸವಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಸಚಿವರಿಗೆ ಕಾರ್ಯದರ್ಶಿಗಳು ಎಂದು ಹೇಳುತ್ತಾರೆ. ಹಾಗಾದರೆ, ಕಾರ್ಯದರ್ಶಿಗಳು ಏತಕ್ಕೆ ಗ್ಯಾಲರಿಯಲ್ಲಿ ಕುಳಿತುಕೊಳ್ಳುತ್ತಾರೆ. ನಮ್ಮಲ್ಲಿ ಮಂತ್ರಿಗಳಿಗೆ ಸಚಿವರು ಎಂದು ಕರೆಯುತ್ತಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅವರಿಗೆ ಏನಾದರೂ ಒಂದು ರೂಲಿಂಗ್ ಕೊಟ್ಟು ಕೂರಿಸಿ. 'ಮುಂದೆ ತಿಳಿಸಲಾಗುತ್ತದೆ' ಎಂದಾದರೂ ಹೇಳಿಬಿಡಿ.

**ಡಾ॥ ತೇಜಸ್ವಿನಿ ಗೌಡ:–**ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಒಂದು ರೂಲಿಂಗ್ ಕೊಟ್ಟುಬಿಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸಚಿವರಿಗೆ ಏನೆಂದು ಕರೆಯಬೇಕೆಂಬುದನ್ನು ತಾವು ಮಾನ್ಯ ಸದಸ್ಯರಿಗೇ ಕೇಳಿ.

**ಸಭಾಪತಿಯವರು:–** ಆಯಿತು, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಆಯನೂರು ಮಂಜುನಾಥ್‌ರವರೇ ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 1260**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಶಿವಮೊಗ್ಗ ನಗರದಲ್ಲಿ 'ಸ್ಮಾರ್ಟ್ ಸಿಟಿ' ಮತ್ತು 'ಅಮೃತ್' ಯೋಜನೆ. ಈ ಎರಡು ಯೋಜನೆಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳು ಜಾರಿಯಲ್ಲಿದೆ. ಹಾಗಾಗಿ ಕಾರ್ಪೋರೇಷನ್‌ನವರು ಯಾವ ಕೆಲಸ ಮಾಡುತ್ತಿದ್ದಾರೆ, ಸ್ಮಾರ್ಟ್ ಸಿಟಿ ಕೆಲಸವನ್ನು ಯಾರು ಮಾಡುತ್ತಿದ್ದಾರೆ, 'ಅಮೃತ್' ಯೋಜನೆ ಕೆಲಸವನ್ನು ಯಾರು ಮಾಡುತ್ತಾರೆ ಎಂಬುದು ನಮಗೆ ಯಾರಿಗೂ ಸಹ ಗೊತ್ತಾಗುತ್ತಿಲ್ಲ. ಸ್ಮಾರ್ಟ್ ಸಿಟಿ ಮತ್ತು ಅಮೃತ್ ಯೋಜನೆಯಲ್ಲಿ ಸಾರ್ವಜನಿಕರ ಪಾಲುದಾರಿಕೆಯನ್ನು ಪಡೆದುಕೊಳ್ಳಬೇಕೆನ್ನುವುದೇ ಮುಖ್ಯವಾದ ಅಂಶವಾಗಿದೆ. ಆ ರೀತಿ ಸಾರ್ವಜನಿಕರ participation ಇಲ್ಲದೇ,...

ಅಲ್ಲಿ ಸಾಮಾನ್ಯ ಜನರ ಜೊತೆ ಕಾರ್ಪೋರೇಟರ್ ಸಹ ಒಳಗೊಂಡಂತೆ ಯಾವುದೇ ಮಾಹಿತಿಯನ್ನು ಅಧಿಕಾರಿಗಳು ನೀಡದೇ, ಕೇವಲ ಅಧಿಕಾರಿಗಳೇ ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಕಾರ್ಪೋರೇಟರ್‌ಗೂ ಸಹ ಅವರ ವಾರ್ಡ್‌ನಲ್ಲಿಯೇ ಯಾವ ಕೆಲಸವಾಗುತ್ತಿದೆ ಎಂಬುದು ಗೊತ್ತಿಲ್ಲ. ಒಂದು ವೇಳೆ ಕಾರ್ಪೋರೇಟರ್‌ಗಳು ಪ್ರಶ್ನೆ ಮಾಡಿ ಕೇಳಿದರೆ ನಿಮಗೆ ಸಂಬಂಧವಿಲ್ಲ ಎನ್ನುವ ಮಾತನ್ನು ಅಧಿಕಾರಿಗಳು ಹೇಳುತ್ತಿದ್ದಾರೆ. ಹಾಗಾಗಿ ಈ ಯೋಜನೆಯನ್ನು ಯಾರು supervision ಮಾಡುತ್ತಾರೆ, ಕಾರ್ಪೋರೇಷನ್ ಪ್ರತಿನಿಧಿಗಳ ಗಮನಕ್ಕೆ ತರದೇ ಮಾಡಬೇಕೆನ್ನುವ ನಿಯಮಾವಳಿ ಇದೆಯೇ ಅಥವಾ ಅದನ್ನು ಸರಿಪಡಿಸುವಂಥ ಕೆಲಸ ಮಾಡುತ್ತಾರೆಯೇ ಎಂಬುದನ್ನು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಬೇಕು.

**ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನದು ಎರಡು ಉಪ ಪ್ರಶ್ನೆಗಳಿದ್ದು, ಅದರೊಳಗೆ ಸೇರಿಸಿ ಕೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಆಯನೂರು ಮಂಜುನಾಥ್‌ರವರು ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಪೂರಕವಾಗಿ ಅಮೃತ್ ಯೋಜನೆ, ಸ್ಮಾರ್ಟ್ ಸಿಟಿ ಯೋಜನೆ ಜೊತೆಗೆ ಹಿಂದಿನಿಂದಲೂ UGD (Under Ground Drainage) ಯೋಜನೆಯ ಕೆಲಸವೂ ನಡೆಯುತ್ತಿದೆ. ಅದರ ಜೊತೆಗೆ KUWSDB (*Karnataka Urban Water Supply and Drainage Board*)ವತಿಯಿಂದ 24x7 ಕುಡಿಯುವ ನೀರಿನ ಯೋಜನೆ ಕೆಲಸವೂ ನಡೆಯುತ್ತಿದೆ. ಕಾರ್ಪೋರೇಷನ್ ಕೆಲಸವೂ ನಡೆಯುತ್ತಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದಲೂ ಕೆಲಸ ನಡೆಯುತ್ತಿದೆ. ಆದರೆ, ಯಾವ ಕೆಲಸವಾಗುತ್ತಿದೆ, ಯಾರು ಆ ಕೆಲಸವನ್ನು ಮಾಡುತ್ತಿದ್ದಾರೆ ಎಂಬುದರ ಮಾಹಿತಿ ನಮಗೆ ಯಾರಿಗೂ ಗೊತ್ತಿಲ್ಲ. 'ಅಮೃತ್' ಯೋಜನೆಯಡಿಯಲ್ಲಿ ನೀರು ಸರಬರಾಜು, UGD, ಉದ್ಯಾನವನ ಅಭಿವೃದ್ಧಿ, ಮಳೆಗಾಲ ಚರಂಡಿ ಅಂದರೆ ರಾಜ ಕಾಲುವೆ ಇವೆಲ್ಲಾ

ಕೆಲಸವೂ ಒಟ್ಟಿಗೆ ಆಗುತ್ತಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಸ್ಮಾರ್ಟ್ ಸಿಟಿಯ ಕೆಲಸ ಎಲ್ಲಿ ಆಗುತ್ತಿದೆ ಎಂದರೆ, ಅಶೋಕ ಸರ್ಕಲ್ ಬಸ್ ಸ್ಟ್ಯಾಂಡ್‌ನಿಂದ ಅಲ್ಕೋಳ ಸರ್ಕಲ್‌ನವರೆಗೂ ರಾಷ್ಟ್ರೀಯ ಹೆದ್ದಾರಿಯವರು ಮಾಡುತ್ತಿದ್ದಾರೆ. ಇನ್ನೊಂದು ಕಾರ್ಪೊರೇಷನ್‌ನವರು ಮಾಡುತ್ತಿದ್ದಾರೆ, ಮತ್ತೊಂದು ಸ್ಮಾರ್ಟ್ ಸಿಟಿಯವರು ಮಾಡುತ್ತಿದ್ದಾರೆ. ಇದು ಯಾರ ಕೆಲಸ, ಯಾರು ಬಿಲ್ಲು ಏನೆಂಬುದು ಗೊತ್ತಾಗುತ್ತಿಲ್ಲ. ಎಲ್ಲ ಸದಸ್ಯರು ಇದರ ಬಗ್ಗೆ ಗೊಂದಲದಲ್ಲಿದ್ದಾರೆ. ದಯಮಾಡಿ ಇದಕ್ಕೆ ಸ್ಪಷ್ಟೀಕರಣ ನೀಡಬೇಕು. ಅಧಿಕಾರಿಗಳಂತೂ ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ಯಾರಿಗೂ ಗೊತ್ತಾಗದ ರೀತಿಯಲ್ಲಿ ಮಾಡುತ್ತಿರುವುದರಿಂದ ದಯವಿಟ್ಟು ನಗರಾಭಿವೃದ್ಧಿ ಸಚಿವರು ಉತ್ತರ ನೀಡಬೇಕು.

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆ ಎತ್ತಿದ್ದಾರೆ. ಶಿವಮೊಗ್ಗ ಮಹಾನಗರ ಪಾಲಿಕೆ ವತಿಯಿಂದ ಅಮೃತ್ ಯೋಜನೆಯಡಿಯಲ್ಲಿ ಇವತ್ತು ರೂ.180.83 ಕೋಟಿಗಳ ವೆಚ್ಚದಲ್ಲಿ ಕಾಮಗಾರಿ ಕೆಲಸವನ್ನು ಶಿವಮೊಗ್ಗ ಮಹಾನಗರ ಪಾಲಿಕೆಯವರೇ ಇದರ ನಿರ್ವಹಣೆ ಮಾಡುತ್ತಿದ್ದಾರೆ. ಆದಾದ ನಂತರ ಸ್ಮಾರ್ಟ್ ಸಿಟಿಯನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಎಂಬ ಮಾಹಿತಿಯನ್ನು ಮಾನ್ಯ ಸದಸ್ಯರು ನನ್ನಿಂದ ಬಯಸಿದ್ದಾರೆ. ಸ್ಮಾರ್ಟ್ ಸಿಟಿಗೆ ಪ್ರತ್ಯೇಕವಾಗಿ ಒಬ್ಬರು ವ್ಯವಸ್ಥಾಪಕ ನಿರ್ದೇಶಕರನ್ನು ಆಯೋಜನೆ ಮಾಡಿದ್ದು, ಅವರು ಅದರ ಮೇಲ್ವಿಚಾರಣೆ (Supervision) ಮಾಡುತ್ತಿದ್ದಾರೆ. ಸ್ಮಾರ್ಟ್ ಸಿಟಿಯೇ ಬೇರೆ, ಅಮೃತ್ ಯೋಜನೆ ಬೇರೆ ಮತ್ತು ಕೆಯುಡಬ್ಲ್ಯೂಎಸ್‌ಎಸ್‌ಬಿ ಕೆಲಸವೇ ಬೇರೆ. ಇವು ಮೂರು ವಿಭಾಗಗಳಾಗಿದ್ದು, ಇವತ್ತು ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಜೊತೆಗೆ ಮಹಾನಗರ ಪಾಲಿಕೆಯ ಸದಸ್ಯರು ಹಾಗೂ ಪೂಜ್ಯ ಮಹಾಪೌರರು ಸಹ ಬಂದಿದ್ದರು. ಈಗಾಗಲೇ ಅವರುಗಳ ಜೊತೆ ಚರ್ಚೆ ಮಾಡಿ 9ನೇ ತಾರೀಖಿನಂದು ಶಿವಮೊಗ್ಗ ನಗರಕ್ಕೆ ಭೇಟಿ ನೀಡುತ್ತಿದ್ದೇನೆ. ಅಲ್ಲಿನ ಆಗು-ಹೋಗುಗಳು ಏನು, ಅಲ್ಲಿ ಏನೇನು ಸಮಸ್ಯೆಗಳಿವೆ ಎಂಬುದರ ಬಗ್ಗೆ ತಿಳಿದುಕೊಂಡು, ಮಾನ್ಯ ಆಯನೂರು ಮಂಜುನಾಥ್‌ರವರನ್ನು ಮತ್ತು ಮಾನ್ಯ ಆರ್.ಪ್ರಸನ್ನ ಕುಮಾರ್‌ರವರು ಇಬ್ಬರನ್ನೂ ಒಳಗೊಂಡಂತೆ ಸಭೆಯಲ್ಲಿ ಕೂರಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ಅಲ್ಲಿನ ಸಾಧಕ-ಬಾಧಕಗಳೇನು, ಸಮಸ್ಯೆಗಳೇನು, ಯಾರ್‍ಯಾರು ಯಾವ್ಯಾವ ಕೆಲಸವನ್ನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಚರ್ಚೆ ಮಾಡಿ ಸಂಪೂರ್ಣ ವಿವರಗಳನ್ನು ತೆಗೆದುಕೊಂಡು ನಾನು ಅವರಿಗೆ ಮಾಹಿತಿ ಒದಗಿಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾವ್ಯಾವ ಕಾಮಗಾರಿ ನಡೆಯುತ್ತಿದೆ, ಆ ಕಾಮಗಾರಿಯ ಅಂದಾಜು ವೆಚ್ಚ ಇತ್ಯಾದಿ ಮಾಹಿತಿಗಳನ್ನೊಳಗೊಂಡ ಫಲಕಗಳನ್ನು ಎಲ್ಲಾ ಕಡೆಯು ನೋಡುತ್ತೇವೆ. ಆ ರೀತಿ ಬೋರ್ಡ್ ಹಾಕದಿದ್ದರೆ, 'ಅಮೃತ್' ಯೋಜನೆಯಡಿ ನಡೆಯುತ್ತಿರುವ ಕಾಮಗಾರಿ ಯಾವುದು ಎಂಬುದು ನಮಗೆ ಹೇಗೆ ಗೊತ್ತಾಗುತ್ತದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಸದಸ್ಯರು ಹೇಳಿರುವ ಬಗ್ಗೆ ಅಧಿಕಾರಿಗಳಿಗೆ ಖಂಡಿತವಾಗಿಯೂ ಸೂಚನೆ ನೀಡಿ,ಅದಕ್ಕೂ ವ್ಯವಸ್ಥೆ ಮಾಡಿಸುತ್ತೇನೆ. ಈಗ ಸ್ಮಾರ್ಟ್ ಸಿಟಿ ಕಾಮಗಾರಿ 7 ಕಡೆ ಮಾತ್ರ ನಡೆಯುತ್ತಿದೆ. ಬೇರೆ ಎಲ್ಲಿಯೂ ನಡೆಯುತ್ತಿಲ್ಲ. 7 ಸ್ಮಾರ್ಟ್ ಸಿಟಿಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಕೈಗೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಪ್ರತ್ಯೇಕವಾದ ಬೋರ್ಡ್‌ಗಳನ್ನು ಅಳವಡಿಸಿ, 'ಈ ಕಾಮಗಾರಿಯು ಸ್ಮಾರ್ಟ್ ಸಿಟಿ' ವತಿಯಿಂದ ನಡೆಯುತ್ತಿದೆ. ಈ ಕಾಮಗಾರಿ KUWSDB ವತಿಯಿಂದ ನಡೆಯುತ್ತಿದೆ ಎಂದು ಪ್ರತ್ಯೇಕವಾಗಿ ನಾಮಫಲಕವನ್ನು ಹಾಕಿಸುವಂಥ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಸ್ಮಾರ್ಟ್ ಸಿಟಿ ಕಾಮಗಾರಿಗೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಯುಕ್ತರು ಎಲ್ಲವೂ ಒಬ್ಬರೇ ಆಗಿದ್ದಾರೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, 'ಸ್ಮಾರ್ಟ್ ಸಿಟಿ' ಕೆಲಸವೇನು ನಡೆಯುತ್ತಿದೆ, ಅದಕ್ಕೆ Councillors ಸಂಬಂಧಪಟ್ಟ ಶಾಸಕರ involvement ಇಲ್ಲವೇ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಎಲ್ಲಾ ಜನಪ್ರತಿನಿಧಿಗಳು, ಅಲ್ಲಿನ ಮಹಾನಗರ ಪಾಲಿಕೆಯ ಸದಸ್ಯರು, ಎಲ್ಲರೂ ಒಳಪಡುತ್ತಾರೆ. ಎಲ್ಲರಿಗೂ ಈ ಕೆಲಸದ ಬಗ್ಗೆ ಕೇಳುವ ಹಕ್ಕಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1143**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ತುಂಬಾ ವಿವರವಾಗಿ ಒದಗಿಸಿದ್ದಾರೆ. ಆದರೆ, ನನ್ನ ಮನವಿಯೇನೆಂದರೆ, ಮಡಿಕೇರಿ ನಗರಕ್ಕೆ ದೇಶ ವಿದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಅವರು ಬರುವಂಥ ಸಂದರ್ಭದಲ್ಲಿ ರಾಜಾಸೀಟ್‌ಗೆ ಭೇಟಿ ನೀಡುತ್ತಾರೆ. ಅಲ್ಲಿಗೆ ಭೇಟಿ ನೀಡಿದ ತಕ್ಷಣ ಪುಟಾಣಿ ರೈಲಿನಲ್ಲಿ ಪ್ರಯಾಣ ಮಾಡುತ್ತಾರೆ. ಈ ರೀತಿ ಮಕ್ಕಳು ಸಂತೋಷ ಪಡೆದುಕೊಳ್ಳುವಂತಹ ಸಂದರ್ಭದಲ್ಲಿ ಪುಟಾಣಿ ರೈಲು ಸ್ಥಗಿತಗೊಂಡು 2 ವರ್ಷಗಳಾಗಿರುತ್ತವೆ. ಆದಷ್ಟು ಬೇಗ ಅದನ್ನು ಸರಿಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಜೊತೆಗೆ ಸರ್ಕಾರದಲ್ಲಿ ಅನುದಾನವಿಲ್ಲದಿದ್ದರೆ,ಖಾಸಗಿಯವರ ಜೊತೆ ಸೇರಿ ಖಾಸಗಿ ಸಹಭಾಗಿತ್ವದಲ್ಲಿಯಾದರೂ ಈ ಸಮಸ್ಯೆಯನ್ನು ಬಗೆಹರಿಸಿ, ಆ ಪುಟಾಣಿ ರೈಲನ್ನು ದುರಸ್ತಿಪಡಿಸಿ ಮರುಚಾಲನೆಗೊಳಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ಕಳೆದ 5 ತಿಂಗಳಿನಿಂದ ಈ ಮಕ್ಕಳ ರೈಲು ಸಂಚಾರ ಸ್ಥಗಿತಗೊಂಡಿದೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆ ಭಾಗದ ಶಾಸಕನಾಗಿದ್ದೇನೆ. ಮಾನ್ಯ ಸುನೀಲ್ ಸುಬ್ರಮಣಿಯ್ಯವರೇ, ಮಾನ್ಯ ಸಚಿವರು 5 ತಿಂಗಳಿನಿಂದ ಎಂದು ಹೇಳುತ್ತಿದ್ದಾರೆ. ಕಳೆದ ಸುಮಾರು 2 ವರ್ಷಗಳಿಂದ ಆ ಪುಟಾಣಿ ರೈಲು ಸಂಚಾರ ಸ್ಥಗಿತಗೊಂಡಿದೆ ಎಂಬುದನ್ನು ಮಾನ್ಯ ಸಚಿವರಿಗೆ ತಾವು ಸ್ಪಷ್ಟವಾಗಿ ತಿಳಿಸಿ ಹೇಳಿ.

ಮುಂದು) . . .

(495)17.03.2020/3.50/ಎಸ್‌ಕೆ-ಬಿಎನ್‌ಎಸ್

**ಶ್ರೀ ಕೆ.ಸಿ.ನಾರಾಯಣ ಗೌಡ (ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಐದು ತಿಂಗಳ ಹಿಂದೆ ನಮ್ಮ ಮೈಸೂರಿನ ರೈಲ್ವೆ ಇಲಾಖೆ ವಿಭಾಗದವರು ಇದು ಹಳೆ ಟ್ರೈನ್‌ನ್ನು ಚೆಕ್ ಮಾಡಿದಾಗ, ಇದು ಓಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಹೊಸ ಇಂಜಿನ್ ಕೊಡಬೇಕೆಂದು ಹೇಳಿ, ಒಂದು ವರದಿಯನ್ನು ಕೊಟ್ಟಿದ್ದಾರೆ. ಅದಕ್ಕೆ ನಿಮ್ಮ ಭಾಗದೆಲ್ಲಾ ಸದಸ್ಯರ ಜೊತೆ ಸೇರಿ ಇದನ್ನು ಶೀಘ್ರದಲ್ಲಿ ಚರ್ಚೆ ಮಾಡುತ್ತೇನೆ. ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನಾವು ಅನುಕೂಲ ಪಡೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ತುರ್ತಾಗಿ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಜಯಮಾಲಾ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ಪುಟಾಣಿ ರೈಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಬರುತ್ತದೆ. ಆದ್ದರಿಂದ ಬಾಲಭವನವು ಇದನ್ನು ನಿರ್ವಹಣೆ ಮಾಡುತ್ತದೆ.

**ಸಭಾಪತಿಯವರು:–** ಅದರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸುನೀಲ್ ಸುಬ್ರಮಣಿಯವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಆಡಳಿತ ಪಕ್ಷದ ಸದಸ್ಯರಿದ್ದಾರೆ. ಅವರು ನಾಚಿಕೊಳ್ಳುತ್ತಾರೆಂಬುದು ಕಾಣುತ್ತದೆ. ಮಾನ್ಯ ಸಭಾಪತಿಯವರೇ, ಆ ಪುಟಾಣಿ ರೈಲು ಮಾಡಿರುವುದು ಒಳ್ಳೆಯ ಕೆಲಸ. ಇದರಲ್ಲಿ ಪ್ರವಾಸಿಗರ ಕ್ಯೂ ಇರುತ್ತದೆ. Almost all tourists ಅಲ್ಲಿಗೆ ಹೋಗಿಯೇ ಹೋಗುವುದು. ಅದರ ಜೊತೆಗೆ income ಕೂಡ ಇದೆ.

**ಸಭಾಪತಿಯವರು:–** ಇದರ ಬಗ್ಗೆ ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಇಬ್ಬರು ಮಂತ್ರಿಗಳು ಸದನದಲ್ಲಿರುವುದರಿಂದ ಉತ್ತರ ನಂತರ ಕಳುಹಿಸಲಿ. ಮಾನ್ಯ ನಗರಾಭಿವೃದ್ಧಿ ಸಚಿವರು ಮತ್ತು ಶಿಕ್ಷಣ ಸಚಿವರು ಇವರಿಬ್ಬರೂ ಸದನದಲ್ಲಿರುವುದರಿಂದ ನಾನು ಒಂದು ಮಾತನ್ನು ಹೇಳಿಬಿಡುತ್ತೇನೆ. ಮಾನ್ಯ ನಾರಾಯಣಸ್ವಾಮಿಯವರು ಪ್ರಶ್ನೆಯನ್ನು ಕೇಳಿದ್ದಾರೆ. ಬಿಜಾಪುರ ಜಿಲ್ಲೆಯ ಗಾಂಧಿ ಸರ್ಕಲ್‌ನಲ್ಲಿ (heart of the city) ಸರ್ಕಾರಿ ಶಾಲೆಯಿದೆ. ಆ ಶಾಲೆಯಿರುವ ಸ್ಥಳದಲ್ಲಿ ಕಾರ್ಪೋರೇಷನ್‌ರವರು ಅನಧಿಕೃತವಾಗಿ ಕಟ್ಟಡವನ್ನು ಕಟ್ಟುತ್ತಿದ್ದಾರೆಂದು ಮುಖ್ಯೋಪಾಧ್ಯಾಯರನ್ನು ಸಸ್ಪೆಂಡ್ ಮಾಡಿದ್ದಾರೆ. ಕಟ್ಟಡವನ್ನು ಕಟ್ಟುತ್ತಿರುವವರು ಯಾರೆಂದರೆ ಕಾರ್ಪೋರೇಷನ್‌ರವರು. ಕಾರ್ಪೋರೇಷನ್‌ರವರು ಅನಧಿಕೃತವಾಗಿ ಸಾಕಷ್ಟು ಕೋಟಿ ರೂಪಾಯಿಗಳನ್ನು ಹಾಕಿ, ಅಲ್ಲಿ ಕಾಂಪ್ಲೆಕ್ಸ್ ಕಟ್ಟಿ ಅದನ್ನು ಹಂಚುವ ಹುನ್ನಾರ ಮಾಡುತ್ತಿದೆ. ಇದಕ್ಕೆ enquiry ಮಾಡಬೇಕು ಮತ್ತು ಅಗತ್ಯ ಬಿದ್ದರೆ ಆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಚಿವರಿಬ್ಬರಿಗೂ ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ ರಾಥೋಡ್ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಅರುಣ ಶಹಾಪುರ ಅವರೇ ವಿಜಯಪುರ ನೀವು ಕೇಳಿರುವ ಪ್ರಶ್ನೆಗೆ ನಾನು ಉತ್ತರ ಕೊಡುತ್ತೇನೆ.

**ಸಭಾಪತಿಯವರು:–** ಇದಕ್ಕೆ ಕಾಲಾವಕಾಶ ಕೇಳಿದ್ದಾರೆ ಇದರ ಬಗ್ಗೆ ಚರ್ಚೆ ಮಾಡಿದರೆ ಹೇಗೆ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಗಂಭೀರವಾದಂತಹ ವಿಷಯವಾಗಿದೆ.

**ಸಭಾಪತಿಯವರು:–** ಇದು ಗಂಭೀರ ಇದ್ದರೂ, ಮಾನ್ಯ ಸಚಿವರು ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದಾರಲ್ಲ.

**ಶ್ರೀ ಬಿ.ಎ. ಬಸವರಾಜ (ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಉತ್ತರ ಹೇಳಬೇಕೋ ಅಥವಾ ಶಿಕ್ಷಣ ಸಚಿವರು ಉತ್ತರ ಹೇಳಬೇಕೆಂಬುದರ ಬಗ್ಗೆ ಗೊಂದಲ ಉಂಟಾಗಿರುವುದರಿಂದ ನಾನು ಇದಕ್ಕೆ ಕಾಲಾವಕಾಶವನ್ನು ಕೇಳಿದ್ದೇವೆ. ತದನಂತರ ಇದಕ್ಕೆ ಉತ್ತರವನ್ನು ಖಂಡಿತವಾಗಿ ಒದಗಿಸುತ್ತೇವೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಮಗೆ confusion ಆದರೆ ಮತ್ತೆ ಯಾರು ಸರಿ ಮಾಡುವುದು?

**ಶ್ರೀ ಬಿ.ಎ. ಬಸವರಾಜ (ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆ ಇರುವುದರಿಂದ ಹಾಗಾಗಿ confusion ಆಗಿದೆ. ಅಷ್ಟು ಬಿಟ್ಟರೆ ಬೇರೆ ಯಾವುದೂ ಇಲ್ಲ. ಅದಕ್ಕೆ ನಾನು ಕಾಲಾವಕಾಶವನ್ನು ಕೇಳಿದ್ದೇವೆ. ಇದಕ್ಕೆ ಖಂಡಿತವಾಗಿಯೂ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ…

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ರವಿಯವರೇ ಒಂದೇ ಒಂದು ನಿಮಿಷ.ಮಾನ್ಯ ಸಭಾಪತಿಯವರೇ ಒಂದು ನಿಮಿಷ. ಈ ವಿಷಯ ಎಷ್ಟು ಗಂಭೀರವಾಗಿದೆ ಎಂದರೆ, ಈಗ ಇಷ್ಟೊಂದು ದಾಖಲೆಗಳನ್ನು ಕಲೆಕ್ಟ್ ಮಾಡಿದ್ದೇವೆ. ಒಂದು ಕಾರ್ಪೋರೇಷನ್ ಸ್ಕೂಲ್ ಹತ್ತಿರ ನಮ್ಮ ನಗರಪಾಲಿಕೆಯವರು ಬಂದು ಈ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದಕ್ಕೆ ಯಾರು ಅನುಮತಿಯನ್ನು ಕೊಟ್ಟಿದ್ದಾರೆಂಬುದರ ಬಗ್ಗೆ ಗೊತ್ತಿಲ್ಲ. ಶಾಲೆ ಇರುವಂತಹ ಜಾಗದಲ್ಲಿ ಈ ಒಂದು ಕಾಂಪ್ಲೆಕ್ಸ್‌ಗಳನ್ನು ಕಟ್ಟಿ, ಬಾಡಿಗೆಗೆ ಕೊಟ್ಟು…

**ಸಭಾಪತಿಯವರು:–** ಕಾಲಾವಕಾಶವನ್ನು ಕೊಟ್ಟಿದ್ದೇವೆ ಇದಕ್ಕೆ ತಾವು ಚರ್ಚೆ ಮಾಡುತ್ತಿದ್ದೀರಾ?

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಾಲಾವಕಾಶವನ್ನು ಕೇಳುತ್ತಿದ್ದಾರೆ. ಈ ಸದನದಲ್ಲಿರುವ ಇಬ್ಬರು ಸಚಿವರಿಗೂ ಕೇಳುತ್ತಿದ್ದೇವೆ. ಇದು ಬಾಡಿಗೆ ಬರುತ್ತಿದೆ. ಈ ಬಾಡಿಗೆ ಬಂದಂತಹ ಹಣವನ್ನು ಶಾಲೆಗೆ ಉಪಯೋಗಿಸುವುದಕ್ಕಾಗಿಲ್ಲ. ಆ ಹಣ ಯಾರು ತೆಗೆದುಕೊಳ್ಳುತ್ತಿದ್ದಾರೆ? ಇದಕ್ಕೆ ಯಾರು ಅನುಮತಿ ಕೊಟ್ಟಿದ್ದಾರೆ? ನಾವು ಇದರ ಬಗ್ಗೆ ಆರ್.ಟಿ.ಐ.ನಲ್ಲಿ ಹಾಕಿ, ಮಾಹಿತಿಯನ್ನು ಕೇಳಿದರೆ, ಆರ್.ಟಿ.ಐ.ನಲ್ಲಿ ಇದನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಹಾಗಾದರೆ, ಇದಕ್ಕೆ ಏನು ಮಾಡಬೇಕು? ಅದಕ್ಕೋಸ್ಕರವಾಗಿ ಯಾವುದೇ ತಪ್ಪು ಮಾಡದೇ ಇರುವಂತಹ ಆ ಶಾಲೆಯ ಮುಖ್ಯೋಪಾಧ್ಯಾಯರನ್ನು ಸಸ್ಪೆಂಡ್ ಮಾಡಿದ್ದಾರೆ.

ತಿದ್ದುಪಡಿಯಾಗದ ಪ್ರತಿ–ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ಗಂಭೀರವಾಗಿದೆ. ದಯವಿಟ್ಟು, ಮಾನ್ಯ ಸಚಿವರಿಬ್ಬರೂ ಕೂಡ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು.

**ಸಭಾಪತಿಯವರು:-** ಮಾನ್ಯ ಎಸ್.ರವಿಯವರೇ ತಮ್ಮ ಪ್ರಶ್ನೆ ಸಂಖ್ಯೆ 1139 ತಮಗೂ ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಬಹಳ ಸರಳವಾಗಿದೆ. ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿನ ಇ-ಸ್ವತ್ತುಗಳ ಖಾತೆಗಳಿಗೆ ಸಲ್ಲಿಕೆಯಾದ ಅರ್ಜಿಗಳು ಎಷ್ಟು? ವಿಲೇವಾರಿಯಾದ ಅರ್ಜಿಗಳು, ತಿರಸ್ಕೃತ ಅರ್ಜಿಗಳು ಹಾಗೂ ಬಾಕಿ ಉಳಿದಿರುವ ಅರ್ಜಿಗಳು ಎಷ್ಟು; ಅರ್ಜಿಗಳನ್ನು ತಿರಸ್ಕರಿಸಲು ಕಾರಣವೇನು? ಇದರಲ್ಲಿ ಇರತಕ್ಕಂತಹ ನಿಯಮಗಳು ಎಷ್ಟು? ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಏಕೆ ಕಾಲಾವಕಾಶ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇರುವಂತಹ ನಿಯಮಾವಳಿಯನ್ನು ಕೊಡುವುದಕ್ಕೆ ಕಾಲಾವಕಾಶ ಏಕೆ ತೆಗೆದುಕೊಳ್ಳುತ್ತಿದ್ದಾರೆಂಬುದು ಅರ್ಥವಾಗುತ್ತಿಲ್ಲ. ತಾವೇ ದಯಮಾಡಿ ಮಾನ್ಯ ಸದಸ್ಯರ ರಕ್ಷಣೆಗೆ ಬರಬೇಕು. ಇದಕ್ಕೆ ಕಾಲಾವಕಾಶ ಕೊಡಿ ಎಂದು ಮಾನ್ಯ ಸಚಿವರು ಕೇಳುತ್ತಾ ಕುಳಿತುಕೊಂಡು ಬಿಟ್ಟರೆ, ಹೇಗೆಇದು? ಸಾರ್ವಜನಿಕರ ದೈನಂದಿನ ಕೆಲಸವಿದು. ಇ-ಸ್ವತ್ತು ಕೊಡುವುದರ ಬಗ್ಗೆ ಚುರುಕಾಗಲಿ ಎನ್ನುವ ಉದ್ದೇಶದಿಂದ ನಾವು ಪ್ರಶ್ನೆ ಕೇಳಿರುವಂತಹದ್ದು. ಇ-ಸ್ವತ್ತು ಬಗ್ಗೆ ಸರಳೀಕರಣಗೊಳಿಸಿ, ಜನರಿಗೆ ತುರ್ತಾಗಿ ಸೇವೆ ಸಿಗಲಿ. ಇದರಲ್ಲಿ ಏನು ಅಡ್ಡಿ-ಆತಂಕಗಳಿವೆ ಎಂಬುದರ ಬಗ್ಗೆ ಹೇಳಿ, ಈ ಪ್ರಶ್ನೋತ್ತರವನ್ನು ಉಪಯೋಗ ಮಾಡಿಕೊಂಡು, ಜನರಿಗೆ ಸೇವೆ ಮಾಡುವುದಕ್ಕೆ ಅನುಕೂಲವಾಗಲೀ ನೀವು ನಮ್ಮ ರಕ್ಷಣೆಗೆ ಬರಬೇಕು. ಯಾರು ಇದಕ್ಕೆ ರಕ್ಷಣೆ ಬರಬೇಕು?

**ಸಭಾಪತಿಯವರು:-** ಮಾನು ಸಚಿವರೇ ಮಾತನಾಡಿ. ಇದಕ್ಕೆ ಕಾಲಾವಕಾಶ ಏತಕ್ಕೆ ಬೇಕು ಎಂದು ಹೇಳಿ.

**ಶ್ರೀ ಕೆ.ಸಿ.ನಾರಾಯಣ ಗೌಡ (ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಪ್ರತಿಯೊಂದು ಮಾಹಿತಿಯನ್ನು ತೆಗೆದುಕೊಂಡು, ತಮಗೆ ಶೀಘ್ರದಲ್ಲಿ ಉತ್ತರವನ್ನು ಕೊಡುತ್ತೇನೆ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಗೆ ಸಂಬಂದಿಸಿದ್ದಲ್ಲ. ಇದು ಪೌರಾಡಳಿತ ಇಲಾಖೆಗೆ ಕೇಳಿದ್ದೇನೆ. ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯನ್ನಷ್ಟೇ ಕೇಳಿದ್ದೇನೆ. ಅದಕ್ಕೆ ಇ-ಸ್ವತ್ತು ಬಗ್ಗೆ ಕೇಳಿದ್ದೇನೆ. Form 9 and Form 11 ಬಗ್ಗೆ ನಾನು ಕೇಳಿಲ್ಲ. ...

**ಶ್ರೀ ಎಸ್. ರವಿ:-** ಮಾನ್ಯ ಸಚಿವರು ನಿರ್ದಿಷ್ಟವಾಗಿ ಹೇಳಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಸಿ.ನಾರಾಯಣ ಗೌಡ (ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು):-** ಇದಕ್ಕೆಹತ್ತು ದಿನಗಳ ಕಾಲಾವಕಾಶವನ್ನು ನಮ್ಮ ಅಧಿಕಾರಿಗಳು ಕೇಳಿಕೊಂಡಿದ್ದಾರೆ. ನಾನು ಅತಿ ಶೀಘ್ರದಲ್ಲಿ ತರಿಸಿ ತಮಗೆ ಉತ್ತರವನ್ನು ಕೊಟ್ಟು ಇದರ ಬಗ್ಗೆ ಚರ್ಚೆ ಮಾಡಲು ಬಯಸುತ್ತೇನೆ.

**ಸಭಾಪತಿಯವರು:-**ಮಾನ್ಯ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಮಾನ್ಯ ಪಾಟೀಲ್ ಪುಟ್ಟಪ್ಪನವರ ಅಂತ್ಯಕ್ರಿಯೆಗೆ ಭಾಗವಹಿಸುವ ಹಿನ್ನೆಲೆಯಲ್ಲಿ, ಮಾನ್ಯ ಕೆ.ಎ. ತಿಪ್ಪೇಸ್ವಾಮಿಯವರ ಪ್ರಶ್ನೆ ಸಂಖ್ಯೆ 1280 ಮತ್ತು ಮಾನ್ಯ ಎಂ.ಕೆ. ಪ್ರಾಣೇಶ್‌ರವರ ಪ್ರಶ್ನೆ ಸಂಖ್ಯೆ 1162ನ್ನು ದಿನಾಂಕ 24.03.2020 ರಂದು ತಡೆಹಿಡಿಯಲಾದ ಪ್ರಶ್ನೆಗಳನ್ನಾಗಿ ತೆಗೆದುಕೊಳ್ಳಲಾಗುವುದು.

ಮಾನ್ಯ ರಘುನಾಥ್‌ರಾವ್ ಮಲ್ಕಾಪೂರೆಯವರೇ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1261**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇಲಾಖಾಧಿಕಾರಿಗಳು ಸರಿಯಾಗಿ ಉತ್ತರ ಕೊಟ್ಟಿರುವ ಬಗ್ಗೆ ಮೇಲ್ನೋಟಕ್ಕೆ ಎಲ್ಲೋ ಒಂದು ಕಡೆ ಎಡವಿದ್ದಾರೆಂಬುದು ನನ್ನ ಅಭಿಪ್ರಾಯವಾಗಿದೆ. ನಗರೋತ್ಥಾನ ಯೋಜನೆಯನ್ನು 2009-10 ರಲ್ಲಿ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಅನುಷ್ಠಾನಕ್ಕೆ ತಂದರು. ನಗರೋತ್ಥಾನ ಯೋಜನೆಯಲ್ಲಿ ಮೊದಲನೆಯ ಹಂತ 2009-10ರಲ್ಲಿ, ಎರಡನೇ ಹಂತವನ್ನು 2012-13ರಲ್ಲಿ ಮತ್ತು ಮೂರನೇ ಹಂತವನ್ನು 2016-17ರಲ್ಲಿ ಪ್ರಾರಂಭಿಸಲಾಯಿತು. ಆದರೆ ನಾನು ಕೇಳಿರುವ ಪ್ರಶ್ನೆ ಏನೆಂದರೆ, ಬೀದರ್ ನಗರ ಜಿಲ್ಲೆಗೆ ಸೀಮಿತವಾಗಿ ಕೇಳಿದ್ದೇನೆ. 2009-10 ರಲ್ಲಿ ನಗರೋತ್ಥಾನ ಹಂತ-1 ಯೋಜನೆಯಡಿ ಬೀದರ್‌ಗೆ ಒಟ್ಟು ರೂ. 3000.00 ಲಕ್ಷಗಳು ಬಿಡುಗಡೆಯಾಗಿದ್ದು. ಅದರಲ್ಲಿ ಭಾಗಶಃ ಹಣ ಖರ್ಚಾಗಿದೆ. ದಿನಾಂಕ 30.06.2018 ರಲ್ಲಿ ಕಾಮಗಾರಿಯನ್ನು ಪೂರ್ಣಗೊಂಡಿದೆ. ಸುಮಾರು ಎಂಟು ವರ್ಷಗಳ ಕಾಲಾವಧಿಯಾಗಿದೆ. ನಗರೋತ್ಥಾನ ಹಂತ -2 ರಲ್ಲಿ ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಅದು ವಿಳಂಬವಾಗಿದ್ದು ಸುಮಾರು ಮೂರು ವರ್ಷಗಳ ವಿಳಂಬವಾಗಿದೆ. ಇಲಾಖೆಯವರು ಕೊಟ್ಟಿರುವ ಮಾಹಿತಿಯ ಪ್ರಕಾರ ರೂ. 3500.00 ಲಕ್ಷಗಳನ್ನು ನಗರೋತ್ಥಾನ ಹಂತ-3 ರಲ್ಲಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಸುಮಾರು ರೂ. 3500.00 ಲಕ್ಷಗಳ ಹಣದಲ್ಲಿ ಒಟ್ಟು 23ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದಾರೆ. ಇಲಾಖಾಧಿಕಾರಿಯವರು ಕೊಟ್ಟಿರುವ ಮಾಹಿತಿಯ ಪ್ರಕಾರ ಒಟ್ಟು 23 ಕಾಮಗಾರಿಗಳ ಪೈಕಿ ಇದುವರೆಗೆ 9 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 3 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಬಾಕಿ 11 ಕಾಮಗಾರಿಗಳು ಪ್ರಾರಂಭವಾಗಿಲ್ಲ. 2016-17ರಲ್ಲಿ ಈ ಕಾಮಗಾರಿಗಳು ಪ್ರಾರಂಭವಾಗಿದ್ದು. ಈಗಾಗಲೇ 2019-20 ವರ್ಷವೇ ಮುಗಿಯವುದಕ್ಕೆ ಬಂತು. 2021 ನೇ ಇಸವಿ ಪ್ರಾರಂಭವಾಗುತ್ತದೆ. ಮಾನ್ಯ ಸಭಾಪತಿಯವರೇ ನನ್ನ ಕಳಕಳಿ ಏನೆಂದರೆ, ಈ ಮೂರು ನಗರೋತ್ಥಾನ ಯೋಜನೆಗಳು ಸರಿಯಾಗಿ within the time ಅನುಷ್ಠಾನ ಮಾಡದೇ ಸುಮ್ಮನೇ time pass ಮಾಡಿ, ಯಾವ ಕೆಲಸಗಳು ಆಗಬೇಕು. ಇನ್ನೊಂದು ಏನಾಗಿದೆ ಎಂದರೆ, ಈ ನಗರೋತ್ಥಾನ ಹಂತ-3 ರಲ್ಲಿ ಸುಮಾರು ರೂ. 3500.00 ಲಕ್ಷಗಳು ಜೊತೆಯಲ್ಲಿ ವಿಶೇಷ ಅನುದಾನ ಸುಮಾರು 2500.00 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಆದರೆ ಇಲ್ಲಿ ಉಲ್ಲೇಖವಾಗಿಲ್ಲ. ಅದರಲ್ಲಿ ಒಟ್ಟು 16 ಕಾಮಗಾರಿಗಳಿವೆ. ಅದರಲ್ಲಿ ಒಂದು ಕಾಮಗಾರಿಯೂ ಪ್ರಾರಂಭವಾಗಿಲ್ಲ. This is a time bound scheme. Time bound scheme ಎಂದರೆ ಏನು? ಇಡೀ ರಾಜ್ಯಕ್ಕೆ ರೂ. 1500.00 ಲಕ್ಷಗಳು reserve ಇಟ್ಟಿದ್ದರು. ಈ ಕಾಮಗಾರಿ ಪ್ರಾರಂಭವಾಗಿಲ್ಲ. ಇದರ ಬಗ್ಗೆ ಉತ್ತರದಲ್ಲಿ ಉಲ್ಲೇಖ ಮಾಡಿಲ್ಲ. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ತಮ್ಮ ಇಲಾಖಾಧಿಕಾರಿಗಳ ಜೊತೆ ನಮ್ಮ ಬೀದರ್ ಜಿಲ್ಲೆಗೆ ಬನ್ನಿ ಒಂದು ಸಾರಿ. ಇದು

ಸರಿಯಾಗಿ ಅನುಷ್ಠಾನವಾಗುತ್ತಿಲ್ಲ. ಮಾನ್ಯ ಸಚಿವರು ಈ ಜಿಲ್ಲೆಗೆ ಬಂದು, ಈ ಕಾಮಗಾರಿಗೆ ಜೀವ ಕೊಡುವಂತಹ ಪ್ರಯತ್ನ ಮಾಡಿ ಎಂದು ನಾನು ಸಭಾಪತಿಯವರ ಮೂಲಕ ವಿನಂತಿ ಮಾಡುತ್ತೇನೆ.

(ಮುಂದು)

(496) 17.03.2020 6.00 ಟಿಸಿಹೆಚ್-ಬಿಎನ್‌ಎಸ್

**ಶ್ರೀ ಕೆ.ಸಿ.ನಾರಾಯಣಗೌಡ (ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ, ಖಂಡಿತವಾಗಿ ಅವರ ತಾಲ್ಲೂಕಿಗೆ ಹೋಗಿ, ಶೀಘ್ರವಾಗಿ ಇದನ್ನು ಪರಿಶೀಲಿಸಿ ಏನು ತಪ್ಪು ಮಾಹಿತಿಗಳಿವೆ, ಅವುಗಳನ್ನು ಸರಿಪಡಿಸುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಶ್ನೆ ಸಂಖ್ಯೆ.1262
## (ಉತ್ತರ ಲಗತ್ತಿಸಿದೆ)

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಗದಗ್ ಜಿಲ್ಲೆಯಲ್ಲಿರತಕ್ಕಂಥ ಪುರಸಭೆ, ನಗರ ಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಎಷ್ಟು ಜನ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ? ಅಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇವೆಯೆಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ವಿವರವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಇದಕ್ಕೆ ನಾನು ಮೂರು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ 9 ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು ಮಂಜೂರಾಗಿರತಕ್ಕಂಥ ಹುದ್ದೆಗಳು 1276. ಈ 1276 ಹುದ್ದೆಗಳಲ್ಲಿ ಬರೀ 483 ನೌಕರರು ಖಾಯಂ ಆಗಿ ಕೆಲಸ ಮಾಡತ್ತಿದ್ದಾರೆ. ಹೊರಗುತ್ತಿಗೆ/ಗುತ್ತಿಗೆ/ ದಿನಗೂಲಿ ಮೇಲೆ 374 ನೌಕರರು ಕೆಲಸ ಮಾಡುತ್ತಿದ್ದಾರೆ. ಒಟ್ಟು 857 ನೌಕರರು ಕೆಲಸ ಮಾಡುತ್ತಿದ್ದಾರೆ. ಅಂದರೆ, ಇನ್ನೂ 419 ಹುದ್ದೆಗಳು ಖಾಲಿ ಇವೆ. ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಈಗ ಏನು ಹೊರಗುತ್ತಿಗೆ/ಗುತ್ತಿಗೆ/ ದಿನಗೂಲಿ ಮೇಲೆ 374 ನೌಕರರು ಕೆಲಸ ಮಾಡುತ್ತಿದ್ದಾರೆ, ಅವರಿಂದ ನೀವು ಸರಿಯಾಗಿ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಅವರ ಮೇಲೆ ನಿಯಂತ್ರಣ ಇರುವುದಿಲ್ಲ. ಅವರು ಏನಾದರು ತಪ್ಪು ಮಾಡಿದರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಶೇ.60 ರಷ್ಟು ಹುದ್ದೆಗಳು ಖಾಲಿ ಇವೆ. ಶೇ.60 ರಷ್ಟು ಹುದ್ದೆಗಳನ್ನು ಖಾಲಿ ಇಟ್ಟುಕೊಂಡು, ನೀವು ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದ ಯೋಜನೆಗಳನ್ನು ಕೂಡ ಸರಿಯಾಗಿ ಜಾರಿ ಮಾಡುವುದಕ್ಕೆ ಆಗುವುದಿಲ್ಲ. ಅಂದರೆ ಅಭಿವೃದ್ಧಿ ಕುಂಠಿತವಾಗುತ್ತದೆ. ಆ ದಿಸೆಯಲ್ಲಿ ಈ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ಎಂದು ಮಾನ್ಯ ಸಚಿವರು ದಯವಿಟ್ಟು ಉತ್ತರ ಕೊಡಬೇಕು.

**ಶ್ರೀ ಕೆ.ಸಿ.ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುವುದು ನಿಜ. ಏಕೆಂದರೆ, ಎಲ್ಲಾ ಇಲಾಖೆಯಲ್ಲೂ ಹುದ್ದೆಗಳು ತುಂಬಾ ಖಾಲಿ ಇವೆ. ಸದ್ಯದಲ್ಲಿ 995 ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಅನುಮತಿ ಪಡೆದುಕೊಂಡು ಶೀಘ್ರದಲ್ಲಿಯೇ ಭರ್ತಿ ಮಾಡಲು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಶಾಸಕರ ಬಳಿ ಚರ್ಚೆ ಮಾಡಿ, ಅದನ್ನು ಅಲ್ಲೇ ಬಂದು ಸಮಸ್ಯೆ ಬಗೆಹರಿಸುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಎರಡನೆಯದಾಗಿ, ಉಪ ಪ್ರಶ್ನೆ ಇದೆ. ವಿಶೇಷವಾಗಿ ಗಜೇಂದ್ರಗಡ ಪುರಸಭೆಯಲ್ಲಿ 'ಸಿ' ಗ್ರೂಪ್‌ನಲ್ಲಿ 44 ಹುದ್ದೆಗಳಿವೆ. ಈ 44 ಹುದ್ದೆಗಳಲ್ಲಿ ಬರೀ 11 ನೌಕರರು ಮಾತ್ರ ಕೆಲಸ ಮಾಡುತ್ತಿದ್ದಾರೆ. ರೋಣ ಪುರಸಭೆಯಲ್ಲಿ 52 ಹುದ್ದೆಗಳು ಮಂಜೂರಾಗಿವೆ. ಅಲ್ಲಿಯೂ ಕೂಡ ಬರೀ 11 ನೌಕರರು ಕೆಲಸ ಮಾಡುತ್ತಿದ್ದಾರೆ. ಈ ರೀತಿ ಗದಗ್ ಜಿಲ್ಲೆಯ ಪುರಸಭೆಯಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇವೆ. ಅದಕ್ಕೆ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿ ಒತ್ತಾಯ ಮಾಡುವುದೇನೆಂದರೆ, ಕೊನೆಪಕ್ಷ ಯಾವ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯಲ್ಲಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚುವರಿಯಾಗಿ ಸಿಬ್ಬಂದಿಗಳು ಇದ್ದಾರೆ, ಅವರನ್ನು ದಯವಿಟ್ಟು ವರ್ಗಾವಣೆ ಮಾಡಿ, ಸಿಬ್ಬಂದಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೆ.ಸಿ.ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಶೀಘ್ರದಲ್ಲಿಯೇ ಇದನ್ನು ಸರಿಪಡಿಸುತ್ತೇವೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.1232**
**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ಹರೀಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರು ಉತ್ತರವನ್ನು ನೀಡಿದ್ದಾರೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸದಸ್ಯರುಗಳಿಗೆ 5 ವರ್ಷಕ್ಕೊಮ್ಮೆ 'ಭಾರತ ದರ್ಶನ' ಅಧ್ಯಯನ ಪ್ರವಾಸ ಮಾಡಲು ಅವಕಾಶ ಇದೆ. ಅದನ್ನು ಕೂಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಿಧಿಯಿಂದಲೇ ಖರ್ಚು ಮಾಡುತ್ತಾರೆ. ಸರ್ಕಾರದಿಂದ ಏನು ಖರ್ಚು ಮಾಡುವುದಿಲ್ಲ. 5 ವರ್ಷಗಳಿಗೊಮ್ಮೆ ಕೊಡುವಂತಹ ಪ್ರವಾಸದ ಅವಕಾಶವನ್ನು 2015ನೇ ಇಸವಿಯಿಂದ ತಡೆಹಿಡಿಯಲಾಗಿದೆ. ಅವರ 3 ವರ್ಷಗಳ ಶೆ.1ರಷ್ಟು ಮಾತ್ರ ಅಲ್ಲಿ ಖರ್ಚು ಮಾಡುವಂತಹ ಅವಕಾಶ ಇರುತ್ತದೆ. ಗರಿಷ್ಠ 8 ಲಕ್ಷ ರೂಪಾಯಿಗಳು ಖರ್ಚು ಮಾಡಬಹುದಾಗಿರುತ್ತದೆ. ಈ ಒಂದು ಅವಕಾಶ 5 ವರ್ಷಕ್ಕೊಮ್ಮೆ ಸಿಗುವಂಥದ್ದಾಗಿದೆ. ಅವರ 5 ವರ್ಷದ ಅವಧಿ ಏನಿದೆ, ಆ 5 ವರ್ಷದಲ್ಲಿ ಆ ಅವಕಾಶವನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಬಗ್ಗೆ ಅಧ್ಯಯನ ಮಾಡಲು ಅವಕಾಶವಿರುತ್ತದೆ. ಈ ಅವಕಾಶವನ್ನು ಸರ್ಕಾರ ಕಸಿದುಕೊಳ್ಳಬಾರದು. ಅದನ್ನು ಅವರಿಗೆ ಒದಗಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಬರ ಮತ್ತು ಪ್ರವಾಹದ ಕಾರಣದಿಂದಾಗಿ ಅಧ್ಯಯನ ಪ್ರವಾಸ ಕೈಗೊಳ್ಳಲು ಮಂಜೂರಾತಿ ಕೋರಿ ಸಲ್ಲಿಸಿರುವ ಪ್ರಸ್ತಾವನೆಗಳನ್ನು ತಡೆಹಿಡಿಯಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ 2019ರಲ್ಲಿ ಪ್ರವಾಹ ಬಂದದ್ದು. ಆದರೆ ಸರ್ಕಾರ 2015ನೇ ಇಸವಿಯಿಂದಲೇ ಅದಕ್ಕೆ ಅವಕಾಶವನ್ನು ಕೊಡಲಿಲ್ಲ. ಪರಿಸ್ಥಿತಿಗನುಗುಣವಾಗಿ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಬಹುಶಃ ನಿಯಮಾನುಸಾರ ಎಂದು ಹೇಳಿದ್ದು, ಅದರಲ್ಲಿ ನಿಯಮಗಳು ಅನೇಕ ಇವೆ. ಆದರೆ, ಅವಕಾಶ ಇದೆಯೆ ಅಥವಾ ಇಲ್ಲವೆ ಎಂಬುದನ್ನು ಸ್ಪಷ್ಟೀಕರಣ ಕೊಡಬೇಕೆಂದು ಮಾನ್ಯ ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳುತ್ತಿದ್ದೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, 2009ರಲ್ಲಿ ಇದನ್ನು ಜಾರಿಗೆ ತಂದಿದ್ದಾರೆ. ಯಾರು ಚುನಾಯಿತ ಪ್ರತಿನಿಧಿಗಳು ಇದ್ದಾರೆ, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಅವರ team ಭಾರತ ದರ್ಶನ ಅಧ್ಯಯನ ಪ್ರವಾಸ ಮಾಡುವ ಮುಖಾಂತರ, ಇನ್ನೂ ಹೆಚ್ಚಿನ ಕೃಷಿ ಉತ್ಪನ್ನ ಮಾರುಕಟ್ಟೆ ಬಗ್ಗೆ ತಿಳಿದುಕೊಳ್ಳತಕ್ಕಂಥ ಯೋಜನೆಯಾಗಿದೆ. 2009-2015ರವರೆಗೆ ಅನೇಕ ಸಮಿತಿಗಳನ್ನು ಭಾರತ ದರ್ಶನಕ್ಕೆ ಕಳುಹಿಸಿದ್ದಾರೆ. 2015ರಲ್ಲಿ ನೆರೆ ಬಂದ ಕಾರಣದಿಂದ 2015ರಿಂದ ಇದುವರೆಗೂ ಯಾವುದೇ ವಿಧವಾದಂತಹ ಒಂದೇ ಒಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರು ಹಾಗೂ ಅವರ team ಗೆ ಭಾರತ ದರ್ಶನಕ್ಕೆ ಅವಕಾಶ ಕೊಟ್ಟಿಲ್ಲ. ಈಗ ಕೊರೋನಾ ರೋಗ ಇನ್ನಿತರೆ ಸಮಸ್ಯೆಗಳು ಇರುವುದರಿಂದ ಸ್ವಲ್ಪ ತಿಳಿಯಾದ ನಂತರ, ಈ ಭಾರತ ದರ್ಶನವನ್ನು ಮತ್ತೆ ಪುನರಾರಂಭ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಜಿಲ್ಲಾ ಡಿಸಿಸಿ ಬ್ಯಾಂಕ್‌ಗಳು ಅವರು ಕೂಡ ಪ್ರವಾಸ ಮಾಡತಕ್ಕಂಥ ವಿಚಾರದಲ್ಲಿ ಅವರಿಗೂ ಕೂಡ ತಡೆಹಿಡಿಯಲಾಗಿದೆ. ಮೊದಲೆಲ್ಲಾ ಅದಕ್ಕೆ ಅನುಮತಿ ಕೊಟ್ಟಿದ್ದರು. ಮಾನ್ಯ ಸಹಕಾರ ಸಚಿವರಾದ ತಾವು ಕೂಡ ಪ್ರವಾಸ ಮಾಡಿದ್ದೀರಿ. ತಾವು ಬಹಳಷ್ಟು ಜನರನ್ನು ವಿದೇಶಗಳಿಗೆ ಕರೆದುಕೊಂಡು ಹೋಗುವುದರಲ್ಲಿ ತಾವು ಹೆಸರುವಾಸಿಯಾಗಿದ್ದೀರಿ. ನೂರಾರು ಜನರನ್ನು ಕರೆದುಕೊಂಡು ಹೋಗಿ, ವಿದೇಶ ಪ್ರವಾಸ ಮಾಡಿಸಿ, ಅಲ್ಲಿನ ನಡೆ, ನುಡಿ ಮತ್ತು ಅಲ್ಲಿ ಇರತಕ್ಕಂಥ ಆಚಾರ–ವಿಚಾರಗಳನ್ನು ಪರಿಚಯ ಮಾಡಿಸಿದ್ದೀರಿ. ಇದು ಕೂಡ ಪೆಂಡಿಂಗ್ ಆಗಿದೆ. ಅದಕ್ಕೂ ಕೂಡ ತಮ್ಮ ಕಾಲಾವಧಿಯಲ್ಲಿಯೇ ಆಗಬೇಕು. ಈ ಕೊರೋನಾ ರೋಗ ಹರಡುತ್ತಿರುವುದು ನಿಂತ ನಂತರ ಮಾಡಿಕೊಡಿ. ಈಗ ಯಾರು ಕೂಡ ಪ್ರವಾಸ ಕೈಗೊಳ್ಳುವುದಿಲ್ಲ. ಈಗ ಚುನಾವಣಾ ಸಮಯವಾಗಿದೆ.

(ಗೊಂದಲ)

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ನಾನು ಮೂಲ ಸಹಕಾರಿಯಾದ್ದರಿಂದ 5 ವರ್ಷಗಳಲ್ಲಿ 2–3 ಬಾರಿ ಭಾರತ ದರ್ಶನ ಕೈಗೊಳ್ಳತಕ್ಕಂಥ ಪ್ರವಾಸ ಇತ್ತು. ಹಿಂದಿನ ಸಹಕಾರ ಸಚಿವರಾದ ಮಾನ್ಯ ಮಹದೇವ ಪ್ರಸಾದ್‌ರವರು ಅದನ್ನು ರದ್ದುಗೊಳಿಸಿದ್ದಾರೆ. 5 ವರ್ಷಕ್ಕೆ ಒಂದು ಬಾರಿ ಯಾವ್ಯಾವ ಬ್ಯಾಂಕ್‌ಗಳು ಮತ್ತು ಸಂಸ್ಥೆಗಳು ಲಾಭದಾಯಕದಲ್ಲಿವೆ, ಅವು ಪ್ರವಾಸ ಕೈಗೊಳ್ಳಬೇಕು ಎನ್ನತಕ್ಕಂಥ ನಿಯಮ ಮುಂಚಿನಿಂದಲೂ ಇದೆ. ಕಾರಣಾಂತರಗಳಿಂದ ಅದನ್ನು ನಿಲ್ಲಿಸಿದ್ದಾರೆ. ನಾನು ಕೂಡ ಮೂಲತಃ ಸಹಕಾರಿಯಾದ್ದರಿಂದ, ಯಾವ್ಯಾವ ಸಹಕಾರಿ ಸಂಸ್ಥೆಗಳು ಲಾಭದಲ್ಲಿವೆ, ವಿದೇಶ ಪ್ರವಾಸ ಕೈಗೊಳ್ಳುತ್ತಾರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ನಡೆಸಿ, ಪ್ರವಾಸ ಕೈಗೊಳ್ಳುವುದಕ್ಕೆ permission ಕೊಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1124**
**(ಉತ್ತರ ಲಗತ್ತಿಸಿದೆ)**

**ಡಾ॥ ಜಯಮಾಲ:-** ಮಾನ್ಯ ಸಭಾಪತಿಯವರೇ, ಪೋಷಣ ಅಭಿಯಾನ ಯೋಜನೆ ಚಾಲನೆಗೆ ಬಂದಿರತಕ್ಕಂಥ ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಹಂತ ಹಂತವಾಗಿ ಪೋಷಣಾ ಅಭಿಯಾನವನ್ನು 30 ಜಿಲ್ಲೆಗಳಿಗೂ ವಿಸ್ತರಿಸಲಾಗುವುದೆಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಯೋಜನೆಯ ಪ್ರಯೋಜನವೇನು ಎನ್ನುವುದರ ಬಗ್ಗೆ ಕೂಡ ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಮಕ್ಕಳಲ್ಲಿನ ಕುಂಠಿತ ಬೆಳವಣಿಗೆಯನ್ನು ಕಡಿಮೆಗೊಳಿಸುವುದು, ಮಕ್ಕಳಲ್ಲಿನ ಅಪೌಷ್ಠಿಕತೆಯನ್ನು (ಕಡಿಮೆ ತೂಕದ ಸರಾಸರಿ ಪ್ರಮಾಣ) ಕಡಿಮೆಗೊಳಿಸುವುದು, ಮಕ್ಕಳಲ್ಲಿನ ರಕ್ತ ಹೀನತೆಯ ಪ್ರಮಾಣ ಕಡಿಮೆಗೊಳಿಸುವುದು, ಮಹಿಳೆಯರು ಮತ್ತು ಹದಿಹರೆಯದ ಹೆಣ್ಣು ಮಕ್ಕಳಲ್ಲಿ ರಕ್ತಹೀನತೆಯ ಪ್ರಮಾಣವನ್ನು ಕಡಿಮೆಗೊಳಿಸುವುದು ಮತ್ತು ಕಡಿಮೆ ತೂಕದ ಜನನಗಳ ಪ್ರಮಾಣವನ್ನು ಕಡಿಮೆಗೊಳಿಸುವುದು ಎನ್ನುವುದರ ಬಗ್ಗೆ ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಾವು ಹುದ್ದೆಗಳನ್ನು ಸೃಜಿಸುವುದಕ್ಕೆ ಒಪ್ಪಂದದ ಆಧಾರದ ಮೇಲೆ ಅರ್ಜಿ ಕರೆದು ಭರ್ತಿ ಮಾಡಲಾಗಿದೆಯೇ ಎನ್ನುವುದು. Master Trainers ತರಬೇತಿಯನ್ನು ನೀವು 30 ಜಿಲ್ಲೆಗಳಿಗೂ ನೀಡಿದ್ದೀರಾ? ಇನ್ನು ಸಮುದಾಯ ಆಧಾರಿತ ಚಟುವಟಿಕೆಗಳನ್ನು ಪ್ರತಿ ತಿಂಗಳು ಕೂಡ ನಡೆಸಬೇಕಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಇರುವುದರಿಂದ ಇವುಗಳನ್ನು ಅನುಷ್ಠಾನಕ್ಕೆ ತಂದಿದ್ದೀರಾ ಎಂದು ಪ್ರಶ್ನೆ ಕೇಳುತ್ತಿದ್ದೇನೆ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್:-** ಮಾನ್ಯ ಸಭಾಪತಿಯವರೇ, ಇದು ಕೇಂದ್ರ ಸರ್ಕಾರದ ಒಂದು ಮಹತ್ವಾಕಾಂಕ್ಷಿ ಯೋಜನೆಯಾಗಿರುತ್ತದೆ. ಏಕೆಂದರೆ, ಒಬ್ಬ ಗರ್ಭಿಣಿ ತಾಯಿ ಆರೋಗ್ಯಕರವಾಗಿ ಗರ್ಭಿಣಿಯಾಗಿದ್ದಂತಹ ಸಂದರ್ಭದಲ್ಲಿ, ಅವಳು ಪೌಷ್ಠಿಕ ಆಹಾರವನ್ನು ತೆಗೆದುಕೊಂಡಾಗ, ಅವಳು ಶಾರೀರಿಕ ಮತ್ತು ಮಾನಸಿಕವಾಗಿ ಆರೋಗ್ಯವಾಗಿ ಇರುತ್ತಾರೆ. ಅವಳಿಗೆ ಜನಿಸತಕ್ಕಂಥ ಮಗು ಕೂಡ ಆರೋಗ್ಯವಂತವಾಗಿರುತ್ತದೆ. ಎನ್ನತಕ್ಕಂಥ ಒಂದು ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಪ್ರಧಾನ ಮಂತ್ರಿಗಳು ಈ ಯೋಜನೆಯನ್ನು ಅವರ ಒಂದು ಕನಸಿನ ಕೂಸು ಆಗಿ 8ನೇ ಮಾರ್ಚ್ 2018ರಲ್ಲಿ ಪ್ರಾರಂಭ ಮಾಡಿದರು.

(ಮುಂದು...)

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(497)17-3-2020/6.10/ಎಂ.ಎಂ-ಜಿ.ಆರ್

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ (ಮುಂದು):-**

ಅದೇ ರೀತಿ ಇದರಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡು ಸರ್ಕಾರಗಳು ಸೇರಿ ಕೇಂದ್ರ ಸರ್ಕಾರದ ಪಾಲು ಶೇ.60 ರಷ್ಟು ಇದ್ದಾಗ ರಾಜ್ಯ ಸರ್ಕಾರ ಶೇ.40ರಷ್ಟು ಹಾಕಿ ಈ ಯೋಜನೆಯನ್ನು ಚಾಲನೆಗೆ ತರಬೇಕಾದುದಾಗಿದೆ. ಆದರೆ ಇದು 2018ರಲ್ಲಿ ಪ್ರಾರಂಭವಾದರೂ ಕೂಡ ಅನೇಕ ಹಂತಗಳಲ್ಲಿ ಮಾನ್ಯ ಸದಸ್ಯರು ಕೇಳಿದ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಆ ಯೋಜನೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ನೇಮಕಗೊಳಿಸಿದ್ದಾರೆಯೇ ಎಂದು ಕೇಳಿದ್ದಾರೆ. ಈ ಯೋಜನೆಯು 2018ರಲ್ಲಿ ಜಾರಿಯಲ್ಲಿದ್ದರೂ ಕೂಡ 2019ವರೆಗೂ ಕೂಡ ಇದು ಕರ್ನಾಟಕ ರಾಜ್ಯದಲ್ಲಿ ಇಂಪ್ಲಿಮೆಂಟ್ ಆಗಿರಲಿಲ್ಲ. ಪ್ರಾಯೋಗಿಕವಾಗಿ 19 ಜಿಲ್ಲೆಗಳನ್ನು ದಿನಾಂಕ 31-5-2018ರಂದು ತೆಗೆದುಕೊಂಡಿದ್ದರೂ ಅಲ್ಲಿ ಕೂಡ ಅಂಗನವಾಡಿ ಕಾರ್ಯಕರ್ತೆಯರ ಮುಖಾಂತರ ಅಲ್ಲಿರುವಂತಹ ಗರ್ಭಿಣಿಯರಿಗೆ ಮತ್ತು ಸಮುದಾಯದ ಸಹಭಾಗಿತ್ವದ ಆಧಾರದ ಮೇಲೆ ಗರ್ಭಿಣಿ ಸ್ತ್ರೀಯರನ್ನು ಕರೆದು ಅವರಿಗೆ ಪೌಷ್ಟಿಕ ಆಹಾರದ ಬಗ್ಗೆ ಸೀಮಂತ ಕಾರ್ಯಕ್ರಮದ ಮುಖಾಂತರ ಅವರಿಗೆ ತಿಳಿಸಿ ಹೇಳುವುದು, ಹುಟ್ಟಿದಂತಹ ಮಕ್ಕಳಿಗೆ ಅನ್ನಪ್ರಾಶನದ ಮುಖಾಂತರ ಅವರಿಗೆ ಯಾವ ರೀತಿ ಮಕ್ಕಳಿಗೆ ಊಟಮಾಡಿಸಬೇಕು ಎನ್ನುವುದರ ಬಗ್ಗೆ ಮಾಹಿತಿ ಕೊಡುವುದು ಇಂತಹವೆಲ್ಲಾ ಕೂಡ ಅಂಗನವಾಡಿ ಕಾರ್ಯಕರ್ತೆಯರ ಮಟ್ಟದಲ್ಲಿ ಮತ್ತು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ನಡೆಯುತ್ತಿತ್ತು. ಅದೇ ರೀತಿ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಈ ಕಾರ್ಯಕ್ರಮ ಬರಬೇಕು ಎಂದಾಗ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಅರ್ಜಿಗಳನ್ನು ಕರೆದು ಸಂದರ್ಶನ ನಡೆಸುತ್ತಿದ್ದಾರೆ. ಸ್ವಲ್ಪ ದಿನಗಳಲ್ಲಿಯೇ ಈ ನೇಮಕಾತಿ ಕೂಡ ನಡೆಯುತ್ತದೆ. ಇದರ ಜೊತೆಗೆ ಇನ್ನೊಂದು ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಇದು ಸಮುದಾಯದ ಆಧಾರದ ಮೇಲೆ ಎಲ್ಲಾ ಕಡೆಗಳಿಗೆ awareness programme ಹೊರತು ಪಡಿಸಿ, ಪ್ರತಿಯೊಬ್ಬ ಅಂಗನವಾಡಿ ಶಿಕ್ಷಕಿಗೆ ಮೊಬೈಲ್ ಮುಖಾಂತರ app ಅನ್ನು ಅದಕ್ಕೆ ಅಳವಡಿಸಿ ಅಂಗನವಾಡಿಯಲ್ಲಿರುವಂತಹ ಗರ್ಭಿಣಿ ಸ್ತ್ರೀಯರ ತೂಕ ಮತ್ತು ಮಕ್ಕಳ ತೂಕ ಕೂಡ ಒಳ್ಳೆಯ ರೀತಿಯಿಂದ ಇರಬೇಕೆಂಬುದು ಈ ಯೋಜನೆಯಲ್ಲಿರುವುದರಿಂದ ಕಳೆದ ತಿಂಗಳಿನಲ್ಲಿ ಅವುಗಳ ಬಗ್ಗೆ ನಿರ್ಣಯ ಮಾಡಿ, ಈ ಒಂದು 'ಕೊರೋನಾ ವೈರಸ್'ನ ಹಾವಳಿ ಬಂದಿರುವುದರಿಂದ ಸ್ವಲ್ಪ ತಡವಾಗಬಹುದು, ಏಪ್ರಿಲ್ ತಿಂಗಳಿನಲ್ಲಿ ಕೊಡುತ್ತೇವೆ. ಆದರೆ ಈ ಹುದ್ದೆಗಳನ್ನು ಜಿಲ್ಲಾ ಮಟ್ಟದಲ್ಲಿ ಶೀಘ್ರದಲ್ಲಿಯೇ ನೇಮಕಾತಿ ಮಾಡಿಕೊಳ್ಳುತ್ತಿದ್ದೇವೆ, ತರಬೇತಿಗಳನ್ನು, ತಾಲ್ಲೂಕು ಮಟ್ಟದಲ್ಲಿ ಕೂಡ Block Leaders ಮತ್ತು ಸಹಾಯಕರ ಹುದ್ದೆಗಳನ್ನು ತುಂಬಿಕೊಳ್ಳುವ ಪ್ರಕ್ರಿಯೆ ನಡೆದಿದೆ ಮತ್ತು 15 ಜಿಲ್ಲೆಗಳಲ್ಲಿ ಇದು ಯೋಜನೆ ಮುಕ್ತಾಯವಾಗಿದೆ ಮತ್ತು ಅವರಿಗೆ ಒಳ್ಳೆಯ ತರಬೇತಿಯನ್ನು ಕೂಡ ಈಗಾಗಲೇ ಕೊಟ್ಟಿದ್ದೇವೆ. Mobile app ನ ತರಬೇತಿಯನ್ನು ಕೂಡ ಕೊಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಜಯಮಾಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಯೋಜನೆ 2018ರಲ್ಲಿ ಬಂದಿದೆ ಎಂದು ಹೇಳಿದರು. ಇದು ದಿನಾಂಕ 30–12–2017ರಲ್ಲಿ ಬಂದಿದೆ. ಶೇ.60ರಷ್ಟು ಹಣ 09 ಜಿಲ್ಲೆಗೆ ಬಂದಾಗಿದೆ. ಮಾನ್ಯ ಸಚಿವರೇ, ನೀವು ನಮ್ಮ ಹಾಗೆ ಕೆಲಸ ಮಾಡಿದವರು, ನಿಮ್ಮ ಬಗ್ಗೆ ಅಲ್ಲ, ಇಲ್ಲಿರುವ ಪ್ರಶ್ನೆ, 3 ವರ್ಷಗಳು; ಈ ಸ್ಮಾರ್ಟ್‌ಫೋನ್ ಅನ್ನು ಏಕೆ ತಂದರು? ಏಕೆ ಎಷ್ಟೊಂದು ಕೋಟಿ ಹಣವನ್ನು ಕೊಟ್ಟರು? ಕೇಂದ್ರದಲ್ಲಿದ್ದಂತಹ ಮಹಿಳಾ ಸಚಿವೆಯರು ಕರ್ನಾಟಕದಲ್ಲಿ ಇದನ್ನು ಬಳಸಿಕೊಳ್ಳುವುದಿಲ್ಲ ಎಂದು ಆಪಾದನೆ ಮಾಡಿ ಇಡೀ ಮಾಧ್ಯಮದ ಮೂಲಕ ಹೇಳಿದರು. ಆದರೂ ಕೂಡ 6 ಬಾರಿ ಟೆಂಡರ್ ಆಗಿದೆ, ಅಧಿಕಾರಿಗಳು 6 ಬಾರಿ ಟೆಂಡರ್ ಅನ್ನು ಕ್ಯಾನ್ಸಲ್ ಮಾಡಿದ್ದಾರೆ. ಇವರಿಗೆ ಟೆಂಡರ್ ಹಾಕುವುದಕ್ಕೆ ಬರಲಿಲ್ಲವೆಂದರೆ, ಇನ್ನೊಂದು ಇಲಾಖೆಯ ಮುಖಾಂತರ ಕರೆಸಿ ಮಾಡಬಹುದಲ್ಲವೇ? ಮಾನ್ಯ ಸಚಿವರು ಹೇಳಿದರು, ಈ 'ಪೋಷಣ್ ಅಭಿಯಾನ' ಬಂದಿರುವುದು ಮಕ್ಕಳನ್ನು ತೂಕ ನೋಡುವುದಕ್ಕಲ್ಲ, ಇಡೀ ರಾಜ್ಯದಲ್ಲಿ ಬಯೋಮೆಟ್ರಿಕ್ ಅನ್ನು ತರಬೇಕೆಂದು ನಾವು ಹೇಳಿದ್ದೆವು. ಬಯೋಮೆಟ್ರಿಕ್ ಬೇಡ, ಕೇಂದ್ರದಲ್ಲಿ ಸ್ಮಾರ್ಟ್‌ಫೋನ್ ಬರುತ್ತದೆ, 10,000 ರೂಪಾಯಿಗಳಿಗೆ ಒಂದು ಫೋನ್‌ರಂತೆ ಪ್ರತಿ 65,000 ಅಂಗನವಾಡಿ ಕಾರ್ಯಕರ್ತೆಯರಿಗೂ ಕೂಡ ಈ ಫೋನ್ ಕೊಡುತ್ತೇವೆ, ಪ್ರತಿ ತಾಲ್ಲೂಕಿನಲ್ಲಿರುವ ಅಂಗನವಾಡಿ ಹೆಣ್ಣುಮಕ್ಕಳು, ಎಷ್ಟು ಜನ ಮಕ್ಕಳಿಗೆ ಮೊಟ್ಟೆ ಕೊಡುತ್ತೇವೆ, ಅದು ನಿಮಗೆ monitor ಆಗುತ್ತದೆ, ಎಷ್ಟು ಗರ್ಭಿಣಿ ಸ್ತ್ರೀಯರು ಬಂದರು, ಎಷ್ಟು ಬಾಣಂತಿಯರು ಬಂದರು, ಸರ್ಕಾರದಲ್ಲಿ 2,150 ಕೋಟಿ ಹಣವನ್ನು ಈ ಮಕ್ಕಳಿಗಾಗಿ ಕೊಡುತ್ತಿದ್ದೇವಲ್ಲಾ ಅದು ಸರಿಯಾಗಿ ಹೋಗುತ್ತಿದೆಯೇ? ಇಷ್ಟು ಕೊಟ್ಟರೂ ಅಪೌಷ್ಟಿಕತೆಯನ್ನು ಹೇಗೆ ಹೋಗಲಾಡಿಸುವುದು? ಈ ಕಾರಣಕ್ಕೋಸ್ಕರ ಈ mobile app ಅನ್ನು ತರಲಾಗಿದೆ. ಈ mobile app ಬಳಸಿಕೊಂಡು the Karnataka Transparency in Public Procurement Act ಮುಖಾಂತರ ಆಡಳಿತದಲ್ಲಿ ಪಾರದರ್ಶಕತೆಯನ್ನು ತರಬೇಕು ಎನ್ನುವ ನಿಟ್ಟಿನಲ್ಲಿ ಕಳೆದ ಮೂರು ವರ್ಷಗಳಿಂದಲೂ ಅಧಿಕಾರಿಗಳು ಇದನ್ನು ತರುವುದಕ್ಕೆ ಬಿಡುತ್ತಾ ಇಲ್ಲ. ಸ್ಮಾರ್ಟ್‌ಫೋನ್ ಅನ್ನು ತಂದರೆ, ಅಧಿಕಾರಿಗಳಿಗೆ ಬಹಳ ತೊಂದರೆಯಾಗುತ್ತದೆ. ನನಗೆ ಮಾನ್ಯ ಸಚಿವರ ಬಗ್ಗೆ ಗೌರವವಿದೆ, ಅವರು ಕೂಡ ಹೊಸದಾಗಿ ಬಂದಿದ್ದಾರೆ, ನಾವು ಫೀಲ್ ಮಾಡಿದ್ದನ್ನು ಅವರು ಕೂಡ ಫೀಲ್ ಮಾಡುತ್ತಾರೆ. ಸರ್ಕಾರಕ್ಕೆ ನಾನು ಹೇಳುತ್ತೇನೆ, ಅಧಿಕಾರಿಗಳು ಇದನ್ನು ಕಟ್ಟುನಿಟ್ಟಾಗಿ KTPP Act ಅನ್ನು ತರಬೇಕು, 30 ಜಿಲ್ಲೆಗಳಲ್ಲಿ ಬಂದಿರುವುದನ್ನು ತಾವು ಯಾವತ್ತು ಆಪರೇಟ್ ಮಾಡುತ್ತೀರಿ ಎಂಬುದಕ್ಕೆ ಉತ್ತರ ಕೊಡಬೇಕು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಆರು ಬಾರಿ ಟೆಂಡರ್ ಆಗಿ ಟೆಂಡರ್ ಕ್ಯಾನ್ಸಲ್ ಆಗಿದೆ, ಅಧಿಕಾರಿಗಳು ಮಾಡಲಿಲ್ಲ ಎನ್ನುವಂತಹ ವಿಚಾರವನ್ನು ಹಿಂದಿನ ಸಚಿವರು ಮತ್ತು ಈಗ ಹಾಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಅಧಿಕಾರಿಗಳ ಮಟ್ಟದಲ್ಲಿ ಈ ತರಹದ ಟೆಂಡರ್‌ಗಳನ್ನು ಮಾಡದೇ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತರದೇ ಇರುವಂತಹ ಅಧಿಕಾರಿಗಳು ಯಾರ್ಯಾರು ಎಂಬ ವಿವರಗಳನ್ನು ಸಭೆಗೆ ಒದಗಿಸಬೇಕು, ಯಾರು ಈ ಯೋಜನೆಯನ್ನು ಅನುಷ್ಠಾನ ಮಾಡುವಲ್ಲಿ ತಾರತಮ್ಯ ಮಾಡಿದ್ದಾರೆ, ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬ ವಿಚಾರಗಳಿಗೆ ಸರ್ಕಾರ ಹೇಳಬೇಕು ಎಂದು ಒತ್ತಾಯ ಮಾಡುತ್ತೇನೆ.

**ಡಾ: ಜಯಮಾಲ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಒಂದು ದಿನದ ಚರ್ಚೆಯನ್ನು ಮಹಿಳಾ ಮತ್ತು ಕಲ್ಯಾಣ ಇಲಾಖೆಯು ಆಹಾರದ ಸಂಬಂಧದಲ್ಲಿ ಚರ್ಚೆಯನ್ನು ಇಟ್ಟರೆ; ನಿಜವಾಗಿಯೂ ಪ್ರತಿಯೊಬ್ಬರ ಮನಸ್ಸಿನಲ್ಲಿ ಕೂಡ ಈ ನೋವಿದೆ. ಏಕೆಂದರೆ, ಮಕ್ಕಳು, ಗರ್ಭಿಣಿ ಸ್ತ್ರೀಯರು, ಬಾಣಂತಿಯರಿಗೆ ಕೊಡುವುದು ಇಂತಹ ಒಂದು ವ್ಯವಹಾರವನ್ನು ಅಧಿಕಾರಿಗಳು ಪ್ರತ್ಯೇಕವಾಗಿ ಸಿ.ಡಿ.ಪಿ.ಓ., ಮೂಲಕ ಆ ಕರಾಳ ಕಥೆಗಳನ್ನು ಬಿಚ್ಚಿಡಬೇಕು ಅದನ್ನು ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಮೊಬೈಲ್ ಬಗ್ಗೆ ಮಾನ್ಯ ಸದಸ್ಯರು ಅದು ತೂಕ ನೋಡುವುದಕ್ಕಲ್ಲ ಎಂದು ಹೇಳಿದರು. ನಾನು ತೂಕ ಮಾಡುವುದಕ್ಕೆ ಮೊಬೈಲ್ ಎಂದು ಹೇಳಿಲ್ಲ, ಏಕೆಂದರೆ, ತೂಕ ಮಾಡುವುದಕ್ಕು ಕೂಡ ಸುಮಾರು 217 ಕೋಟಿ ರೂಪಾಯಿ ಹಣ ಬಂದಿದೆ, ಅದರಲ್ಲಿ ಶೇ.50 ರಷ್ಟು ಹಣ ಮೊಬೈಲ್‌ಗೋಸ್ಕರ ಇದೆ, ಇನ್ನು ಶೇ.50ರಷ್ಟು growth monitor ತೆಗೆದುಕೊಳ್ಳುವುದಕ್ಕೋಸ್ಕರ ಇದೆ. Monitor ಮತ್ತು awareness ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ ಈಗ ಹೇಳಿರುವ ರೀತಿಯಲ್ಲಿ ಬಯೋಮೆಟ್ರಿಕ್; ಏಕೆಂದರೆ, ನಮ್ಮ ಇಲಾಖೆಯಲ್ಲಿ ಎಲ್ಲಕ್ಕಿಂತ ಹೆಚ್ಚು ಕೆಲಸ ಮಾಡುವವರು ನಮ್ಮ ಅಂಗನವಾಡಿ ಶಿಕ್ಷಕಿಯರು ಇರಬಹುದು ಆದರೆ ಬೈಯಿಸಿಕೊಳ್ಳುವವರು ಕೂಡ ಅವರೇ ಜಾಸ್ತಿ ಆಗಿರುತ್ತಾರೆ. ಏಕೆಂದರೆ, ಅವರಿಗೆ ಅನೇಕ ಸಮಸ್ಯೆಗಳಿವೆ. ಅಂಗನವಾಡಿ ಕಟ್ಟಡಗಳ ಬಗ್ಗೆ ಮಾತನಾಡುತ್ತೇವೆ, ಅಂಗನವಾಡಿ ಶಿಕ್ಷಕಿಯರು ರೇಷನ್‌ಗಳನ್ನು ಮನೆಗೆ ತೆಗೆದುಕೊಂಡು ಹೋಗುತ್ತಾರೆ ಎಂಬ ಆಪಾದನೆ ಮಾಡುತ್ತಾರೆ ಆದರೆ ಅವರ ವೇತನ ವ್ಯವಸ್ಥಿತವಾಗಿ ಆಗದೇ ಇರುವುದು ಈ ರೀತಿ ಆಗಿರಬಹುದು. ಎಷ್ಟು ವಿಳಂಬವಾಗುತ್ತದೆ ಎಂದರೆ, ಒಂದೊಂದು ವರ್ಷಗಳವರೆಗೆ ಅವರಿಗೆ ವೇತನ ಆಗುವುದಿಲ್ಲ. ಅದಕ್ಕೆ ಮೊಬೈಲ್ಸ್ ಇವೆ, ಅದರ ಬಗ್ಗೆ ಏನು ಹೇಳಿದ್ದಾರೆ;

**ಸಭಾಪತಿಯವರು:-** ಮಾನ್ಯ ಸಚಿವರೇ, ಟೆಂಡರ್ ಏಕೆ ಆಗಿಲ್ಲ ಎಂಬುದರ ಬಗ್ಗೆ ಹೇಳಿ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:-** ಮಾನ್ಯ ಸಭಾಪತಿಯವರೇ,ಅದರ ಬಗ್ಗೆ ಹೇಳುತ್ತೇನೆ, ಅಲ್ಲಿಗೇ ಬರುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ಅವರು ಪ್ರಶ್ನೆ ಕೇಳಿದ್ದು ಬೇರೆ ಅಂದರೆ, ಟೆಂಡರ್ ಬಗ್ಗೆ ಕೇಳಿದ್ದಾರೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಅಲ್ಲಿಗೇ ಬರುತ್ತೇನೆ.

**ಶ್ರೀ ಹೆಚ್. ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಈ ರೀತಿ ಆದರೆ ಪ್ರಶ್ನೋತ್ತರ ವೇಳೆಯು ನಾಲ್ಕು ಗಂಟೆಗಳಾದರೂ ಮುಗಿಯುವುದಿಲ್ಲ. ಅವರು ಕೇಳಿದ್ದು, ತಾವು ಕೊಡುತ್ತಿರುವ ಉತ್ತರವೇನು? ಇಲ್ಲಿಯವರೆಗೂ ತಾವು ಒಳ್ಳೆಯ ಉತ್ತರವನ್ನು ಕೊಡುತ್ತಾ ಇದ್ದೀರಿ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ನೀವೆಲ್ಲರೂ ಮಾತನಾಡುತ್ತಿದ್ದರೆ ಹೇಗೆ, ನಮಗೂ ಮಾತನಾಡಲು ಬಿಡಿ.

**ಶ್ರೀ ಹೆಚ್.ಎಂ. ರೇವಣ್ಣ:–** ವಿಷಯ ಹಸ್ತಾಂತರವಾಗುತ್ತಿದೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ವಿಷಯ ಹಸ್ತಾಂತರವಾಗುವುದಿಲ್ಲ, ಅದೇ ವಿಚಾರಕ್ಕೆ ಬರುತ್ತೇನೆ. ಏಕೆಂದರೆ, 2017ಕ್ಕೆ ಆಗಿದೆಯೆಂದು ಅವರು ಹೇಳಿದರು. 2017ರಿಂದ ಇಲ್ಲಿಯವರೆಗೂ ಏನೇನು ಟೆಂಡರ್ ಪ್ರಕ್ರಿಯೆಗಳಾಗಿವೆ ಎಂಬ ಬಗ್ಗೆಯೂ ಹೇಳಿದರು. ನಾನು ಬಂದ ಮೇಲೆ ಇದನ್ನು ಗಂಭೀರವಾಗಿ ತೆಗೆದುಕೊಂಡು 42,000 ಮೊಬೈಲ್‌ಗಳ ಟೆಂಡರ್‌ನ ಪ್ರಕ್ರಿಯೆ ಮುಗಿದಿದೆ, ಅದರಲ್ಲಿ app ಅನ್ನು ಡೌನ್‌ಲೋಡ್ ಮಾಡಿದರೆ ಅಂಗನವಾಡಿ ಶಿಕ್ಷಕಿಯರಿಗೆ ಕೊಡುವುದಕ್ಕೆ ಸಿದ್ಧವಾಗಿದೆ. 2ನೇ ಲಾಟ್ ಬಗ್ಗೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಕೆಲವೊಂದು ಸಮಸ್ಯೆಗಳಿವೆ, ಅವರು ಹೇಳಿದ ಹಾಗೆ ಈ ಇಲಾಖೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಎಲ್ಲವೂ ಹೊರಗಡೆ ಬರುತ್ತದೆ. ಅದಕ್ಕೆ ಅವರು ಹೇಳಿದ ರೀತಿಯಲ್ಲಿ 2ನೇ ಲಾಟ್ ಟೆಂಡರ್ ಕೂಡ ಆದಷ್ಟು ಬೇಗ ಕರೆಯುತ್ತೇವೆ, ಅದನ್ನು ಕೂಡ ಕ್ಲಿಯರ್ ಮಾಡುತ್ತೇವೆ.

**ಡಾ: ಜಯಮಾಲ:–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ; ಪ್ರಶ್ನೆ ಬರುವುದು, ಇದನ್ನು ಸಂಪೂರ್ಣವಾಗಿ 30 ಜಿಲ್ಲೆಗಳಿಗೆ 65,000 ಅಂಗನವಾಡಿಗಳಿಗೆ ಏಕ ಕಾಲದಲ್ಲಿ ಮೊಬೈಲ್ ಕೊಟ್ಟಾಗ ಮಾತ್ರ ಈ ಕೆಲಸವಾಗುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಒಂದು ದಿವಸ ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಾವು ಇದನ್ನು convert ಮಾಡಿ.

**ಸಭಾಪತಿಯವರು:–** ಸರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 147**

**ಉತ್ತರವನ್ನು ಲಗತ್ತಿಸಿದೆ**

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಕಳೆದ 10 ವರ್ಷಗಳಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ನಿವೇಶನ ನಿರ್ಮಾಣಕ್ಕಾಗಿ ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು, ಈ ಜಮೀನಿನಲ್ಲಿ ನಿರ್ಮಿಸಲಾದ ಒಟ್ಟು ನಿವೇಶನಗಳೆಷ್ಟು, ಅವುಗಳಲ್ಲಿ ಯಾವ್ಯಾವ ಅಳತೆಗಳಲ್ಲಿ ಎಷ್ಟು ನಿವೇಶನಗಳನ್ನು ನಿರ್ಮಿಸಲಾಗಿರುತ್ತದೆ;

(ಮುಂದು)

(498) 17–03–2020/ 06–20/ ಕೆಹೆಚ್–ಜಿಆರ್

**ಶ್ರೀ ಎನ್.ಅಪ್ಪಾಜಿಗೌಡ (ಮುಂದು):–**

ಇನ್ನೊಂದು ಪ್ರಶ್ನೆಯೇನೆಂದರೆ, 'ವಶಪಡಿಸಿಕೊಂಡಿರುವ ಜಮೀನಿನ ಮಾಲೀಕರು/ರೈತರಿಗೆ ಪ್ರತಿ ಎಕರೆಗೆ ನೀಡಲಾಗಿರುವ ಪರಿಹಾರ ಧನವೆಷ್ಟು; ಪರಿಹಾರಕ್ಕೆ ಅನುಸರಿಸಲಾಗಿರುವ ಮಾನದಂಡಗಳೇನು?' ಎಂಬುದರ ಬಗ್ಗೆ ಮಾನ್ಯ ಸಚಿವರನ್ನು ಕೇಳಿದ್ದೇನೆ. ಮಾನ್ಯ ಸಚಿವರು ಬಹಳ ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಇನ್ನೊಂದು ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಿದ್ದೇನೆ. ಇದಕ್ಕೆ ಅಧಿಕಾರಿಗಳು ಲಿಖಿತ ಉತ್ತರದಲ್ಲಿ "ಸದರಿ ಬಡಾವಣೆಗೆ ಸಂಬಂಧಿಸಿದಂತೆ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಮತ್ತು ಆಯ್ಕೆಯಾಗದೇ ಇರುವವರ ವಿವರಗಳು ಲಭ್ಯವಿರುವುದಿಲ್ಲ" ಎಂದು ಹೇಳಿದ್ದಾರೆ. ಈ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಬಹಳ ದೊಡ್ಡ ಪ್ರಾಧಿಕಾರವೇನೂ ಅಲ್ಲ. ಈ ಪ್ರಾಧಿಕಾರ ಬಹಳ ಸಣ್ಣದು. ಇದು ಅತಿ ದೊಡ್ಡ ನಗರವೂ ಅಲ್ಲ. ಇಲ್ಲಿ ತುಂಬಾ ಬಡಾವಣೆಗಳನ್ನು ಸಹ ಮಾಡಿಲ್ಲ. ಇದರಲ್ಲಿ ನಮ್ಮ ಪ್ರಶ್ನೆಯೇನೆಂದರೆ, ಇನ್ನು ಮುಂದಾದರೂ ಕೂಡ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಒಳ್ಳೆಯ ಕೆಲಸಗಳನ್ನು ಮಾಡಲಿ. ಮಾನ್ಯ ಸಚಿವರು ಮಂಡ್ಯ ಜಿಲ್ಲೆಗೆ ಬಂದು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಜೊತೆ ಸಭೆ ನಡೆಸಿ, ಇದರ ಬಗ್ಗೆ ಚರ್ಚೆ ಮಾಡಿ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಮುಂದೆ ಒಳ್ಳೆಯ ಗೃಹ ನಿರ್ಮಾಣ ಮಾಡಲಿ ಎನ್ನುವುದು ನನ್ನ ಆಶಯವಾಗಿದೆ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಅಪ್ಪಾಜಿಗೌಡರವರು ಕಳೆದ 10 ವರ್ಷಗಳಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬ ಬಗ್ಗೆ ವಿವರಗಳನ್ನು ಒದಗಿಸಬೇಕೆಂದು ನೆನ್ನೆಯ ದಿವಸ ಕೇಳಿದಾಗ, ಇದಕ್ಕೆ ನಾವು ಕಾಲಾವಕಾಶವನ್ನು ಕೇಳಿದ್ದೆವು. ಇದಕ್ಕೆ ಸಂಬಂಧಪಟ್ಟ ಸಂಪೂರ್ಣವಾದ ಮಾಹಿತಿಯನ್ನು ಅವರಿಗೆ ಒದಗಿಸಿಕೊಟ್ಟಿದ್ದೇನೆ. ಕಳೆದ 10 ವರ್ಷಗಳಲ್ಲಿ ಯಾವುದೇ ಜಮೀನನ್ನು ನಾವು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ನಾವು ಜಮೀನನ್ನು ಸ್ವಾಧೀನಪಡಿಸಿಕೊಂಡಿರುವಂತಹದ್ದು, 1988

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಿಂದ 2002ನೇ ಸಾಲಿನವರೆಗೆ ಮೂರು ಬಡಾವಣೆಗಳನ್ನು ನಿರ್ಮಾಣ ಮಾಡಿದ್ದೇವೆ. ಈ ಮೂರು ಬಡಾವಣೆಗಳಲ್ಲಿ ಸಾಹುಕಾರ ಚನ್ನಯ್ಯ ಎಂಬ ಬಡಾವಣೆಯನ್ನು ಮಾಡಿ ಸುಮಾರು 93 ನಿವೇಶನಗಳನ್ನು ಹಂಚಿಕೆ ಮಾಡಿದ್ದೇವೆ. ಅನುಬಂಧ-1ರಲ್ಲಿ ಅದರ ಸಂಪೂರ್ಣವಾದ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಟ್ಟಿದ್ದೇನೆ. ಎರಡನೆಯದಾಗಿ, ಸಾತನೂರು ಬಡಾವಣೆಯನ್ನು ಮಾಡಿ ಸುಮಾರು 348 ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲಾಗಿದ್ದು, ಅನುಬಂಧ-2 ರಲ್ಲಿ ಅದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಟ್ಟಿದ್ದೇನೆ. ಮೂರನೆಯದಾಗಿ ವಿವೇಕಾನಂದ ನಗರ ಬಡಾವಣೆಯನ್ನು ನಿರ್ಮಾಣ ಮಾಡಿ 2050 ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಿದ್ದೇವೆ. ಅನುಬಂಧ-4 ರಲ್ಲಿ ಅದರ ಸಂಪೂರ್ಣವಾದ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಟ್ಟಿದ್ದೇನೆ. ನಾವು ನಿಯಮಾನುಸಾರ ನಿವೇಶನಗಳನ್ನು ಹಂಚಿಕೆ ಮಾಡಿದ್ದೇವೆ ಎಂದು ನಾನಂತೂ ಭಾವಿಸಿದ್ದೇನೆ. ಇತರೆ ಪ್ರಶ್ನೆಗಳಿದ್ದಲ್ಲಿ ಅದರ ಬಗ್ಗೆ ಪರಿಶೀಲಿಸಿ ಅದಕ್ಕೆ ತಕ್ಕ ಉತ್ತರವನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ. ಮಾನ್ಯ ಸದಸ್ಯರು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಭೇಟಿ ಕೊಡಬೇಕೆಂಬ ಬಗ್ಗೆ ಮನವಿಯನ್ನು ಮಾಡಿದ್ದಾರೆ. ಖಂಡಿತವಾಗಿಯೂ ನಾನು ಅಧಿವೇಶನ ಮುಗಿದ ಮೇಲೆ . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಚಿವರೇ, ನನ್ನ ಪ್ರಶ್ನೆಯೇನೆಂದರೆ, ಸಾವಿರಾರು ಜನರು ನಿವೇಶನಗಳ ಕನಸು ಕಾಣುತ್ತಿದ್ದು, ತಾವು ಬಡಾವಣೆಯನ್ನು ಸಹ ಮಾಡುತ್ತಿಲ್ಲ ಮತ್ತು ಅಲ್ಲಿ ಏನೂ ಕೆಲಸವನ್ನು ಸಹ ಮಾಡುತ್ತಿಲ್ಲ. ಅಲ್ಲಿ ಅಕ್ಷರಶಃ ಸ್ತಬ್ದವಾಗಿದೆ.

**ಸಭಾಪತಿಯವರು:-** ಮುಂದಿನ ತಡೆಹಿಡಿಯಲಾದ ಪ್ರಶ್ನೆಯನ್ನು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕೇಳಬೇಕು.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು ಕೂಡ ಈ ಇಲಾಖೆಗೆ ಬಂದು ತಿಂಗಳಾಗಿದೆ. ತಾವೆಲ್ಲಾ ಮಾನ್ಯ ಸದಸ್ಯರು ಹೃತ್ಪೂರ್ವಕವಾಗಿ ನನಗೆ ಸಹಕಾರ ಕೊಡಬೇಕೆಂದು ತೀರ್ಮಾನ ಮಾಡಿದ್ದೀರಾ, ಇದರ ಬಗ್ಗೆ ಖಂಡಿತವಾಗಿಯೂ ಮಾಹಿತಿಯನ್ನು ನೀಡಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ . . . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಚಿವರಾದ ಬಿ.ಎ.ಬಸವರಾಜರವರೇ, ಸಾಕು ಬಿಡಿ. ಮಾನ್ಯ ಸದಸ್ಯರಿಗೆ ತಮ್ಮ ಉತ್ತರದಿಂದ ತೃಪ್ತಿಯಾಗಿರುತ್ತದೆ.

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1220**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:**-ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳ ಶಿಕ್ಷಕರನ್ನು ಬೇರೆ ಬೇರೆ ಕಾರ್ಯಗಳಿಗೆ ನಿಯೋಜನೆ ಮಾಡಿದ್ದಾರೆ ಎನ್ನುವ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಅನುಬಂಧ-1 ರ ಕ್ರ.ಸಂ. 1ರಲ್ಲಿ ಸನ್ಮಾನ್ಯ ಶ್ರೀ ಬಿ.ಶ್ರೀರಾಮುಲು, ಜಿಲ್ಲಾ ಉಸ್ತುವಾರಿ ಸಚಿವರಿಗೆ ಒಬ್ಬಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ. ಕ್ರ.ಸಂ. 2ರಲ್ಲಿ ಉಪ ನಿರ್ದೇಶಕರ ಕಛೇರಿಗೆ ಉಡುಪಿ ಜಿಲ್ಲೆ ಪ್ರಥಮ ದರ್ಜೆ ಕಾಲೇಜು ಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ತಾಲ್ಲೂಕು ಪಂಚಾಯಿತಿಗೆ ಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ. ಕೆ.ಜಿ.ಎಫ್., ಜಿಲ್ಲೆಯ ನಗರಾಭಿವೃದ್ಧಿ ಇಲಾಖೆಗೆ ಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ. ಶ್ರೀನಿವಾಸಪುರ ಜಿಲ್ಲಾ ಪಂಚಾಯಿತಿಗೆ ಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ. ಕೋಲಾರ ತಾಲ್ಲೂಕು ಪಂಚಾಯಿತಿಗೆ ಇಬ್ಬರು ಶಿಕ್ಷಕರನ್ನೂ ನಿಯೋಜನೆ ಮಾಡಲಾಗಿದೆ. ನಂತರ ಅಧೀಕ್ಷಕರ ನಿವಾಸ ಕರ್ನಾಟಕ ಭವನಕ್ಕೆ ಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ. ಶಿಕ್ಷಕರನ್ನು ಶಾಲೆಯಿಂದ ಬಿಡಿಸಿ, ಕರ್ನಾಟಕ ಭವನಕ್ಕೆ ನಿಯೋಜನೆ ಮಾಡಲಾಗಿದೆ. ನಗರಾಭಿವೃದ್ಧಿ ಇಲಾಖೆಗೆ ಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ. ತುಮಕೂರು ಲೋಕಸಭಾ ಸದಸ್ಯ ಶ್ರೀ ಜಿ.ಎಸ್.ಬಸವರಾಜರವರ ಆಪ್ತ ಸಹಾಯಕರಿಗೆ ಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಇದರ ಬಗ್ಗೆ clear-cut ಆಗಿ ನ್ಯಾಯಾಲಯದಿಂದ ಒಂದು ಆದೇಶವಾಗಿದೆ. ನನಗೆ ಅನಿಸಿರುವ ಮಟ್ಟಿಗೆ ಇದರ ಬಗ್ಗೆ ತಾವು ಸಹ ನೋಡಿರಬಹುದು. ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಲ್ಲಿ [order dated 22.07.2011 in W.P.No.27252/2011 (S-KAT) c/w W.P.No.26694/2011 (S-KAT) ] ಏನಿದೆ ಎಂದರೆ, "If it is so, we direct the Government to withdraw the teachers, lecturers, Professors and Principals, who are working on deputation in other departments other than Educational Institutions in the best interest of the students and Educational Institutions to get better results in Institutions and Government Aided Institutions." ಮೇಲಿನ ಅಂಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು, ಮುಖ್ಯ ಶಿಕ್ಷಕರು ಇವರೆಲ್ಲರನ್ನೂ ನಿಯೋಜನೆ ಮಾಡಿದಲ್ಲಿ, ನ್ಯಾಯಾಂಗ ನಿಂದನೆಗೆ ಗುರಿಯಾಗಬೇಕಾಗುತ್ತದೆ. ಸದರಿ ಬೋಧಕರನ್ನು ಯಾವುದೇ ಕಾರಣಕ್ಕೂ ಬೋಧಕೇತರ ಕಾರ್ಯಕ್ರಮಕ್ಕೆ ನಿಯೋಜನೆ ಮಾಡಬಾರದೆಂದು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ತಿಳಿದುಕೊಂಡ ಮೇಲೆ ಆಗಿನ ಕಾರ್ಯದರ್ಶಿಯವರಾದ ಶ್ರೀ ಕುಮಾರನಾಯಕ್ ರವರು ಇದ್ದಾಗ 2019ರಲ್ಲಿ ಒಂದು ಆದೇಶವಾಯಿತು. ಇಷ್ಟೆಲ್ಲಾ ಮೀರಿ 45 ಶಿಕ್ಷಕರನ್ನು, ಪಿ.ಎ.ಗಳನ್ನು, ಕರ್ನಾಟಕ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭವನಕ್ಕೆ ಮತ್ತು ಬೇರೆ ಕಡೆಗೆ ಶಿಕ್ಷಕರನ್ನು ನಿಯೋಜನೆ ಮಾಡುವುದು ಎಷ್ಟರಮಟ್ಟಿಗೆ ಸೂಕ್ತವಾಗಿದೆ? ಶಿಕ್ಷಕರೇ ಕಡಿಮೆ ಇದ್ದಾರೆ ಎಂದು ನಾವು ಹೇಳುತ್ತೇವೆ. ಅದಕ್ಕೆ ನ್ಯಾಯಾಂಗ ಉಲ್ಲಂಘನೆ ಆಗುತ್ತಿದೆ ಎನ್ನುವುದು ಇದೆ. ದಯಮಾಡಿ, ಶಿಕ್ಷಕರನ್ನು ಬೇರೆ ಕಡೆಗೆ ನಿಯೋಜನೆ ಮಾಡಬಾರದು ಎನ್ನುವ ಬಗ್ಗೆ ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ಯಾವ ಯಾವ ಶಿಕ್ಷಕರು ಎಲ್ಲೆಲ್ಲಿ ಇದ್ದಾರೆ ಎನ್ನುವ ಬಗ್ಗೆ ಪೂರ್ಣವಾದ ವಿವರಗಳನ್ನು ಒದಗಿಸಿದ್ದೇವೆ. ಇದರಲ್ಲಿ ಲೋಪ ಆಗಿದೆ. ಆದೇಶಕ್ಕೆ ವಿರುದ್ಧವಾಗಿ ಇಲ್ಲಿ ಕಾರ್ಯ ಆಗಿದೆ. ನಾನು ಸಂಪೂರ್ಣವಾದ ಪಟ್ಟಿಯನ್ನು ಮರುಪರಿಶೀಲಿಸುತ್ತೇನೆ. ಮತ್ತೆ ಆ ಶಿಕ್ಷಕರನ್ನು ಶಿಕ್ಷಕರಾಗಿ ಕೆಲಸ ಮಾಡುವುದಕ್ಕೆ, ಅವರನ್ನು ವಾಪಸ್ಸು ಕರೆಸುವುದಕ್ಕೆ ಪ್ರಯತ್ನಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1202**
**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಇವತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿದ್ದ ವಿವಿಧ ವಿಷಯಗಳ 1203 ಉಪನ್ಯಾಸಕರುಗಳ ಹುದ್ದೆಗೆ ಆಯ್ಕೆಯಾದವರ ಬಗ್ಗೆ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೆ. ಇವತ್ತು 1203 ಉಪನ್ಯಾಸಕರುಗಳ ಹುದ್ದೆಯ ನೇಮಕಾತಿಗೆ ಸುಮಾರು 5 ವರ್ಷಗಳಿಂದ ಕಾಯುತ್ತಿದ್ದಾರೆ. ಈಗಾಗಲೇ ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ "ನೈಜತೆ ಪರಿಶೀಲನೆಗಾಗಿ ಸಂಬಂಧಿಸಿದ ಪ್ರಾಧಿಕಾರಗಳಿಗೆ ಪತ್ರ ಬರೆಯಲಾಗಿದ್ದು, ಅಗತ್ಯ ದಾಖಲೆಗಳನ್ನು / ನೈಜತೆ ಪ್ರಮಾಣ ಪತ್ರವನ್ನು ಪಡೆಯಲಾಗುತ್ತಿದೆ." ಎಂದು ಹೇಳಿದ್ದಾರೆ. ಬಹುಶಃ ದಾಖಲೆಗಳ ಪರಿಶೀಲನೆ ಇನ್ನೂ ಕೂಡ ಮುಗಿದಿರುವುದಿಲ್ಲವೇ, ಇದಕ್ಕೆ ಯಾವುದೇ ಕಾಲಮಿತಿಯನ್ನು ನಿರ್ಧಾರ ಮಾಡಿರುವುದಿಲ್ಲವೇ, ಇದಕ್ಕೆ ಸಂಬಂಧಿಸಿದಂತೆ ಒಂದು cut-off date ಎಂದು ಕೊಡುತ್ತಾರೆ. ಅವರಿಗೆ ಕಾಲಮಿತಿಯನ್ನು ಕೊಟ್ಟು, ಇದನ್ನು ಮಾಡಬೇಕಾಗಿತ್ತು. ಇದಕ್ಕೆ ಸಂಬಂಧಿಸಿದಂತೆ 'ವಿಜಯ ಕರ್ನಾಟಕ'ದಲ್ಲಿ ಒಂದು ಲೇಖನ ಕೂಡ ಬಂದಿದ್ದು, ಅದರಲ್ಲಿ "ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆಯವರು ಶೇಕಡಾ 50 ರಷ್ಟು ಅಭ್ಯರ್ಥಿಗಳು ಮಾತ್ರ ಸಿಂಧುತ್ವ, ಪೊಲೀಸ್ ವರದಿ, ವೈದ್ಯಕೀಯ ವರದಿ, ಅನುಚ್ಛೇದ-371 ಜೆ, ಕನ್ನಡ ಮಾಧ್ಯಮ ಈ ರೀತಿ ಮೀಸಲಾತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು ಹಾಗೂ ಶೈಕ್ಷಣಿಕ ಪ್ರಮಾಣ ಪತ್ರವನ್ನು ಒದಗಿಸಿದ್ದಾರೆ. ಇನ್ನುಳಿದ ಅಭ್ಯರ್ಥಿಗಳು ಪ್ರಮಾಣ ಪತ್ರಗಳನ್ನು ಸಲ್ಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು." ಎಂದು ಹೇಳಿರುವ ವಿಚಾರ ಈ ಪತ್ರಿಕೆಯಲ್ಲಿ ಬಂದಿದೆ. ಆದರೆ, ಉಪನ್ಯಾಸಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು 'ಅಂತಿಮ ಆಯ್ಕೆಯ ಪಟ್ಟಿಯಲ್ಲಿ ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳ ಪೊಲೀಸ್ ವರದಿ, ವೈದ್ಯಕೀಯ ವರದಿ, ಸಿಂಧುತ್ವ ಪ್ರಮಾಣ ಪತ್ರ ಮತ್ತು ಅಂಕ ಪಟ್ಟಿಯ ನೈಜತೆ, ಈ ಎಲ್ಲಾ ದಾಖಲೆಗಳ ಪರಿಶೀಲನೆಯ ಕಾರ್ಯ ಪೂರ್ಣಗೊಂಡಿರುತ್ತದೆ' ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದರಲ್ಲಿ ಯಾವುದು ಸತ್ಯ ಮತ್ತು ಯಾವುದು ಅಸತ್ಯ ಎಂದು ನಮಗೆ ಹೇಗೆ ಗೊತ್ತಾಗುತ್ತದೆ. ಉಪನಿರ್ದೇಶಕರೇ ಈ ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ ಮತ್ತು ಅಭ್ಯರ್ಥಿಗಳು ಈ ರೀತಿ ಹೇಳುತ್ತಾರೆ. ಅವರು ಖಾಸಗಿ ಶಾಲೆಗಳಲ್ಲಿ ಕೆಲಸ ಕೇಳಲು ಹೋದರೆ ಅವರಿಗೆ ಕೆಲಸ ಕೊಡುವುದಿಲ್ಲ. ಸರ್ಕಾರಿ ಕೆಲಸಕ್ಕೆ ಹೋಗುತ್ತೀರಿ ಎಂಬ ವಿಚಾರವನ್ನು ಅವರಿಗೆ ಹೇಳಿ ಅವರಿಗೆ ಕೆಲಸ ಕೊಡುವುದಿಲ್ಲ. ಆದ್ದರಿಂದ ಇದು ಅವರ ಭವಿಷ್ಯದ ಪ್ರಶ್ನೆಯಾಗಿದೆ.

**ಶ್ರೀ ಎಸ್.ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಬಹಳ ದೀರ್ಘವಾದ ಪ್ರಯಾಣ ನಡೆದಿದೆ. ಈ ವಿಚಾರವು ನ್ಯಾಯಾಲಯಕ್ಕೆ ಹೋಗಿ, ನ್ಯಾಯಾಲಯದಲ್ಲಿ ಈ ಪ್ರಕರಣಕ್ಕೆ ತಡೆಯಾಜ್ಞೆಯಾಗಿದ್ದು, ಈ ತಡೆಯಾಜ್ಞೆಗೆ modification ಎಲ್ಲಾ ಆಗಿದೆ. ನಾನು ಇದಕ್ಕೆ ನಿರ್ದೇಶನವನ್ನು ಕೊಟ್ಟಿದ್ದೇನೆ. Counseling ಗೆ ದಿನಾಂಕವನ್ನು ನಿಗದಿ ಮಾಡಬೇಕೆಂದು ಹೇಳಿದ್ದೇನೆ. ಇದನ್ನು counseling ಮಾಡಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವ ವಿಚಾರವನ್ನು ನಾವೆಲ್ಲಾ ಸ್ವಾಗತ ಮಾಡುತ್ತೇವೆ. ಆದರೆ ಇದನ್ನು ಎಷ್ಟು ಸಮಯದೊಳಗೆ ಮಾಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಎಸ್.ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಮಾರ್ಚ್-23ನೇ ತಾರೀಖು ಪಿ.ಯು.ಸಿ., ಪರೀಕ್ಷೆಗಳು ಮುಗಿಯುತ್ತವೆ. ಈ ಪರೀಕ್ಷೆಗಳು ಮುಗಿದ ತಕ್ಷಣ ನಾವು counseling ಗೆ ದಿನಾಂಕವನ್ನು ನಿಗದಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1049**

(ಉತ್ತರವನ್ನು ಲಗತ್ತಿಲಾಗಿದೆ)

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಒಂದೇ ಒಂದು ಶೋಚನೀಯ ಪರಿಸ್ಥಿತಿ ಏನೆಂದರೆ, ಬೀದರ್ ಜಿಲ್ಲೆಯಲ್ಲಿ ಸುಮಾರು 500 ಪ್ರಾಥಮಿಕ ಶಾಲೆಗಳಲ್ಲಿ 1178 ಕೊಠಡಿಗಳು ದುರಸ್ತಿಯಾಗಬೇಕು ಮತ್ತು ಅದೇ ರೀತಿ 48 ಪ್ರೌಢ ಶಾಲೆಗಳಲ್ಲಿ 138 ಕೊಠಡಿಗಳು ದುರಸ್ತಿಯಾಗಬೇಕೆನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ.

(ಮುಂದು)

**(499) 17/03/2020/6:30/ಎಸ್‌ಪಿಆರ್/ಎಂಡಿ**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ಮುಂದು):–**

ನಾವು ಪ್ರತಿ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶವನ್ನು ನೋಡಬೇಕಾದರೆ, ಬಹಳ ಜಾಗ್ರತೆಯನ್ನು ವಹಿಸುತ್ತೇವೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಈ ಹಿಂದೆ ಜಿಲ್ಲಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಯು ಈಗ ಸದನದಲ್ಲಿ ಅಧಿಕಾರಿಗಳ ಗ್ಯಾಲರಿಯಲ್ಲಿ ಕುಳಿತುಕೊಂಡಿದ್ದಾರೆ. ಅವರ ಅಧಿಕಾರಾವಧಿಯಲ್ಲಿ ನಾವು ಬಹಳ ಪ್ರಯತ್ನವನ್ನು ಮಾಡಿದ್ದೇವೆ. ಆದರೆ ನಾವು ನಮ್ಮ ಜಿಲ್ಲೆಯ ಫಲಿತಾಂಶವನ್ನು ಮೇಲಿನಿಂದ ಅಲ್ಲ ಸಾಮಾನ್ಯವಾಗಿ ಕೆಳಗಿನಿಂದ ಮೊದಲ, ಎರಡನೆ ಅಥವಾ ಮೂರನೇ ಸ್ಥಾನದಲ್ಲಿದೆಯೇ ಎಂದು ನೋಡಬೇಕು. ಇಂತಹ ಪರಿಸ್ಥಿತಿಯಲ್ಲಿ ಇಷ್ಟೊಂದು ಶಾಲಾ ಕೊಠಡಿಗಳು ದುರಸ್ತಿಯಲ್ಲಿವೆ ಎಂದರೆ, ನಮ್ಮ ಭಾಗದ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆಯಾಗುತ್ತದೆ. ಆದ್ದರಿಂದ ಆದಷ್ಟು ಬೇಗನೆ ಸರ್ಕಾರವು ಈ ಕೊಠಡಿಗಳನ್ನು ದುರಸ್ತಿ ಮಾಡಿಸಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಶಿಥಿಲಗೊಂಡಿರುವ ಶಾಲಾ ಕೊಠಡಿಗಳ ದುರಸ್ತಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಒಟ್ಟಾರೆಯಾಗಿ ಕಲ್ಯಾಣ ಕರ್ನಾಟಕ ಭಾಗದ ಪರಿಸ್ಥಿತಿಯ ಅರಿವು ನನಗಿದೆ. ಅಲ್ಲಿನ ಫಲಿತಾಂಶವನ್ನು ಉತ್ತಮಗೊಳಿಸಬೇಕಾದರೆ, ಪ್ರಥಮವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಸರ್ಕಾರವು ಇದಕ್ಕೆ ಆದ್ಯತೆ ನೀಡಿ, ಕೆಲಸಗಳನ್ನು ಮಾಡುತ್ತದೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ ರವರದ್ದು. ಪ್ರಸ್ತುತ ಅವರು ಸದನದಲ್ಲಿಲ್ಲ.

ಈಗ ಪ್ರಶ್ನೋತ್ತರ ಅವಧಿಯು ಮುಕ್ತಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):**–ಮಾನ್ಯ ಸಭಾಪತಿಯವರೇ, ದಿನಾಂಕ: 17ನೇ ಮಾರ್ಚ್ 2020, ಸಮೂಹ–2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 74 ಪ್ರಶ್ನೆಗಳ ಪೈಕಿ 54 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಉತ್ತರಗಳನ್ನು ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 9. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

**ಅ) ವಿಷಯ:– ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿಯ ಮಲ್ಲಸಂದ್ರ ಕಾವಲ್ ಬಳಿ ತೋಟಗಾರಿಕೆ ಇಲಾಖೆಯ ಸಿಬ್ಬಂದಿಗಳು ನಿಯಮ ಮೀರಿ ಬೆಳೆ ನಾಶ ಮಾಡಿರುವ ಬಗ್ಗೆ**

* * *

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ದಿನಾಂಕ 17/03/2020 ರಂದು ಸದನದಲ್ಲಿ 'ಶೂನ್ಯ ವೇಳೆ'ಯಲ್ಲಿ 'ಬೆಳೆ ನಾಶ ರೈತರ ಸಾಮೂಹಿಕ ಆತ್ಮಹತ್ಯೆ ಬೆದರಿಕೆ' ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಬಯಸುತ್ತೇನೆ.

ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿಯ ಮಲ್ಲಸಂದ್ರ ಕಾವಲ್ ಬಳಿ ಸರ್ವೆ ನಂ.11/1 ರ 5 ಎಕರೆ ವಿಸ್ತೀರ್ಣದ ಭೂಮಿಯಲ್ಲಿ ರೈತರು ಸುಮಾರು 1927 ನೇ ಇಸ್ವಿಯಿಂದ ಸಾಗುವಳಿ ಮಾಡುತ್ತಿದ್ದ 5 ಎಕರೆ ಜಮೀನಿನ ಸುತ್ತ ಮುತ್ತ ನಿರ್ಮಿಸಲಾಗಿದ್ದ ತಂತಿ ಬೇಲಿ ಕೌಂಪೌಂಡ್ ಮತ್ತು ಹನಿ ನೀರಾವರಿಗೆ ಅಳವಡಿಸಲಾಗಿದ್ದ ಪೈಪ್‌ಗಳು ಸೇರಿದಂತೆ ಬಿತ್ತನೆ ಮಾಡಲಾಗಿದ್ದ ಕಲ್ಲಂಗಡಿ ಮೊಳಕೆಯೊಡಿಯುವ ಮುನ್ನವೆ, ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಜೆಸಿಬಿ ಮೂಲಕ ರಾತ್ರೋ ರಾತ್ರಿ ನಾಶಪಡಿಸಿರುವ ಸಂಬಂಧ, ರೈತನ ಇಡೀ ಕುಟುಂಬ ಸರ್ಕಾರಕ್ಕೆ ಸಾಮೂಹಿಕ ಆತ್ಮಹತ್ಯೆಯ ಎಚ್ಚರಿಕೆ ನೀಡಿದ್ದಾರೆ.

ರೈತನ ಪರವಾಗಿ ಇಡೀ ಗ್ರಾಮಸ್ಥರು ತಹಸೀಲ್ದಾರ್‌ರವರಿಗೆ ನೀಡಿರುವ ದೂರಿನನ್ವಯ ಸ್ಥಳಕ್ಕೆ ಭೇಟಿ ನೀಡಿದ ತಹಸೀಲ್ದಾರ್ ಕುಂಇ ಅಹಮ್ಮದ್ ರವರು ಈ ಸ್ಥಳದಲ್ಲಿ ಅರಣ್ಯ, ತೋಟಗಾರಿಕೆ ಮತ್ತು ಗೋಮಾಳಗಳ ಭೂಮಿ ಇದೆ ಮತ್ತು ಮೂರು ಗ್ರಾಮಗಳ ಗಡಿ ಇಲ್ಲಿಯೇ ಸಂಗವಾಗುತ್ತದೆ. ಗೋಮಾಳದ ವಿಸ್ತೀರ್ಣದ ಪಹಣಿಗೂ ಮತ್ತು ಆಕಾರಬಂದ್‌ಗೂ ತಾಳೆ ಇದೆ.

ನೊಂದ ರೈತರ ಭೂಮಿಯೂ ಇದೆ. ಆದರೆ ಯಾವ ಜಾಗ ಎಲ್ಲಿದೆ ಎಂಬುದು ನಿಗದಿಯಾಗಬೇಕಿದೆ. ನಮ್ಮ ಗಮನಕ್ಕೆ ಬಾರದೆ ಏಕಾ–ಏಕಿ ರೈತನ ಬೆಳೆ ಸೇರಿದಂತೆ ತಂತಿ ಬೇಲಿ ಮತ್ತು ಹನಿ ನೀರಾವರಿಯ ಪರಿಕರಗಳನ್ನು ತೋಟಗಾರಿಕೆ ಇಲಾಖೆಯವರು ನಾಶಪಡಿಸಿರುವುದು ನಿಯಮ ಬಾಹಿರವಾಗಿರುತ್ತದೆ. ಈ ಕೂಡಲೇ ಸಂಬಂಧಿಸಿದ ತೋಟಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ನೋಟೀಸ್ ನೀಡಲಾಗುವುದು. ರೈತನಿಗಾಗಿರುವ ನಷ್ಟವನ್ನು ಸಂಬಂಧಿಸಿದವರಿಂದ ಭರಿಸಿಕೊಡಲಾಗುವುದು ಎಂದು ತಹಸೀಲ್ದಾರ್‌ರವರು ಭರವಸೆ ನೀಡುವ ಮೂಲಕ ಗ್ರಾಮಸ್ಥರಿಗೆ ಮತ್ತು ನೊಂದ ರೈತನ ಕುಟುಂಬಕ್ಕೆ ಸಾಂತ್ವನ ಹೇಳಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಯಮ ಮೀರಿ ಯಾವುದೇ ತಿಳುವಳಿಕೆ ನೀಡದೆ ಇಷ್ಟೊಂದು ಪ್ರಮಾಣದಲ್ಲಿ ನಾಶ ಮಾಡಿರುವ ಮಲ್ಲಸಂದ್ರ ಕಾವಲ್ ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕ ಲೋಕೇಶ್ ಮತ್ತು ಸಹಾಯಕ ಪುಟ್ಟಸ್ವಾಮಾಚಾರ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಹಾಗೂ ನೊಂದ ರೈತನಿಗೆ ಆಗಿರುವ ನಷ್ಟವನ್ನು ಭರಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೆ.ಸಿ.ನಾರಾಯಣ ಗೌಡ(ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತ್ತಿಯವರೇ, ಉತ್ತರವನ್ನು ಮಂಡಿಸಲಾಗಿದೆ.

**(ಉತ್ತರವನ್ನು ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ:- ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಮಸ್ಯೆಗಳ ಬಗ್ಗೆ**

* * *

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):**-ಮಾನ್ಯ ಸಭಾಪತಿಯವರೇ, ಬಾಗಲಕೋಟೆಯಲ್ಲಿರುವ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಸಮಸ್ಯೆಗಳನ್ನು ಪರಿಹರಿಸಬೇಕೆನ್ನುವ ವಿಷಯವನ್ನು ದಿನಾಂಕ 17/03/2020 ರಂದು ನಡೆಯುವ ಅಧಿವೇಶನದ 'ಶೂನ್ಯ ವೇಳೆ'ಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶಕ್ಕಾಗಿ ಅಭಿನಂದಿಸುತ್ತೇನೆ.

ಬಾಗಲಕೋಟೆಯಲ್ಲಿರುವ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಕಳೆದ 20 ತಿಂಗಳುಗಳಿಂದ ಪೂರ್ಣಪ್ರಮಾಣದ "ಕುಲಪತಿ"ಗಳನ್ನು ನೇಮಿಸದೇ ಇರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತಿದ್ದು, ಅಲ್ಲಿನ ಕುಲಸಚಿವರಿಗೆ ಪ್ರಭಾರ ನೀಡಿ, ಪ್ರತಿ ತಿಂಗಳಿಗೊಮ್ಮೆ ಅವರಿಗೆ ಪ್ರಭಾರವನ್ನು ಮುಂದುವರೆಸುತ್ತಿರುವುದು ಎಷ್ಟು ಸಮಂಜಸವೆನ್ನುವ ವಿಷಯವನ್ನು ಸಚಿವರಿಗೆ ಕೇಳಬಯಸುತ್ತೇನೆ.

ರಾಜ್ಯದ ಏಕೈಕ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯವಾಗಿರುವ ಬಾಗಲಕೋಟೆಯ ಸದರಿ ವಿಶ್ವವಿದ್ಯಾಲಯವು ತನ್ನ ಅಧೀನದಲ್ಲಿ 9 ಕಾಲೇಜುಗಳನ್ನು ಒಳಗೊಂಡಿದ್ದು, 23 ಜಿಲ್ಲೆಗಳಿಗೆ ವ್ಯಾಪಿಸಿದೆ. ಸದರಿ ವಿಶ್ವವಿದ್ಯಾಲಯಕ್ಕೆ ಕನಿಷ್ಠ 1000 ಎಕರೆ ಜಮೀನು ಇರಬೇಕೆನ್ನುವ ನಿಯಮವಿದ್ದರೂ ಕೂಡ ಇಲ್ಲಿಯವರೆಗೂ ಕೇವಲ 300 ಎಕರೆ ಜಮೀನನ್ನು ಒದಗಿಸಲಾಗಿದೆ. ಸದರಿ ವಿಶ್ವವಿದ್ಯಾಲಯನಿಂದ ಕೇವಲ 12 ಕಿ.ಮೀ. ಅಂತರದಲ್ಲಿರುವ ಬಾದಾಮಿ ತಾಲ್ಲೂಕಿನ 'ಹಾಲಿಗೆರೆ' ಗ್ರಾಮದ ವ್ಯಾಪ್ತಿಯಲ್ಲಿರುವ ಸುಮಾರು 1,170 ಎಕರೆ ಜಮೀನಿನ ಪೈಕಿ ಅವಶ್ಯವಿರುವ ಇನ್ನುಳಿದ ಜಮೀನನ್ನು ಸದರಿ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವುದು ವಿಳಂಬವಾಗುತ್ತಿದೆ. ಸದರಿ ಜಮೀನನ್ನು ಯಾವ ಕಾಲಮಿತಿಯೊಳಗೆ ವಿಶ್ವವಿದ್ಯಾಲಯಕ್ಕೆ ಒದಗಿಸಲಾಗುವುದೆಂದು ತಿಳಿಸಬೇಕು.

ಸದರಿ ವಿಶ್ವವಿದ್ಯಾಲಯದಿಂದ ಕೇವಲ 5 ಕಿ.ಮೀ. ಅಂತರದಲ್ಲಿ ಘಟಪ್ರಭಾ ನದಿಯಿದ್ದರೂ ಸಹ ಸದರಿ ವಿಶ್ವವಿದ್ಯಾಲಯದ ಆವರಣಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಿಲ್ಲ. ಇದರಿಂದಾಗಿ ವಿಶ್ವವಿದ್ಯಾಲಯದ ಕೃಷಿ ಸಂಶೋಧನೆ ಮಾಡಲು ನೀರಿನ ಅವಶ್ಯಕತೆಯಿದ್ದು, ಪಕ್ಕದಲ್ಲೇ ಇರುವ ನದಿಯಿಂದ ನೀರಾವರಿ ಸೌಲಭ್ಯವನ್ನು ಕಲ್ಪಿಸಿ, ಕೃಷಿ ಸಂಶೋಧನೆಗೆ ಅನುಕೂಲ ಒಗದಿಸದೇ ಇರುವುದರಿಂದ ಸದರಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಆ ಭಾಗದ ರೈತರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಇದಲ್ಲದೇ 2016 ರಿಂದ ಖಾಲಿಯಿರುವ 705 ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಇವುಗಳಲ್ಲದೇ ಸದರಿ ವಿಶ್ವವಿದ್ಯಾಲಯದಲ್ಲಿ ಪರಿಶಿಷ್ಟ ಪಂಡಗದ ಮತ್ತು ಪರಿಶಿಷ್ಟ ಜಾತಿಯ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 499 ವಿದ್ಯಾರ್ಥಿಗಳು ಅಭ್ಯಾಸಿಸುತ್ತಿದ್ದು, ಕಳೆದ ನಾಲ್ಕು ವರ್ಷಗಳಿಂದ ಸದರಿ ವಿಶ್ವವಿದ್ಯಾಲಯಕ್ಕೆ ಎಸ್.ಟಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಡಿ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಆದರೆ, ಬೇರೆ ಕೃಷಿ ವಿಶ್ವವಿದ್ಯಾಲಯಗಳಿಗೆ ಪ್ರತಿ ಸಾಲಿನಲ್ಲಿಯೂ ಎಸ್.ಟಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಡಿ ಅನುದಾನವನ್ನು ಬಿಡುಗಡೆ ಮಾಡುತ್ತಿದ್ದು, ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯಕ್ಕೆ ಮಾತ್ರ ಸದರಿ ಯೋಜನೆಗಳಡಿ ನಾಲ್ಕು ವರ್ಷಗಳಿಂದ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಇದರಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ತಮಗೆ ಅನ್ಯಾಯವಾಗುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸದರಿ ವಿಶ್ವವಿದ್ಯಾಲಯಕ್ಕೆ ಪ್ರಸಕ್ತ ಸಾಲಿನಲ್ಲಿ ಎಸ್.ಟಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಡಿ ಕನಿಷ್ಠ ಐದು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಹಾಗೂ ಸದರಿ ವಿಶ್ವವಿದ್ಯಾಲಯಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕೆಂದು ಮತ್ತು ಸದರಿ ವಿಶ್ವವಿದ್ಯಾಲಯಕ್ಕೆ ಅವಶ್ಯವಿರುವ ಜಮೀನನ್ನು ಮಂಜೂರು ಮಾಡಬೇಕು. ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನೇಮಕಾತಿ ಮಾಡಬೇಕೆಂದು ವಿನಂತಿಸುತ್ತೇನೆ. ಪ್ರಮುಖವಾಗಿ ಸದರಿ ವಿಶ್ವವಿದ್ಯಾಲಯಕ್ಕೆ ಪೂರ್ಣ ಪ್ರಮಾಣದ ಕುಲಪತಿಗಳನ್ನು ನೇಮಕ ಮಾಡಲು ಕೂಡಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಸಿ.ನಾರಾಯಣ ಗೌಡ(ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತುಂಬಾ ಉತ್ತಮವಾದ ಪ್ರಶ್ನೆಯನ್ನು ಕೇಳಿದ್ದಾರೆ. ಕಳೆದ ಮೂರು ವರ್ಷಗಳಿಂದ ಸದರಿ ವಿಶ್ವವಿದ್ಯಾನಿಲಯ ಕುಲಪತಿಗಳ ಹುದ್ದೆಯು ಖಾಲಿಯಿದ್ದು, ದಿನಾಂಕ 12/03/2020 ನೇ ತಾರೀಖಿನಂದು ಮೂರು ಜನ ಅಭ್ಯರ್ಥಿಗಳ ಹೆಸರುಗಳನ್ನು short list ಮಾಡಿ, ಮುಖ್ಯಮಂತ್ರಿಗಳ ಮೂಲಕ ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಲಾಗಿದೆ. ಈ ವಿಶ್ವವಿದ್ಯಾಲಯಕ್ಕೆ 1,000 ಎಕರೆ ಜಮೀನಿನ ಅಗತ್ಯವಿದೆ. ಈಗಾಗಲೇ 300 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ವಿಶ್ವವಿದ್ಯಾಲಯವು ಕಾರ್ಯನಿರ್ವಹಿಸುತ್ತಿದೆ. ಎರಡು ಕಡೆ ಜಮೀನು ತೆಗೆದುಕೊಳ್ಳುವ ಸಂಬಂಧ ಜಿಲ್ಲಾಧಿಕಾರಿಗಳನ್ನು ನೇಮಿಸಲಾಗಿದೆ. ಶೀಘ್ರದಲ್ಲಿ ಅವಶ್ಯವಿರುವ 1,000 ಎಕರೆ ಜಮೀನನ್ನು ಹುಡುಕಿ ಸರ್ಕಾರಕ್ಕೆ ಹಸ್ತಾಂತರಿಸಬೇಕೆಂದು ತಿಳಿಸಲಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರೊಂದಿಗೆ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಸಣ್ಣ ನೀರಾವರಿ ಇಲಾಖೆಯಿಂದ ಏತ ನೀರಾವರಿ ಮೂಲಕ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಕೇಳಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಈಗ ನನ್ನ ಪಕ್ಕದಲ್ಲಿಯೇ ಇದ್ದಾರೆ. ವಿಶ್ವವಿದ್ಯಾಲಯಕ್ಕೆ ಕುಡಿಯುವ ನೀರನ್ನು ಕೊಡುವ ನಿಟ್ಟಿನಲ್ಲಿ ಅವರೂ ಸಹ ಶೀಘ್ರವಾದ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಸಹಾಯ ಮಾಡಬೇಕೆಂದು ಕೋರುತ್ತೇನೆ. ಈ ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಹಾಗೂ ಶೀಘ್ರದಲ್ಲಿಯೇ ಇದನ್ನು ಸರಿಪಡಿಸುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(500)/17-3-2020/6-40/ಎಲ್ಎಂ/ಎಂಡಿ

**ಶ್ರೀ ಕೆ.ಗೋವಿಂದ ರಾಜ್:-** ಮಾನ್ಯ ಸಭಾಪತಿಗಳೆ, ಅದಕ್ಕೆ ಹಣವನ್ನು ಒದಗಿಸಲಾಗಿದೆಯೇ?

**ಶ್ರೀ ನಿರಾಣಿ ಹಣಮಂತಪ್ಪ ರುದ್ರಪ್ಪ:-** ಮಾನ್ಯ ಸಭಾಪತಿಗಳೆ, ಸಣ್ಣ ನೀರಾವರಿ ಸಚಿವರು ಆದಷ್ಟು ಬೇಗ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಸಭಾಪತಿಯವರು:-** ಉತ್ತರವನ್ನು ಪೂರ್ಣವಾಗಿ ಕೊಟ್ಟಿದ್ದೀರಾ? ಅದನ್ನು ಸದನದಲ್ಲಿ ಮಂಡಿಸಿ.

**ಶ್ರೀ ಕೆ.ಸಿ.ನಾರಾಯಣಗೌಡ(ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೆ, ಶೂನ್ಯವೇಳೆಯಲ್ಲಿ ಇಷ್ಟು ದೊಡ್ಡ ಪ್ರಸ್ತಾವನೆಯನ್ನು ಕೊಟ್ಟರೆ ಯಾರಾದರೂ ಮಂತ್ರಿಗಳು ಉತ್ತರ ಕೊಡಲು ಸಾಧ್ಯವೆ. What is this going on? So many issues are raised in Zero Hour.

**ಸಭಾಪತಿಯವರು:–** ಮಂತ್ರಿಗಳು ಹೇಳುತ್ತಿರುವುದು ನಿಜ. ಆದರೆ ಉತ್ತರವನ್ನು ಮಂಡಿಸುತ್ತೇನೆ ಎಂದು ಹೇಳಬೇಕು.

**ಇ) "ರಾಜ್ಯದಲ್ಲಿ ಹಕ್ಕಿ ಜ್ವರ ಹರಡುತ್ತಿರುವ ಬಗ್ಗೆ."**

-----

**ಡಾ: ವೈ.ಎ.ನಾರಾಯಣಸ್ವಾಮಿ**(ಶಿಕ್ಷಕರ ಕ್ಷೇತ್ರ)**:–** ಮಾನ್ಯ ಸಭಾಪತಿಗಳೆ, ಇಡೀ ದೇಶವೇ ಕೊರೋನಾ ಸೋಂಕಿನಿಂದ ತತ್ತರಿಸಿರುವ ಸಮಯದಲ್ಲಿ ಕರುನಾಡಿನಲ್ಲಿ ಹಕ್ಕಿ ಜ್ವರ ಕೂಡಾ ಇರುವುದು ಖಚಿತಗೊಂಡಿದೆ ಎಂದು ಮಾಧ್ಯಮದಲ್ಲಿ ವರದಿಯಾಗಿದೆ.

ಮೈಸೂರು ಹಾಗೂ ದಾವಣಗೆರೆಯಲ್ಲಿನ ಕೆಲವು ಕೋಳಿಗಳಿಗೆ ಹಕ್ಕಿಜ್ವರ ಸೋಂಕು ಹರಡಿರುವುದನ್ನು ಕೇಂದ್ರ ಪಶು ಮತ್ತು ಜೈವಿಕ ಸಂಸ್ಥೆಯ ಪ್ರಯೋಗಾಲಯವು ಖಚಿತಪಡಿಸಿದೆ. ಅಷ್ಟೇ ಅಲ್ಲದೇ ಭೋಪಾಲ್‌ನ ನ್ಯಾಷನಲ್ ಹೈ ಸೆಕ್ಯೂರಿಟಿ ಅನಿಮಲ್ ಡಿಸೀಸಸ್ ಇನ್ಸಿಟ್ಯೂಟ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ಕೂಡ ಸೋಂಕು ದೃಢಪಟ್ಟಿದೆ. ಈ ಹಕ್ಕಿ ಜ್ವರವು ಹಕ್ಕಿಗಳಿಗೆ ಮಾತ್ರವಲ್ಲದೆ ಮನುಷ್ಯರಿಗೂ ಹರಡುವ ಸಾಧ್ಯತೆ ಇದೆ. ಹೀಗಾಗಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವುದು ಅತ್ಯಾವಶ್ಯಕವಾಗಿದ್ದು, ಈ ಕುರಿತು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಈ) "ಗದಗ ಜಿಲ್ಲೆ ಕಪ್ಪತಗುಡ್ಡ ಅರಣ್ಯ ಪ್ರದೇಶಕ್ಕೆ ಬೆಂಕಿ ತಗುಲಿ 50 ಹೆಕ್ಟೇರು ಅರಣ್ಯ ಪ್ರದೇಶ ಹಾಳಾಗಿರುವ ಬಗ್ಗೆ."**

---------

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ವಿಜಯವಾಣಿ, ಕನ್ನಡ ಪ್ರಭಾ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಮುಂತಾದ ಪತ್ರಿಕೆಗಳಲ್ಲಿ ದಿನಾಂಕ:16–3–2020ರಂದು ವರದಿಯಾದಂತೆ ಕಪ್ಪತಗುಡ್ಡಕ್ಕೆ ಮತ್ತೆ ಬೆಂಕಿ: 50 ಹೆಕ್ಟೇರು ವನ್ಯ ಸಂಪತ್ತು ನಾಶ ಎಂಬ ಖೇದಕರ ಸಂಗತಿ ಪ್ರಕಟವಾಗಿದೆ. 'ಗದಗ ಜಿಲ್ಲೆಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂಡರಗಿ ತಾಲ್ಲೂಕಿನ ಡಂಬಳ ಹೋಬಳಿ ವ್ಯಾಪ್ತಿಯಲ್ಲಿ ಹಿರೇವಡ್ಡಟ್ಟಿ ನಾರಾಯಣಪುರ ಮತ್ತು ಡೋಣಿ ಗ್ರಾಮಗಳಿಗೆ ಹೊಂದಿಕೊಂಡ ಕಪ್ಪತಗುಡ್ಡದ ವನ್ಯಧಾಮದಲ್ಲಿ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಆಕಸ್ಮಿಕ ಅಗ್ನಿ ದುರಂತ ಸಂಭವಿಸಿದೆ. ಇದನ್ನು ನಂದಿಸಲು ಅರಣ್ಯ ಇಲಾಖೆಯ 30 ಕ್ಕೂ ಹೆಚ್ಚು ಸಿಬ್ಬಂದಿಯವರು ಸಂಜೆ 5.00 ಗಂಟೆವರೆಗೂ ಹರಸಾಹಸಪಟ್ಟಿರುವರು. ಇದರಿಂದಾಗಿ ಈ ವನ್ಯಧಾಮದಲ್ಲಿರುವ ಹಲವಾರು ಔಷಧಿ ಸಸ್ಯಗಳು, ಸಣ್ಣ ಗಿಡ ಮರಗಳು ಅಲ್ಲದೆ ಗಿಡಗಳಲ್ಲಿ ಗೂಡು ಕಟ್ಟಿದ ಪ್ರಾಣಿ ಪಕ್ಷಿಗಳು ಕೂಡ ನಾಶವಾಗಿರುವುದೆಂದು ವರದಿಯಾಗಿದೆ'

ಕಪ್ಪತಗುಡ್ಡಕ್ಕೆ ಪ್ರತಿ ವರ್ಷ ಬೇಸಿಗೆಯಲ್ಲಿ ಈ ರೀತಿಯ ಘಟನೆಗಳು ನಡೆಯುತ್ತಾ ಬಂದಿದ್ದು. ಈ ಹಿಂದೆ 2016ರಲ್ಲಿ ಇಂತಹ ಅನಾಹುತ ಘಟನೆಗಳ ಕುರಿತು ತನಿಖೆ ನಡೆಸಲು ಅಂದಿನ ಸರ್ಕಾರ ಸಿಐಡಿಗೆ ಅಧಿಕಾರ ನೀಡಿತ್ತು. ಪದೇ-ಪದೇ ಬೆಂಕಿ ಬಿದ್ದು ವನ್ಯ ಸಂಪತ್ತು ನಾಶ ಮಾಡುವ ಕಾರಣಗಳೇನು? ಮತ್ತು ಯಾವ ಅಧಿಕಾರಿಗಳು ನಿರ್ಲಕ್ಷ ವಹಿಸಿದ್ದಾರೆ ಎಂಬುದರ ಬಗ್ಗೆ ಕೂಡಲೇ ಬಹಿರಂಗಪಡಿಸಬೇಕೆಂದು ಆ ಭಾಗದ ಹಿರಿಯರು ಒತ್ತಾಯಿಸಿದ್ದಾರೆ. ಈ ಹಿನ್ನಲೆಯಲ್ಲಿ ಸಿಐಡಿ ವರದಿ ಏನಾಯಿತು? ಮತ್ತು ಇಂತಹ ಘಟನೆಗಳು ಪುನ: ಜರುಗದಂತೆ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಈ ಭಾಗದ ಅಪರೂಪದ ವನ್ಯಜೀವಿ ಧಾಮವನ್ನು ರಕ್ಷಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಅರಣ್ಯ, ಪರಿಸರ ಮತ್ತು ಜೀವಿ ಪರಿಸರ ಇಲಾಖೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಶೂನ್ಯವೇಳೆ ಪ್ರಸ್ತಾಪಕ್ಕೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) "ರಾಜ್ಯದ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಡ್ರೈವಿಂಗ್ ಸ್ಕೂಲ್ ಮಾಫಿಯಾ ಹಾಗೂ ಸಿಬ್ಬಂದಿಯ ಕೊರತೆಯಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ."**

----------

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಗಳೆ, ಜನರಿಗೆ ಸುಗಮ ಸೇವೆ ಒದಗಿಸಬೇಕಾದ ರಾಜ್ಯದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಸಾರ್ವಜನಿಕರಿಗೆ ಡಿ.ಎಲ್ ಹಾಗೂ ಎಲ್.ಎಲ್‌ಗಳಿಗಾಗಿ ಆನ್‌ಲೈನ್‌ನಲ್ಲಿಯೇ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಹೀಗೆ ಸಲ್ಲಿಸುವಾಗ, ಪರೀಕ್ಷೆಯ ದಿನಾಂಕಗಳನ್ನು ನಿಗದಿಪಡಿಸಲು ಸ್ಲಾಟ್ (ಸಮಯಕ್ಕೆ ಸರಿಯಾಗಿ)ಗಳನ್ನು ಪಡೆಯಲು ಸುಮಾರು 30 ದಿನದಿಂದ 40 ದಿನಗಳು ಬೇಕಾಗುತ್ತದೆ. ಸಾಮಾನ್ಯವಾಗಿ 2 ರಿಂದ 7 ದಿನಗಳ ಕಾಲ ಸ್ಲಾಟ್‌ಗಳನ್ನು ಸಾರ್ವಜನಿಕರು ಪಡೆಯಬಹುದಾಗಿರುತ್ತದೆ. ಆದರೆ, ಡ್ರೈವಿಂಗ್ ಸ್ಕೂಲ್‌ಗಳ ಮಾಫಿಯಾದಿಂದ ಸಾರ್ವಜನಿಕರಿಗೆ ದಿನಾಂಕಗಳ ಸ್ಲಾಟ್‌ಗಳೇ ದೊರೆಯುತ್ತಿಲ್ಲ. ಈ ರೀತಿ ನಿಮ್ಮ ಸಮಯಕ್ಕೆ ಸ್ಲಾಟ್‌ಗಳನ್ನು ಪಡೆಯಬೇಕಾದರೆ ನಾವು ಸಹ ಮಧ್ಯವರ್ತಿಗಳಿಗೆ ಹೆಚ್ಚು ಹಣವನ್ನು ಪಾವತಿಸಿ ಪಡೆಯಬೇಕಾಗುತ್ತದೆ.

ಬೆಂಗಳೂರಿನಲ್ಲಿರುವ 10 ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಸರ್ಕಾರದಿಂದ ಮಂಜೂರಾದ ಹುದ್ದೆಗಿಂತ 50% ರಷ್ಟು ಕಡಿಮೆ ಇರುವುದು ವಿಪರ್ಯಾಸವಾಗಿದೆ. ತಲಾ ಒಂದೊಂದು ಆರ್.ಟಿ.ಓ ದಲ್ಲಿ ಇಬ್ಬರು ಇನ್ಸ್‌ಪೆಕ್ಟರ್‌ಗಳಿದ್ದು, ಪ್ರತಿನಿತ್ಯ 30 ರಿಂದ 50 ಜನರಿಗಷ್ಟೆ ಡಿ.ಎಲ್ ಹಾಗೂ ಎಲ್.ಎಲ್ ಪರೀಕ್ಷೆ ನಡೆಯುತ್ತಿದೆ. ಅಗತ್ಯ ಸಿಬ್ಬಂದಿ ಇದ್ದರೆ 150 ರಿಂದ 200 ಜನರಿಗೆ ಕೊಡಬಹುದು. ಒಂದು ಡಿ.ಎಲ್ ಪರೀಕ್ಷೆಗೆ (ಬೈಕು/ಕಾರು) ಕನಿಷ್ಠ 15ರಿಂದ 30 ನಿಮಿಷ ಬೇಕಾಗುತ್ತದೆ. ಆನ್‌ಲೈನ್ ಜತೆಗೆ ಕಾಗದಪತ್ರಗಳ ಮೂಲಕವು (ಮ್ಯಾನುಯಲ್) ದಾಖಲೆಗಳನ್ನು ಸಂಗ್ರಹಿಸಬೇಕಿರುವುದರಿಂದ ಇನ್ಸ್‌ಪೆಕ್ಟರ್‌ಗಳಿಗೆ ಇನ್ನಷ್ಟು ಹೊರೆಯಾಗಿದೆ. ಅಲ್ಲದೆ, ಇಲಾಖೆಯಲ್ಲಿ ಸಾರಥಿ-4 ತಂತ್ರಾಂಶ ಅಳವಡಿಸಲಾಗಿದೆ. ಆದರೆ, ಎಷ್ಟೋ ವರ್ಷಗಳ ಹಳೆ ಕಂಪ್ಯೂಟರ್‌ಗಳೇ ಕಛೇರಿಯಲ್ಲಿವೆ. ಅವು ಬಹುತೇಕ ರಿಪೇರಿಗೆ ಬಂದಿದ್ದು, ಸಾಫ್ಟ್‌ವೇರ್ ಅಪ್‌ಡೇಟ್ ಆಗದ ಕಾರಣ ಕೆಲಸ ನಿರ್ವಹಿಸಲು ಕಷ್ಟವಾಗಿದೆ. ಒಬ್ಬರ ದಾಖಲಾತಿ ಅಪ್‌ಲೋಡ್ ಮಾಡಲು ಗಂಟೆಗಟ್ಟಲೆ ಕಾಯಬೇಕು. ತಂತ್ರಾಂಶ ಬಳಕೆ ಬಗ್ಗೆ ಅಧಿಕಾರಿ ಮತ್ತು ಸಿಬ್ಬಂದಿಗೆ ಸೂಕ್ತ ತರಬೇತಿ ಕೊಡದಿರುವುದು ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸಿದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದಕಾರಣ, ಈ ರೀತಿಯ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಮಧ್ಯವರ್ತಿಗಳ ಹಾವಳಿಯನ್ನು ಹಾಗೂ ವೇಗವಾಗಿ ಸಾರ್ವಜನಿಕರಿಗೆ ತನ್ನದೇ ಸೇವೆಯನ್ನು ಒದಗಿಸಲು ಈ ಇಲಾಖೆಗೆ ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡಿ ಕಂಪ್ಯೂಟರ್ ಸರ್ವರ್‌ಗಳನ್ನು ಮೇಲ್ದರ್ಜೆಗೆ ಏರಿಸಿ ಹಾಗೂ ಮಧ್ಯವರ್ತಿಗಳ ಹಾವಳಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಲಕ್ಷಣ ಸಂಗಪ್ಪ ಸವದಿ( ಉಪ ಮುಖ್ಯಮಂತ್ರಿಯವರು ಹಾಗೂ ಸಾರಿಗೆ ಇಲಾಖೆ ಸಚಿವರು):-**ಮಾನ್ಯ ಸಭಾಪತಿಗಳೇ,ಮಾನ್ಯ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿಯವರು ಶೂನ್ಯವೇಳೆಯಲ್ಲಿ ತಂದಿರುವ ವಿಷಯಕ್ಕೆ ಎಲ್ಲ ಮಾಹಿತಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**10. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಲಿಖಿತ ಹೇಳಿಕೆಗಳ ಮಂಡನೆ**

**ಅ) "ಕೆಎಲ್‌ಇ ಇಂಜಿನೀಯರಿಂಗ್ ವಿದ್ಯಾರ್ಥಿಗಳು ಪಾಕ್ ಪರ ಘೋಷಣೆ ಕೂಗಿರುವ ಬಗ್ಗೆ"**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗೃಹ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ದಿನಾಂಕ: 19–2–2020 ರಂದು ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಮತ್ತು ಶ್ರೀ ಐವನ್ ಡಿ'ಸೋಜಾರವರು ನಿಯಮ 330ರ ಅಡಿಯಲ್ಲಿ "ಕೆಎಲ್‌ಇ ಇಂಜಿನೀಯರಿಂಗ್ ವಿದ್ಯಾರ್ಥಿಗಳು ಪಾಕ್ ಪರ ಘೋಷಣೆ ಕೂಗಿರುವ ಬಗ್ಗೆ" ಪ್ರಸ್ತಾಪಿಸಿದ ವಿಷಯಕ್ಕೆ ಸಚಿವರ ಹೇಳಿಕೆಯನ್ನು ಸದನದಲ್ಲಿ ಮಂಡಿಸುತ್ತೇನೆ.

**(ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಆ)"ಶ್ರೀನಿವಾಸಪುರ ಗ್ರಾಮದಲ್ಲಿರುವ ಹೇಮಾವತಿ ಸಕ್ಕರೆ ಕಾರ್ಖಾನೆ ಬಗ್ಗೆ"**

**----------**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಾರ್ಮಿಕ ಮತ್ತು ಸಕ್ಕರೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ದಿನಾಂಕ: 16-3-2020 ರಂದು ಮಾನ್ಯ ಸದಸ್ಯರಾದ ಶ್ರೀ ಎಂ.ಎ.ಗೋಪಾಲಸ್ವಾಮಿಯವರು ಶೂನ್ಯವೇಳೆಯಲ್ಲಿ "ಶ್ರೀನಿವಾಸಪುರ ಗ್ರಾಮದಲ್ಲಿರುವ ಹೇಮಾವತಿ ಸಕ್ಕರೆ ಕಾರ್ಖಾನೆ ಬಗ್ಗೆ" ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಸಚಿವರ ಹೇಳಿಕೆಯನ್ನು ಸದನದಲ್ಲಿ ಮಂಡಿಸುತ್ತೇನೆ.

**(ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) "ದೈನಂದಿನ ಆಹಾರ ತಯಾರಿಕೆಗೆ ಬೇಕಾಗುವ ಪದಾರ್ಥಗಳಲ್ಲಿ ಒಂದಾದ ಎಣ್ಣೆ ಒಂದು ಅವಿಭಾಜ್ಯ ಅಂಗವಾಗಿದೆ. ಇಂದು ಆ ಎಣ್ಣೆಯಲ್ಲಿ ಆಗುತ್ತಿರುವ ಕಲಬೆರಕೆ ಬಗ್ಗೆ"**

--------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ದಿನಾಂಕ: 16-3-2020 ರಂದು ಮಾನ್ಯ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿಯವರು ಶ್ಯೂನವೇಳೆಯಲ್ಲಿ "ದೈನಂದಿನ ಆಹಾರ ತಯಾರಿಕೆಗೆ ಬೇಕಾಗುವ ಪದಾರ್ಥಗಳಲ್ಲಿ ಒಂದಾದ ಎಣ್ಣೆ ಒಂದು ಅವಿಭಾಜ್ಯ ಅಂಗವಾಗಿದೆ. ಇಂದು ಆ ಎಣ್ಣೆಯಲ್ಲಿ ಆಗುತ್ತಿರುವ ಕಲಬೆರಿಕೆ ಬಗ್ಗೆ" ಪ್ರಸ್ತಾಪಿಸಿದ ವಿಷಯಕ್ಕೆ ಸಚಿವರ ಹೇಳಿಕೆಯನ್ನು ಸದನದಲ್ಲಿ ಮಂಡಿಸುತ್ತೇನೆ.

**(ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) "ಕೊರೋನಾ ವೈರಸ್" ಬಗ್ಗೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಗಳೆ, ದಿನಾಂಕ: 13–3–2020ರಂದು ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ಶೂನ್ಯವೇಳೆಯಲ್ಲಿ **"**ಕರೋನಾ ವೈರಸ್**"** ಬಗ್ಗೆ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಸದನದಲ್ಲಿ ಮಂಡಿಸುತ್ತೇನೆ.

**(ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಗೋವಾದಲ್ಲಿ ನಾಲ್ಕು ಜನ ಕನ್ನಡಿಗರಿಗೆ ಆಗಿರುವ ಅನ್ಯಾಯ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಸರ್ಕಾರದಿಂದ ಸೋಮವಾರ ಉತ್ತರ ಕೊಡಲಾಗುತ್ತದೆ ಎಂದು ಹೇಳಲಾಗಿತ್ತು. ಆದರೆ ಇನ್ನು ಅದಕ್ಕೆ ಉತ್ತರ ಬಂದಿರುವುದಿಲ್ಲ. ಗೋವಾದಲ್ಲಿ ಇವತ್ತಿಗೂ ಅದೇ ವಾತಾವರಣವಿದೆ. ಅಲ್ಲಿ ಇರುವ ಕನ್ನಡಿಗರು ಭಯಭೀತರಾಗಿದ್ದಾರೆ. ಸದನದಲ್ಲಿ ಕೊಟ್ಟಿರುವ ಮಾತಿನಂತೆ ಸರ್ಕಾರ ನಡೆದುಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಬಂದು ಉತ್ತರವನ್ನು ಕೊಡಬೇಕಾಗಿತ್ತು. ಅವರು ಬರುವುದು ಸ್ವಲ್ಪ ತಡವಾಗಿದೆ. ನಾಳೆ ಉತ್ತರವನ್ನು ಕೊಡಿಸಲಾಗುತ್ತದೆ.

**11. <u>ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ</u>**

ಅ) **"2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್‌ನ 362 ಹುದ್ದೆಗಳ ನೇಮಕಾತಿಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ"**

------

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಎರಡು ವಾರಗಳಿಂದ ಸಂವಿಧಾನ ಮೇಲೆ ವಿಶೇಷ ಚರ್ಚೆ ಮಾಡಿ, ಅದರ ಸಾಧಕ-ಬಾಧಕಗಳು ಬಗ್ಗೆ, ಇವತ್ತಿನ ಸ್ಥಿತಿ-ಗತಿಗಳು ಯಾವ ರೀತಿ ಇದೆ, ಹಿಂದೆ ಯಾವ ರೀತಿ ಇತ್ತು ಎನ್ನುವುದರ ಬಗ್ಗೆ ವಿಸ್ತಾರವಾದ ಚರ್ಚೆ ಮಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳು.

**(ಮುಂದು)**

501/17-03-2020/06-50/ಬಿಎಸ್‌ಡಿ-ಎಕೆ

**ಶ್ರೀ ಪಿ.ಆರ್. ರಮೇಶ್ (ಮುಂದು)**

ಅದೇ line ನಲ್ಲಿ ನಿಯಮ 330ರಡಿಯಲ್ಲಿ 362 Gazetted Probationers ಹುದ್ದೆಗಳ ನೇಮಕಾತಿಯಲ್ಲಿ ಆಗಿರುವ ಅಕ್ರಮಗಳ ಕುರಿತು ಎಂದು ಇದೆ. ಆದರೆ ನಾವು ಅಕ್ರಮಗಳ ಕುರಿತು ಪ್ರಸ್ತಾಪ ಮಾಡಿಲ್ಲ. ನಾವು ಪ್ರಸ್ತಾಪ ಮಾಡಿರುವ ವಿಚಾರವನ್ನು ಓದುತ್ತೇನೆ. 2011 ನೇ ಸಾಲಿನ 362 Gazetted Probationers ಹುದ್ದೆಗಳ ನೇಮಕಾತಿಯಲ್ಲಿ ಆದ ವಿಳಂಬದ ಹಿನ್ನೆಲೆಯಲ್ಲಿ ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶ ದಿನಾಂಕ 19-10-2016ರ ಅನುಗುಣವಾಗಿ ರಾಜ್ಯ ಸಚಿವ ಸಂಪುಟ ನಿರ್ಣಯ ಸಂಖ್ಯೆ: ಸಿ-149/2017, ದಿನಾಂಕ 01-03-2017 ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ 09-03-2018ಕ್ಕೆ ಅನುಗುಣವಾಗಿ Advocate General ರವರ ದಿನಾಂಕ 22-10-2019ದ ಹಿನ್ನೆಲೆಯಲ್ಲಿ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದ ಹಲವು ದಾಖಲೆಗಳನ್ನು ಆಧರಿಸಿ, ಸಂವಿಧಾನದ ಅನುಚ್ಛೇದ 323(2) ಸ್ಪಷ್ಟ ಉಲ್ಲಂಘನೆ ಆಗಿರುವ ಕುರಿತು ಸದನದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಮನಕ್ಕೆ ತರಲು ಬಯಸುತ್ತೇವೆ ಎಂದು 7 ಜನರು ಸಹಿ ಮಾಡಿ ಕೊಟ್ಟಿದ್ದೇವೆ. ಆದರೆ Agenda ದಲ್ಲಿ ಇರುವುದನ್ನು ನೋಡಿದರೆ ಬೇರೆ message ಹೋಗುವ ರೀತಿ ಅಕ್ರಮಗಳ ಕುರಿತು ಎಂದು ಇದೆ. ಇದನ್ನು ಸರಿಪಡಿಸಿಕೊಳ್ಳುವ ಬಗ್ಗೆ ಸಭೆಗೆ ವಿನಂತಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ನಮ್ಮ ಈ ಸಭೆ, ವ್ಯವಸ್ಥೆ, ರಾಜ್ಯಾಂಗ ರಚನೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರಚನೆ ಎಲ್ಲವೂ ನಮ್ಮ ಸಂವಿಧಾನದಲ್ಲಿ ಇರುವುದನ್ನು ಪರಿಪಾಲನೆ ಮಾಡಿಕೊಂಡು ನಡೆದುಕೊಂಡು ಬರುತ್ತಿದ್ದೇವೆ. ನಾವು ಸಭೆಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಮಾತನಾಡುತ್ತೇವೆ ಮತ್ತು ಕಾನೂನುಗಳನ್ನು ರಚನೆ ಮಾಡಲು ಹಾಗೂ ಕಾನೂನುಗಳನ್ನು ಉಳಿಸಲು ಮತ್ತು ಸಂವಿಧಾನವನ್ನು ಉಳಿಸಿ, ಅದರಲ್ಲಿರುವಂತೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕಾಗಿದೆ. ಇದಕ್ಕೆ ನಾವು ಇಲ್ಲಿ ಜನ ಪ್ರತಿನಿಧಿಗಳಾಗಿ ಜನರ ಹಿತವನ್ನು ಕಾಪಾಡಲು ಸೇರುತ್ತೇವೆ.

ಇವತ್ತು usual ಆಗಿ KPSC ಎಂದರೆ State ನಲ್ಲಿ ಇರುವ Public Service Commission ಎಂದಾಗುತ್ತದೆ. ಕೇಂದ್ರದಲ್ಲಿ UPSC ಇದ್ದ ಹಾಗೆ ಆಯಾ ರಾಜ್ಯಗಳಲ್ಲಿ Public Service Commission ಗಳು ಇವೆ. ಈ ಅಧಿಕಾರವನ್ನು ನಮ್ಮ ಸಂವಿಧಾನದಲ್ಲಿ ಕೊಟ್ಟಿದ್ದು, ಅದರ ಪ್ರಕಾರ ನಡೆದುಕೊಂಡು ಕರ್ತವ್ಯಗಳನ್ನು ನಿಭಾಯಿಸಬೇಕಾಗಿದೆ. ಅದು ಜನ ಪ್ರತಿನಿಧಿಗಳು ಇರಬಹುದು ಅಥವಾ ಅಧಿಕಾರಿಗಳು ಇರಬಹುದು. ಈ ದಿಸೆಯಲ್ಲಿ Gazetted Probationers 2011 ನೇ batch ನ ನೇಮಕಾತಿಯನ್ನು ಮಾಡಲು ಸರ್ಕಾರವು ಒಪ್ಪಿಗೆ ಕೊಟ್ಟಿರುತ್ತದೆ. ಈ ಒಪ್ಪಿಗೆ ಪಡೆದುಕೊಂಡ KPSC ಯವರು notification issue ಮಾಡಿ, notification ಆಧಾರದ ಮೇಲೆ selection process ಮಾಡುತ್ತಾರೆ. Selection process ಆದಮೇಲೆ list ತಯಾರು ಮಾಡಿ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಅದಕ್ಕಿಂತ ಮುಂಚೆ process ನಲ್ಲಿರುವ ಸಂದರ್ಭದಲ್ಲಿ ಸರ್ಕಾರವು ತಡೆ ಮಾಡುವುದಕ್ಕೆ ಬಹಳಷ್ಟು ಪ್ರಯತ್ನ ಪಡುತ್ತದೆ. ಆ ಪ್ರಯತ್ನ ಪಡುವ ಸಂದರ್ಭದಲ್ಲಿ KPSC ಯವರು ಸರ್ಕಾರದಿಂದ ಬಂದ ಪತ್ರಗಳಿಗೆ ಉತ್ತರವನ್ನು ಏನು ಕೊಡುತ್ತಾರೆಂದರೆ, ' ಈ ಹಂತದಲ್ಲಿ ತಡೆ ಮಾಡುವ ಅಧಿಕಾರ ಸರ್ಕಾರಕ್ಕೆ ಬರುವುದಿಲ್ಲ,' ಎಂದು ಪತ್ರ ಬರೆಯುತ್ತಾರೆ. ತದನಂತರ ಈ ವಿಚಾರ KAT ಗೆ ಹೋಗುತ್ತದೆ. KAT ನಲ್ಲಿ specific ಆಗಿ ಆ ರೀತಿ ಏನಾದರೂ ಮಾಡುವುದಾದರೆ Final List ಆದಮೇಲೆ ಸರ್ಕಾರದವರು ಮಾಡಬೇಕು ಎಂದು ಹೇಳುತ್ತಾರೆ. ಆಗ ಸರ್ಕಾರ ವಾಪಸ್ಸು ತೆಗೆದುಕೊಂಡು Final List ಬರುವವರೆಗೂ ಕಾಯುತ್ತಾರೆ.

**ಶ್ರೀ ಎಸ್. ರುದ್ರೇಗೌಡಃ-** ಮಾನ್ಯ ಸಭಾಪತಿಯವರೇ, one small correction. ಸರ್ಕಾರ notification ಮಾಡುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರುಃ–** ಮಾನ್ಯ ಸದಸ್ಯರು complete ಮಾಡಲಿ.

**Sri P.R. RAMESH:** Mr. Chairman, correction ನಂತರ ಮಾಡೋಣ. If I am wrong, the hon. Member can correct me. ಸರ್ಕಾರಕ್ಕೆ ಬಂದ list ಅನ್ನು ಪರಾಮರ್ಶಿಸಲಾಗುತ್ತದೆ. ಈ ಹಂತದಲ್ಲಿ ಸಂವಿಧಾನದ ಅನುಚ್ಛೇದ 323 ಅನ್ನು ಸ್ವಲ್ಪ ಓದುತ್ತೇನೆ. ಸಂವಿಧಾನದ ಅನುಚ್ಛೇದ 323(1) UPSC ಗೆ ಸಂಬಂಧಪಡುತ್ತದೆ. ಎರಡನೆಯದು State Public Service Commission ಗೆ ಸಂಬಂಧಪಡುತ್ತದೆ. Article 323(2) reads as follows:-

*"323. Reports of Public Service Commissions-*

> *(2) It shall be the duty of a State Commission to present annually to the Governor of the State a report as to the work done by the Commission, and it shall be the duty of a Joint Commission to present annually to the Governor of each of the States the needs of which are served by the Joint Commission a report as to the work done by the Commission in relation to that State…"*

ಆಯಾ ರಾಜ್ಯಗಳಿಗೆ report ಕೊಡುವ provision ಮಾಡಿದ್ದಾರೆ. ಎರಡು State ಗಳಿಗೆ ಒಂದೇ Commission ಇದ್ದಾಗ ಅದರ ಬಗ್ಗೆಯೂ ಹೇಳಿದ್ದಾರೆ. It is as follows:-

> *"…and in either case the Governor shall, on receipt of such report, cause a copy thereof together with a memorandum explaining, as respects the cases, if any, where the advice of the Commission was not accepted…"*

ಹಿಂದೆ ಯಾವತ್ತೂ ಈ ರೀತಿ KPSC accept ಮಾಡದೇ ಇರುವ ಪರಿಸ್ಥಿತಿ ಏರ್ಪಟ್ಟಿರಲಿಲ್ಲ. 2011ರಲ್ಲಿ ಪ್ರಥಮವಾಗಿ ಸರ್ಕಾರವು non-acceptance ಮಾಡುವ ಸಂದರ್ಭ ಬಂದಿತ್ತು. Non-acceptance ಮಾಡಬೇಕಾದರೆ, it further reads,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> *"…the reasons for such non-acceptance to be laid before the Legislature of the State."*

This is the provision of the Constitution. ಈ Constitution provision ಗೆ ಎಷ್ಟು ಪ್ರಾಮುಖ್ಯತೆ ಕೊಡುತ್ತಾರೆ ಎಂಬುದಕ್ಕೆ ಇದನ್ನು ಓದುತ್ತೇನೆ. ಇದು ಗುಜರಾತ್ ಹೈಕೋರ್ಟ್ ಕೊಟ್ಟ judgment ಅನ್ನು ಓದುತ್ತೇನೆ. ನಾನು ಪೂರ್ತಿ judgment ಓದದೇ ಪ್ರಾಮುಖ್ಯತೆ ಇರುವುದನ್ನು ಓದುತ್ತೇನೆ. It reads as follows:-

> *"…where the advice of the Commission was not accepted and the reasons for such non-acceptance, to be laid before the Legislature of the State. Thus, should the Executive be tempted unduly to disregard the advice of the PSC, the representatives of the people will have an opportunity of scrutinizing such action of the Executive and preventing the Executive, in future, from disregarding the considered advice of the Commission. With the checks provided in these Articles, there is a reasonable certainty that the Executive will be disposed to act with caution and not to exercise its powers in an arbitrary fashion…"*

ಅವರ ಇಷ್ಟ ಬಂದ ಹಾಗೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೈಕೋರ್ಟ್ ಹೇಳಿದೆ. It further reads,

> *"…not to exercise its powers in an arbitrary fashion and act as if the Public Service Commission did not exist."*

ಈ bureaucrats ಯಾವುದನ್ನೂ ಗಣನೆಗೆ ತೆಗೆದುಕೊಂಡಿಲ್ಲ. ಅನುಚ್ಛೇದ 323 ಅನ್ನು ಗಣನೆಗೆ ತೆಗೆದುಕೊಳ್ಳದೇ straightaway ದಿನಾಂಕ 14-8-2014 ರಂದು ಒಂದು ಆದೇಶವನ್ನು ಹೊರಡಿಸುತ್ತಾರೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದೇಶದಲ್ಲಿ ಸರ್ಕಾರವು CID ಯ ಮಧ್ಯಂತರ ವರದಿ ಎಂದು ತಿಳಿಸಿದ್ದು this is very important. ಮಧ್ಯಂತರ ವರದಿ, Advocate General ರವರ ಅಭಿಪ್ರಾಯ ಮತ್ತು ಕಾನೂನು ಇಲಾಖೆಯ ಅಭಿಪ್ರಾಯ ಎಂದು ತಿಳಿಸಲಾಗಿರುತ್ತದೆ. ನಾನು ಸ್ವಲ್ಪ ಸಮಯಕ್ಕೆ Advocate General ಆಗಿದ್ದೇನೆ ಎಂದುಕೊಳ್ಳೋಣ. ನಾನು ವಿಧಾನ ಸೌಧ ಅವರದ್ದು ಎಂದು ಅಭಿಪ್ರಾಯ ಕೊಡುತ್ತೇನೆ. That is not final. ಅದು finality ಆಗುವುದಿಲ್ಲ. ಕಾನೂನು ಇಲಾಖೆಯ ಅಭಿಪ್ರಾಯವು ಕಾನೂನು ಆಗುವುದಿಲ್ಲ.

(ಮುಂದು)

(502)/17.03.2020/7.00/ಹೆಚ್‌ವಿ-ಎಕೆ

**ಶ್ರೀ ಪಿ.ಆರ್.ರಮೇಶ್‌ಕುಮಾರ್(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಆ ವರದಿಯ ಆಧಾರದ ಮೇಲೆ ಎಲ್ಲ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಆದೇಶವನ್ನು ಹೊರಡಿಸುತ್ತಾರೆ. ಇದರೊಳಗೆ ಸಾಕಷ್ಟು ನೋಟಿಫಿಕೇಶನ್ಸ್ ಇವೆ. ಇದಕ್ಕೆ ಸಂಬಂಧಪಟ್ಟಿರುವ operative portion ನ್ನು ಮಾತ್ರ ನಾನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. '... ಕೋರಲಾದ ಪತ್ರಗಳನ್ನು ಹಿಂಪಡೆದು 2011ರ ಗೆಜೆಟೆಡ್ ಪ್ರೊಬೇಷನರ್ಸ್‌ಗಳ ನೇಮಕಾತಿ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಆದೇಶಿಸಲಾಗಿದೆ' ಎಂದು ಸರ್ಕಾರ ದಿನಾಂಕ:14.08.2014ರಲ್ಲಿ ಈ ಕ್ರಮವನ್ನು ತೆಗೆದುಕೊಂಡಿರುತ್ತದೆ. ಈ ಕ್ರಮವನ್ನು ತೆಗೆದುಕೊಂಡ ಮೇಲೆ ಯಾರು ಬಾಧಿತರಾಗಿರುತ್ತಾರೆ ಅವರು ಕೆ.ಎ.ಟಿ.ಗೆ ಅಪೀಲ್ ಹೋಗುತ್ತಾರೆ. ಕೆ.ಎ.ಟಿ., 'ಸರ್ಕಾರ ಸಂವಿಧಾನದ ಅನುಚ್ಛೇದ 323ನ್ನು ಉಲ್ಲಂಘನೆ ಮಾಡಿ, ನೀವು ಮಾಡಿರುವುದು ಸರಿಯಲ್ಲ' ಎನ್ನುವಂತಹ ತೀರ್ಮಾನವನ್ನು ಕೊಡುತ್ತದೆ. ಅದರ ಮೇಲೆ ಸರ್ಕಾರ ಹೈಕೋರ್ಟ್‌ಗೆ ಅಪೀಲ್ ಹೋಗಬೇಕಾಗಿತ್ತು. ಇದಕ್ಕೆ ಬದಲಾಗಿ ಅಂದಿನ ಸಚಿವ ಸಂಪುಟ ಸಭೆಯಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಳ್ಳಲಾಗುತ್ತದೆ. ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ, ಅರ್ಜಿ ಸಂಖ್ಯೆ: 6268-6395/2014ರಲ್ಲಿ ದಿನಾಂಕ:19.10.2016ರ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದೇ ಇರಲು ಸಚಿವ ಸಂಪುಟ ನಿರ್ಣಯಿಸಿತು. ಅಂದರೆ, ಕರ್ನಾಟಕ ಆಡಳಿತ ನ್ಯಾಯಮಂಡಳಿ ನೀಡಿದ ತೀರ್ಪಿನ ವಿರುದ್ಧ challenge ಮಾಡದಿರಲು ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುತ್ತದೆ. ಸರ್ಕಾರ challenge ಮಾಡದೇ ಇರುವಂತಹ ಸಂದರ್ಭದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್‌ನಲ್ಲಿ ಸಲ್ಲಿಸಲಾಗುತ್ತದೆ. ಹೈಕೋರ್ಟ್‌ನಲ್ಲಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ರೆಗ್ಯುಲರ್ ರಿಟ್ ಪಿಟಿಷನ್ ಆಗಿ ಪರಿವರ್ತಿಸಲಾಗುತ್ತದೆ. ರೆಗ್ಯುಲರ್ ರಿಟ್ ಪಿಟಿಷನ್ ಆಗಿ ಪರಿವರ್ತನೆ ಹೊಂದಿದ ನಂತರ ಸದರಿ ಪ್ರಕರಣದಲ್ಲಿ ಸರ್ಕಾರ ಪ್ರತಿವಾದಿಯಾಗುತ್ತದೆ. ನಂತರ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೈಕೋರ್ಟ್‌ನಲ್ಲಿ ಸಾಕಷ್ಟು ವಿಚಾರಣೆಗಳು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಯುತ್ತವೆ. ವಿಚಾರಣೆಗಳು ನಡೆದ ಮೇಲೆ ಸರ್ಕಾರ ಮೌಖಿಕ ಹೇಳಿಕೆಯೊಂದನ್ನು ನೀಡುತ್ತದೆ. It is as follows:-

> *"Shri Aditya Sondhi, learned Additional Advocate General for the State, submitted that, the opinion tendered by the Advocate General was discussed in the Cabinet. With regard to the selection process, he submitted that, about 46 candidates were contacted by or on behalf of members/officials of the KPSC. To a pointed query…"*

It is very important.

> *"…with regard to laying of report before the Legislature in compliance with Article 323(2) of the Constitution of India, he submitted that, the report was tabled during February, 2017. He also submitted that, the State Government is seeking sanction from the President of India to prosecute KPSC members."*

ಸನ್ಮಾನ್ಯ ಸಭಾಪತಿಯವರೇ, ನಾನು ಕಳೆದ ತಿಂಗಳು ಸಿ.ಓ.ಡಿ.ಗೆ ಒಂದು ಪತ್ರವನ್ನು ಬರೆದಿದ್ದು, ಆ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತಿವೆ;

> **ವಿಷಯಃ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಬಗ್ಗೆ ಸಂಬಂಧಿಸಿದಂತೆ ವಿಧಾನಸೌಧ ಪೊಲೀಸ್ ಠಾಣೆ ಮೊ.ಸಂ.28/2013 ಪ್ರಕರಣದ ತನಿಖಾ ವರದಿಯ ಮೇಲಿನ ಕಾನೂನು ಕ್ರಮಗಳ ಬಗ್ಗೆ ಮಾಹಿತಿ ನೀಡಲು ಕೋರಿರುವ ಕುರಿತು.**

**'ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಬೆಂಗಳೂರು ವಿಧಾನಸೌಧ ಪೊಲೀಸ್ ಠಾಣೆ ಮೊ.ಸಂ.28/2013ರ ಪ್ರಕರಣದಲ್ಲಿ ಅಂತಿಮ ವರದಿ ಮತ್ತು ದೋಷಾರೋಪಣಾ ಪಟ್ಟಿಯನ್ನು ಸಂಬಂಧಿಸಿದ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆಯೇ ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಕ್ರಮ ಜರುಗಿಸಲಾಗಿದೆಯೇ?'**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬ ಬಗ್ಗೆ ಮಾಹಿತಿ ಕೋರಿ ಸಿ.ಓ.ಡಿ.ಗೆ ಪತ್ರವನ್ನು ಬರೆದಿರುತ್ತೇನೆ. ನನ್ನ ಪತ್ರಕ್ಕೆ ಅವರು ಈ ಕೆಳಕಂಡಂತೆ ಉತ್ತರವನ್ನು ನೀಡಿರುತ್ತಾರೆ;

> **'ಸದರಿ ಪ್ರಕರಣದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅಭಿಯೋಜನಾ ಮಂಜೂರಾತಿ ಪಡೆಯಬೇಕಾಗಿರುವ ಕಾರಣ ಪ್ರಕರಣವು ತನಿಖಾ ಹಂತದಲ್ಲಿರುತ್ತದೆ. ಅಭಿಯೋಜನಾ ಮಂಜೂರಾತಿ ಪಡೆದ ನಂತರ ಸಂಬಂಧಪಟ್ಟ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗುವುದು' ಎಂದು ಮಾಹಿತಿ ನೀಡಿರುತ್ತಾರೆ.**

ಈ ಪತ್ರದಿಂದ ನಮಗೇನು ತಿಳಿದು ಬರುತ್ತದೆಂದರೇ, ಸಿ.ಓ.ಡಿ.ಯವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಏಕೆಂದರೆ, ಯಾವ ಪ್ರಾಧಿಕಾರದಿಂದ ಒಪ್ಪಿಗೆಯನ್ನು ಪಡೆಯಬೇಕಾಗಿತ್ತೋ, ಆ ಪ್ರಾಧಿಕಾರದಿಂದ ಇವತ್ತಿನವರೆವಿಗೂ ಒಪ್ಪಿಗೆಯನ್ನು ಪಡೆದುಕೊಂಡಿಲ್ಲ. ದಿನಾಂಕಃ27.02.2020ಯಲ್ಲಿ ನಾನು ಬರೆದ ಪತ್ರಕ್ಕೆ ಅವರು ಕೊಟ್ಟಿರುವ ಉತ್ತರ ಇದು. ಅವರು ಕೊಟ್ಟಿರುವ ಉತ್ತರದ ಪ್ರಕಾರ ಅವರು ಇಲ್ಲಿಯವರೆಗೆ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ ಮತ್ತು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅಂತಿಮ ವರದಿಯ ಮೇಲೆ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಎಷ್ಟು ಸಮಂಜಸವೆನ್ನುವುದು ನನ್ನ ಪ್ರಶ್ನೆಯಾಗಿದೆ. ಯಾವುದೇ ಅಂತಿಮ ನಿರ್ಧಾರದ ಮೇಲೆ ವರದಿಯನ್ನು ತಯಾರು ಮಾಡಬಾರದೆಂದು ಸುಪ್ರೀಂ ಕೋರ್ಟ್‌ನ ಆದೇಶವಾಗಿದೆ. ಇದರ ಬಗ್ಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಗೊತ್ತಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರ ತೆಗೆದುಕೊಂಡಿರುವ ಈ ಕ್ರಮ ಏನಿದೆ it is also arbitrary. ಇಂತಹ ಸ್ಥಿತಿ ಏರ್ಪಟ್ಟಿರುವಂತಹ ಸನ್ನಿವೇಶದಲ್ಲಿ ಅಡಿಷನಲ್ ಅಡ್ವೊಕೇಟ್ ಜನರಲ್‌ರವರು ನೀಡಿದಂತಹ ಹೇಳಿಕೆಯ ಆಧಾರದ ಮೇಲೆ ನ್ಯಾಯಾಲಯ ದಿನಾಂಕಃ09.03.2018ರಲ್ಲಿ ಒಂದು ಆದೇಶವನ್ನು ಮಾಡುತ್ತದೆ. ಆ ಆದೇಶದಲ್ಲಿ ಒಟ್ಟಾರೆ ನೋಟಿಫಿಕೇಶನ್ ಅನ್ನು ರದ್ದುಪಡಿಸುತ್ತದೆ. ಈ ಆದೇಶದ ಮೇಲೆ ಸುಪ್ರೀಂ ಕೋರ್ಟ್‌ಗೆ ಅಪೀಲ್ ಹೋಗುತ್ತಾರೆ. ಅಲ್ಲಿಯೂ ಇದನ್ನು ಎತ್ತಿ ಹಿಡಿಯುತ್ತಾರೆ. ಸರ್ಕಾರ ಕೊಟ್ಟಂಥ ಮಾಹಿತಿಯ ಆಧಾರದ ಮೇಲೆ ಈ ಆದೇಶವಾಗಿರುತ್ತದೆ. 'Suppression of facts' and 'fraud played on the courts' ಬರುತ್ತದೆ. ನ್ಯಾಯಾಲಯಕ್ಕೆ ಸಂಪೂರ್ಣವಾಗಿರುವ ವಿಷಯವನ್ನು ಅಥವಾ ಮಾಹಿತಿಯನ್ನು ಕೊಡದೇ ಇದ್ದ ಕಾರಣ ಸುಪ್ರೀಂ ಕೋರ್ಟಿನಿಂದ ಆ ರೀತಿಯ ಆದೇಶ ಹೊರಬರುತ್ತದೆ. ಆ ಆದೇಶ ಏನಿದೆ ಅದು fraudulent order ಆಗುತ್ತದೆ. 'Suppression of facts' ಬಂದ ಮೇಲೂ ಹೋಗುತ್ತೆ. ಆದಾದ ಮೇಲೆ ಅಡಿಷನಲ್ ಅಡ್ವೊಕೇಟ್ ಜನರಲ್‌ರವರು ನೀಡಿದ ಹೇಳಿಕೆಯ ಆಧಾರದ ಮೇಲೆ ನೀಡಿರುವ ಆದೇಶಗಳು ಸರಿ ಇಲ್ಲವೆಂದು ತೀರ್ಮಾನವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದುವರಿದಿದೆ)

(503) 17.3.2020 7.10 ಪಿಕೆ:ಆರ್‌ಎನ್

**ಶ್ರೀ ಪಿ.ಆರ್.ರಮೇಶ್ (ಮುಂದು)**

ಮಾನ್ಯ ಸಭಾಪತಿಯವರೇ, ಈ ಒಂದು ಆದೇಶ ನ್ಯಾಯಾಲಯದಲ್ಲಿ ನಿಲ್ಲುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ನಾನು ಒಂದು ಸುಪ್ರಿಂ ಕೋರ್ಟ್ ಜಡ್ಜ್‌ಮೆಂಟ್ ಓದುತ್ತೇನೆ; when a person submits such a wrong information to the court and obtained an order it is always a fraudulent order and it could sustain in the eyes of the laws and "No judgment of a Court, no order of a minister, can be allowed to stand if it has been obtained by fraud.ಇವತ್ತು ಹೈಕೋರ್ಟ್‌ನಿಂದ ಪಡೆದಂತಹ ಒಂದು ಆದೇಶ ಫ್ರಾಡ್ ಆಗಿರುವಂಥ ಆದೇಶವಾಗಿದೆ. ಸರ್ಕಾರ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಕೊಟ್ಟಿರುವ ಆದೇಶದ ಹಿನ್ನೆಲೆಯಲ್ಲಿ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದೆ. ಆದರೆ, ನ್ಯಾಯಾಲಯಕ್ಕೆ ಕೊಟ್ಟ ತಪ್ಪು ಮಾಹಿತಿಯಿಂದ ಇಷ್ಟೆಲ್ಲಾ ಆಗಿರುವಂಥದ್ದು ಇವತ್ತು ಗಣನೆಗೆ ಬಂದಿದೆ. ಈ ರೀತಿ ಇರುವ ಆದೇಶಕ್ಕೆ ಸರ್ಕಾರ ಮನ್ನಣೆ ಕೊಡಬೇಕೇ ಎನ್ನುವುದು ಪ್ರಶ್ನೆಯಾಗಿದೆ. ಕೆ.ಎ.ಟಿಯವರು ಕೊಟ್ಟಿರುವ ಆದೇಶದ ಮೇಲೆ, ಕ್ಯಾಬಿನೆಟ್, ಯಾವುದೇ ಅಪೀಲ್ ಹೋಗಬೇಡಿ ಎಂದು ಹೇಳಿದಾಗ, ಅಪೀಲ್ ಹೋಗದೇ ಇದ್ದ ಪಕ್ಷದಲ್ಲಿ ಸರ್ಕಾರ ಅದನ್ನು ಒಪ್ಪಿಕೊಂಡಿತು ಎಂದು ಅರ್ಥವಾಗುತ್ತದೆ. ಆದರೆ, ನ್ಯಾಯಾಲಯ ಕೊಟ್ಟಿದ್ದ ಆದೇಶದ ಮೇಲೆ, ನಾವು ಅದರ ಪ್ರಕಾರವೇ ಆ್ಯಕ್ಟ್ ಮಾಡಬೇಕು ಎಂದು ಈಗಿರುವ Advocate General ರವರು ಒಂದು ಅಭಿಪ್ರಾಯ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಅಭಿಪ್ರಾಯದ ಪ್ರತಿಯನ್ನು ತರಿಸಿಕೊಂಡಿದ್ದೇನೆ. ಅದರಲ್ಲಿ ಅವರು 'it will sustain' ಎಂದು ಹೇಳುತ್ತಾರೆ. ಅದು ಹೇಗೆ sustain ಆಗುತ್ತದೆ? How it can be sustained?ಒಂದು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ಕೊಟ್ಟು, ಮೋಸದ ರೀತಿಯಲ್ಲಿ ನ್ಯಾಯಾಲಯದಿಂದ ಆದೇಶ ಪಡೆದುಕೊಂಡು, ಸಂವಿಧಾನದ 323(2) ಅನುಚ್ಛೇದದ ಪ್ರಕಾರ it is a mandatory. ಇದನ್ನು ಮುಖರ್ಜಿ ಕೇಸ್‌ನಲ್ಲಿ ಸುಪ್ರೀಂ ಕೋರ್ಟ್ ಕೂಡ ಹೇಳಿದೆ. ಗುಜರಾತ್ ಹೈಕೋರ್ಟ್ ಕೂಡ, ಇಂತಹ ಒಂದು ಪ್ರಕರಣದಲ್ಲಿ ಇದನ್ನು ಇಡತಕ್ಕಂಥದ್ದು ಬಹಳ ಅವಶ್ಯಕತೆ ಇದೆ ಎಂದು ಹೇಳಿದೆ. It is a mandatory ಎಂದು ಹೇಳುತ್ತಾರೆ. 2011ರ ಬ್ಯಾಚ್‌ಅನ್ನು 2014ರಲ್ಲಿ ಹಿಂದಕ್ಕೆ ತೆಗೆದುಕೊಂಡು, 2020ರವರೆಗೂ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದು ಆಶ್ಚರ್ಯಕರವಾದ ಕೆಲಸವಾಗಿದೆ. ಹಾಗಾಗಿ, ಇವತ್ತು ಈ ಕೆಲಸವನ್ನು ಸರ್ಕಾರ ಯಾವರೀತಿ ನಿರ್ವಹಿಸಲು ಹೊರಟಿದೆ ಎಂಬುದರ ಬಗ್ಗೆ ಉತ್ತರ ಕೊಟ್ಟಮೇಲೆ ನಾನು interpret

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತೇನೆ ಮತ್ತು ಸರಿಯಾದ ಕ್ಲ್ಯಾರಿಫಿಕೇಷನ್ ಕೇಳುವುದಕ್ಕೆ ತಯಾರಾಗುತ್ತೇನೆ. ಮಾನ್ಯ ಸಚಿವರು ಇದನ್ನು ಕ್ಲ್ಯಾರಿಫೈ ಮಾಡಿದರೆ ನಂತರ ನಾನು ಪ್ರಶ್ನೆ ಕೇಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಕಾನೂನು ಮಂತ್ರಿಗಳಿಗೆ ಇದು ಗೊತ್ತಿಲ್ಲದ ವಿಷಯವಲ್ಲ. ಸಂವಿಧಾನದ 323(2)ರ ಉಲ್ಲಂಘನೆಯಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಇದರ ಪ್ರಕಾರ ರಾಜ್ಯ ಸರ್ಕಾರ ಅಧಿಸೂಚನೆಯನ್ನು ರದ್ದುಪಡಿಸಿದರೆ ಅಥವಾ ಹಿಂಪಡೆದರೆ ಈ ವಿಷಯವನ್ನು ಕೆಪಿಎಸ್‌ಸಿ ತನ್ನ ವಾರ್ಷಿಕ ವರದಿಯಲ್ಲಿ ಪ್ರಕಟಪಡಿಸಬೇಕು. ಆ ವರದಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರು ವಿಧಾನ ಮಂಡಲದ ಉಭಯ ಸದನಗಳಲ್ಲಿ ಕಡ್ಡಾಯವಾಗಿ ಮಂಡಿಸಬೇಕು. ಆದರೆ 2011ನೇ ಸಾಲಿನ ವಾರ್ಷಿಕ ವರದಿಯನ್ನು ಸದನದಲ್ಲಿ ಮಂಡಿಸುವ ವೇಳೆ ರೀತಿ-ರಿವಾಜುಗಳನ್ನು ಪಾಲನೆ ಮಾಡಿಲ್ಲ. ಮಾನ್ಯ ಸಭಾಪತಿಯವರೇ, ಇಲ್ಲಿ ನಮ್ಮ ಶಾಸಕರ ಹಕ್ಕುಚ್ಯುತಿಯೂ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾವೆಲ್ಲ ಪತ್ರ ಬರೆದಿದ್ದೇವೆ. ಅವರು, ಇದನ್ನು ನೋಡುತ್ತೇವೆ; ನಮಗೂ ಸಂಶಯ ಬರುತ್ತಿದೆ ಎಂಬ ಮಾತನ್ನು ಹೇಳಿದರು. ನೇಮಕಾತಿ ಅಧಿಸೂಚನೆಯನ್ನು ಹಿಂಪಡೆಯಬೇಕಾದರೆ ಕರ್ನಾಟಕ ಲೋಕಸೇವಾ ಆಯೋಗ ತನ್ನ ವಾರ್ಷಿಕ ವರದಿಯಲ್ಲಿ ಪ್ರಕಟಿಸಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ಈ ಕುರಿತು ಸಾಕಷ್ಟು ಕೋರ್ಟ್ ಡಿಸಿಷನ್‌ಗಳಿವೆ, ಅವುಗಳ ಬಗ್ಗೆ ನಾನು ಮಾತನಾಡುವುದಿಲ್ಲ. 362 ಜನರಲ್ಲಿ 10 ಜನರಾದರೂ ನ್ಯಾಯವಾಗಿರುತ್ತಾರೆ ಅಲ್ಲವೇ? ಭ್ರಷ್ಟಾಚಾರ ನಡೆದಿದೆ ಎಂದು ಹೇಳುತ್ತಿದ್ದೀರಿ, ಆದರೆ ಅದು ಸಾಬೀತು ಆಗಿದೆಯೇ? 362 ಜನರಲ್ಲಿ ಒಬ್ಬರಾದರೂ ಮೆರಿಟ್ ಮೇಲೆ ಬಂದಿರುವುದಿಲ್ಲವೇ? ನ್ಯಾಯವಾಗಿದ್ದವರಿಗೂ ಅನ್ಯಾಯ ಮಾಡುವುದು ಎಷ್ಟು ಸರಿ? ಸರ್ಕಾರದ ಒಂದು ತಪ್ಪು ಕಲ್ಪನೆ ಇದೆ. ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಅಂದಿನ ಮುಖ್ಯಮಂತ್ರಿಗಳಿಗೂ ನಾನು ಹೇಳಿದ್ದೆ. ಯಾವುದೋ prejudice mind ನಿಂದ ಆಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದೆ. ಯಾರೋ ಒಬ್ಬ ಅಧಿಕಾರಿ ಅಥವಾ Advocate General ಅಥವಾ ಯಾರೋ ಒಬ್ಬ ನ್ಯಾಯವಾದಿ ತಪ್ಪು ಮಾಡಿದ್ದಕ್ಕೆ ಇಡೀ . . . ಮಾನ್ಯ ಕಾನೂನು ಮಂತ್ರಿಗಳಿಗೆ ಇವೆಲ್ಲ ಗೊತ್ತಿರುತ್ತದೆ, ಇದರ ಬಗ್ಗೆ ಸಾಕಷ್ಟು ಅಭ್ಯಾಸ ಮಾಡಿರುತ್ತೀರಿ. ಕೋರ್ಟ್‌ಗಳಲ್ಲಿ ನಾವೇನಾದರೂ ಮಂಡನೆ ಮಾಡಬೇಕಾದರೆ, ಕೋರ್ಟ್‌ನವರು based on the evidence ತೀರ್ಮಾನ ಮಾಡುತ್ತಾರೆ. ಸೂಕ್ತ ದಾಖಲೆಗಳನ್ನು ಒದಗಿಸದೇ ಇದ್ದರೆ ಕೊಲೆ ಮಾಡಿರುವವನೂ ಸಹ ಉಳಿದುಕೊಳ್ಳುತ್ತಾನೆ. ನ್ಯಾಯವಾಗಿ ನೇಮಕಾತಿ ಆಗಿದ್ದಂತಹ ಈ 362 ಜನರಿಗೆ ಸರ್ಕಾರ ಸರ್ವಿಸ್‌ಗೆ ಜಾಯಿನ್ ಆಗಲು ಆರ್ಡರ್ ಕೊಟ್ಟರು. ಆದರೆ, ಜಾಯಿನ್ ಆಗಿ 3-4 ವರ್ಷದ ನಂತರ ಈ ರೀತಿ ಮಾಡಿದರೆ ಪರಿಸ್ಥಿತಿಗಳು ಏನಾಗುತ್ತವೆ? ನಾನು ಮತ್ತು ಮಾನ್ಯ ಸದಸ್ಯರಾದ ರಮೇಶ್‌ರವರು ಚರ್ಚೆ ಮಾಡಿ, ಅವರಿವರ ಕಡೆ ಕೇಳಿ, ಎಕ್ಸ್‌ಪರ್ಟ್‌ಗಳನ್ನು ಕೇಳಿ ಇದನ್ನು ಸದನದ ಮುಂದೆ ತಂದೆವು. ಈ ಹಿನ್ನೆಲೆಯಲ್ಲಿ ಯಾರೋ ಮಾಡಿದಂತಹ ತಪ್ಪಿಗೆ ಇಷ್ಟು ಜನರನ್ನು ಬಲಿ ಕೊಡುವುದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಿಯಾದುದಲ್ಲ. ಮಾನ್ಯ ಸಭಾಪತಿಯವರೇ, ಮೊನ್ನೆ ಕೂಡ ಕೆಪಿಎಸ್‌ಸಿ ಸೆಲೆಕ್ಷನ್ ಆಯಿತು. ಯಾರೋ ಒಬ್ಬ, ಇದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಕೋರ್ಟಿಗೆ ಹೋದರೆ ಏನಾಗುತ್ತದೆ? ಇದು ಹೀಗೆ ನಡೆಯುತ್ತಿದ್ದರೆ ಕೆಪಿಎಸ್‌ಸಿಯಿಂದ ಸೆಲೆಕ್ಷನ್ ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮಾನ್ಯ ಸಚಿವರೇ, ನಾವು ಕೆಎಟಿ ಆರ್ಡರ್‌ಗಳನ್ನು, ಸಾಕಷ್ಟು ಕೋರ್ಟ್ ಆರ್ಡರ್‌ಗಳನ್ನು ಸ್ಟಡಿ ಮಾಡಿದ್ದೇವೆ. ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಮೊದಲ ಸ್ಥಾನ ಬಂದ ಒಬ್ಬ ಹೆಣ್ಣು ಮಗಳಿಗೆ ಕಡಿಮೆ ಅಂಕಗಳನ್ನು ಹಾಕಿ ಸೆಲೆಕ್ಷನ್ ಆಗದೇ ಇದ್ದಾಗ ಆಕೆ ಕೋರ್ಟ್‌ಗೆ ಹೋಗಿ, ನ್ಯಾಯ ಪಡೆದುಕೊಂಡ ಉದಾಹರಣೆ ಇದೆ. ಈ 362 ಜನ ಯಾರಿದ್ದಾರೋ ಇವರಲ್ಲಿ ಸುಮಾರು 100 ಜನ ಈಗಾಗಲೇ ಬೇರೆ ಕಡೆ ಕೆಲಸ ಮಾಡುತ್ತಿದ್ದಾರೆ ಅಲ್ಲದೇ, ಇವರಲ್ಲಿ ಅನೇಕ ಜನ ಎರಡನೆಯ ಸಲ ಕೆಪಿಎಸ್‌ಸಿಗೆ ಸೆಲೆಕ್ಷನ್ ಆಗಿ ಬೇರೆ ಬೇರೆ ಇಲಾಖೆಗಳಿಗೆ ಆಯ್ಕೆಯಾಗಿದ್ದಾರೆ. ಅವರಲ್ಲಿ ಈಗ ಬಹಳ ಕಡಿಮೆ ಜನ ಉಳಿದಿದ್ದಾರೆ. ಇವರ ಜೀವನ ಏಕೆ ಹಾಳು ಮಾಡುತ್ತೀರಿ? ಸರ್ಕಾರ ಈ ಕುರಿತು ವಿಚಾರ ಮಾಡಬೇಕು. ನಮ್ಮ ರಾಜ್ಯದಲ್ಲಿ ನಡೆಯುವಂತಹ ನೇಮಕಾತಿಗಳೆಲ್ಲಾ ಮೆರಿಟ್ ಮೇಲೆ ನಡೆಯುತ್ತದೆಯೇ? ಈ ರೀತಿಯ ನೇಮಕಾತಿಗಳಲ್ಲಿ ಎಷ್ಟೆಷ್ಟು ಅನ್ಯಾಯವಾಗುತ್ತದೆ ಎಂದು ನಮಗೆ ಗೊತ್ತು ಮತ್ತು ಅನ್ಯಾಯವಾಗಿರುವಂಥದ್ದು ಮುಚ್ಚಿ ಹೋಗಿರುವುದೂ ಇದೆ. ಕೆಪಿಎಸ್‌ಸಿ ಆಯ್ಕೆಯ ಸಮಯದಲ್ಲಿ ನಡೆಯುವ ಪ್ರಕ್ರಿಯೆಯಲ್ಲಿ ಎಲ್ಲರೂ ಅವ್ಯವಹಾರದಲ್ಲಿ ಭಾಗವಹಿಸುತ್ತಾರೆ ಎಂದು ನಾನು ಹೇಳುವುದಿಲ್ಲ. ಕೆಪಿಎಸ್‌ಸಿಯಲ್ಲಿ ಅನೇಕ ಜನ ಒಳ್ಳೆಯವರಿದ್ದಾರೆ, ನ್ಯಾಯಕ್ಕಾಗಿ ಬಡಿದಾಡುವವರೂ ಇದ್ದಾರೆ. ಅಂಥದ್ದರಲ್ಲಿ ಈ ರೀತಿಯಾದದ್ದು ಖಂಡಿತಾ ಸರಿಯಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ವಿಚಾರ ಮಾಡಬೇಕು. ಯಾವುದೋ ಒಂದು ತಪ್ಪಿಗೆ, ಯಾರೋ ಒಬ್ಬರು ಸಬ್‌ಮಿಟ್ ಮಾಡಿದ ಮೂರ್ಖತನಕ್ಕೆ . . .ಸರ್ಕಾರದ ವಕೀಲರು ಅಥವಾ ಸರ್ಕಾರದ Advocate General ಗಳು ಇವೆಲ್ಲವನ್ನೂ ನೋಡಬೇಕು ಅಲ್ಲವೇ? ಆ ಮಂದಿಯನ್ನು ನೋಡಿದರೆ ಕಣ್ಣೀರು ಬರುತ್ತದೆ, ಏಕೆಂದರೆ ಅವರಿಗೆ ಅಷ್ಟು ಅನ್ಯಾಯವಾಗಿದೆ. ಮಾನ್ಯ ಸಭಾಪತಿಯವರೇ, ನಮ್ಮ ಕಡೆ ಹಲಗಲಿ ಎನ್ನುವ ಊರಿನ ಹುಡುಗ ಬಹಳ ಕಷ್ಟಪಟ್ಟು ಓದಿ ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಪಾಸ್ ಆಗಿದ್ದಾನೆ. ಅಂಥವರಿಗೆ ಅನ್ಯಾಯವಾಗುವುದು ಸರಿಯಲ್ಲ. ಮಾನ್ಯ ಸಚಿವರಿಗೆ ಸಾಕಷ್ಟು ತಿಳುವಳಿಕೆ ಇದೆ; ತಾವು ಸಾಕಷ್ಟು ನಿಯಮಗಳನ್ನು ಬಲ್ಲಿರಿ. ಈ ಅನ್ಯಾಯವನ್ನು ಸರಿಪಡಿಸಬೇಕೆಂದು ಆ ವಿದ್ಯಾರ್ಥಿಗಳ ಪರವಾಗಿ ಕೇಳಿಕೊಳ್ಳುತ್ತೇನೆ. ಸ್ವಲ್ಪ ಕಾಲ ಸರ್ಕಾರಿ ಸೇವೆಯನ್ನು ಮಾಡಿ, ನಂತರ ಅವರನ್ನು ತೆಗೆದು ಹಾಕಿರುವುದು ಸರಿಯಲ್ಲ. ಯಾರೋ ಭ್ರಷ್ಟಾಚಾರ ಮಾಡಿದ್ದಾರೆ ಎಂದು ಹೇಳಿದರೆ, ಅವರಲ್ಲಿ ಒಬ್ಬರನ್ನಾದರೂ ಕಂಡು ಹಿಡಿಯಬೇಕು ಅಲ್ಲವೇ? ಇಂತಹ ಹುಡುಗ ಇಷ್ಟು ದುಡ್ಡು ಕೊಟ್ಟಿದ್ದಾನೆ, ಯಾರೋ ಒಬ್ಬ ಕೆಪಿಎಸ್‌ಸಿ ಸದಸ್ಯರ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದಾರೆ ಎಂದೇನಾದರೂ ಸಾಕ್ಷಿ ಇರಬೇಕಲ್ಲವೇ? ಇವೆಲ್ಲ ಏನೂ ಇಲ್ಲ. ಒಂದು ವೇಳೆ ಭ್ರಷ್ಟಾಚಾರ ಆಗಿದ್ದರೆ ಆ ಸದಸ್ಯರನ್ನು ಏಕೆ ಬಿಟ್ಟಿರಿ? ಈ ಸದಸ್ಯರದ್ದು ಏನೂ ತಪ್ಪಿಲ್ಲ ಎಂದು ಮಾನ್ಯ ರಾಜ್ಯಪಾಲರೇ ಹೇಳಿದರು. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರು ಈಗ ನಿವೃತ್ತಿ ಕೂಡ ಆಗಿದ್ದಾರೆ. ಅಂದರೆ ಅವರ ಮೇಲೆ ಏನೂ ಕ್ರಮ ಆಗದೇ ಇರುವಾಗ ಈ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುವಂತಹ ಕೆಲಸ ಏಕೆ ಆಗುತ್ತಿದೆ? ಒಬ್ಬ ಸದಸ್ಯ ಭ್ರಷ್ಟಾಚಾರ ಮಾಡಿದ್ದ, ಅದಕ್ಕೆ ಆತನಿಗೆ ಶಿಕ್ಷೆಯಾಗಿದೆ ಅಥವಾ ಅವನ ಮೇಲೆ ಯಾವುದೋ ಒಂದು ಕ್ರಮವಾಗಿದೆ ಎನ್ನುವುದಿದ್ದರೆ ಅದರ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಿ.

(ಮುಂದು . . .)

**(504) 17-03-2020 7.20 ಡಿಎಸ್-ಆರ್‌ಎನ್**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):-**

ಯಾವುದಾದರು ಹುಡುಗರು ಭ್ರಷ್ಟಾಚಾರ ಮಾಡಿ ಹಣ ಕೊಡುವಾಗ ಸಿಕ್ಕಿಹಾಕಿಕೊಂಡಿದ್ದಾರೆಯೇ? ಇದರಲ್ಲಿ ಒಂದು ನಯಾಪೈಸೆಯಷ್ಟು ಯಾವುದೇ ತಪ್ಪು ಆಗಿಲ್ಲ. ಡಿಪಿಎಆರ್ ಗೆ ಬಂತು, ಅವರು ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಕೇಳಿದರು. ಆ ಅಡ್ವೋಕೇಟ್ ಜನರಲ್ ಯಾರೇ ಇರಲಿ, ಅವರು ನ್ಯಾಯಾಲಯಕ್ಕೆ ಏನು ವಿವರಗಳನ್ನು ಸಲ್ಲಿಸುತ್ತಾರೆಯೋ ಅದೇ ಸರಿ ಎಂದು ಹೇಳುತ್ತಾರೆ. ಈಗ ಬಂದವರು ಬದಲು ಮಾಡಿಕೊಟ್ಟಿದ್ದಾರೆ. ಸರಿಯಾದ ಅಭಿಪ್ರಾಯವನ್ನು ಕೊಟ್ಟಿಲ್ಲ ಎಂದು ಚರ್ಚೆಯಾದಾಗ ಬಂದಿದೆ. ಈ ಹಿನ್ನಲೆಯಲ್ಲಿ ಯಾರೋ ಮಾಡಿದ ತಪ್ಪಿಗೆ ಈ ವಿದ್ಯಾರ್ಥಿಗಳು ಬಲಿಯಾಗಬಾರದು ಎಂದು ಹೇಳಬಯಸುತ್ತಿದ್ದೇನೆ. ಅವರಂತಹ ಸಚಿವರು ಇದ್ದಾಗ ನ್ಯಾಯ ಕೊಡದಿದ್ದರೆ ಮತ್ತೆ ಯಾವಾಗಲೂ ನ್ಯಾಯ ಸಿಗುವುದಿಲ್ಲ. ಮಾನ್ಯ ಸಚಿವರು ಹೋಗಿ ಪರಿಶೀಲಿಸಲಿ. ನಾವು ಹೇಳುವುದನ್ನು ಮಾನ್ಯ ಸಚಿವರು ನಂಬುವುದು ಬೇಡ ಅಥವಾ ನಾವು ಹೇಳಿರುವುದೇ ವೇದ ವಾಕ್ಯ ಎಂದು ತಿಳಿಯುವುದು ಬೇಡ. ನಾವು ಕಳೆದ ವಾರದಿಂದ ಸಾಕಷ್ಟು ಮಾಹಿತಿಯನ್ನು ತರಿಸಿದ್ದೇವೆ. ನಮ್ಮ ಹತ್ತಿರ ಸಾಕಷ್ಟು ದಾಖಲಾತಿಗಳಿವೆ. ಇದರ ಬಗ್ಗೆ ಪಿಹೆಚ್‌ಡಿ ಮಾಡಬಹುದಾದಷ್ಟು ಅಧ್ಯಯನವನ್ನು ನಾನು ಮಾಡಿದ್ದೇನೆ. ಈ ಹಿನ್ನಲೆಯಲ್ಲಿ ದಯಮಾಡಿ ಅವರಿಗೆ ನ್ಯಾಯ ಒದಗಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿಸುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಪಿ.ಆರ್.ರಮೇಶ್‌ರವರು, ಹಿರಿಯರಾದಂತಹ ಮಾನ್ಯ ಬಸವರಾಜ ಹೊರಟ್ಟಿಯವರು ಪ್ರಸ್ತಾಪ ಮಾಡಿದ್ದಾರೆ. ಇದೊಂದು ಬಹಳ ಗಂಭೀರವಾದಂತಹ ವಿಷಯ. ಈಗಾಗಲೇ ಇದರ ಬಗ್ಗೆ ಮಾನ್ಯ ಕಾನೂನು ಸಚಿವರಿಗೆ ಎಲ್ಲಾ ಮಾಹಿತಿ ಇದೆ. ಈ ಕೆಪಿಎಸ್‌ಸಿ ಆಯ್ಕೆ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗಂತೂ ಪ್ರತಿಯೊಂದು ಆಯ್ಕೆಯಲ್ಲೂ ಕೂಡ ಗೊಂದಲ ಮತ್ತು ದೊಡ್ಡ ಸಮಸ್ಯೆಯಾಗಿದೆ. ಯಾವುದೇ ಪಾರದರ್ಶಕ ನಿಯಮಗಳನ್ನು ಅಳವಡಿಸಿದ್ದರೂ ಕೂಡ ಪದೇಪದೇ ಇಂತಹದ್ದು ಬರುತ್ತಿದೆ. ಆದರೆ 2011ನೇ ಸಾಲಿನಲ್ಲಿ ಏನು ಪರೀಕ್ಷೆ ಬರೆಯುತ್ತಾರೆ, ಈ ವಿಷಯದ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಪಿ.ಆರ್.ರಮೇಶ್‌ರವರು ಸಾಕಷ್ಟು ವಿಚಾರಗಳನ್ನು ಬೆಳಕು ಚೆಲ್ಲಿದ್ದಾರೆ. ನಾನು ಒಂದೇ ವಿಚಾರವನ್ನು ಹೇಳಬಯಸುತ್ತಿದ್ದೇನೆ. ಎಲ್ಲಾ ಕಡೆ ಪತ್ರಿಕೆಗಳಲ್ಲಿ ವರದಿಯಾಗಿರುವುದು, ಸಿಐಡಿ ವರದಿ, ಈ ಎಲ್ಲಾ ಕಡೆ ಈ 362 ಜನರಲ್ಲಿ ಆಯ್ಕೆಗೊಂಡವರಲ್ಲಿ 48 ಜನರು ಮಾನ್ಯ ಕೆಪಿಎಸ್‌ಸಿ ಸದಸ್ಯರ ಜೊತೆಯಲ್ಲಿ ದೂರವಾಣಿಯಲ್ಲಿ ಮಾತನಾಡಿದ್ದಾರೆ ಎನ್ನುವಂತಹ ವಿಚಾರವನ್ನು ನಾವು ಕೇಳಿದ್ದೇವೆ. ಆದರೆ, ಎಲ್ಲೂ ಕೂಡ ಮಾನ್ಯ ರಮೇಶ್‌ರವರು ಹೇಳಿದ ಹಾಗೆ ಸಿಐಡಿ ಅಂತಿಮ ವರದಿ ಇವತ್ತಿನವರೆಗೂ ಬಂದಿಲ್ಲ. ಇದರ ಬಗ್ಗೆ ಮಾನ್ಯ ಕಾನೂನು ಸಚಿವರು ಹೇಳಬೇಕು. ಯಾವುದಾದರೂ ತನಿಖೆಯ ಮಧ್ಯಂತರ ವರದಿಯನ್ನೇ ಆಧಾರವಾಗಿಟ್ಟುಕೊಂಡು, ಇವರೆಲ್ಲರನ್ನು ಕೆಲಸದಿಂದ ತೆಗೆದು ಹಾಕುವುದು, ಅವರ ನೇಮಕಾತಿ ಆದೇಶವನ್ನೇ ರದ್ದುಪಡಿಸುವುದು ಈ ಜಗತ್ತಿನ ಕಾನೂನಿನಲ್ಲಿ ಅವಕಾಶ ಇದೆಯೇ? ಇಂಥ ಒಂದು ಕೆಲಸವನ್ನು ಸರ್ಕಾರ ಮಾಡಿದೆ. ಕೆಪಿಎಸ್‌ಸಿ ಪರೀಕ್ಷೆ ಬರೆದು ಮೊದಲನೇ ಬಾರಿಯಲ್ಲೇ ಉತ್ತೀರ್ಣರಾಗುವುದು ಬಹಳ ಅಪರೂಪ. ಎರಡನೇ ಬಾರಿ, ಮೂರನೇ ಬಾರಿ, ನಾಲ್ಕು ಬಾರಿ ಸುಮಾರು ಹತ್ತಾರು ವರ್ಷಗಳ ಕಾಲ ದಿನಕ್ಕೆ ಹತ್ತು ಗಂಟೆ, ಹದಿನೈದು ಗಂಟೆ ಸತತವಾಗಿ ಅಧ್ಯಯನ ಮಾಡಿ ಪರೀಕ್ಷೆ ಬರೆಯುತ್ತಾರೆ. ಯಾರೋ ಕೆಲವರು ಕೊಟ್ಟಂಥ ದೂರಿನ ಮೇಲೆ ಇಡೀ ಎಲ್ಲರ ಭವಿಷ್ಯ ಹಾಳಾಗುತ್ತಿದೆ. ಇವತ್ತು 48 ಜನರು ಕೆಪಿಎಸ್‌ಸಿ ಸದಸ್ಯರ ಜೊತೆಯಲ್ಲಿ ದೂರವಾಣಿ ಮೂಲಕ ಮಾತನಾಡಿದ್ದಾರೆ ಎನ್ನುವುದನ್ನೇ ಆಧಾರವಾಗಿಟ್ಟುಕೊಂಡು ಇವತ್ತು 362 ಜನರ ಜೀವನ ಹಾಳು ಮಾಡಿದ್ದಾರೆ. ಇದು ಎಂತಹ ಸೂಕ್ತವಾದುದೇ? ಇದು ತೀರಾ ಅನ್ಯಾಯದ ಸಂಗತಿ. ಮಾನ್ಯ ಪಿ.ಆರ್.ರಮೇಶ್‌ರವರು ಮಾತನಾಡುತ್ತಾ ಮತ್ತೊಂದು ವಿಚಾರ ಹೇಳಿದರು, ಈಗಾಗಲೇ ರಾಜ್ಯ ಕೆ.ಎ.ಟಿ. ಯಲ್ಲಿ ಈ ಅರ್ಜಿದಾರರ ಪರ ಎತ್ತಿಹಿಡಿದಾಗ, ನಾವು ಮತ್ತೆ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡುವುದಿಲ್ಲ, ಅಪೀಲು ಹೋಗುವುದಿಲ್ಲ ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದರೂ ಕೂಡ ಮತ್ತೊಬ್ಬರು ಯಾರೋ ಹೈಕೋರ್ಟ್‌ಗೆ ಹೋದಾಗ ಹೈಕೋರ್ಟ್‌ಗೆ ಅಡಿಷನಲ್ ಅಡ್ವೊಕೇಟ್ ಜನರಲ್ ರವರಿಂದ ನಾವು ಎರಡೂ ಸದನದಲ್ಲೂ ಕೂಡ ಈ ವಿಚಾರವನ್ನು ಚರ್ಚೆ ಮಾಡಿದ್ದೇವೆ ಎನ್ನುವಂತಹ ಪ್ರಸ್ತಾವನೆಯನ್ನು ಯಾವ ಇಲಾಖಾಧಿಕಾರಿಗಳು ಹೇಳಿಸಿರಬಹುದು. ಇದು ಬಹಳ ಗಂಭೀರವಾದಂತಹ ವಿಚಾರ, ಇದರ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ನಮ್ಮ ಎರಡೂ ಸದನಗಳಲ್ಲೂ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ ಎನ್ನುವಂತಹ ಹಿನ್ನಲೆಯನ್ನು ಅಡಿಷನಲ್ ಅಡ್ವೊಕೇಟ್ ಜನರಲ್ ರವರು ಹೈಕೋರ್ಟ್‌ಗೆ ಕೊಟ್ಟಂತಹ ಸಂದರ್ಭದಲ್ಲಿ ಈ ತೀರ್ಪು ಬಂದಿದೆ. ಇವತ್ತು ನಾವು ಈ ನೇಮಕಾತಿಯನ್ನು ವಜಾ ಮಾಡಬೇಕೆಂದು ಹೈಕೋರ್ಟ್ ತೀರ್ಪು ಕೊಟ್ಟಿದೆ. ಆ ಪದ ಬಳಕೆಯನ್ನು ಅಡಿಷನಲ್ ಅಡ್ವೊಕೇಟ್ ಜನರಲ್‌ರವರು ಮಾಡದಿದ್ದರೆ ಈ ತೀರ್ಪು ಬರುತ್ತಿರಲಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಆದರೆ ಈ ಎರಡೂ ಸದನಗಳಲ್ಲಿ ವಿಷಯವೇ ಮಂಡನೆಯಾಗಿ ಚರ್ಚೆಯಾಗದೇ ಏನು ಮಂಡನೆಯಾಗಿದೆ? ಅಡಿಷನಲ್ ಅಡ್ವೊಕೇಟ್ ಜನರಲ್ ರವರು ಹೇಳಿರುವ ಪ್ರಕಾರ Annual Report ಮಂಡನೆಯಾಗಿದೆ. ಎಲ್ಲಾ ಸಂಘ-ಸಂಸ್ಥೆಗಳ Annual Report ಸದನದಲ್ಲಿ ಮಂಡನೆಯಾಗುತ್ತದೆ ಆ ರೀತಿ ಕೆಪಿಎಸ್‌ಸಿ Annual

Report ಮಂಡನೆಯಾಗಿದೆ. ಆದರೆ ಈ ವಿಷಯಕ್ಕೆ ಸೀಮಿತವಾಗಿರುವಂತಹ ಚರ್ಚೆ ಈ ಎರಡೂ ಸದನಗಳಲ್ಲೂ ನಡೆದಿಲ್ಲ. ಈ ಅಸತ್ಯವನ್ನು ಕೋರ್ಟ್‌ಗೆ ಹೇಗೆ ಯಾವ ಅಧಿಕಾರಿಗಳು ಅಡಿಷನಲ್ ಅಡ್ವೊಕೇಟ್ ಜನರಲ್‌ರವರಿಂದ ಹೇಳಿಸಿದ್ದಾರೆ? ಅಡಿಷನಲ್ ಅಡ್ವೊಕೇಟ್ ಜನರಲ್‌ರವರು ಹೇಳಬೇಕೆಂದರೆ ಸರ್ಕಾರದ ನಿರ್ದೇಶನ ಇರಬೇಕು, ಸರ್ಕಾರದ ನಿರ್ದೇಶನ ಇಲ್ಲದೆ ಯಾವುದೇ ಕಾರಣಕ್ಕೂ ಯಾವುದೇ ವಕೀಲರು ಸರ್ಕಾರದ ಅಭಿಪ್ರಾಯವನ್ನು ಕೋರ್ಟ್ ಮುಂದೆ ಹೇಳಬೇಕೇ ವಿನಃ, ಮಾನ್ಯ ಕಾನೂನು ಸಚಿವರಿಗೂ ಗೊತ್ತಿದೆ. ಅವರು ಸ್ವಇಚ್ಛೆಯಿಂದ ಯಾವುದನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ. ಈ ಒಂದು ಹೇಳಿಕೆ ಮಾಡಿರುವುದರಿಂದ ಈ ನೇಮಕಾತಿ ಪ್ರಕ್ರಿಯೆಯೇ ಇವತ್ತು ಹಾಳಾಗಿದೆ. ಇಷ್ಟು ಜನರ ಬಾಯಿಗೆ ಮಣ್ಣು ಬಿದ್ದಿದೆ. ಕೆಲವರೆಲ್ಲರೂ ಹುಚ್ಚರಾಗುವಂತಹ ಪರಿಸ್ಥಿತಿ ಬಂದಿದೆ. ಕುಟುಂಬದಲ್ಲಿ ದೊಡ್ಡ ಒಡಕು ಉಂಟಾಗಿದೆ. ಅವರೆಲ್ಲರೂ ಬದುಕಿನಲ್ಲಿ ಭರವಸೆಯನ್ನೇ ಕಳೆದುಕೊಂಡುಬಿಟ್ಟಿದ್ದಾರೆ. ಹತ್ತು ವರ್ಷ ಪರಿಶ್ರಮಪಟ್ಟು ಒಂದು ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆಯ್ಕೆ ಪಟ್ಟಿಯಲ್ಲಿ ನನ್ನ ಹೆಸರು ಬಂದು ಇಂತಹ ಸಣ್ಣಪುಟ್ಟ ಕಾರಣಗಳಿಗೋಸ್ಕರ ಸರಿಯಾಗಿ ತನಿಖೆ ನಡೆಯದೆ ಈ ರೀತಿ ಮಾಡಿರುವುದು ಸರಿಯಲ್ಲ. ಕ್ಯಾಬಿನೆಟ್‌ಗೆ ನೋಟ್ ಕೊಟ್ಟಿರುವುದರಲ್ಲಿ ಒಂದನ್ನು ಓದುತ್ತೇನೆ. ಕಂಡಿಕೆ 74 ರಲ್ಲಿ "ಸಿಐಡಿ ವರದಿಯಲ್ಲಿ ಅಂದಿನ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು, ಸದಸ್ಯರು ಹಾಗೂ ಇತರರ ವಿರುದ್ಧ ಆರೋಪ ಮಾಡಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ಲೋಕಸೇವ ಆಯೋಗದ ಅಧ್ಯಕ್ಷರು, ಸದಸ್ಯರು ಹಾಗೂ ಇತರರನ್ನು ಸಂಪರ್ಕಿಸಿರುತ್ತಾರೆ ಎಂಬುದನ್ನು ಹೊರತುಪಡಿಸಿ ಅವರ ವಿರುದ್ಧ ಯಾವುದೇ ವ್ಯಕ್ತಿಗತ ಆರೋಪಗಳಿರುವುದಿಲ್ಲ, ವಾಸ್ತವಿಕ ಸಾಕ್ಷಿಗಳಿಲ್ಲದೆ ಆಯ್ಕೆಯಾದ ಅಭ್ಯರ್ಥಿಗಳು ಕೇವಲ ಕೆಪಿಎಸ್‌ಸಿ ಸದಸ್ಯರು, ಅಧಿಕಾರಿಗಳನ್ನು ಸಂಪರ್ಕ ಮಾಡಿದ ಮಾತ್ರಕ್ಕೆ ಅಪರಾಧವೆಸಗುತ್ತಾರೆ ಎಂದು ಹೇಳಲಾಗದು." ಇದು ಕ್ಯಾಬಿನೆಟ್‌ಗೆ ಕೊಟ್ಟಿರುವಂತಹ ವರದಿ. ಈ ರೀತಿ ಕೆಪಿಎಸ್‌ಸಿ ನೇಮಕಾತಿಗಳಿಗೆ ಎಲ್ಲದ್ದಕ್ಕೂ ಕುತ್ತಾದರೆ ಯಾವ ರೀತಿ ನಂಬಿಕೆ, ಭರವಸೆ ಉಳಿಯುತ್ತದೆ? ನಮ್ಮ ಕೆಪಿಎಸ್‌ಸಿ ಬಗ್ಗೆಯಾಗಲಿ, ಸರ್ಕಾರದ ಬಗ್ಗೆಯಾಗಲಿ ನಂಬಿಕೆ, ಭರವಸೆ ಉಳಿಯುತ್ತದೆ? ಸರ್ಕಾರ ಸಿಐಡಿ ತನಿಖೆಗೆ ಕೊಟ್ಟಾದ ಮೇಲೆ ಮಧ್ಯಂತರ ವರದಿ ಕೊಟ್ಟ ತಕ್ಷಣವೇ ಆ ಮಧ್ಯಂತರ ವರದಿಯನ್ನೇ ಆಧರಿಸಿ ಇವರೆಲ್ಲರನ್ನು ಮನೆಗೆ ಕಳುಹಿಸುವ ಕೆಲಸ ಮಾಡಿದರೆ ಹೇಗೆ? ಇದು ಬಹಳ ಘೋರ ಅಪರಾಧ. ಬಹಳ ಅನ್ಯಾಯವಾಗಿದೆ. ಇವತ್ತು ಇದು ಕಾನೂನಿಗೆ, ನಿಯಮಕ್ಕೆ ವಿರುದ್ಧವಾಗಿದೆ. ಈ ಸದನದಲ್ಲಿ ಕಳೆದ ಆರು ದಿನಗಳಿಂದ ನಾವು ಸಂವಿಧಾನದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಸಂವಿಧಾನದ ಆಶಯಗಳಿಗೆ ಈ ತೀರ್ಮಾನಗಳು ಪೂರಕವಾಗಿದೆಯೇ? ಸಂವಿಧಾನಕ್ಕೆ ನಾವು ಎಷ್ಟೊಂದು ಅಪಚಾರ ಮಾಡುತ್ತಿದ್ದೇವೆ ಎನ್ನುವುದಕ್ಕೆ ಇದು ಒಂದು ನಿರ್ದಶನ ಎಂದು ಹೇಳಬಹುದು. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ. ಇನ್ನು ಸಾಕಷ್ಟು ವಿಚಾರ ಹೇಳುವಂಥದ್ದು ಇದೆ. ಮಾನ್ಯ ಸದಸ್ಯರುಗಳು ಹೇಳುತ್ತಾರೆ. ಆದರೆ ದಯವಿಟ್ಟು ಈ ಅನ್ಯಾಯವನ್ನು ಸರಿಪಡಿಸಬೇಕು. ಸಿಐಡಿ ತನಿಖೆಯ ಅಂತಿಮ ವರದಿ ಬಂದಿಲ್ಲ ಎನ್ನುವ ಹಿನ್ನಲೆಯಲ್ಲಿ ಆ ವರದಿಯನ್ನು ತೆಗೆದುಕೊಂಡು ಈ 362 ಜನರಿಗೂ ಕೂಡ ನೇಮಕಾತಿ ಆದೇಶ ಕೊಡಿಸಬೇಕು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

505/17-3-2020/7-30/bkp-vk

**ಶ್ರೀ ಮರಿತಿಬ್ಬೇಗೌಡ (ಮುಂದು)**

ಇನ್ನೂ ಕೂಡ ಸಿಓಡಿ. ತನಿಖೆಯ ಅಂತಿಮ ವರದಿ ಬಂದಿಲ್ಲವೆಂದು ಹೇಳಿರುವ ಹಿನ್ನೆಲೆಯಲ್ಲಿ ಆ ವರದಿಯನ್ನು ತೆಗೆದುಕೊಂಡು ಈ 362 ಮಂದಿಗೂ ಕೂಡ ಆದೇಶವನ್ನು ಕೊಡಿಸಬೇಕು. ಮತ್ತೆ ಹೆಚ್ಚುವರಿ ಅಡ್ವೋಕೇಟ್ ಜನರಲ್ ರವರು ಯಾರ ಪ್ರೇರಣೆಯಿಂದ ಕೋರ್ಟ್‌ನಲ್ಲಿ ಈ ಎರಡು ಸದನಗಳಲ್ಲಿ ಚರ್ಚೆ ಆಗದೇ ಇರತಕ್ಕಂತಹ ವಿಚಾರವನ್ನು ನಾವು ಚರ್ಚೆ ಮಾಡಿದ್ದೇವೆ ಎನ್ನುವಂತಹದ್ದನ್ನು ಹೇಳಿದ್ದಾರೆ, ಇದರ ಬಗ್ಗೆ ಗಂಭೀರವಾದಂತಹ ತನಿಖೆಯಾಗಿ ಆ ಅಧಿಕಾರಿಗಳ ಮೇಲೆ ಕ್ರಮ ಆಗಬೇಕು. ಈ ಎರಡು ಸದನದ ಕಾನೂನಿನ ಗೌರವ ಉಳಿಸಬೇಕು. ಇದು ಈ ಎರಡು ಸದನದ ಹಕ್ಕುಚ್ಯುತಿಯಾಗುತ್ತದೆ. ಇದರ ಜೊತೆಗೆ ಈ 362 ಮಂದಿಗೂ ಕೂಡ ನ್ಯಾಯವನ್ನು ದೊರಕಿಸಿಕೊಡಬೇಕು. ಇವರುಗಳಿಗೆ ಕೂಡಲೇ ನೇಮಕಾತಿ ಆದೇಶವನ್ನು ಸರ್ಕಾರ ಕೊಡಿಸಬೇಕೆಂದು ಹೇಳಿ ಈ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಬಹಳ ವ್ಯಾಪಕವಾದ ವಿಷಯವನ್ನು ಚರ್ಚೆ ಮಾಡಲಿಕ್ಕೆ ಈ ಸದನದಲ್ಲಿ ತೆಗೆದುಕೊಂಡಿದ್ದೀರಿ. ಈಗಾಗಲೇ ಸನ್ಮಾನ್ಯ ಸದಸ್ಯರ ವಿವರವಾಗಿ ಇದರ ಹಿನ್ನೆಲೆಯನ್ನು ಹೇಳಿದ್ದಾರೆ. 11th batch KPSC selection list publish ಆದಾಗ ಮೈತ್ರಿ ಎನ್ನುವವರು ನಮ್ಮ ಎ.ಜಿ.ರವರಿಗೆ ಒಂದು ಅರ್ಜಿಯನ್ನು ಕೊಟ್ಟು, ಇಲ್ಲಿ ಬಹಳ ಅನ್ಯಾಯವಾಗಿದೆ, ನನಗೆ written test ನಲ್ಲಿ ಅತಿ ಹೆಚ್ಚು ಅಂಕಗಳಿದ್ದರೂ *Viva*-Voce Testನಲ್ಲಿ ಬಹಳ ಕಡಿಮೆ ಅಂಕಗಳನ್ನು ಕೊಟ್ಟಿದ್ದಾರೆ, ನನಗೆ ಯಾರೋ ಒಬ್ಬರು ಸದಸ್ಯರು ದೂರವಾಣಿ ಮಾಡಿ ನನಗೆ ಏನಾದರೂ ಸ್ವಲ್ಪ ನೋಡಿಕೊಂಡರೆ ನಿನಗೆ ಒಳ್ಳೆಯ ಹುದ್ದೆಗೆ ಆಯ್ಕೆ ಮಾಡಬಹುದಾಗಿದೆ, ಇಲ್ಲದಿದ್ದರೆ ಆಗುವುದಿಲ್ಲವೆಂದು ಹೇಳಿದಾಗ ನಾನು ಅದಕ್ಕೆ refuse ಮಾಡಿದೆ. ಆದರೆ, ಮತ್ತೊಂದು ಬಾರಿ ನನಗೆ offer ಮಾಡಿ ಅದು ಆಗದಿದ್ದರೆ ಅದಕ್ಕಿಂತ ಕೆಳಗಡೆ ಹುದ್ದೆಯನ್ನಾದರೂ ಕೊಡುತ್ತೇವೆ, ಏನಾದರೂ ಮಾಡಿ ಎಂದು ಹೇಳಿದ್ದಾರೆಂದು ದೂರು ಕೊಟ್ಟ ಆಧಾರದ ಮೇಲೆ ಅಂದಿನ ಸರ್ಕಾರ ಅದನ್ನು ಸಿಐಡಿ. ವಿಚಾರಣೆಗೆ ನೇಮಕ ಮಾಡಿತು. ಸಿಐಡಿ. ವಿಚಾರಣೆಯಲ್ಲಿ ಇಂತಹ issue ನಡೆದಿರುವುದು ನಿಜ, ಸುಮಾರು 46 ಜನರ ಜೊತೆ ಕೆಪಿಎಸ್‌ಸಿ.ಯ ಕೆಲವು ಸದಸ್ಯರುಗಳು ಫೋನ್‌ನಲ್ಲಿಯೇ ಮಾತುಕತೆ ಮಾಡಿರುವುದು ನಿಜ. ಯಾರಿಗೆ ರಿಟನ್ ಟೆಸ್ಟ್‌ನಲ್ಲಿ ಅತಿ ಹೆಚ್ಚು ಅಂಕಗಳು ಬಂದಿತ್ತು, ಅವರುಗಳಿಗೆ ಬರಿ 75 ಅಂಕಗಳನ್ನು ಕೊಟ್ಟಿದ್ದಾರೆ. ಆದರೆ, ಮತ್ತೆ ಯಾರಿಗೋ 140-150 ಅಂಕಗಳನ್ನು ಕೊಟ್ಟು, ಬಹಳ ಅಂತರವನ್ನು ಕಾಪಾಡಿ ಆಯ್ಕೆ ಪಟ್ಟಿಯಲ್ಲಿ ಸ್ವಲ್ಪ ಏರುಪೇರು ಆಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. There is a case for investigation. ಇದು ಮೇಲ್ನೋಟಕ್ಕೆ ತಪ್ಪಾಗಿರಬಹುದು ಎಂದು ಹೇಳಿ ಮಧ್ಯಂತರ ವರದಿಯನ್ನು

ಕೊಡುತ್ತಾರೆ. ಸರ್ಕಾರಕ್ಕೆ ನಿಯಮ 11(3) ಅಥವಾ (2) ರಲ್ಲಿ ಕೆ.ಪಿ.ಎಸ್.ಸಿ.ಯವರು ಪ್ರಕಟಿಸಿದ ಲಿಸ್ಟ್ ಅನ್ನು partially or wholly withdraw ಮಾಡಲಿಕ್ಕೆ ಅಥವಾ repatriate ಮಾಡಿ ಎಂದು ಹೇಳಲಿಕ್ಕೆ, ಮತ್ತೆ ಯಾರಾದರು ಒಬ್ಬ ಸದಸ್ಯರ ಮೇಲೆ ಅನುಮಾನ ಇದ್ದರೆ ಅವರಿಗೆ posting ಕೊಡಬೇಡ ಎಂದು ಹೇಳಲಿಕ್ಕೆ ನಿಯಮದಲ್ಲಿ ಅವಕಾಶ ಇದೆ. ಈ ವಿಚಾರದಲ್ಲಿ ಸರ್ಕಾರ ಏನು ಮಾಡಿದೆ ಎಂದರೆ ಕೆ.ಪಿ.ಎಸ್.ಸಿ.ಗೆ ಈ ಲಿಸ್ಟ್ ಅನ್ನು undo ಮಾಡಿ ಎಂದು ಹೇಳಿ ಒಂದು ನಿರ್ದೇಶನ ಕೊಟ್ಟಿದೆ. ಕೆ.ಪಿ.ಎಸ್.ಸಿ.ಯವರು ಇದನ್ನು ಮಾಡಲಿಕ್ಕೆ ಆಗುವುದಿಲ್ಲವೆಂದು, it is a constitutional established body. ನಾವು ಈಗಾಗಲೇ ಆಯ್ಕೆ ಪಟ್ಟಿಯನ್ನು ಮಾಡಿರುವುದನ್ನು undo ಮಾಡಲಿಕ್ಕೆ ಆಗುವುದಿಲ್ಲವೆಂದು ವಾಪಸ್ಸು ಹೇಳಿದರು. ಆ ಮಧ್ಯೆ ಒಂದು ಘರ್ಷಣೆಯಾಗಿತ್ತು. ಚುನಾವಣೆ declare ಆಗಿತ್ತು. ಚುನಾವಣೆ declare ಆಗಿರುವುದರಿಂದ ಸಂದರ್ಶನವನ್ನು ಮುಂದೂಡಿ ಎಂದು ಸರ್ಕಾರ ಹೇಳಿತ್ತು. ಆಗ ಕೆ.ಪಿ.ಎಸ್.ಸಿ.ಯವರು ಎರಡು ದಿವಸ ಸಂದರ್ಶನವನ್ನು ಮುಂದೂಡಿದರು. ಚುನಾವಣೆ ಕಮಿಷನ್‌ರವರಿಗೆ ಈ ಬಗ್ಗೆ clarification ಕೇಳಿದರು. ಏಕೆಂದರೆ, ಕೆಲವು ಅಭ್ಯರ್ಥಿಗಳು ಕೆ.ಪಿ.ಎಸ್.ಸಿ. ಹತ್ತಿರ ಹೋಗಿ ಅದಕ್ಕೂ ಇದಕ್ಕೂ ಸಂಬಂಧವಿಲ್ಲ, ಈಗಾಗಲೇ ಪ್ರಕಟಣೆ ಮಾಡಿರುವ ಸಂದರ್ಶನಗಳನ್ನು ಏತಕ್ಕೆ ನಿಲ್ಲಿಸುತ್ತೀರಿ ಎಂದಾಗ ಚುನಾವಣಾ ಆಯೋಗವೇ ಇದಕ್ಕೆ ಅನುಮತಿಯನ್ನು ಕೊಟ್ಟಿದೆ, ಇದನ್ನು ತಡೆಹಿಡಿಯುವ ಅಗತ್ಯವಿಲ್ಲವೆಂದು ಮಾಡಿದರು. ಈ ರೀತಿಯಾದಾಗ ಮತ್ತೆ ಕಾನೂನು ಅಭಿಪ್ರಾಯವನ್ನು ತೆಗೆದುಕೊಳ್ಳುವುದು, ಎ.ಜಿ.ಯವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಅನಿವಾರ್ಯವಾಯಿತು. ಆಗ ಎ.ಜಿ.ಯವರು ಏನು ಹೇಳಿದರು ಎಂದರೆ ನಿಯಮಗಳ ಪ್ರಕಾರ ನೀವು ಈ ಲಿಸ್ಟ್ ಅನ್ನು ತಡೆ ಹಿಡಿಯಬಹುದು ಅಥವಾ ಈ ಲಿಸ್ಟ್ ಅನ್ನು withdraw ಮಾಡಬಹುದು ಎಂದು ಹೇಳಿದರು. ಮತ್ತೆ ಈಗ ಏನು ಆಯ್ಕೆಯಾಗಿದ್ದಾರೆ, this is an invitation. ಈಗ ನಾವು ಸರ್ಕಾರಿ ನೌಕರಿಗೆ ಆಹ್ವಾನವನ್ನು ಕೊಟ್ಟಿರುವುದನ್ನು ಬಿಟ್ಟರೆ ನೇಮಕಾತಿ ಅಲ್ಲ, ಈ ಹಂತದಲ್ಲಿ ನಾವು ತಡೆಯಬಹುದು ಎಂದು ಹೇಳಿದಾಗ ಸರ್ಕಾರ ಅದನ್ನು ತಡೆಯುವ ತೀರ್ಮಾನವನ್ನು ತೆಗೆದುಕೊಂಡಿದೆ. ಆಗ ಅದರಲ್ಲಿ ಕೆಲವು ಅಭ್ಯರ್ಥಿಗಳು ಕೆ.ಎ.ಟಿ.ಯನ್ನು approach ಮಾಡಿದರು. ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ಹೇಳಿದ ಹಾಗೆ ಕೆ.ಎ.ಟಿ.ಯಲ್ಲಿ ಇದರ ಬಗ್ಗೆ ತೀರ್ಮಾನವಾಯಿತು. ಇಲ್ಲ, ಸರ್ಕಾರ ಮಾಡಿರುವುದು ಸರಿಯಾಗಿಲ್ಲವೆಂದು ಹೇಳಲಾಯಿತು. ಬರಿ ಫೋನ್ ಮಾಡಿದರು ಎಂದರೆ ಫೋನ್‌ನಲ್ಲಿ ಏನು ಮಾತನಾಡಿದರು ಎನ್ನುವ ಮಾಹಿತಿ ಇಲ್ಲ, ಯಾರಿಗಾದರೂ ಫೋನ್ ಮಾಡುವುದೇ ತಪ್ಪು ಎಂದು ಹೇಳಿ ಸಿ.ಐ.ಡಿ. ಕೊಟ್ಟ ವರದಿಯನ್ನು ಅಂಗೀಕಾರ ಮಾಡಲಿಕ್ಕೆ ಆಗುವುದಿಲ್ಲ. ಎರಡನೆಯದಾಗಿ, entire ಪಟ್ಟಿಯಲ್ಲಿ ಇರುವವರೆಲ್ಲರೂ ತಪ್ಪು ಮಾಡಿದ್ದಾರೆಂದು ತೀರ್ಮಾನ ಮಾಡಲಿಕ್ಕೆ ಆಗುವುದಿಲ್ಲ. ಅಂತಹದ್ದು ಏನಾದರೂ ಇದ್ದರೆ ನೀವು ನೋಡಬಹುದಾಗಿತ್ತು, ಹುಡುಕಬಹುದಾಗಿತ್ತು, ಕೂಲಂಕಷವಾಗಿ ಪರಿಶೀಲನೆ ಮಾಡಿ, ಅಂತಹವರ ಮೇಲೆ ಶಿಸ್ತಿನ ಕ್ರಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಬಹುದಾಗಿತ್ತು. ಮತ್ತೆ ಈಗ ಏನು ಇಲ್ಲಿ ಹೌಸ್‌ನಲ್ಲಿ valid ಆಗಿ raise ಮಾಡಿದ್ದೀರಿ, 323(2) ಕೆಳಗಡೆ ನೀವು ಶಾಸನ ಸಭೆಯಲ್ಲಿ ಅದನ್ನು explanatory note ಜೊತೆ ಮಂಡಿಸಲಿಲ್ಲ. ಹೀಗಾಗಿ, ನೀವು ಇದನ್ನು ಒಪ್ಪಿಕೊಂಡು ಮುಂದಿನ ಕ್ರಮ ಜರುಗಿಸಬಹುದು ಎಂದು ಹೇಳಿ ಕೆ.ಎ.ಟಿ. ನಿರ್ದೇಶನ ಕೊಟ್ಟಿದೆ. ಆ ನಿರ್ದೇಶನವನ್ನು ಕರ್ನಾಟಕ ಸರ್ಕಾರ ಸ್ಪಷ್ಟವಾಗಿ ತಿರಸ್ಕಾರ ಮಾಡಲಿಲ್ಲ. ಹೀಗಾಗಿ, ಇವರಿಗೆ explanatory note ಕೊಡಬೇಕೆನ್ನುವುದು ಇದ್ದರೂ ಕೂಡ ನಾವು ಏನು ಅದನ್ನು dispute ಮಾಡುತ್ತಿಲ್ಲ, ಕೆ.ಎ.ಟಿ. tribunal ತೀರ್ಮಾನವನ್ನು ನಾವು ಒಪ್ಪಿರುವುದರಿಂದ ಎಂದು ಹೇಳಿ ಒಂದು ಕಡೆ ಭಾವನೆ. ಇನ್ನೊಂದು ಕಡೆ 17ನಲ್ಲಿ ಅಂದರೆ ದಿನಾಂಕ: ಫೆಬ್ರವರಿ 6 ರಿಂದ 17 ರವರೆಗೆ ನಡೆದ ಕಾರ್ಯಕಲಾಪಗಳಲ್ಲಿ ವರದಿಯನ್ನು ಕೊಟ್ಟರು. ಅದರಲ್ಲಿ ಕೆ.ಪಿ.ಎಸ್.ಸಿ. ವರದಿಯಲ್ಲಿ ಪುಟ 122 ನಾನು ಓದುತ್ತೇನೆ:

> *With regard to the recruitment of 362 posts of **Gazetted probationer's 2011,** Notification was issued on 03-11-2011 and applications were invited from the candidates. After conducting Preliminary, Main examination and Personality test, the final select list was published in accordance with the marks secured by the candidates and the existing rules on 21-03-2014 and the same was sent to the Government on 26-03-2014. The Government, after going through all the aspects of CID's Interim report, Advocate Generals' opinion and the Legal Departments opinion, in its order No ಸಿಆಸುಇ 53 ಸೇಲೋಸೇ 2014, ಬೆಂಗಳೂರು, dated 14-08-2014, has rejected the Selection List of 2011 Gazetted Probationers forwarded by the Commission. Some of the selected Candidates approached the Hon'ble KAT against the order of the Government and the Hon'ble Tribunal has granted Interim order of Stay to the said order of the Government. **The Application filed by the Candidates are still pending before the Hon'ble KAT.***

ಎಂದು ಹೇಳಿ ವಾರ್ಷಿಕ ವರದಿಯಲ್ಲಿ ಒಂದು ನೋಟ್ ಅನ್ನು ಸರ್ಕಾರ ಕೊಟ್ಟಿದೆ. ಸರ್ಕಾರ ಶಾಸನ ಸಭೆಗಳಿಗೆ ಹೇಳಲೇ ಇಲ್ಲ ಎಂದು ಇಲ್ಲಿ ಭಾವಿಸಲಿಕ್ಕೆ ಆಗುವುದಿಲ್ಲವೆನ್ನುವುದನ್ನು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. So, this is reflected in the Annual Report of the Karnataka Public Service Commission for the year 2014-15 and this is the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

explanatory note forwarded to the Houses and tabled before the House. ಈಗ ಪ್ರಶ್ನೆ ಏನಾಯಿತು ಎಂದರೆ ನಾವು ಇದನ್ನು ಈಗಾಗಲೇ ಟೇಬಲ್ ಮಾಡಿದ್ದೇವೆಂದು ನಮ್ಮ ಹೆಚ್ಚುವರಿ ಅಡ್ವೋಕೇಟ್ ಜನರಲ್ ರವರು ಹೇಳಿದ್ದಾರೆಂದು ಹೇಳಿದ್ದೀರಿ. ಅ ನಂತರ ಇದನ್ನು ನಮ್ಮ ಸರ್ಕಾರ ಒಪ್ಪಿಕೊಂಡಿದೆ. ಕೆ.ಎ.ಟಿ. ವಿರುದ್ಧವಾಗಿ ಸರ್ಕಾರ ಎಲ್ಲಿಯೂ appeal ಮಾಡಲಿಕ್ಕೆ ಹೋಗಲಿಲ್ಲ. Some other individual, ಬೇರೆಯವರು ಹೈಕೋರ್ಟಿಗೆ ಹೋಗಿ ಪ್ರಶ್ನೆ ಮಾಡಿದರು. ಈ ರೀತಿಯಲ್ಲಿ ತೀರ್ಮಾನವಾಗಿ, ಸರ್ಕಾರವೇ ಸಿ.ಐ.ಡಿ. ವರದಿಯನ್ನು ತರಿಸಿಕೊಂಡು ಸರ್ಕಾರವೇ ಇದೆಲ್ಲವನ್ನೂ ಮಾಡಿದೆ. ಈ ರೀತಿಯಾದಾಗ ನಮಗೇನೂ ನ್ಯಾಯ ಸಿಕ್ಕಿಲ್ಲವೆಂದು ಹೇಳಿ, ನನಗೆ ತಿಳಿದ ಮಟ್ಟಿಗೆ ಶ್ರೀ ರಾಮಚಂದ್ರ ಎನ್ನುವವರು ಹೈಕೋರ್ಟಿಗೆ ಹೋದರು. ಆಗ ಹೈಕೋರ್ಟ್ ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿತು. ಈ ಮಧ್ಯೆ ಅಲ್ಲಿರುವಂತಹ ಅಧ್ಯಕ್ಷರು, ಅಲ್ಲಿ ಇರುವಂತಹ ಕಾರ್ಯದರ್ಶಿ, ಅಲ್ಲಿ ಇರುವಂತಹ 6 ಜನ ಸದಸ್ಯರ ಬಗ್ಗೆ ಕ್ರಮ ಜರುಗಿಸಿದರು. ಅಧ್ಯಕ್ಷರು ಮತ್ತು ಒಬ್ಬ ಮಹಿಳಾ ಸದಸ್ಯರದ್ದು ಇತ್ತು. ಮಹಿಳಾ ಸದಸ್ಯರು ನೇರವಾಗಿ ಇದರಲ್ಲಿ ಭಾಗಿಯಾಗಿದ್ದಾರೆನ್ನುವ ದೃಷ್ಟಿಯಲ್ಲಿ ಅವರನ್ನು ಆ ಹುದ್ದೆಯಿಂದ ಅಮಾನತ್ತು ಮಾಡಬೇಕೆಂದು ಹೇಳಿ ತೀರ್ಮಾನ ತೆಗೆದುಕೊಂಡು ಅದನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿದರು. ಅದನ್ನು ಅವರು ನಾವು forward ಮಾಡಿದ್ದೇವೆಂದು ಹೇಳಿದರು. ಆದರೆ, ಕೋರ್ಟ್ ಏನು ತೀರ್ಮಾನ ತೆಗೆದುಕೊಂಡಿದೆ ಎಂದರೆ, ಕೆ.ಪಿ.ಎಸ್.ಸಿ. ಸದಸ್ಯರನ್ನು ಅಮಾನತ್ತು ಮಾಡಲಿಕ್ಕೆ ರಾಷ್ಟ್ರಪತಿಯವರಿಗೆ ಮಾಹಿತಿ ಇರಲೇಬೇಕು. Governors Order has to be sent to Supreme Court through President of India. ಆ ಕ್ರಮ ಆಗಿಲ್ಲದೇ ಇರುವುದರಿಂದ, you have no authority of suspending this KPSC Member. So, the order is quashed. ಎರಡನೆಯದಾಗಿ ಸನ್ಮಾನ್ಯ ಅಧ್ಯಕ್ಷರು ನಿವೃತ್ತಿಯಾದರು.

ಮುಂದು.

**(506) 17.03.2020 07.40 ಎಸ್‌ವಿ–ವಿಕೆ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):–**

ಅವರನ್ನು ಕೂಡ ಪ್ರಕರಣದಿಂದ ಹೊರಗಿಡಲಾಯಿತು. ಕಾರ್ಯದರ್ಶಿಯವರ ಮೇಲೆ ತನಿಖೆಗಳನ್ನು ಮಾಡಿ ಅವರನ್ನು ಕೂಡ ಈ ದೋಷಗಳಿಂದ ಮುಕ್ತಗೊಳಿಸಲಾಯಿತು. ಆದರೆ ಅಲ್ಲಿ ಇನ್ನೂ ಐದಾರು ಜನ ಸದಸ್ಯರಿದ್ದಾರೆ. ಅವರ ಮೇಲೆ ವಿಧಾನಸೌಧದಲ್ಲಿ ಪ್ರಕರಣ ದಾಖಲಾಗಿತ್ತು ಎಂದು ಹೇಳಲಾಗಿದ್ದು, ನಾವು ಇನ್ನೂ ಅವರನ್ನು prosecute ಮಾಡಲಾಗಿರುವುದಿಲ್ಲ. Who has to give permission for prosecution ಎಂಬುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಜ್ಞಾಸೆಯಾಗಿದೆ. ಆ ಕೆ.ಪಿ.ಎಸ್.ಸಿ. ಸದಸ್ಯರದ್ದೂ ಕೂಡ ತೂಗುಯ್ಯಾಲೆಯಲ್ಲಿದೆ. ಆದ್ದರಿಂದ ಮಾನ್ಯ ರುದ್ರೇಗೌಡರು ಮಾತನಾಡುವುದು ಬೇಡ ಎಂದು ನಾನು ಹೇಳಿದ್ದು. We have not prosecuted them after filing FIR. So, they have failed in charge sheeting them after 6-7 years. ಈಗ ಅವರು charge sheet ಹಾಕಲು ಆಗುವುದಿಲ್ಲ. ನಮಗೆ prosecution ಗೆ ಅನುಮತಿಯನ್ನು ಕೊಡಲು ಆಗುತ್ತಿಲ್ಲವೆನ್ನುವ ಸ್ಥಿತಿಯಲ್ಲಿದ್ದೇವೆ. ಈ ಮಧ್ಯೆ ಸರ್ಕಾರದಲ್ಲಿ ನಾವು ಎಲ್ಲೋ ಒಂದು ಕಡೆ ರಾಜಿಯಾಗಿ ಒಪ್ಪಿಕೊಂಡೆವು. ನಾನು ವಿವರಗಳಿಗೆ ಹೋಗುವುದಿಲ್ಲ. ಅವರೇನಾದರೂ ಕೆಲಸಗಳಿಗೆ ಹೋಗುವುದಾದರೆ ನಮ್ಮದೇನೂ ತಕರಾರಿಲ್ಲ ಎಂದು ಹೇಳಿದೆವು. ಈ ಮಧ್ಯೆ ಏನು ನಡೆಯಿತೆಂದರೆ ಮತ್ತೊಂದು ಬ್ಯಾಚ್‌ಗೆ ಅನಿವಾರ್ಯವಾಗಿ City Municipality Chief Officers and Executive Officers of the Taluk Panchayat ಹುದ್ದೆಗಳಿಗೆ ಬಹಳ ಜರೂರಿದೆ ಎಂದು ನೇಮಕಾತಿ ಆದೇಶಗಳನ್ನು ನೀಡಲಾಯಿತು. Stating conditional appointment, ಅಂದರೆ ಈ ಬ್ಯಾಚ್ ಏನಾದರೂ ಫೇಲ್ ಆದರೆ ನಿಮಗೂ ಕೂಡ ಅದು ಅನ್ವಯಿಸುತ್ತದೆ ಎಂದು ಹೇಳಿದೆವು. ಈ 362 ಜನರಲ್ಲಿಯೇ ಅವರೂ ಸಹ ಬರುತ್ತಾರೆ. ಅವರಿಗೆ ನೇಮಕಾತಿ ಆದೇಶವನ್ನು ನೀಡಲಾಯಿತು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರೇ, Out of 362, after the cabinet meeting ಕೆಲವರಿಗೆ ನೇಮಕಾತಿ ಆದೇಶಗಳನ್ನು ಕೊಟ್ಟಿರಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ರಮೇಶ್ ಅವರೇ, ನಾನೇ ಹೇಳುತ್ತಿದ್ದೇನೆ. We have given Conditional Appointment Orders ಅನ್ನು ಕೊಟ್ಟಿದ್ದೇವೆ. Conditional Appointment Order ಅನ್ನು ಕೊಟ್ಟಾಗ ಪುನಃ ಅದು ಹೇಳಿದ್ದರಲ್ಲ ಎಂಬ ಪ್ರಶ್ನೆ ಬಂದಿತು. That was a list, that was not final. It was merry invitation, not appointment order. Appointment order ಅನ್ನು ಕೊಟ್ಟಿದ್ದವರನ್ನು ಏಕೆ ತೆಗೆಯಲಾಯಿತು ಎನ್ನುವುದು ಇನ್ನೊಂದು ಮೊಕದ್ದಮೆಯಾಯಿತು. ಅದಕ್ಕೂ ಇವತ್ತು ground ಇಲ್ಲದ ಹಾಗೆ ಆಯಿತು. ಇದಾದ ನಂತರ the High Court decided that, ಸರ್ಕಾರವೇ ನೇಮಕಾತಿಯನ್ನು ಮಾಡಿದೆ, ಸರ್ಕಾರವೇ ಸಿ.ಐ.ಡಿ. ವರದಿಯನ್ನು ತರಿಸಿಕೊಂಡಿದೆ. ರಾಜ್ಯ ಸರ್ಕಾರವೇ ಒಪ್ಪಿಕೊಂಡಿದೆ. ಈಗ ಏನೂ ಹೇಳಲು ಉಳಿದಿಲ್ಲ. ಆದ್ದರಿಂದ ನೀವು ಹೇಳಿರುವುದನ್ನು ಜಾರಿ ಮಾಡಬೇಕಾಗುತ್ತದೆ ಎಂದು ಕೆ.ಎ.ಟಿ. ಆದೇಶವನ್ನು ಹೈಕೋರ್ಟ್ ರದ್ದು ಮಾಡಿತು. ಕೆ.ಎ.ಟಿ. ಆದೇಶ ರದ್ದು ಮಾಡಿದ ನಂತರ ನಾವು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿಯನ್ನು ಸಲ್ಲಿಸಿದೆವು. ಸುಪ್ರೀಂ ಕೋರ್ಟ್ we have no consideration, ನಾವು ಇದರಲ್ಲಿ interfere ಆಗಲು ಕಾರಣವಿಲ್ಲ. ರಾಜ್ಯ ಉಚ್ಚ ನ್ಯಾಯಾಲಯವೇ ನೋಡಿಕೊಳ್ಳಬೇಕೆಂದು ನಾಲ್ಕೈದು

ಅಂಶಗಳನ್ನು ಹಾಕಿ this can be taken into consideration by the Hon'ble High Court of Karnataka ಎಂದು ವಾಪಸ್ ಕಳುಹಿಸಿತು. ಪ್ರಕರಣವು remand ಆಯಿತು. ಮತ್ತೆ ಕರ್ನಾಟಕ ಹೈಕೋರ್ಟ್ ಎಲ್ಲಾ ಅಂಶಗಳನ್ನು justify ಮಾಡಿ whatever the earlier decision is, it is final, ನಾವು ಇದರಲ್ಲಿ ಪುನಃ ಏನೂ ಮಾಡುವುದಕ್ಕಾಗುವುದಿಲ್ಲ. ಈ ಮಧ್ಯೆ ಅಭ್ಯರ್ಥಿಗಳು PIL (Public Interest Litigation) ಹಾಕಿಕೊಂಡರು. Impleading Applications ಅನ್ನೂ ಹಾಕಿಕೊಂಡರು. ಅದ್ಯಾವುದನ್ನೂ ಕೋರ್ಟ್ consideration ಗೆ ತೆಗೆದುಕೊಳ್ಳಲಿಲ್ಲ. ಏಕೆಂದರೆ this is a case between the Government and KPSC (Karnataka Public Service Commission) ನಿಮಗೆ ಸಂಬಂಧವಿಲ್ಲ, you are not parties to this. ಆದರೆ ಅವರನ್ನು ದೂರುದಾರರನ್ನಾಗಿ ತೆಗೆದುಕೊಳ್ಳಬೇಕಾಗಿತ್ತೇನೋ ಎಂಬುದು ನನ್ನ ಅಭಿಪ್ರಾಯ. This is for the court to decide. I am not here to comment on the decision of the Judge. ಇವರ Interim Order ಕೂಡ final ಆಗಿ ಏಕೆ ತೆಗೆದುಕೊಂಡಿತು. ಅದನ್ನು ನಾನು ಹೇಳುವುದಕ್ಕಾಗುವುದಿಲ್ಲ. But, the court accepted the CID report as, ಪಕ್ಕಾ ರಿಪೋರ್ಟ್ಎಂದು ತೆಗೆದುಕೊಂಡು ಇಲ್ಲಿ ಕೆ.ಪಿ.ಎಸ್.ಸಿ. ಆಯ್ಕೆಯಲ್ಲಿ ಕ್ರಮಬದ್ಧವಾಗಿ ಆಗಿಲ್ಲ. Something is thereಎಂದು ಈ ಲಿಸ್ಟ್ ಅನ್ನು ಕರ್ನಾಟಕ ಸರ್ಕಾರ withdraw ಮಾಡಿರುವುದನ್ನು ಸಿಂಧುಗೊಳಿಸಿತು. ಸುಪ್ರೀಂಕೋರ್ಟ್‌ನಿಂದ ವಾಪಸ್ ಬಂದ ಮೇಲೆ ಹೈಕೋರ್ಟ್ ಸಹ we stand where we were ಎಂದು ಹೇಳಿತು. ಈ ಎಲ್ಲವನ್ನೂ ನಾವು ಈಗಾಗಲೇ ಗಮನಿಸಿರುವುದರಿಂದ ನಾವು reconsideration ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ ಎನ್ನುವುದು ಬಂದಿತು. As the Hon'ble member raised statutory obligation, ಲಿಸ್ಟ್ ಅನ್ನು quash ಮಾಡಿದರೆ withdraw ಮಾಡಿದರೆ both the Houses of the Legislature ಗೆ ನಾವು explanatory note ಅನ್ನು ಕೊಟ್ಟು clear cut ಆಗಿ ಚರ್ಚೆಯನ್ನು ಮಾಡಬೇಕಾಗಿತ್ತು. ಇಲ್ಲಿ ನಮ್ಮ ಮುಂದಿರುವ ಸಮಸ್ಯೆ explanatory note ಇದೆ. But we have failed in discussion. ಇದಕ್ಕೆ ಯಾರನ್ನು ಜವಾಬ್ದಾರಿ ಮಾಡಬೇಕೆಂಬುದಕ್ಕೆ ಮಾನ್ಯ ರಮೇಶ್ ಅವರು ಉತ್ತರವನ್ನು ಹೇಳಬೇಕು. I have the report of the KPSC. I know provision of Article 323, explanatory note ಅನ್ನು ಕೊಡಲೇಬೇಕು. ನನ್ನ ಬಳಿ ಆ ವರದಿ ಇದ್ದು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದನ್ನು ನಾನೇ ಓದುತ್ತೇನೆ. ಪಾಸ್ ಆಗಬೇಕು ಎಂದೇನೂ ಇಲ್ಲ. ಪಾಸ್ ಆಗುವುದು ಅಥವಾ ಬಿಡುವುದು ನಿಮ್ಮ ಹಣೆಬರಹ. As per Article 323 of the Constitution:

> *"...on receipt of such report, cause a copy thereof together with a memorandum explaining, as respects the cases, if any, where the advice of the Commission was not accepted, the reasons for such non acceptance to be laid before the Legislature of the State."*

ಇದು ಸಂವಿಧಾನದಲ್ಲಿರುವ ಪ್ರಾವಿಷನ್.

**Sri P.R.RAMESH:-** It is kept before the court.

**Sri J.C.Madhuswamy:-** We cannot say like that.

**Sri P.R.RAMESH:-** No, That is the core of the constitutional provision. You please read the provision of constitution once again.

**Sri J.C.Madhuswamy:-** Yes, yes.

**Sri P.R.RAMESH:-** What is the reasons? Can we advise on the....

**Sri J.C.Madhuswamy:-** Please yield ಆಗಿ,

> *"....The Government after going through all the aspects of CID's Interim Report, Advocate Generals' opinion and the Legal Departments opinion, in its order No. ಸಿಆಸುಇ 53 ಸೇಲೋಸೇ 2014, ಬೆಂಗಳೂರು, dated 14-08-2014, has rejected the Selection List of 2011 Gazetted Probationers forwarded by the Commission...."*

ಈ ವರದಿಯನ್ನು ನಾನು ಈಗ ಮುದ್ರಣ ಮಾಡಿರುವುದಿಲ್ಲ. ಟೇಬಲ್ ಆಗಿದೆ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯವರಾಗಿದ್ದಾಗ ಎರಡನೇ ಪಟ್ಟಿಯಲ್ಲಿ "ದಿನಾಂಕ 07.02.2017ರಂದು.... ಭಾರತ ಸಂವಿಧಾನದ ಅನುಚ್ಛೇದ 323 (2)ರ ಪ್ರಕಾರ "ಕರ್ನಾಟಕ ಲೋಕಸೇವಾ ಆಯೋಗದ 2014-15ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ" ಎಂದು ಸ್ಪಷ್ಟವಾಗಿ ಮಂಡಿಸಿದ್ದಾರೆ. ಹೌದು, ನೀವು ಹೇಳಿದಂತೆ ಕೆಲವು ಮಾನವೀಯ ಲಕ್ಷಣಗಳು, ಏನು ಮಾಡಬಹುದಿತ್ತು, ಏನು ಬಿಡಬಹುದಿತ್ತು ಎಂಬುದರ ಬಗ್ಗೆ ಚರ್ಚೆ; ಎಲ್ಲಿ ವ್ಯತ್ಯಾಸವಾಯಿತು, ಏನಾಯಿತು ಎಂಬುದು ಚರ್ಚೆ; ಈ ಸರ್ಕಾರ ಇದ್ಯಾವುದಕ್ಕೂ ಸಂಬಂಧಪಟ್ಟಿಲ್ಲ. ಈ ಸರ್ಕಾರದ ಮುಂದೆ ಇದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

issue ನೂ ಅಲ್ಲ. ನಮ್ಮ ಒಂದೇ ಒಂದು ಸಮಸ್ಯೆ ಎಂದರೆ, after the rejection of SLP (Special Leave Petition) in the Supreme Court, after the rejection of Review Petition in the Higher Court, are we empowered to take decision? ರಾಜ್ಯ ಸರ್ಕಾರ ತೀರ್ಮಾನ ಕೈಗೊಳ್ಳುವ ಸ್ಥಿತಿಯಲ್ಲಿದೆಯೇ ಎಂಬುದಷ್ಟೇ ನಮ್ಮ ಪ್ರಶ್ನೆ. As a Law Minister, I am, and I cannot open the gates now. ನನ್ನ ಬಳಿ ಆ ಅಭ್ಯರ್ಥಿಗಳು ಬಂದಿದ್ದರು. ನಮಗೆಲ್ಲರಿಗೂ ಅನುಕಂಪ ಇದೆ. ಇದರಲ್ಲಿ ಚರ್ಚೆಯ ವಸ್ತು ಏನೂ ಇಲ್ಲವೇ ಇಲ್ಲ. ನಾನು ಅವರಿಗೆ ಹೇಗಾದರೂ ಮಾಡಿ ಒಂದು Review Petition ಅನ್ನು ಹಾಕಿ ಎಂದು ಬಹಳವಾಗಿ ಕೇಳಿಕೊಂಡೆನು. Review Petition ನಲ್ಲಿ ನಮ್ಮನ್ನು ಪಾರ್ಟಿ ಮಾಡಲಿ. ಕೋರ್ಟ್ ಏನಾದರೂ ನಮ್ಮನ್ನು ಕೇಳಲಿಕ್ಕೆ ಇನ್ನೊಂದು ಅವಕಾಶ ಸೃಷ್ಟಿಯಾದರೆ the Government will make its stand very clear. ನಮಗೇನೂ ಇಲ್ಲ. ನಾವು ಅಭ್ಯರ್ಥಿಗಳಿಗೆ ವಿರೋಧವಾಗಿಲ್ಲ. ಸರ್ಕಾರ sympathetic ಆಗಿದೆ. ಏಕೆಂದರೆ ಹಿಂದಿನ ಸರ್ಕಾರವೇ ಕೆ.ಎ.ಟಿ ತೀರ್ಮಾನವಾದ ಮೇಲೆ ಇವರನ್ನು ತೆಗೆಯಬೇಕು ಎಂಬುದಕ್ಕೆ ಎಲ್ಲಿಯೂ stand ಆಗಲಿಲ್ಲ. ಕೆ.ಎ.ಟಿ.ತೀರ್ಮಾನವಾದ ಮೇಲೆ ಪುನಃ ಯಾರೋ individual case ಅನ್ನು ಹಾಕಿ ಈ ಸ್ಥಿತಿ ನಿರ್ಮಾಣವಾಗಿರುವುದನ್ನು ಬಿಟ್ಟರೆ ಮೊದಲನೆಯ ಹಂತದಲ್ಲಿ ಹೆಚ್ಚು ಕಡಿಮೆ ಆಯಿತು. Interim Order of the CIDಅನ್ನು ಗಣನೆಗೆ ತೆಗೆದುಕೊಳ್ಳಬಾರದಿತ್ತು ಎನ್ನುವುದು ಸತ್ಯ. ಅದಾದ ನಂತರ Tribunal ಹೇಳಿದ ಮೇಲೆ ಆ ಸರ್ಕಾರವು ಇವರನ್ನು ತೆಗೆಯಲೇಬೇಕೆಂಬ ಹಠಕ್ಕೆ ಹೋಗಿಲ್ಲ. ನಾನು ಇರುವ ಸ್ಥಿತಿಯನ್ನು ಮಾತನಾಡುತ್ತೇನೆ. ಆದರೆ ಆ ಸರ್ಕಾರಕ್ಕೆ ಇವರಿಗೆ ಪುನಃ ಹೇಗಾದರೂ ಮಾಡಿ ಕೊಡಿಸಬೇಕೆನ್ನುವ ಸ್ಥಿತಿಯನ್ನು ಕೋರ್ಟ್‌ನಲ್ಲಿ ನಿರ್ಮಾಣ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಕೋರ್ಟ್‌ಗಳು ಅವಕಾಶ ಕೊಡಲೇ ಇಲ್ಲ. ಮಾನ್ಯ ರೇವಣ್ಣನವರೇ, ಸುಪ್ರೀಂ ಕೋರ್ಟ್ ನಮ್ಮ ವಾದವನ್ನು ಆಲಿಸಲೇ ಇಲ್ಲ. *"I don't find any need to interfere in the judgement of the High Court of Karnataka"*ಎಂದರು. ಆಮೇಲೆ ಬಹಳ ಒತ್ತಾಯವಿದ್ದುದರಿಂದ 1, 2, 3, 4.... *"High Court of Karnataka may reconsider on these grounds"* ಎಂದು ಹೇಳಿತು. ಅದರಲ್ಲಿ 323/2 ಒಂದೇ. ಇವೆಲ್ಲದರಲ್ಲಿ ನೀವು ನೋಡಿ ಎಂದು ಹೇಳುತ್ತದೆ. ನೀವು ಹೇಳಿದಂತೆ ನಾನು conclude ಮಾಡು ಎಂದರೆ, ನಾನು ಮಾಡುತ್ತೇನೆ. ಕೆಳಮನೆಯಲ್ಲಿಯೂ ನಾಳೆ–ನಾಳಿದ್ದರಲ್ಲಿ ಈ ವಿಷಯ ಪ್ರಸ್ತಾಪವಾಗುತ್ತದೆ. ಈಗಾಗಲೇ ಎಂಟು ದಿನಗಳಿಂದ ಬಾಕಿ ಇದೆ. ನಿಮ್ಮೆಲ್ಲರ ಭಾವನೆಗಳನ್ನು ಗಮನಕ್ಕೆ ತೆಗೆದುಕೊಂಡು ಸರ್ಕಾರ ಈ ಸಭೆಯ ವಿಶ್ವಾಸವನ್ನು ಉಳಿಸಿಕೊಳ್ಳಲಿಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಇನ್ನೊಂದು

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Review Petition ಅನ್ನು ಫೈಲ್ ಮಾಡಿ ಏನಾದರೂ ಅವರಿಗೆ ಒಳ್ಳೆಯದನ್ನು ಮಾಡಲಿಕ್ಕಾಗುತ್ತದೆಯೇ ಎನ್ನುವ ಪ್ರಯತ್ನ ಮಾಡುವ ವಿಷಯದಲ್ಲಿ ನಾವು ರಾಜಿ ಇದ್ದೇವೆ.

**(...ಮುಂದು)**

(507) 17-03-2020 (7-50) ಕೆಜಿ ಬಿಎನ್‌ಎಸ್

**Sri IVAN D'SOUZA:-** Review by the Government?

**Sri J.C.MADHUSWAMY (Hon'ble Minister for Law, Parliamentary Affairs & Legislation):-** After the decision of this House and the Hon'ble Lower House, Government can go for a review ಎನ್ನುವುದಷ್ಟೇ ನಮ್ಮ ಕರ್ತವ್ಯ. ನಮಗೆ ಇರುವುದು ಅದೊಂದೇ ಅವಕಾಶ. ಇನ್ನೊಂದು review ಕೇಳುತ್ತೇವೆ, ಆದರೆ, we don't know what happens. As a Law Minister, I cannot assure all that. We can go for one more application ಶ್ರೀ ರಮೇಶ್‌ರವರೇ, ಎರಡನೆಯದ್ದಾಗಿ, ನಮ್ಮ ಸದಸ್ಯರ ಮೇಲೆ ನಾವು prosecute ಮಾಡುವುದಕ್ಕೆ ಆಗುವುದಿಲ್ಲ, ಆ ಕೇಸ್‌ನ್ನು ಮುಕ್ತಾಯ ಮಾಡಬೇಕೆಂದು ನಮ್ಮ ಮನಸ್ಸಿನಲ್ಲಿದೆ. We are going to find out about it.

**ಶ್ರೀ ಕೆ.ಗೋವಿಂದರಾಜ್:-** ಅದು ನಿಮಗೆ ಬಿಟ್ಟಿರುವುದು.

**ಶ್ರೀ ಜೆ.ಸಿ.ಮಾಧುಸ್ವಾಮಿ:-**ಮಾನ್ಯ ಸಭಾಪತಿಯವರೇ, Government is clear about it.ನಾವು, ಮಾನ್ಯ ಮುಖ್ಯಮಂತ್ರಿಯವರೂ ಸೇರಿ ಮಾತನಾಡಿ ಅವರು ಉತ್ತರ ಮಾಡಿ ಎಂದು ಹೇಳಿದ್ದಕ್ಕೆ ಉತ್ತರ ಮಾಡುತ್ತಿದ್ದೇನೆ. ನಮಗೆ ಆ ಸದಸ್ಯರು ಏಕೆ ಎಂದರೆ, when we have not disputed the selection list after the KAT report, we cannot say that they are the guilty. ಅವರು ತಪ್ಪಿಸ್ಥರು ಎಂದು ಹೇಳುವುದಕ್ಕೆ ನಾವು ಆಗುವುದಿಲ್ಲ. Now, we have no ground to say so. ಎಲ್ಲಿಯೂ establish ಆಗಿಲ್ಲ and we have not permitted for the prosecution. Delay of six-seven years, charge sheeting is nowhere heard of. 6-7 ವರ್ಷಗಳು ಆದ ಮೇಲೆ charge sheet ಹಾಕುತ್ತೇವೆ, ಅದಕ್ಕೆ ಮಾಹಿತಿ ಒದಗಿಸುತ್ತೇವೆಂದರೆ, ನಾವು evidence ಕೊಡುತ್ತೇವೆಂದರೆ, ಇದನ್ನೆಲ್ಲಾ ಮಾಡುತ್ತೇವೆ ಎನ್ನುವ ಸ್ಥಿತಿಯಲ್ಲಿ ಬಹುಶಃ ನಮಗೆ ಕಷ್ಟ ಎನಿಸುವುದರಿಂದ, Government is not serious

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

about going against those Members also. ಇದರಲ್ಲಿ ಏನಿಲ್ಲ. ಈ ಮನೆಯಲ್ಲಿ ಇದು ಎಲ್ಲರಿಗೂ ಆಗಲಿ ಎನ್ನುವಂತಹ ಸಮಾಧಾನವಿದ್ದರೆ, ನಾವು ಇನ್ನೊಂದು Review Petition ಹಾಕುವಂತಹ ಮನಸ್ಸು ಮಾಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ನಮ್ಮ ಕಾನೂನು ಮಂತ್ರಿಗಳ ಬಗ್ಗೆ ಅಗಾದವಾದ ಗೌರವ ಇದೆ. ಮಾನ್ಯ ಸಚಿವರು ಈ ವಿಷಯದಲ್ಲಿ ಅತ್ಯಂತ ಮುಕ್ತ ಮನಸ್ಸಿನಿಂದ ಇದ್ದಾರೆ. ಅವರಿಗೆ ಕಾನೂನಿನ ಬಗ್ಗೆ ಬಹಳ ಅನುಭವ ಇರುವಂತಹ ಹಿನ್ನೆಲೆಯಲ್ಲಿ ನಾವು ಇದರ ಬಗ್ಗೆ ಹೆಚ್ಚು ಬೆಳಕು ಚೆಲ್ಲಬೇಕಾಗಿಲ್ಲ. ಈ ದೇಶದ ಎಲ್ಲಾ ತೀರ್ಮಾನಗಳು ಸಿ.ಓ.ಡಿ.ಯವರ ಮಧ್ಯಂತರ ಆದೇಶದ ಮೇಲೆ ಯಾವುದೇ ಕ್ರಮಗಳು ಆಗಬಾರದೆಂದು ಸ್ಪಷ್ಟ ಪಡಿಸಿವೆ. ಈಗ ಸಿ.ಓ.ಡಿ.ಯವರ ಮಧ್ಯಂತರ ವರದಿಯ ಮೇಲೆ ಇಷ್ಟೆಲ್ಲಾ ಅನಾಹುತಗಳು ಆಗಿದೆ. ಮೊದಲನೆಯದಾಗಿ, ಯಾವ ವರದಿಯ ಮೇಲೆ ಆಗಬಾರದೆಂದು ನೂರಾರು ತೀರ್ಪುಗಳು ಬಂದಿವೆಯೋ, ಆ ಮಧ್ಯಂತರ ವರದಿಯ ಮೇಲೆ ಇಷ್ಟೆಲ್ಲಾ ಅನಾಹುತಗಳು ಆಗಿವೆ. ಎರಡನೆಯದಾಗಿ, ನಮ್ಮ ಸದನದಲ್ಲಿ lay ಮಾಡಿದ್ದು ಇದೆಯಲ್ಲ, lay ಮಾಡಿದ ವಿಚಾರ ಏನೆಂದರೆ, "ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ತಡೆಯಾಜ್ಞೆ ನೀಡಿದ್ದು, ಸದರಿ ಪ್ರಕರಣ ವಿಚಾರಣಾ ಹಂತದಲ್ಲಿ ಇರುತ್ತದೆ" ನಮ್ಮಲ್ಲಿ ಇಷ್ಟೇ lay ಮಾಡಿರುವುದು. ಇಲ್ಲಿ ಬೇರೆ ಏನು ಚರ್ಚೆಯಾಗಿಲ್ಲ. ವಿಚಾರಣೆಯ ಹಂತದಲ್ಲಿರುತ್ತದೆ ಎನ್ನುವುದನ್ನು table ಮಾಡಿರುತ್ತಾರೆ ವಿನಹಃ ಆ ಕುರಿತು ಯಾವುದೇ ಚರ್ಚೆಯಾಗಿಲ್ಲ. ಒಟ್ಟು 362 ಅಭ್ಯರ್ಥಿಗಳ ಪೈಕಿ 36 ಅಭ್ಯರ್ಥಿಗಳಿಗೆ ಕೆಲಸ ಕೊಟ್ಟಿರುವುದು ನಿಜ. ಅವರು 10 ತಿಂಗಳು ಕೆಲಸ ಮಾಡಿರುವುದು ನಿಜ. ಒಟ್ಟು 362 ಅಭ್ಯರ್ಥಿಗಳ ಪಟ್ಟಿ announce ಆಗಿರುವುದು ನಿಜ. ಇಲ್ಲಿ ಎರಡು ಕಾರಣಗಳು ಇವೆ. ಒಂದು ಸಿ.ಓ.ಡಿ.ಯ ಮಧ್ಯಂತರ ವರದಿಯ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಬಾರದೆಂಬ ನೂರಾರು ತೀರ್ಪುಗಳು ಮಾನ್ಯ ಸಚಿವರ ಮನಸ್ಸಿನಲ್ಲಿದೆ. ನಾವು ಇದನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕಾಗಿದೆ. ಎರಡನೆಯದಾಗಿ, ರದ್ದತಿ ಮಾಡಿರುವಂತಹ ಯಾವುದೇ ವಿಚಾರವನ್ನು ನಮ್ಮ ಗಮನಕ್ಕೆ ತಂದಿಲ್ಲ ಹಾಗೂ ಅದು ಇಲ್ಲಿ ಚರ್ಚೆಯಾಗಿಲ್ಲ. ತಡೆಯಾಜ್ಞೆ ಇರುವುದನ್ನು ಮಾತ್ರ ಇಲ್ಲಿ ಹೇಳಿದ್ದಾರೆ. ಅದನ್ನು ಬಿಟ್ಟು ಬೇರೆ ಯಾವುದೇ ವಿಷಯವನ್ನು ಇಲ್ಲಿ ಹೇಳಿಲ್ಲ. ತಡೆಯಾಜ್ಞೆಯಾದ ಮೇಲೆ ಏನೆಲ್ಲಾ ಬೆಳವಣಿಗೆಯಾಗಿದೆ, ಆದರೂ ಸಹ ಆಗಿಲ್ಲ. ಈ ಎರಡು ತಪ್ಪುಗಳ ಮೇಲೆ ಇಷ್ಟೆಲ್ಲಾ ಕೆಟ್ಟ ಬೆಳವಣಿಗೆಗಳು ಆಗಿವೆ. ಬಹುಶಃ ಈ ಮನಕುಲುಕುವ ಘಟನೆಗೆ ಖಂಡಿತ justice ಸಿಗುತ್ತದೆ ಎಂದು ನಮ್ಮ ಭಾವನೆ ಇದೆ. ಏಕೆಂದರೆ, ಮಕ್ಕಳು ಬಹಳ ಕಷ್ಟಪಟ್ಟು ಓದಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ಈಗ ಸರ್ಕಾರ ಬಹಳ ಸ್ಪಷ್ಟವಾಗಿ ಹೇಳಿದೆ. ಅಲ್ಲದೇ, ಸರ್ಕಾರದಲ್ಲಿರುವಂತಹ ವ್ಯವಸ್ಥೆಯ ಪ್ರಕಾರ ಮಾಡುತ್ತೇವೆ. ಆ ಮಕ್ಕಳಿಗೆ ನ್ಯಾಯ ಕೊಡಿಸುವುದಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಮಾಣಿಕವಾದಂತಹ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಹಾಗಾಗಿ, ಮಾನ್ಯ ಕಾನೂನು ಸಚಿವರಿಗೆ ಮತ್ತು ಸರ್ಕಾರಕ್ಕೆ ಇಡೀ ಸದನ ಬಹಳ ಗೌರವದಿಂದ ಅಭಿನಂದಿಸುತ್ತೇವೆ. ಆ ಮಕ್ಕಳಿಗೆ ಏನಾದರೂ ಮಾಡಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ನೂರಕ್ಕೆ ನೂರು ಎಲ್ಲರ ಸಮ್ಮತಿ ಇದೆ ಎಂದು ನಾನು ಭಾವಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರವರು ಹೇಳಿದಂತೆ, ಮೊದಲನೆಯದಾಗಿ ಮಧ್ಯಂತರ ವರದಿ. ಎರಡನೆಯದಾಗಿ, ನಮ್ಮ ಸರ್ಕಾರ ಮಾನ್ಯ ಸರ್ವೋಚ್ಚ ನ್ಯಾಯಲಯಕ್ಕೆ ಮೇಲ್ಮನವಿ ಹೋಗಿದ್ದರು, ಅದರಲ್ಲಿ, Article 323 of the Constitution violate ಆಗಿದೆ ಅಥವಾ ಅದರ ಪ್ರಕಾರದಲ್ಲಿ ಏನಾದರೊಂದು ಸಂದರ್ಭವನ್ನು ಆ Petition ನಲ್ಲಿ ಹೇಳಿಲ್ಲ. ದಯವಿಟ್ಟು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಸರ್ಕಾರCurative Petition ಹಾಕಿಕೊಂಡು Article 323 of the Constitution violate ಆಗಿದೆ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಒಪ್ಪಿಕೊಂಡರೆ, ಖಂಡಿತವಾಗಿ Question of Law admit ಆಗುತ್ತದೆ. ಅಲ್ಲಿ curative ಸಿಗುತ್ತದೆ. ಇಲ್ಲವೆಂದರೆ, curative ಸಿಗುವುದಿಲ್ಲ. Review ನೂ ಸಿಗುವುದಿಲ್ಲ. ನಾನು ಇದರ ಬಗ್ಗೆ ನುರಿತ ನ್ಯಾಯಾಧೀಶರ ಬಳಿ ಮಾತನಾಡಿದ್ದೇನೆ. ಅವರ opinion ತೆಗೆದುಕೊಂಡಿದ್ದೇನೆ. ಸರ್ಕಾರ Curative Application ಹಾಕಿಕೊಳ್ಳಬಹುದು. ಇದರಲ್ಲಿ Article 323 of the Constitution violate ಆಗಿದೆ ಎನ್ನುವುದನ್ನು ನ್ಯಾಯಾಲಯದ ಮುಂದೆ ಒಪ್ಪಿಕೊಳ್ಳಬೇಕು ಅಷ್ಟೇ. ದಯವಿಟ್ಟು ಸರ್ಕಾರ ಇದನ್ನು ಮಾಡಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ನಾವು Article 323 of the Constitution violate ಆಗಿದೆ ಎಂದು ಅಷ್ಟು ನೇರವಾಗಿ ಹೇಳುವುದಕ್ಕೆ ಆಗುವುದಿಲ್ಲ. ಆ ಮೇಲೆ ಸಿ.ಓ.ಡಿ. ವರದಿಯ ಮೇಲೆ act ಮಾಡಿದ್ದು ಸರಿ ಅಥವಾ ತಪ್ಪು ಎಂದು, I cannot discuss here about the decision of the High Court. ಮಾನ್ಯ ಉಚ್ಚ ನ್ಯಾಯಾಲಯ ಅವತ್ತಿನ ದಿವಸ ಹೇಳಿದ್ದರೆ ನಮಗೆಲ್ಲ ಬಹಳ ಹೆಮ್ಮೆ ಅನಿಸುತ್ತಿತ್ತು. This is an Interim Report and we have come here with the Interim Report ಎಂದು, ಹೇಗೋ ಏನೋ Interim Report ಅನ್ನು ಅವರು accept ಮಾಡಿದ ಮೇಲೆ, ಮಾನ್ಯ ಉಚ್ಚ ನ್ಯಾಯಾಲಯದ ತೀರ್ಮಾನವನ್ನು, I am not here to question it.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸರ್ವೋಚ್ಚ ನ್ಯಾಯಲಯದ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಮಾನಗಳ ಮೇಲೆ ಬಿಲ್‌ಗಳನ್ನು ತಂದು ಪಾಸ್ ಮಾಡಿದ್ದೀರಿ. ಇದನ್ನು ಅದೇರೀತಿ ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿ:-**ಮಾನ್ಯ ಸಭಾಪತಿಯವರೇ, ಬಿಲ್ ತರುವುದು ಬೇರೆ ವಿಷಯ. ಸರ್ಕಾರ ಇದರಲ್ಲಿ ಬಿಲ್ ತರುವಂತಹ ಸ್ಥಿತಿಯಲ್ಲಿ ಇದಿದ್ದರೆ, we would have brought it. ಬೇರೆ ಯಾರನ್ನು ಸಹ ಕೇಳುತ್ತಿರಲಿಲ್ಲ. We are also interested ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, we agree it.

**ಶ್ರೀ ಜೆ.ಸಿ. ಮಾಧುಸ್ವಾಮಿ:-**ಮಾನ್ಯ ಸಭಾಪತಿಯವರೇ, ಆದರೆ, our hands are tied. ಸರ್ಕಾರವನ್ನು ನಡೆಸುವಾಗ ಮಾನ್ಯ ನ್ಯಾಯಾಲಯದ ಆದೇಶಗಳನ್ನು ಮೀರಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. They are the Authority who have declared and decided the issues. ಅದನ್ನು ನೀವು ಈಗInterim Report ಮೇಲೆ ಏಕೆ ಕೊಟ್ಟಿದ್ದೀರಿ, ಇದರ ಮೇಲೆ ಏಕೆ ಕೊಟ್ಟಿದ್ದೀರಿ ಎಂದು ಕೇಳುವುದು ಬೇರೆ. ನಾವು ಸದನಕ್ಕೆ ಗೌರವ ಕೊಟ್ಟು, ನಮಗೆ ಆ ಮಕ್ಕಳ ಮೇಲೆ ಬಹಳ ಅಭಿಮಾನ ಮತ್ತು ಬಹಳ ಮಾನವೀಯತೆ ಇರುವುದರಿಂದ ಸರ್ಕಾರ ಇನ್ನೊಂದು Review Petition file ಮಾಡುವುದಕ್ಕೆ ರಾಜಿ ಇದೆ. Sri Ramesh, if you can find a good Advocate, we are certainly here to give the case.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಅಭಿನಂದನೆಗಳು. ಇದನ್ನು ಆದಷ್ಟು ಬೇಗ ಮಾಡಲಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿರುವ ಶ್ರೀ ಎಂ.ನಾರಾಯಣಸ್ವಾಮಿರವರು ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನಧಿಕೃತವಾಗಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಪ್ರಸ್ತಾವನೆ.

ಆ) **"ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನಧಿಕೃತವಾಗಿ ಸರ್ಕಾರಿ ಜಾಗಗಳನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ"**

--

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು. ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇರುವಂತಹ ವಿಧಾನ ಸಭಾ ಕ್ಷೇತ್ರಗಳಲ್ಲಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವಂತಹ ವಿವಿಧ ಪ್ರದೇಶಗಳಲ್ಲಿ ಅನಧಿಕೃತವಾಗಿ ಸರ್ಕಾರದ ಜಾಗಗಳು ಒತ್ತುವರಿಯಾಗಿದ್ದು, ಸಾರ್ವಜನಿಕರಿಂದ ಒತ್ತುವರಿಯಾಗಿರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಅನೇಕ ದೂರುಗಳು ಬಂದಿದ್ದರೂ ಸಹ, ಅದನ್ನು ವಾಪಸ್ ಸರ್ಕಾರಕ್ಕೆ ಪಡೆಯದಿರುವುದು ಒಂದು ಶೋಚನಿಯವಾದ ಸಂಗತಿ. ಆದರೂ ಸಹ ಸರ್ಕಾರ ಕ್ರಮ ಕೈಗೊಳ್ಳುವುದಕ್ಕೆ ಪ್ರಾರಂಭ ಮಾಡಿದೆ. ದಿನಾಂಕ 25.2.2020 ರಂದು ಬೆಳಗ್ಗೆ 10.30 ಗಂಟೆಗೆ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತದಲ್ಲಿ ಒಂದು ಸಭೆಯನ್ನು ಕರೆಯುತ್ತಾರೆ. ಆ ಸಭೆಯಲ್ಲಿ ಶ್ರೀ ಮಂಜುನಾಥ್ ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಯವರು, Assistant Commissioners, ತಹಶೀಲ್ದಾರ್‌ರವರು ಮತ್ತು ಸಂಬಂಧಪಟ್ಟ ಇಲಾಧಿಕಾರಿಗಳನ್ನು ಕರೆದು ಸಭೆಯನ್ನು ಮಾಡುತ್ತಾರೆ. ಬೆಂಗಳೂರಿನ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರ, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಕೆ.ಆರ್.ಪುರಂ ವಿಧಾನ ಸಭಾ ಕ್ಷೇತ್ರ, ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮತ್ತು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬಂದಿರುವಂತಹ ಸರ್ಕಾರಿ ಜಮೀನುಗಳನ್ನು ಯಾರು ಖಾಸಗಿಯಾಗಿ encroachment ಮಾಡಿಕೊಂಡಿದ್ದಾರೋ ಅದನ್ನು ಸರ್ಕಾರಕ್ಕೆ ವಾಪಸ್ ಪಡೆಯಬೇಕೆಂದು ಸುಧೀರ್ಘವಾದ ಚರ್ಚೆ ಆಗುತ್ತದೆ. ಆ ಸಭೆಯಲ್ಲಿ “ಮೇಲೆ ಚರ್ಚಿಸಿದ ಸರ್ಕಾರಿ ಜಮೀನುಗಳ ಒತ್ತುವರಿ ಬಗ್ಗೆ ಅಳತೆ ಕಾರ್ಯವನ್ನು ಇನ್ನು ಒಂದು ವಾರದೊಳಗೆ ಪೂರ್ಣಗೊಳಿಸಿ colour coding ಇರುವ ನಕ್ಷೆಗಳನ್ನು ಸಿದ್ದಪಡಿಸಿ ಸಾರಂಶ ಮತ್ತು ಮಾಹಿತಿಯನ್ನು ತಹಶೀಲ್ದಾರ್‌ರವರಿಗೆ ಒದಗಿಸುವಂತೆ ಭೂದಾಖಲೆಗಳ ಉಪ ನಿರ್ದೇಶಕರಿಗೆ ಸೂಚಿಸಲಾಯಿತು. ಒತ್ತುವರಿ ತೆರವುಗೊಳಿಸುವ ಪ್ರಕ್ರಿಯೆಗೆ ಸಂಬಂಧಪಟ್ಟಂತೆ, ನಿಯಮಾನುಸಾರ ಕ್ರಮ ಅನುಸರಿಸಿ ಅಗತ್ಯ ಪೊಲೀಸ್ ಬಂದೊಬಸ್ತಿನಲ್ಲಿ ಕ್ರಮ ಜರುಗಿಸಲು ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಯಿತು” ಎಂದು ಹೇಳಿದ್ದಾರೆ. ಸದರಿ ಸಭೆ ನಡೆದು ಸುಮಾರು ಒಂದು ತಿಂಗಳು ಕಳೆದರೂ ಸಹ, ಯಾವುದೇ ರೀತಿಯ ಕ್ರಮವನ್ನು ಕೈಗೊಳ್ಳವುದಕ್ಕೆ ಸಾಧ್ಯವಾಗಲಿಲ್ಲ.

(ಮುಂದು.,)

(508)17–03–2020(8–40)ಎಂವಿ–ಬಿಎನ್‌ಎಸ್

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು...):–**

ಮಾನ್ಯ ಸಚಿವರೇ, ಎರಡು ಉದಾಹರಣೆಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ಮತ್ತು ಮಾನ್ಯ ಸಚಿವರಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ. ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರ, ಬಸವಪುರ ಎನ್ನುವಂತಹ ಗ್ರಾಮ, ಕಾರ್ಪೊರೇಷನ್ ವಾರ್ಡ್ ನಂ.53ಕ್ಕೆ ಬರುತ್ತದೆ. ಆದರೆ, ಈಗ ಇದು ಬದಲಾವಣೆಯಾಗಿದೆ. ಸರ್ವೇ ನಂಬರ್ 26ರಲ್ಲಿ ಒಟ್ಟು 24 ಎಕರೆ 29 ಗುಂಟೆ ಜಮೀನು ಇದೆ. ಖರಾಬು ಜಮೀನು 4 ಎಕರೆ 9 ಗುಂಟೆ. ಒಟ್ಟು 28 ಎಕರೆ 38 ಗುಂಟೆ ಜಮೀನು ಆಕಾರ ಬಂದ್ ಬಂಜರು ಎಂದು ಪಹಣಿಯಲ್ಲಿ ತಿಳಿಸಿದ್ದಾರೆ. ಅದು ಸರ್ಕಾರಿ ಭೂಮಿಯಾಗಿದೆ. 2014ರಲ್ಲಿ ತಹಶೀಲ್ದಾರ್ ಬೆಂಗಳೂರು ಪೂರ್ವ ತಾಲ್ಲೂಕು ಅವರಿಗೆ ಒಂದು ಪತ್ರವನ್ನು ಬರೆದು, ಭೂಮಿ ಶಾಖೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಣಕೀಕರಣದಲ್ಲಿ, ಈ ಮೇಲ್ಕಾಣಿಸಿದ 26ನೇ ಸರ್ವೇ ನಂಬರ್‌ನ ಜಮೀನು, 28 ಎಕರೆ 38 ಗುಂಟೆ ಸರ್ಕಾರಿ ಜಮೀನು ಎಂದು ಘೋಷಣೆ ಮಾಡಿರುತ್ತಾರೆ. ಅಲ್ಲಿನ ಕೆ.ಆರ್.ಪುರಂನ ಉಪ ನೋಂದಣಾಧಿಕಾರಿಗಳಿಗೆ ಅದನ್ನು ಕಂಪ್ಯೂಟರ್‌ಗೆ ಎಂಟ್ರಿ ಮಾಡಿಸುತ್ತಾರೆ. ಇದು ಸರ್ಕಾರಿ ಜಮೀನು, ಇದಕ್ಕೆ ಯಾರಾದರೂ ಪ್ರೈವೇಟ್ ಆಗಿ ಜಮೀನಿಗೆ ಸುಳ್ಳು ದಾಖಲೆಗಳನ್ನು ಮಾಡಿಕೊಂಡು, ನೋಂದಣಿಗೆ ಬಂದರೆ, ಅದನ್ನು ನೋಂದಣಿ ಮಾಡಬಾರದು ಎಂದು ಅದು ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಕಂಪ್ಯೂಟರ್‌ನಲ್ಲಿ ಎಂಟ್ರಿ ಆಗುತ್ತದೆ. ಆದರೆ, ಯಾರೋ ಒಬ್ಬ ವ್ಯಕ್ತಿ 4 ಎಕರೆ 18 ಗುಂಟೆ ಜಮೀನಿಗೆ ನಕಲಿ ದಾಖಲೆಗಳನ್ನು ಮಾಡಿಕೊಂಡು, ನೋಂದಣಿ ಮಾಡಿಸಿಕೊಂಡು ಬಿಡುತ್ತಾರೆ. ಕೊನೆಗೆ ಅದಕ್ಕೆ ಸಂಬಂಧಪಟ್ಟಂತೆ ಒಂದು ಪತ್ರ ಬರೆದ ಮೇಲೆ, 11ಇ ನಕ್ಷೆ ಇಲ್ಲ. ಆದುದರಿಂದ ಇದನ್ನು ತಡೆ ಹಿಡಿಯಲಾಗಿದೆ ಎಂದು ಹೇಳುತ್ತಾರೆ. ಮತ್ತೆ 2016ರಲ್ಲಿ ಮೇಲೆ ಹೇಳಿದ 11ಇ ಬೋಗಸ್ ನಕ್ಷೆಯನ್ನು ತೆಗೆದುಕೊಂಡು ಹೋಗಿ ಅದನ್ನು reregister ಮಾಡಿಸಿಕೊಳ್ಳುತ್ತಾರೆ. ಅದು ಆದಮೇಲೆ ಪತ್ರ ಬರೆದಿರುವುದಕ್ಕೆ, ಮೇಲೆ ಹೇಳಿದ 11ಇ ನಕ್ಷೆಯನ್ನು ತಮ್ಮ ಕಚೇರಿಯಿಂದ ವಿತರಿಸಿಲ್ಲವೆಂದು, ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ಪೂರ್ವ ತಾಲ್ಲೂಕು, ಇವರು ತಮ್ಮ ಕಚೇರಿಯಿಂದ ಹಿಂಬರಹವನ್ನು ಕೊಡುತ್ತಾರೆ. ಇಷ್ಟೆಲ್ಲಾ ಆಗಿದ್ದರೂ ಕೂಡ, ಈಗ ಕೆಲವೊಂದು ಅಧಿಕಾರಿಗಳು, ಬೇಕಾದರೆ ಅವರ ಹೆಸರುಗಳನ್ನು ಹೇಳುತ್ತೇನೆ, ನಾನು ಅಷ್ಟು ಮಾಹಿತಿಯನ್ನು ಸಂಗ್ರಹಿಸಿಕೊಂಡಿದ್ದೇನೆ. ಅದು ಸರ್ಕಾರಿ ಜಮೀನು ಎಂದು ಇದ್ದರೂ ಕೂಡ, ಆ 4 ಎಕರೆ 18 ಗುಂಟೆ ಜಾಗಕ್ಕೆ ತಹಶೀಲ್ದಾರ್ ಮತ್ತು ಸಂಬಂಧಪಟ್ಟ ಎಲ್ಲಾ ಕಂದಾಯ ಅಧಿಕಾರಿಗಳು ಸೇರಿ, ಜಿಲ್ಲಾಧಿಕಾರಿಗಳಿಗೆ ಇದನ್ನು ಭೂ ಪರಿವರ್ತನೆ ಮಾಡಿಕೊಡಿ ಎಂದು ಅರ್ಜಿ ಹಾಕಿಕೊಳ್ಳುತ್ತಾರೆ. ಅವರುಗಳು ಬೋಗಸ್ ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ. ಅದನ್ನು ಪರಿಶೀಲನೆ ಮಾಡಿ, ಈಗ ಇರುವಂತಹ ಜಿಲ್ಲಾಧಿಕಾರಿಗಳು, ಹೌದು ಇದನ್ನು ಭೂ ಪರಿವರ್ತನೆ ಮಾಡಬಹುದು, 'Residential' ಆಗಿ conversion ಮಾಡಬಹುದು ಎಂದು ಹೇಳಿ, ಅವರಿಗೆ ಜ್ಞಾಪನಾ ಪತ್ರವನ್ನು ಕೊಡುತ್ತಾರೆ. ಅದಕ್ಕೆ ಶುಲ್ಕವನ್ನು ಸಹ ಕಟ್ಟಿಸಿಕೊಳ್ಳುತ್ತಾರೆ. ಆದರೆ, ಅದಕ್ಕೆ ಕೋರ್ಟ್‌ನಲ್ಲಿ ತಡೆಯಾಜ್ಞೆ ಇದೆ. ಅದನ್ನು ಭೂ ಪರಿವರ್ತನೆ ಮಾಡಿ ಎಂದು ಆದೇಶ ಮಾಡುತ್ತಾರೆ. ಮತ್ತೆ ಕಾರ್ಪೊರೇಷನ್ ಕಮೀಷನರ್‌ಗೆ ಪತ್ರ ಬರೆದು, ಇದಕ್ಕೆ ಖಾತಾ ಮಾಡಿಕೊಡಿ ಎಂದು ಕೇಳುತ್ತಾರೆ. ಅದು ಸರ್ಕಾರಿ ಜಮೀನು ಎಂದು ಹೇಳಿದ್ದರೂ ಕೂಡ, ನಕಲಿ ದಾಖಲೆಗಳನ್ನು ಮಾಡಿಕೊಂಡು, ಇದು ಎಷ್ಟೋ ವರ್ಷಗಳಿಂದ ಇದು ಸರ್ಕಾರಿ ಜಾಗವೆಂದು ಆಗಿದೆ. ಈಗ ಅದಕ್ಕೆ ಬೋಗಸ್ ದಾಖಲೆಗಳನ್ನು ಮಾಡಿಕೊಂಡು, 4 ಎಕರೆ 18 ಗುಂಟೆಗೆ ಖಾತಾ ಮಾಡಿಕೊಡಿ ಎಂದು ಕಾರ್ಪೊರೇಷನ್‌ಗೆ ಅರ್ಜಿ ಹಾಕಿಕೊಂಡಿದ್ದಾರೆ. ಜಿಲ್ಲಾಧಿಕಾರಿಗಳು ಅದನ್ನು ಭೂ ಪರಿವರ್ತನೆ ಮಾಡಬಹುದು ಮುಂದಿನ ಕ್ರಮ ಕೈಗೊಳ್ಳಿ ಎಂದು ಅವರು ಜ್ಞಾಪನಾ ಪತ್ರವನ್ನು ಕೊಡುತ್ತಾರೆ. ಅದರ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಅದರ ಮೇಲೆ ಎಫ್.ಐ.ಆರ್. ಕೂಡ ದಾಖಲಾಗುತ್ತದೆ. ಇಷ್ಟೆಲ್ಲಾ ಇದ್ದರೂ ಕೂಡ, ಆ ಸರ್ಕಾರಿ ಜಮೀನನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆಇನ್ನು ಏಕೆ ಮೀನಾಮೇಷ ಎಣಿಸುತ್ತಿದ್ದಾರೆ. ಬೆಂಗಳೂರು ನಗರದ ಜಿಲ್ಲಾಧಿಕಾರಿಗಳಿಗೆ ತಾವು ಕೂಡಲೆ ಆದೇಶ ಕೊಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಕಾರಣಕ್ಕೂ ಅದು ಭೂ ಪರಿವರ್ತನೆ ಆಗಬಾರದು. ಇದರಲ್ಲಿ ಜನಪ್ರತಿನಿಧಿಗಳ ಕೈವಾಡ ಕೂಡ ಇದೆ. ಇಂದು ಕೆ.ಆರ್.ಪುರಂ ವಿಧಾನ ಸಭಾ ಕ್ಷೇತ್ರ ಬೃಹದಾಕಾರವಾಗಿ ಬೆಳೆದು ಹೋಗಿದೆ, ಅಲ್ಲಿ lung space ಅನ್ನುವುದು ಇಲ್ಲ. ಈ 28 ಎಕರೆಯನ್ನು ಉಳಿಸಿ, ಅದನ್ನು ಅರಣ್ಯ ಇಲಾಖೆಗೆ ಕೊಟ್ಟರೆ, ಅದರಲ್ಲಿ ಕಾಡನ್ನು ಬೆಳೆಸಬಹುದು. ಇದು ಅದಕ್ಕೆ ಉಪಯೋಗವಾಗುತ್ತದೆ. ಜೊತೆಗೆ ಇನ್ನೊಂದು, ನಾನು ಆರ್.ಡಿ.ಪಿ.ಆರ್. ಕಮಿಟಿಯ ಸದಸ್ಯನಾಗಿರುವುದರಿಂದ, ಆರ್.ಡಿ.ಪಿ.ಆರ್. ಕಮಿಟಿಯಿಂದ ಇವರನ್ನೆಲ್ಲಾ summon ಮಾಡಿದ್ದೆವು. ಅಲ್ಲಿರುವಂತಹ ಕೆರೆಗಳ ಒತ್ತುವರಿ ಬಗ್ಗೆ ನಾವು ಮಾತನಾಡಿದೆವು. ಅಲ್ಲಿರತಕ್ಕಂಥ ಎಲೆ ಮಲ್ಲಪ್ಪ ಚೆಟ್ಟಿ ಕೆರೆ ಇತಿಹಾಸ ಇರುವಂತಹ ಕೆರೆ ಅದು. ಆ ಕೆರೆಯ ವಿಸ್ತೀರ್ಣ 508 ಎಕರೆ. ಆ ಕೆರೆಯ ಮಧ್ಯ ಭಾಗದಲ್ಲಿ ಓಲ್ಡ್ ಮದ್ರಾಸ್ ರಸ್ತೆ ಹೋಗುತ್ತದೆ. ಅದಕ್ಕೆ acquire ಆಗಿರುವಂತಹ ಜಾಗ ಹೋದರೆ, 497 ಎಕರೆ ಪ್ರದೇಶ ಇರುತ್ತದೆ. ಆರ್.ಡಿ.ಪಿ.ಆರ್. ಸಮಿತಿಗೆ ಅಧಿಕಾರಿಗಳನ್ನು ಕರೆದಾಗ, ಅವರು ನಮಗೆ ಒಂದು ಲಿಖಿತ ಉತ್ತರವನ್ನು ಕೊಡುತ್ತಾರೆ. ಈಗ 497 ಎಕರೆ ಜಮೀನು ಇದೆ. ಅದರಲ್ಲಿ 17 ಎಕರೆ 38 ಗುಂಟೆ ಜಮೀನು ಒತ್ತುವರಿಯಾಗಿದೆ ಎನ್ನುವಂತಹ ಮಾತನ್ನು ಅಧಿಕಾರಿಗಳು ಹೇಳಿದರು. ಅದಕ್ಕೆ ನಾನು ಅವರಿಗೆ ಹೇಳಿದೆ, ನಾವು ಒಂದು ಕೆಲಸ ಮಾಡೋಣ, ನೀವು ಹೇಳಿದಂತೆ, 497 ಎಕರೆ ಜಮೀನು ಇದೆ, ಬರೀ 17 ಎಕರೆ 36 ಗುಂಟೆಯಷ್ಟು ಒತ್ತುವರಿಯಾಗಿದ್ದರೆ, ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟುಬಿಡುತ್ತೇನೆ. ಇಲ್ಲದಿದ್ದರೆ, ನೀವೇನು ಮಾಡುತ್ತೀರಿ ಎಂದು ಕೇಳಿದೆ. ಅದಕ್ಕೆ ಅವರಿಂದ ಉತ್ತರವಿಲ್ಲ. ಅದು ಇತಿಹಾಸದಲ್ಲಿ ಇರತಕ್ಕಂಥ ಕೆರೆ ಆಗಿದೆ. ಅರ್ಧ ಬೆಂಗಳೂರಿನ waste water ಅಲ್ಲಿಗೆ ಹೋಗುತ್ತಿದೆ. ಸರ್ಕಾರ 130 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಹೊಸಕೋಟೆ ಕೆರೆಗೆ ಪಂಪ್ ಮಾಡಲು ಮಂಜೂರು ಮಾಡಿದೆ. ಸುಮಾರು 70 ರಿಂದ 75 ಎಕರೆ ಪ್ರದೇಶ ಒತ್ತುವರಿಯಾಗಿದೆ. ಆರ್.ಡಿ.ಪಿ.ಆರ್. ಸಮಿತಿಯಲ್ಲಿ ಅಧಿಕಾರಿಗಳು ಏನು ಹೇಳಿದರೆಂದರೆ, ನಮಗೆ ಒಂದು ತಿಂಗಳ ಸಮಯ ಕೊಡಿ, ನಾವು ಸರ್ವೇ ಕಾರ್ಯ ಮಾಡಿಬಿಟ್ಟು, peripheral ಆರೂವರೆ ಕಿಲೋ ಮೀಟರ್ ಬರುತ್ತದೆ. ಅದಕ್ಕೆ ನಾವು fencing ಮಾಡಿಕೊಡುತ್ತೇವೆ ಎನ್ನತಕ್ಕಂಥ ಜವಾಬ್ದಾರಿಯುತವಾದ ಮಾತುಗಳನ್ನು ಹೇಳಿದ್ದರು. ಆದರೆ ಇವತ್ತಿನವರೆಗೂ ಕೂಡ ಸರ್ವೇ ಕಾರ್ಯ ಕೂಡ ಪ್ರಾರಂಭವಾಗಿಲ್ಲ. ಈಗ ಬೆಂಗಳೂರು ಮಹಾನಗರದಲ್ಲಿ ಒಂದು ಎಕರೆ ಕಡಿಮೆ ಎಂದರೂ ಸಹ 5 ರಿಂದ 10 ಕೋಟಿ ರೂಪಾಯಿಗಳು ಬೆಲೆ ಬಾಳುತ್ತದೆ. ಬೆಂಗಳೂರಿನ ನಗರ ಪ್ರದೇಶದ ಒಳಗಡೆ ಇರತಕ್ಕಂಥ ಜಾಗಗಳಿಗೆ. ಇಷ್ಟೊಂದು ಎಕರೆ ಒತ್ತುವರಿಯಾಗಿದ್ದರು ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಏಕೆ ಮೀನಾಮೇಷ ಎಣಿಸುತ್ತಿದ್ದಾರೆ. ಅದಕ್ಕೆ ಏನಾದರೂ ಬಲವಾದ ಕಾರಣಗಳು ಇದೆಯೇ ಅಥವಾ ಇದರಲ್ಲಿ ಯಾರಾದರೂ ಪ್ರಭಾವಿ ವ್ಯಕ್ತಿಗಳ ಕೈವಾಡ ಇದೆಯೇ? ಈಗಾಗಲೇ ಸರ್ಕಾರದಿಂದ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಅದು ಮೊದಲು ಇತ್ತು. ಅದರಲ್ಲಿ ಶ್ರೀ ಎ.ಟಿ.ರಾಮಸ್ವಾಮಿಯವರು ಇದ್ದರು. ಅವರ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳ ಬಳಿ ಪ್ರಶ್ನೆ ಮಾಡಬೇಕಾದರೆ, ಅವರು ಹೇಳಿದ್ದಾರೆ. ನಾರಾಯಣಸ್ವಾಮಿಯವರೇ ಈ ತರಹ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ದಿಷ್ಟವಾಗಿ ಯಾವುದಾದರು ಇದ್ದರೆ, ಅದನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ, ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಂಡು ಅಂತಹ ಜಮೀನುಗಳನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದರು. ಮಾನ್ಯ ಕಂದಾಯ ಸಚಿವರು ಬೆಂಗಳೂರನ್ನು ಪ್ರತಿನಿಧಿಸುತ್ತಿರುವುದರಿಂದ, ಬಹಳ ಅಪಾರವಾದ ಅನುಭವವಿದೆ. ಎಷ್ಟೇ ಮೇಧಾವಿಗಳಾಗಲಿ ಮತ್ತು ದೊಡ್ಡ ವ್ಯಕ್ತಿಗಳಾಗಿರಲಿ ಮತ್ತು ಅವರು ಎಷ್ಟೆ ಪ್ರಬಲರಾಗಿರಲಿ, ಈಗ ಯಾರು ಒತ್ತುವರಿಯನ್ನು ಮಾಡಿದ್ದಾರೋ ಅವರಿಂದ ಅದನ್ನು ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಬೇಕೆಂದು, ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಎಂ.ನಾರಾಯಣಸ್ವಾಮಿಯವರು, ಬೆಂಗಳೂರಿನಲ್ಲಿ ಆಗಿರುವಂತಹ ಒತ್ತುವರಿ ಬಗ್ಗೆ ವಿಶೇಷ ಗಮನವನ್ನು ಸೆಳೆದಿದ್ದಾರೆ ಮತ್ತು ಎರಡು ಜ್ವಲಂತ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಒಂದು ಕೆ.ಆರ್.ಪುರಂ ಸರ್ವೇ ನಂಬರ್ 26 ಮತ್ತು ಎರಡನೆಯದು, ಎಲೆ ಮಲ್ಲಪ್ಪ ಚೆಟ್ಟಿ ಕೆರೆ, ಅದು ಹೊಸಕೋಟೆಗೆ ಹೋಗುವಂತಹ ದಾರಿಯಲ್ಲಿ ಇರತಕ್ಕಂಥದ್ದು. ಅದರಲ್ಲೂ ಕೂಡ ಸುಮಾರು 70 ರಿಂದ 80 ಎಕರೆ ಒತ್ತುವರಿಯಾಗಿದೆ ಎಂದು ಗಮನವನ್ನು ಸೆಳೆದಿದ್ದಾರೆ. ಈಗಾಗಲೇ ಬೆಂಗಳೂರಿನಲ್ಲಿ ಒತ್ತುವರಿ ಏನಿದೆ, ಅದನ್ನು ತೆರವುಗೊಳಿಸಿ ವಾಪಸ್ಸು ಪಡೆಯುವುದಕ್ಕೆ ಕರ್ನಾಟಕ ಸಾರ್ವಜನಿಕ ಜಮೀನು ನಿಗಮವನ್ನು ಈ ಹಿಂದಿನ ಸರ್ಕಾರ ಸ್ಥಾಪನೆ ಮಾಡಿದೆ. ಈ ತರಹ ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಒತ್ತುವರಿಯಾಗಿದೆ, ಅವುಗಳ ಮೇಲೆ ಸುಮಾರು 472 ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ವಿಶೇಷವಾಗಿ ಎ.ಟಿ.ರಾಮಸ್ವಾಮಿಯವರ ವರದಿ ಬಂದಿದೆ. ಅಂದರೆ ಇಡೀ ರಾಜ್ಯದಲ್ಲಿ ಮತ್ತು ಬೆಂಗಳೂರಿನಲ್ಲಿ ಎಷ್ಟು ಜಮೀನು ಒತ್ತುವರಿಯಾಗಿದೆ ಎಂದು ಅವರು ವರದಿ ಕೊಟ್ಟಿದ್ದಾರೆ. ಅದಕ್ಕೆ ನಾವು ಈಗ ಯಾವ್ಯಾವ ಜಾಗ ಒತ್ತುವರಿಯಾಗಿದೆ, ಅದನ್ನು ಸರ್ಕಾರಕ್ಕೆ ವಾಪಸ್ಸು ಪಡೆಯಬೇಕು ಎನ್ನುವ ದೃಷ್ಟಿಯಿಂದ, ಶ್ರೀ ಬೋಪಯ್ಯರವರ ನೇತೃತ್ವದಲ್ಲಿ, ಶ್ರೀ ಎ.ಟಿ.ರಾಮಸ್ವಾಮಿಯವರು ಸಹ ಅದರಲ್ಲಿ ಇದ್ದಾರೆ, ಬೀದರ್ ಜಿಲ್ಲೆಯ ಶಾಸಕರಾದ ಮಾನ್ಯ ರಾಜಶೇಖರ್‌ರವರು ಇದ್ದಾರೆ, ಶ್ರೀ ರಾಜೀವ್ ಗೌಡ ಮತ್ತು ಶ್ರೀ ವಿಶ್ವನಾಥ್ ಇವರನ್ನೆಲ್ಲಾ ಸೇರಿಸಿ ಒಂದು ಸಮಿತಿಯನ್ನು ಮಾಡಿದ್ದೇವೆ. ಅವರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನವನ್ನು ನೀಡಿದ್ದೇವೆ. ಅವರಿಗೆ ಬೇಕಾದಂತಹ ಎಲ್ಲಾ ಸಿಬ್ಬಂದಿಗಳನ್ನು ನೀಡುತ್ತಿದ್ದೇವೆ. ಅವರು ಮುಖ್ಯ ಕಾರ್ಯದರ್ಶಿಯವರನ್ನು ಮತ್ತು ಎಲ್ಲಾ ಇಲಾಖೆಯ ಮುಖ್ಯಸ್ಥರನ್ನು ಕರೆದು, ವಿಚಾರಣೆ ಮಾಡುವಂತಹ ಅಧಿಕಾರವನ್ನು ಕೊಟ್ಟಿದ್ದೇವೆ. ಬಜೆಟ್ ಮೀಟಿಂಗ್‌ಗಿಂತ ಮುಂಚೆಯೇ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಮಾನ್ಯ ನಾರಾಯಣ ಸ್ವಾಮಿಯವರು ಹೇಳಿದ ಹಾಗೆ, ಇದು ಏನಾಗಿದೆ ಎಂದರೆ, ಇಲ್ಲಿ ಚರ್ಚೆಯಾದ ತಕ್ಷಣ ನಾವು ಜಿಲ್ಲಾಧಿಕಾರಿಗಳಿಗೆ ನೀವು ಇಷ್ಟನ್ನು ಮಾಡಲೇ ಬೇಕೆಂದು ಒಂದು ಟಾರ್ಗೆಟ್ ಕೊಡುತ್ತೇವೆ. ಈ ಹಿಂದೆ ಜಿಲ್ಲಾಧಿಕಾರಿಗಳೆಲ್ಲಾ ನಾನು ಪತ್ರಿಕೆಯಲ್ಲಿ ಅದನ್ನು ನೋಡುತ್ತಿದ್ದೆ. ಇವತ್ತು 400 ಕೋಟಿ ಮಾರನೇ ದಿನ ಸಾವಿರ ಕೋಟಿ ಎಂದು ಪ್ರತಿದಿನ ಪತ್ರಿಕೆಯಲ್ಲಿ ಬರುತ್ತಿತ್ತು. ಆಮೇಲೆ ನೋಡಿದರೆ, ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವುದಿಲ್ಲ. ಈಗ ಒತ್ತುವರಿಗೆ ಹೋಗಿ ನಮ್ಮ ಜಿಲ್ಲಾಧಿಕಾರಿಗಳು ಜೆ.ಸಿ.ಬಿ. ತೆಗೆದುಕೊಂಡು ಸ್ವಚ್ಛಗೊಳಿಸಿ ಹೊರಟು ಹೋದರೆ, ಒಂದು ವಾರ ಆದಮೇಲೆ ಅದು ಮತ್ತೆ ಯಥಾಸ್ಥಿತಿ. ಏಕೆಂದರೆ, ಅಲ್ಲಿ ಯಾವುದೇ ರೀತಿಯ ವ್ಯವಸ್ಥೆ ಇರುವುದಿಲ್ಲ. ಅಲ್ಲಿಗೆ ಹೋಗಿ ಬೋರ್ಡ್ ಹಾಕುತ್ತೇವೆ, ಅದನ್ನು ಕಿತ್ತು ಹಾಕುತ್ತಾರೆ. ಇಲ್ಲವೇ ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತರುತ್ತಾರೆ. ಅದನ್ನು ಎತ್ತಿ ಬಿಸಾಡುತ್ತಾರೆ. ಈ ತರಹ ಆಗಿರುವುದೇ ಹೊರತು, ನನಗನಿಸುವಂತೆ ನಿಜವಾಗಿ ಒತ್ತುವರಿ ತೆರವು ಮಾಡಿ, ಅದನ್ನು ಸರ್ಕಾರಕ್ಕೆ ತೆಗೆದುಕೊಂಡಿದ್ದೇವೆ ಎನ್ನುವುದು ಶೇಕಡಾ 10ರಷ್ಟು ಕಾಣಿಸುತ್ತಿಲ್ಲ. ನಾನು ಬೆಂಗಳೂರಿನಲ್ಲೇ ಹುಟ್ಟಿದ್ದೇನೆ. ನಾನು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇನೆ. ಕನಿಷ್ಠ ಪಕ್ಷ 100 ರಿಂದ 200 ಕೋಟಿ ರೂಪಾಯಿ ಹಣ ಕೊಟ್ಟರೆ, ಎಲ್ಲಿ ಒತ್ತುವರಿಯನ್ನು ತೆರವುಗೊಳಿಸುತ್ತಾರೆ, ಅಲ್ಲಿ ತಕ್ಷಣ ಬಂದೋಬಸ್ತ್ ಆದಂತಹ ಕಾಂಪೌಂಡ್ ಗೋಡೆ ಕಟ್ಟಿ, ಅದಕ್ಕೆ ಕಾವಲು ಇರುವ ತರಹ ಏನಾದರೂ ಮಾಡಬೇಕು.

**(ಮುಂದು...)**

(509) 17.03.2020 08.10 LL-GR

**ಶ್ರೀ ಆರ್. ಅಶೋಕ್:- (ಮುಂದುವರೆದಿದ್ದು...)**

ಅಥವಾ ಆ ಜಮೀನನ್ನು ಕೂಡಲೇ ಹರಾಜು ಹಾಕಿ, ಅದರಿಂದ ಬಂದ ಹಣವನ್ನು ಸರ್ಕಾರದ ಖಜಾನೆಗೆ ತುಂಬುವಂತೆ ಮಾಡವುದು; ಬೇರೆ ಉದ್ದೇಶಕ್ಕೆ ಜಮೀನನ್ನು ರಕ್ಷಣೆ ಮಾಡುವುದಕ್ಕೆ ಉಪಯೋಗ ಮಾಡಬಹುದು ಅಥವಾ ಪರಿಸರಕ್ಕೆ ಉಪಯೋಗ ಮಾಡಬೇಕೆಂದು ಹೇಳಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು, "ಅದಕ್ಕೆ ಎಷ್ಟೋ ಬೇಕಾದರೂ ಅನುದಾನ ನೀಡುತ್ತೇನೆ, ಮೊದಲು ಸರ್ಕಾರಿ ಜಮೀನು ಒತ್ತುವರಿ ತೆರವು ಮಾಡಿದ ತಕ್ಷಣವೇ ಆ ಜಮೀನಿಗೆ ಕಾಂಪೌಂಡ್ ಹಾಕುವ ಅಥವಾ ಹರಾಜು ಹಾಕುವ ಪ್ರಕ್ರಿಯೆ ಮಾಡಬೇಕೆಂದು" ಹೇಳಿದ್ದಾರೆ. ಅದನ್ನು ಕೂಡ ನಾನು ಮಾಡುತ್ತೇನೆ. ಈ ಬಗ್ಗೆ ಈಗಾಗಲೇ ಸಮಿತಿ ಕೂಡ ರಚನೆಯಾಗಿದೆ. ಅವರು ಕ್ರಮ ತೆಗೆದುಕೊಳ್ಳುತ್ತಾರೆಂಬ ಪೂರ್ತಿ ಭರವಸೆ ಇದೆ. ಹಾಗಾಗಿ, ನಾನು ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿಯವರಲ್ಲಿ ನಾನು ಮನವಿ ಮಾಡುವುದೇನೆಂದರೆ, ಅವರು ಉಲ್ಲೇಖಿಸಿದ ಎರಡೂ ಪ್ರಕರಣಗಳನ್ನು ಸಮಿತಿಗೆ ನೀಡಬೇಕು. ಏಕೆಂದರೆ, ಈ ಸಮಿತಿ ಹೊಸದಾಗಿ ರಚನೆಯಾಗಿದ್ದು, ಮೊದಲನೆ ಅರ್ಜಿ ಮಾನ್ಯ ಸದಸ್ಯರದ್ದೇ ಆಗಲಿ. ಕಂದಾಯ ಇಲಾಖೆ ಕೂಡ ಬೆಂಗಳೂರಿನಲ್ಲಿ ಆಗಿರುವಂತಹ ಸರ್ಕಾರಿ ಜಮೀನು ಒತ್ತುವರಿಗಳು ಏನಿದೆ, ಇಂತಹ ವಿಷಯಗಳಲ್ಲಿ ನಮ್ಮ ಅಸಹಾಯಕತೆ ಹಾಗೂ ನಾವು ತೆಗೆದುಕೊಂಡ ಕ್ರಮಗಳ ಬಗ್ಗೆ ನಾನು ಹೇಳಬೇಕಾಗಿದೆ. ಅದಕ್ಕಾಗಿ, ತಾವು ನನಗೆ ಎರಡು ನಿಮಿಷ ಕಾಲಾವಕಾಶ ನೀಡಬೇಕು. ಅದೇನೆಂದರೆ, ಕೆ.ಆರ್.ಪುರಂನ ಒಂದು ವಿಷಯವನ್ನು ಮಾನ್ಯ ಸದಸ್ಯರು ಹೇಳಿದರು. ಅದರಂತೆ, ಇತ್ತೀಚೆಗೆ ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸಬ್ ರಿಜಿಸ್ಟ್ರಾರ್‌ರವರಿಗೆ ಪತ್ರ ಬರೆದು, "ಇದು ಸರ್ಕಾರಿ ಜಮೀನು, ಇದನ್ನು ಯಾವುದೇ ಕಾರಣಕ್ಕೂ ರಿಜಿಸ್ಟರ್ ಮಾಡಬಾರದು" ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿರುತ್ತಾರೆ. ನಾನು ಹೇಳುತ್ತಿರುವುದು ಕೇವಲ 2 ತಿಂಗಳ ವಿಚಾರ. ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಪತ್ರ ಬರೆದ ಮಾರನೆಯ ದಿನವೇ ಸಬ್ ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ ಸದರಿ ಜಮೀನಿನ ರಿಜಿಸ್ಟರ್ ಮಾಡಿರುತ್ತಾರೆ. ಆ ವಿಷಯದ ಬಗ್ಗೆ ಪ್ರಧಾನ ಕಾರ್ಯದರ್ಶಿಯವರು ನನಗೆ ತಿಳಿಸಿದರು. ತಕ್ಷಣವೇ ಸಂಬಂಧಪಟ್ಟಂತಹ ಅಧಿಕಾರಿಗಳನ್ನು, ಅಂದರೆ, ತಹಶೀಲ್ದಾರ್ ಹಾಗೂ ಸಬ್ ರಿಜಿಸ್ಟ್ರಾರ್ ರವರನ್ನು ಅಮಾನತು ಸೂಚನೆ ನೀಡಿ, ಅದರಂತೆ ಅವರನ್ನು ಅಮಾನತು ಮಾಡಿರುತ್ತೇವೆ. ತದನಂತರ, ಮಾರನೆಯ ದಿನವೇ ಆ ಇಬ್ಬರು ಅಧಿಕಾರಿಗಳು ಕೆ.ಎ.ಟಿ., (ಕರ್ನಾಟಕ ಆಡಳಿತ ನ್ಯಾಯಮಂಡಳಿ)ಯಿಂದ ಅಮಾನತು ಆದೇಶಕ್ಕೆ ತಡೆಯಾಜ್ಞೆ ತಂದಿರುತ್ತಾರೆ. ಈ ಇಬ್ಬರೂ ಅಧಿಕಾರಿಗಳನ್ನು ಸುಮ್ಮನೆ ಬಿಡಬಾರದೆಂದು ನಾನು ಬೇತಾಳನ ರೀತಿ ಆ ವಿಷಯದಲ್ಲಿ ಹಿಂದೆ ಬಿದ್ದು, ಅವರನ್ನೂ ವರ್ಗಾವಣೆ ಮಾಡುವುದಕ್ಕೆ ಅವಕಾಶವಿಲ್ಲದೇ ಇದ್ದುದರಿಂದ, ನಿಯೋಜನೆ ಮೇರೆಗೆ ತುಮಕೂರಿಗೆ ಕಳುಹಿಸಿಕೊಟ್ಟೆನು. ಆದರೆ, ಆ ಇಬ್ಬರೂ ಅಧಿಕಾರಿಗಳು ನಿಯೋಜನೆಗೂ ಕೂಡ ತಡೆಯಾಜ್ಞೆ ತಂದು ಪುನಃ ತಮ್ಮ ಮೂಲ ಸ್ಥಾನಕ್ಕೆ ಬಂದರು. ಇಂತಹ ಪರಿಸ್ಥಿತಿಯಲ್ಲಿ ನಾವು ಏನು ಮಾಡಬೇಕೆಂದು, ಶ್ರೀ ಎಂ. ನಾರಾಯಣಸ್ವಾಮಿ ಯವರಾಗಲಿ ಅಥವಾ ತಾವಾಗಲಿ ಹೇಳಬೇಕು. ಈ ಪ್ರಕರಣದಲ್ಲಿ ತಪ್ಪಿತಸ್ಥರನ್ನು ಅಮಾನತು ಮಾಡಿದೆವು. ಅದಕ್ಕೆ, ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದರು. ತದನಂತರ, ನಿಯೋಜನೆ ಮೇರೆಗೆ ಕಳುಹಿಸಿದೆವು. ಅದಕ್ಕೂ ಸಹ ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು? ಅದಕ್ಕೋಸ್ಕರ, ನಾನು ಶ್ರೀ ಕೆ.ಜಿ. ಬೋಪಯ್ಯರವರ ಸಮಿತಿ ಹಾಗೂ ಶ್ರೀ ಎ.ಟಿ. ರಾಮಸ್ವಾಮಿಯವರಿಗೆ, "ಇಂತಹ ವಿಷಯಗಳಲ್ಲಿ ಏನಾದರೂ ಕಾಯಿದೆ ತರಬೇಕೆಂದು" ಹೇಳಿದ್ದೇನೆ. ಏಕೆಂದರೆ, ಇಂತಹ ಪ್ರಕರಣಗಳಲ್ಲಿ ತಪ್ಪು ಮಾಡಿದವರು ಪದೇ ಪದೇ ಕೆ.ಎ.ಟಿ., ಗಳಿಗೆ ಹೋಗಿ ತಡೆಯಾಜ್ಞೆ ತರುತ್ತಾರೆ. ಈ ರೀತಿಯಾದರೆ, ಸರ್ಕಾರಿ ಜಾಗಗಳ ಒತ್ತುವರಿಯನ್ನು ಯಾವ ರೀತಿ ತಡೆಗಟ್ಟಬೇಕು?

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಕೆ.ಎ.ಟಿ., ಯಿಂದ ತಡೆಯಾಜ್ಞೆ ತಂದರೆ, ತಪ್ಪಿತಸ್ಥ ಅಧಿಕಾರಿಗಳು ಈ ಹಿಂದೆ ಎಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು, ಅದೇ ಜಾಗದಲ್ಲಿ ಮುಂದುವರೆಸಬೇಕೇ?

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಹೌದು. ಕೆ.ಎ.ಟಿ., ಯ ಆದೇಶದಲ್ಲಿಯೇ ಆ ರೀತಿ ಇರುತ್ತದೆ. ಆದಾಗ್ಯೂ, ಈ ರೀತಿಯಾಗುತ್ತಿದೆ ಎಂದು ನಾವು ಕೈಕಟ್ಟಿ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಮುಂದಿನ ಕ್ರಮ ಜರುಗಿಸುವುದಕ್ಕೆ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದು, ಈ ಪ್ರಕರಣದಲ್ಲಿ ಕೆ.ಎ.ಟಿ., ತಡೆಯಾಜ್ಞೆಯನ್ನು ತೆರವುಗೊಳಿಸಬೇಕೆಂದು ಸೂಚನೆ ನೀಡಿರುತ್ತೇನೆ ಜೊತೆಗೆ, ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಎಚ್ಚರವಹಿಸುತ್ತೇವೆ. ಇದೊಂದು ಸಣ್ಣ ಉದಾಹರಣೆಯಾಗಿದ್ದು, ಬೆಂಗಳೂರಿನಲ್ಲಿ ಇಂತಹ ನೂರಾರು ಅಥವಾ ಸಾವಿರಾರು ಎಕರೆ ಒತ್ತುವರಿಯಾಗಿರುವಂತಹ ಉದಾಹರಣೆಗಳಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಬ್ ರಿಜಿಸ್ಟ್ರರ್‌ರವರು ಪ್ರಧಾನ ಕಾರ್ಯದರ್ಶಿಗಳ ನಿರ್ದೇಶನವನ್ನು ಉಲ್ಲಂಘಿಸಿ, ಸರ್ಕಾರಿ ಜಮೀನು ರಿಜಿಸ್ಟರ್ ಮಾಡಿರುವುದನ್ನು ರದ್ದು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗಿದೆಯೇ?

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಆ ರಿಜಿಸ್ಟ್ರೇಷನ್ ಅನ್ನು ರದ್ದು ಮಾಡುವುದಕ್ಕೆ ಪ್ರೋಸೆಸ್ ಮಾಡುತ್ತಿದ್ದೇವೆ. ಆ ರಿಜಿಸ್ಟ್ರೇಷನ್ ಅನ್ನು 100% ರದ್ದು ಮಾಡುತ್ತೇವೆ ಹಾಗೂ ಆ ಜಮೀನನ್ನು ಯಾವುದೇ ಕಾರಣಕ್ಕೂ ಬೇರೆಯವರಿಗೆ ಪರಭಾರೆ ಮಾಡುವುದಕ್ಕೆ ಬಿಡುವುದಿಲ್ಲ. ಅದು ಬೇರೆ ಪ್ರಶ್ನೆ. ಇಂತಹ ತಪ್ಪುಗಳನ್ನು ಮಾಡಿದಂತಹ ಅಧಿಕಾರಿಗಳಿಗೆ ಭಯ ಬೀಳಿಸುವುದಕ್ಕೆ ಸರ್ಕಾರ ತೆಗೆದುಕೊಳ್ಳುವಂತಹ ಕ್ರಮಗಳು ಏನೇನು ಆಗುತ್ತವೆ ಎಂಬುದಕ್ಕೆ ನಾನು ಉದಾಹರಣೆ ನೀಡುತ್ತಿದ್ದೇನೆ. ಆ ದೃಷ್ಟಿಯಿಂದ ಕೆರೆಗಳಿರಬಹುದು ಅಥವಾ ಒತ್ತುವರಿ ಆಗಿರುವಂತಹ ಸರ್ಕಾರಿ ಜಮೀನು ಇರಬಹುದು. ಇನ್ನು ಮುಂದೆ ಅಧಿಕಾರಿಗಳಿಗೆ, "ನಾವು ಈ ರೀತಿ ಬೋಗಸ್ ದಾಖಲೆಗಳನ್ನು ಸೃಷ್ಟಿ ಮಾಡಿ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡುವುದಕ್ಕಾಗುವುದಿಲ್ಲ" ಎಂದು ಎಲ್ಲರಿಗೂ ಅರ್ಥವಾಗಬೇಕು. ಆ ರೀತಿಯ ವಾತಾವರಣವನ್ನು ನಾವು ನಿರ್ಮಾಣ ಮಾಡಬೇಕಾಗಿದೆ. ಅದಕ್ಕಾಗಿ, ಒಂದು ವಿಶೇಷ ಸಮಿತಿ ರಚನೆ ಮಾಡಿ, ಆ ಸಮಿತಿಗೆ ವಿಶೇಷ ಅಧಿಕಾರವನ್ನು ಕೂಡ ನೀಡಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಇಂತಹ ವಿಷಯಗಳ ಬಗ್ಗೆ ಹೆಚ್ಚು ಗಮನ ಕೊಟ್ಟು, ಈಗಾಗಲೇ ಆಗಿರುವಂತಹ ಸರ್ಕಾರಿ ಜಮೀನುಗಳ ಒತ್ತುವರಿಯನ್ನು ವಾಪಸ್ಸು ಪಡೆಯುತ್ತೇವೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಯಾವ ರೀತಿ ಕ್ರಮ ತೆಗೆದುಕೊಂಡಿದ್ದಾರೆ ಹಾಗೂ ಅವರ ಅಸಹಾಯಕತೆಯನ್ನು ಸಹ ಹೇಳಿದ್ದಾರೆ. ನಾವು ಶ್ರೀ ಎ.ಟಿ. ರಾಮಸ್ವಾಮಿಯವರು ಇದ್ದಾಗ, ನಮ್ಮ ಸರ್ಕಾರವು ಸಹ ಇದೇ ರೀತಿಯಾಗಿ ಸಮಿತಿ ರಚನೆ ಮಾಡಿ, ವಿವಿಧ ಸ್ಥಳಗಳಿಗೆ ಭೇಟಿ ನೀಡಿ, ಇಷ್ಟು ಎಕರೆ ಸರ್ಕಾರಿ ಜಮೀನನ್ನು ಬೇರೆಯವರು ನುಂಗಿದ್ದಾರೆ" ಎಂದು ವರದಿಯನ್ನು ಕೊಟ್ಟರು. ಈ ಬಗ್ಗೆ ಅವರಿಂದಲೂ ಏನೂ ಮಾಡುವುದಕ್ಕಾಗಲಿಲ್ಲ, ಇವತ್ತಿಗೂ ಕೂಡ ಅವರ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲಾಗಲಿಲ್ಲವೆಂದರೆ, ಇನ್ನೂ ಯಾವಾಗ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ? ಇದಕ್ಕೆ ಏನಾದರೂ ಒಂದು ಪರಿಹಾರ ಕಂಡುಹಿಡಿಯಬೇಕಲ್ಲವೇ? ಒಂದು ಉದಾಹರಣೆ ಹೇಳಬೇಕೆಂದರೆ, ಆರ್.ಡಿ.ಪಿ.ಆರ್., ಕಮಿಟಿಯಲ್ಲಿ ಶ್ರೀ ಅರಗ ಜ್ಞಾನೇಂದ್ರರವರು ಅಧ್ಯಕ್ಷರಾಗಿದ್ದಾರೆ. ಆ ಸಮಿತಿಯಲ್ಲಿ ಎಲ್ಲಾ ಪಕ್ಷದವರು ಸೇರಿ 20 ಜನ ಸದಸ್ಯರಿದ್ದೇವೆ. ನಾವು ಒಂದು ಕೆರೆ ವೀಕ್ಷಣೆ ಮಾಡುವುದಕ್ಕೆ, ಒಂದು ಬಸ್ಸು ತುಂಬಾ ಶಾಸಕರುಗಳು, ಮತ್ತೊಂದು ಬಸ್ಸಿನಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಹೋಗಿದ್ದೆವು. ನಾವು ಭೇಟಿ ನೀಡಿದಂತಹ ಸಂದರ್ಭದಲ್ಲಿ, ಸದರಿ ಸ್ಥಳದಲ್ಲಿ ಒಬ್ಬ ವ್ಯಕ್ತಿ ಕೆರೆ ಜಮೀನನ್ನು ಒತ್ತುವರಿ ಮಾಡಿಕೊಂಡು, ಕ್ಲಬ್ ರೀತಿ ಒಂದು ಕಟ್ಟಡ ಕಟ್ಟಿಕೊಂಡು, ಅದರ ಮುಂದಿರುವ ಕೆರೆ ಜಮೀನಿನಲ್ಲಿ ಮಣ್ಣು ತುಂಬಿ ಗಿಡ ನೆಡುತ್ತಿದ್ದಾನೆ. ಅಂದರೆ, ತನ್ನ ಜಮೀನನ್ನು ಸೇಫ್ ಮಾಡಿಕೊಳ್ಳುವುದಕ್ಕೆ ಮುಂದಿನ ಕೆರೆ ಜಾಗಕ್ಕೆ ಮಣ್ಣು ತುಂಬಿ ಗಿಡ ನೆಡುತ್ತಿದ್ದಾನೆ. ತಕ್ಷಣವೇ, ನಾವು ಈ ಬಗ್ಗೆ ಪೊಲೀಸ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಟೇಷನ್‌ಗೆ ದೂರನ್ನು ಕೊಟ್ಟು, ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆಯಿಸಿ ಹೇಳಿದರೂ ಸಹ ಏನು ಮಾಡುವುದಕ್ಕೆ ಆಗದೇ, ಇವತ್ತಿಗೂ ಕೂಡ ಆ ಜಾಗ ಹಾಗೇಯೇ ಇರುತ್ತದೆ. ಇಂತಹ ವಿಷಯಗಳು ಕೊನೆಗಾಣುವುದು ಯಾವಾಗ? ಸುಮಾರು ಸಾವಿರಾರು ಎಕರೆ ಸರ್ಕಾರಿ ಜಮೀನನ್ನು ಬೆಂಗಳೂರು ಮಹಾನಗರದಲ್ಲಿ ರಾಜಕಾರಣಿಗಳ ಸಮೇತವಾಗಿ, ದೊಡ್ಡ ಬಿಲ್ಡರ್‌ಗಳಿಂದ ಹಿಡಿದು ಎಲ್ಲರೂ ಕೂಡ ಒತ್ತುವರಿ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ನಾವು ಯಾವಾಗ ಜಾಸ್ತಿ ಗಲಾಟೆ ಮಾಡುತ್ತೇವೆ, ಆ ಸಂದರ್ಭದಲ್ಲಿ ಮಾನ್ಯ ಸಚಿವರು ಹೇಳಿದಂತೆ, ಅಧಿಕಾರಿಗಳು ಜೆ.ಸಿ.ಬಿ.,ಯನ್ನು ತೆಗೆದುಕೊಂಡು ಹೋಗಿ, ತಲೆಗೆ ಸೂರು ಇಲ್ಲದವರು ಗುಡಿಸಲು ಹಾಕಿಕೊಂಡಿರುವಂತಹವರ ಗುಡಿಸಲುಗಳನ್ನು ತೆರವುಗೊಳಿಸಿ, ಫೋಟೋವನ್ನು ಪೇಪರ್‌ನಲ್ಲಿ ಹಾಕಿ ವಾಪಸ್ಸು ಬಂದುಬಿಡುತ್ತಾರೆ. ಇಷ್ಟು ಮಾತ್ರ ಆಗುತ್ತಿದೆ. ಉದಾಹರಣೆಗೆ, ಆನೇಕಲ್‌ನ ಜಿಗಣಿ ತಾಲ್ಲೂಕಿನ ಎನ್ನಾಗರ ಎಂಬ ಊರಿನಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತಹ ಸುಮಾರು 75 ಎಕರೆ ಸರ್ಕಾರಿ ಜಾಗವನ್ನು ಯಾವ ರೀತಿಯಿಂದಲೂ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಪಕ್ಕದ ಜಮೀನಿನವರು ಆ ಜಮೀನನ್ನು ಒತ್ತುವರಿ ಮಾಡಿಕೊಂಡು ಬರುತ್ತಿದ್ದಾರೆ. ಮಾನ್ಯ ಸಚಿವರು ಹೇಳಿದಂತೆ, ನಾನು ಕೂಡ ಕೇವಲ ಎರಡು ಉದಾಹರಣೆಗಳನ್ನು ಕೊಟ್ಟಿದ್ದೇನೆ. ಇಡೀ ಬೆಂಗಳೂರಿಗೆ ಸಂಬಂಧಪಟ್ಟಂತೆ ನೂರಾರು ಉದಾಹರಣೆಗಳನ್ನು ಕೊಡಬಹುದು. ದಯಮಾಡಿ, ಇಂತಹ ವಿಷಯಗಳಲ್ಲಿ ಸರ್ಕಾರ ನಮ್ಮನ್ನು ಕೂಡ ಬಳಸಿಕೊಳ್ಳಬಹುದಾಗಿದೆ, ನಾವು ಕೂಡ ಸರ್ಕಾರದ ಜೊತೆ ಕೈಜೋಡಿಸುತ್ತೇವೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರಿ ಜಮೀನು ಒತ್ತುವರಿ ಬಗ್ಗೆ ಮಾನ್ಯ ಎಂ. ನಾರಾಯಣಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಮಾನ್ಯ ಸಚಿವರು ಕೂಡ ಈ ವಿಚಾರದ ಬಗ್ಗೆ ಹಾಗೂ ಈ ರಾಜ್ಯದಲ್ಲಿ ಅಥವಾ ಬೆಂಗಳೂರಿನಲ್ಲಿ ಏನೇನು ನಡೆಯುತ್ತಿದೆ ಎಂಬ ಬಗ್ಗೆಯೂ ಸಹ ಅವರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅಲ್ಲದೇ, ಅವರು ಕಂದಾಯ ಸಚಿವರಾಗಿ ಇಂತಹ ವಿಷಯಗಳ ಬಗ್ಗೆ ಬಹಳಷ್ಟು ಅನುಭವ ಇದೆ. ಜೊತೆಗೆ, ಸರ್ಕಾರಿ ಜಮೀನು ಒತ್ತುವರಿಯನ್ನು ತಡೆಗಟ್ಟುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ ಹಾಗೂ ಇಂತಹ ಎಲ್ಲಾ ಸಮಸ್ಯೆಗಳಿಗೆ ಒಂದೊಂದು ಸೂತ್ರವನ್ನು ಕೂಡ ಕಂಡುಹಿಡಿಯುತ್ತಿದ್ದಾರೆ. ಆದುದರಿಂದ, ಮಾನ್ಯ ಸಚಿವರು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇವೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿಯವರು ಹೇಳಿದಂತೆ, ಇದರಲ್ಲಿ ನಮ್ಮ ಅಸಹಾಯಕತೆ ಪ್ರಶ್ನೆ ಇರುವುದಿಲ್ಲ. ಆದರೆ, ನಮ್ಮಲ್ಲಿ ಕಾನೂನು ಯಾವ ರೀತಿ ಇದೆ ಎಂದು ಹೇಳಿದ್ದೇನೆ. ಒಂದು ವೇಳೆ ಈ ವಿಷಯದಲ್ಲಿ ಅಸಹಾಯಕತೆ ತೋರಿಸಿದ್ದರೆ, ನಾನು ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತು ಮಾಡುವುದಕ್ಕೆ ಅಥವಾ ನಿಯೋಜನೆ ಮೇರೆಗೆ ಅವರನ್ನು ಬೇರೆಡೆಗೆ ಕಳುಹಿಸುವುದಕ್ಕೆ ಆಗುತ್ತಿರಲಿಲ್ಲ. ಜೊತೆಗೆ, ಸರ್ಕಾರಿ ಜಮೀನು ಏನು ರಿಜಿಸ್ಟರ್ ಮಾಡಿದ್ದಾರೆ ಅದನ್ನು ವಾಪಸ್ಸು ಪಡೆಯುತ್ತಿದ್ದೇವೆ. ಆದುದರಿಂದ, ಇದರಲ್ಲಿ ಯಾವುದೇ ಅಸಹಾಯಕತೆ ಪ್ರಶ್ನೆ ಬರುವುದೇ ಇಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ಕಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಮೀನು ಎಲ್ಲೆಲ್ಲಿ ಇದೆ, ಅದನ್ನು ವಾಪಸ್ಸು ಪಡೆಯುವಂತಹ ಕೆಲಸ ಕೂಡ ಮಾಡುತ್ತೇವೆ. ಅದಕ್ಕಾಗಿಯೇ ನಾನು ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡಿ, ಒತ್ತುವರಿಯಾಗಿರುವಂತಹ ಜಮೀನನ್ನು ವಾಪಸ್ಸು ಪಡೆದು ತಕ್ಷಣವೇ ಕಾಂಪೌಂಡ್ ನಿರ್ಮಿಸುವುದು; ಯಾವುದಾದರೂ ಸರ್ಕಾರಿ ಇಲಾಖೆಗಳಿಗೆ ಜಮೀನು ನೀಡುವುದು ಅಥವಾ ಆ ಜಮೀನನ್ನು ಹರಾಜು ಹಾಕಿ ಹಣವನ್ನು ಸರ್ಕಾರದ ಖಜಾನೆಗೆ ತುಂಬುವಂತಹ ಕೆಲಸ ಮಾಡುತ್ತೇವೆ. ಯಾವುದೇ ಕಾರಣಕ್ಕೂ ರಾಜ್ಯದ ಬೇರೆ ಭಾಗದಲ್ಲಿರಬಹುದು ಅಥವಾ ಬೆಂಗಳೂರಿನಲ್ಲಿರುವ ಸರ್ಕಾರಿ ಜಮೀನು ಒತ್ತುವರಿಯನ್ನು ತೆರವುಗೊಳಿಸಿ, ಅದನ್ನು ಸರ್ಕಾರದ ವಶಕ್ಕೆ ಪಡೆಯುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ, ಅದನ್ನು ಸರ್ವೇ ಮಾಡಬೇಕೆಂದು ನಾವು ದೂರು ಕೊಟ್ಟಾಗ ಸಂಬಂಧಪಟ್ಟ ಅಧಿಕಾರಿಗಳು ಈ ವಿಚಾರದ ಬಗ್ಗೆ ಗಮನ ಕೊಡುತ್ತಿಲ್ಲ. ಜೊತೆಗೆ, ಈ ರೀತಿಯ ಜಮೀನು ಸರ್ವೇ ಮಾಡುವುದಕ್ಕೆ ಸರ್ವೇಯರ್‌ಗಳು ಇರುವುದಿಲ್ಲವೆಂಬ ಕಾರಣ ನೀಡುತ್ತಿದ್ದಾರೆ. ಆದುದರಿಂದ, ದಯಮಾಡಿ ಸೂಕ್ತವಾದ ಸರ್ವೇ ಇಲಾಖೆಗೆ ಹೆಚ್ಚಿನ ಸರ್ವೇಯರ್‌ಗಳನ್ನು ನೇಮಕ ಮಾಡಬೇಕು ಅಥವಾ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಂಡು ಆದಷ್ಟು ಬೇಗ ಸರ್ವೇ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಬೇಕು.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಖಾಲಿ ಇರುವ ಸರ್ವೇಯರ್‌ಗಳ ಹುದ್ದೆಗಳಿಗೆ ಹೊಸದಾಗಿ ನೇಮಕ ಮಾಡುತ್ತಿದ್ದೇವೆ. ಜೊತೆಗೆ, ಗುತ್ತಿಗೆ ಆಧಾರದ ಮೇಲೆಯೂ ಸಹ ಸರ್ವೇಯರ್‌ಗಳನ್ನು ನೇಮಕ ಮಾಡುತ್ತಿದ್ದೇವೆ.

**12. ಪ್ರಕಟಣೆ**

**ಸಭಾಪತಿಯವರು:–** ರಾಜ್ಯದಲ್ಲಿ ಹರಡುತ್ತಿರುವ ಕೋವಿಡ್–19 ಕೊರೋನಾ ವೈರಾಣು ಹರಡುವ ವೇಗ ಮತ್ತು ವಿಧಾನಗಳನ್ನು ಗಮನದಲ್ಲಿಟ್ಟುಕೊಂಡು ಮುಂಜಾಗ್ರತಾ ಕ್ರಮವಾಗಿ ಈ ದಿನ ಸದನ ಮುಕ್ತಾಯವಾದ ನಂತರ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ವೈರಾಣು ನಾಶಕ ಔಷಧಿಯನ್ನು ಸಿಂಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂಬ ಅಂಶವನ್ನು ಸದನದ ಗಮನಕ್ಕೆ ತರಲಾಗುತ್ತಿದೆ.

ಸಭೆಯು ಈಗ ಮುಕ್ತಾಯವಾಗಿ, ನಾಳೆ ಬೆಳಿಗ್ಗೆ 11–00 ಗಂಟೆಯವರೆಗೆ ಸಭೆಯನ್ನು ಮುಂದೂಡಲಾಗಿದೆ.

**(ಸದನವು ರಾತ್ರಿ 08 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 18ನೇ ಮಾರ್ಚ್ 2020ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"